“ ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

# ಕರ್ನಾಟಕ ವಿಧಾನ ಪರಿಷತ್ತು

13ನೇ ಡಿಸೆಂಬರ್ 2018
ಗುರುವಾರ

## ವಿಷಯಾನುಕ್ರಮಾಣಿಕೆ

1. ರಾಜ್ಯ ಹೈಕೋರ್ಟ್‌ನ ಆದೇಶದ ಅನ್ವಯ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸದನದಲ್ಲಿ ಮಂಡಿಸುವ ಬಗ್ಗೆ.

   – ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
   – ಶ್ರೀ ಐವನ್ ಡಿ'ಸೋಜಾ
   – ಶ್ರೀ ಕೆ.ಟಿ.ಶ್ರೀಕಂಠೇಗೌಡ
   – ಶ್ರೀ ವೈ.ಎ.ನಾರಾಯಣಸ್ವಾಮಿ
   – ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಮತ್ತು ವಸತಿ ಸಚಿವರು)
   – ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)
   – ಶ್ರೀ ಎನ್.ರವಿಕುಮಾರ್

2. ಪ್ರಶ್ನೋತ್ತರಗಳು

   ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

01 – ಸಾಂಸ್ಕೃತಿಕ ಭವನ ರಂಗಮಂದಿರಗಳ ಅಭಿವೃದ್ಧಿ ಬಗ್ಗೆ.
   – ಶ್ರೀ ಶರಣಪ್ಪ ಮಟ್ಟೂರ(ಶ್ರೀ ಕೆ.ಸಿ.ಕೊಂಡಯ್ಯನವರ ಪರವಾಗಿ)
   – ಡಾ: ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

607 – ಮದ್ಯಸೇವನೆಯಿಂದ ದುಷ್ಪರಿಣಾಮ
   – ಡಾ:ತೇಜಸ್ವಿನಿ ಗೌಡ
   – ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

457 – ಕೊಡಗು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಿಂದ ಸಂತ್ರಸ್ತರಾಗಿರುವ ಮಹಿಳೆ ಮತ್ತು ಮಕ್ಕಳಿಗೆ ವಿಶೇಷ ನೆರವು ನೀಡುವ ಬಗ್ಗೆ
   – ಶ್ರೀಮತಿ ಎಸ್.ವೀಣಾ ಅಚ್ಚಯ್ಯ
   – ಡಾ: ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

494+503 – ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಬಗ್ಗೆ
   – ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
   – ಶ್ರೀ ಎಸ್.ಎಲ್.ಭೋಜೇಗೌಡ

“ ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

– ಶ್ರೀ ಜಿ.ಟಿ.ದೇವೇಗೌಡ(ಉನ್ನತ ಶಿಕ್ಷಣ ಸಚಿವರು)

**522 – ಬಾಲವಿಕಾಸ ಅಕಾಡೆಮಿ ವತಿಯಿಂದ ಅನುಷ್ಠಾನವಾಗಿರುವ ಕಾರ್ಯಕ್ರಮಗಳ ಬಗ್ಗೆ.**

– ಶ್ರೀ ಎನ್.ಅಪ್ಪಾಜಿಗೌಡ
– ಡಾ: ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**571 – ರಾಜ್ಯ ಸರ್ಕಾರಿ ನೌಕರರ ನೂತನ ಪಿಂಚಣಿ ಯೋಜನೆ(ಎನ್.ಪಿ.ಎಸ್.) ರದ್ದು ಪಡಿಸುವ ಬಗ್ಗೆ.**

– ಶ್ರೀ ಎಸ್.ಎಲ್.ಭೋಜೇಗೌಡ
– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**555 – ಚಿಕ್ಕಮಗಳೂರು ಜಿಲ್ಲಾ ಕೇಂದ್ರದಲ್ಲಿ ಸರ್ಕಾರಿ ಬಾಲಕಿಯರ ಬಾಲ ಮಂದಿರವನ್ನು ಮಂಜೂರು ಮಾಡುವ ಬಗ್ಗೆ**

– ಶ್ರೀ ಎಸ್.ಎಲ್.ಧರ್ಮೇಗೌಡ
– ಡಾ: ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

**516 – ವಿದ್ಯುತ್ ಪೂರೈಕೆ ಬಗ್ಗೆ**

– **ಶ್ರೀ ಪಿ.ಆರ್.ರಮೇಶ್**
– **ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)**

**547 – 2017–18ರಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಬಿಡುಗಡೆಯಾದ ಅನುದಾನದ ಬಗ್ಗೆ**

– ಶ್ರೀ ಐವನ್ ಡಿ'ಸೋಜಾ
– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**572 – ಪ್ರೌಢಶಾಲಾ ಸಹಶಿಕ್ಷಕರಿಂದ ಮುಖ್ಯೋಪಾಧ್ಯಾಯರ ಹುದ್ದೆಗೆ ಭಡ್ತಿ ಬಗ್ಗೆ**

– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**489 – ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ವೇತನ ತಾರತಮ್ಯ ಬಗ್ಗೆ**

– ಶ್ರೀ ಅ.ದೇವೇಗೌಡ
– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**452 – 1995 ರಿಂದ 2001ನೇ ಸಾಲಿನವರೆಗೆ ಪ್ರಾರಂಭವಾದ ಅನುದಾನರಹಿತ ಕನ್ನಡ ಮಾಧ್ಯಮ ಶಾಲಾ ಕಾಲೇಜುಗಳ ಬಗ್ಗೆ**

– **ಶ್ರೀ ಮರಿತಿಬ್ಬೇಗೌಡ**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**565 – ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಬಗ್ಗೆ**

– ಆಯನೂರು ಮಂಜುನಾಥ್

– ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು)

**ಆ) ಚುಕ್ಕೆ ರಹಿತ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**3. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

**ಅ) ಆರೋಗ್ಯ ಇಲಾಖೆಯಲ್ಲಿನ ಗುತ್ತಿಗೆ ನೌಕರರಿಗೆ ವೇತನದ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡುವ ಬಗ್ಗೆ.**

**– ಶ್ರೀ ಶ್ರೀಕಾಂತ ಎಲ್.ಘೋಟ್ನೆಕರ್**

**– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು)**

**ಆ) ಮಡಿಕೇರಿ ನಗರಸಭೆ ವ್ಯಾಪ್ತಿಯು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಮನೆ ನಿರ್ಮಾಣ ಮಾಡಲು ನಗರಾಭಿವೃದ್ಧಿ ಇಲಾಖೆ ಸುತ್ತೋಲೆಯಿಂದ ತೊಂದರೆಯಾಗಿರುವ ಬಗ್ಗೆ**

– ಶ್ರೀ ಎಂ.ಪಿ.ಸುನಿಲ್ ಸುಬ್ರಮಣಿ

– ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಹಾಗೂ ವಸತಿ ಸಚಿವರು)

– ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು)

**ಇ) ವಿಜಯಪುರ ಬುರಾಣಪುರದಲ್ಲಿ ವಿಮಾಣ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ.**

– ಶ್ರೀ ಅರುಣ ಶಹಾಪುರ

– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು)

**ಈ) ಕೋಶಿಸ್ ಕಾಲೇಜಿಗೆ ಬಿಬಿಎ (ಏವಿಯೇಷನ್ ಮೇನೇಜ್‌ಮೆಂಟ್) ಕೋರ್ಸಿಗೆ 20 ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚುವರಿಯಾಗಿ ಮಂಜೂರು ಮಾಡುವ ಬಗ್ಗೆ.**

**– ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿ**

**– ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)**

**ಉ) ರಾಜ್ಯದಲ್ಲಿ ಅನ್ಯ ಭಾಷೆಗಳನ್ನು ವೈಭವೀಕರಿಸುವ ಕೆಲಸ ಹಾಸ್ಯಾಸ್ಪದವಾಗಿರುವುದರಿಂದ ಕನ್ನಡ ವಿರುದ್ಧವಾಗಿರುವ ದ್ರಾವಿಡ ವಿಚಾರ ಕಲಾ ಮೇಳವನ್ನು ರದ್ದುಪಡಿಸುವ ಬಗ್ಗೆ.**

**– ಶ್ರೀ ಎನ್.ರವಿಕುಮಾರ್**

**– ಡಾ: ಜಯಮಾಲ ರಾಮಚಂದ್ರ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)**

**4. ಸಭಾಪತಿಯವವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ**

**ಅ) ಇ–ಆಡಳಿತ ತಂತ್ರಾಂಶದ ಲೋಪದಿಂದ 31 ಲಕ್ಷ ಹಿಂದುಳಿದ ಬಡ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡದಿರುವ ಬಗ್ಗೆ.
– ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು)

**5. ಪ್ರಕಟಣೆಗಳು**

**6. ವರದಿಯನ್ನೊಪ್ಪಿಸುವುದು**

**7. ಅರ್ಜಿಯನ್ನೊಪ್ಪಿಸುವುದು**

**8. ಚುನಾವಣಾ ಪ್ರಸ್ತಾವಗಳು**
**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

**9. ದಿನಾಂಕ: 12.12.2018ರ ಗಮನ ಸೆಳೆಯುವ ಸೂಚನೆಯ ವಿಷಯವನ್ನು ಇಂದಿನ ದಿವಸದ ಕಾರ್ಯಕಲಾಪದ ಪಟ್ಟಿಯಿಂದ ಕೈಬಿಟ್ಟಿರುವ ಬಗ್ಗೆ.**

ವಿಷಯಃ ರಾಜ್ಯ ಸರ್ಕಾರದಿಂದ ಆಚರಿಸುತ್ತಿರುವ ಟಿಪ್ಪುಸುಲ್ತಾನ್ ಜಯಂತಿಯಿಂದಾಗಿ ಕೊಡವರ ಮನಸ್ಸಿಗೆ ನೋವನ್ನುಂಟು ಮಾಡಿರುವುದಲ್ಲದೆ, ಕೋಮು ಸೌಹಾರ್ದತೆ ಹಾಳು ಮಾಡುತ್ತಿರುವ ವಿಷಯವನ್ನು ಇಂದಿನ ಕಾರ್ಯ ಕಲಾಪಗಳ ಪಟ್ಟಿಯಿಂದ ಕೈಬಿಟ್ಟಿರುವ ಬಗ್ಗೆ.

–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
–ಶ್ರೀ ಶಿವಶಂಕರರೆಡ್ಡಿ(ಕೃಷಿ ಸಚಿವರು)
–ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)
–ಆಯನೂರು ಮಂಜುನಾಥ್
–ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಮತ್ತು ವಸತಿ ಸಚಿವರು)
–ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
–ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು)
–ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು)
–ಶ್ರೀ ಅರುಣ ಶಹಾಪುರ
–ಶ್ರೀ ಕೃಷ್ಣಭೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು)
–ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ
–ಶ್ರೀ ಪ್ರಕಾಶ್ ರಾಥೋಡ್
–ಶ್ರೀ ವೆಂಕಟರಾವ್ ನಾಡಗೌಡ(ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು)
– ಶ್ರೀ ಎಸ್.ಎಲ್.ಭೋಜೇಗೌಡ
– ಡಾ: ತೇಜಸ್ವಿನಿ ಗೌಡ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

– ಶ್ರೀ ಐವನ್ ಡಿ'ಸೋಜಾ
– ಶ್ರೀ ಮಾನೆ ಶ್ರೀನಿವಾಸ್
– ಶ್ರೀ ರಿಜ್ವಾನ್ ಅರ್ಷದ್

**10. ಗಮನ ಸೆಳೆಯುವ ಸೂಚನೆ**

**ಅ)ವಿಷಯ:– ವಾಜಪೇಪಯಿ ನಗರ ವಸತಿ ಯೋಜನೆಯಡಿಯಲ್ಲಿ ಹಂಚಿಕೆಯಾದ ಫಲಾನುಭವಿಗಳು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಪೂರ್ಣವಾಗಿ ಹಣವನ್ನು ಪಾವತಿಸಿದ್ದರೂ ಸಹ ಮನೆಗಳ ಸ್ವಾಧೀನ ಹಾಗೂ ಹಕ್ಕು ಪತ್ರ ನೀಡದಿರುವ ಬಗ್ಗೆ.**

– ಶ್ರೀ ವೈ.ಎ.ನಾರಾಯಣಸ್ವಾಮಿ
– ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಮತ್ತು ವಸತಿ ಸಚಿವರು)
– ಶ್ರೀ ಎಂ.ನಾರಾಯಣಸ್ವಾಮಿ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)

**ಆ)ವಿಷಯ:– ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವ್ಯಾಪ್ತಿಯಲ್ಲಿನ ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಯೋಜನೆಯು ಸಮರ್ಪಕವಾಗಿ ಫಲಕಾರಿಯಾಗದಿರುವ ಬಗ್ಗೆ.**

– ಶ್ರೀ ಟಿ.ಎ.ಶರವಣ
– ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಹಾಗೂ ವಸತಿ ಸಚಿವರು)
– ಶ್ರೀ ಪಿ.ಆರ್.ರಮೇಶ್

**11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ**

**ಅ)ವಿಷಯ:– ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಶ್ರಯದಲ್ಲಿ ಕೈಗೊಂಡ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ.**

– ಶ್ರೀ ಹೆಚ್.ಎಂ.ರೇವಣ್ಣ
– ಶ್ರೀ ಕೆ.ಸಿ.ಕೊಂಡಯ್ಯ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)
– ಶ್ರೀ ಪುಟ್ಟರಂಗಶೆಟ್ಟಿ(ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)
– ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
– ಶ್ರೀ ಪಿ.ಆರ್.ರಮೇಶ್
– ಶ್ರೀ ರಘುನಾಥ್ ರಾವ್ ಮಲ್ಕಾಪೂರೆ
– ಶ್ರೀ ಎಂ.ಸಿ.ವೇಣುಗೋಪಾಲ್

**12. ಪ್ರಕಟಣೆಗಳು**

**13. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಮುಂದುವರೆದ ಚರ್ಚೆ**

**ವಿಷಯ:–** ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.

– ಡಾ: ತೇಜಸ್ವಿನಿ ಗೌಡ
– ಶ್ರೀಮತಿ ಎಸ್.ವೀಣಾ ಅಚ್ಚಯ್ಯ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು)

**14. ಪ್ರಕಟಣೆಗಳು**

– – –

(412)13–12–2018(10.50)ಡಿಎಸ್–ಎಕೆ

**ಕರ್ನಾಟಕ ವಿಧಾನ ಪರಿಷತ್ತು**
**ಗುರುವಾರ 13ನೇ ಡಿಸೆಂಬರ್ 2018**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ) ಅವರು ಸಭಾಪೀಠದಲ್ಲಿ ಉಪಸ್ಥಿತರಿದ್ದರು.**

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಇವತ್ತು ಬೆಳಿಗ್ಗೆ ಸದನವನ್ನು 10.30 ಗಂಟೆಗೆ ಕರೆದಿದ್ದೀರಿ. ಆದರೆ ಸದನದಲ್ಲಿ ಇಬ್ಬರು ಮಂತ್ರಿಗಳು ಮಾತ್ರ ಇದ್ದಾರೆ. ಸರ್ಕಾರಕ್ಕೆ ಸದನ ನಡೆಸಬೇಕೆಂಬ ಆಸೆ ಇದೆಯೋ ಇಲ್ಲವೋ?

**ಶ್ರೀ ಎನ್.ಹೆಚ್.ಶಿವಶಂಕರ ರೆಡ್ಡಿ(ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಬರುತ್ತಿದ್ದಾರೆ. ಆ ಕೆಳಮನೆಯಲ್ಲಿ ಕೆಲವರು ಇದ್ದಾರೆ.

**ಡಾ:ವೈ.ಎ.ನಾರಾಯಣಸ್ವಾಮಿ:–** ಈ ಸದನದಲ್ಲಿ ಯಾವ ಮಂತ್ರಿಗಳು ಇರಬೇಕೆಂದು ಪಟ್ಟಿ ಇದೆಯಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ತಮ್ಮ ಗಮನಕ್ಕೆ ತರುವುದೇನೆಂದರೆ, ಕನಿಷ್ಠ ಮೂರು ಜನ ಮಂತ್ರಿಗಳಾದರೂ ಕೋರಂ ನಲ್ಲಿ ಇರಬೇಕೆಂದು ನಿಯಮದಲ್ಲಿದೆ. ಈ ನಿಯಮಗಳನ್ನು ಆರಂಭದಲ್ಲೇ ಮಾಡದಿದ್ದರೆ ಸದನವನ್ನು ಹೇಗೆ ನಡೆಸುವುದು? ಮೇಲ್ಮನೆಯ ಸದನದ ಬಗ್ಗೆ ಸರ್ಕಾರ ಗಂಭೀರತೆಯನ್ನು ಕಳೆದುಕೊಂಡಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೇ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಬರುತ್ತಿದ್ದಾರೆ.

**ಡಾ:ವೈ.ಎ.ನಾರಾಯಣಸ್ವಾಮಿ:–** ಐವನ್ ಡಿ'ಸೋಜಾ ರವರೆ, ತಾವು ಮುಖ್ಯ ಸಚೇತಕರಲ್ಲ.

**ಶ್ರೀ ಐವನ್ ಡಿ'ಸೋಜಾ:–** ಮುಖ್ಯ ಸಚೇತಕರಲ್ಲದಿದ್ದರೂ ಆಡಳಿತ ಪಕ್ಷದಲ್ಲಿರುವುದರಿಂದ ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಈಗ ಮೂರು ಜನ ಮಂತ್ರಿಗಳು ಬಂದಿದ್ದಾರೆ, ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 1.ರಾಜ್ಯ ಹೈಕೋರ್ಟಿನ ಆದೇಶದ ಅನ್ವಯ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸದನದಲ್ಲಿ ಮಂಡಿಸುವ ಬಗ್ಗೆ

-----

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ವಿಶೇಷ ಪ್ರಕರಣವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಕರ್ನಾಟಕ ರಾಜ್ಯ ಸರ್ಕಾರದ ಒಟ್ಟು ಆಡಳಿತ ವ್ಯವಸ್ಥೆಯ ಬಗ್ಗೆ ನಿನ್ನೆ ರಾಜ್ಯದ ಘನತೆವೆತ್ತ ಉಚ್ಚ ನ್ಯಾಯಾಲಯ ನೀಡಿರುವಂತಹ ತೀರ್ಪು ಸರ್ಕಾರದ ಆಡಳಿತಕ್ಕೆ ಕೈಗನ್ನಡಿ ಹಿಡಿದಿದೆ ಎಂದು ನಾನು ಭಾವಿಸುತ್ತೇನೆ. ತಮ್ಮ ಗಮನಕ್ಕೆ ತರಬೇಕಾದ ವಿಚಾರವೇನೆಂದರೆ, ಅನ್ವರ್ ಮಾಣಿಪ್ಪಾಡಿ ವರದಿಯನ್ನು ಈ ಸದನದಲ್ಲಿ ಮಂಡಿಸಬೇಕೆಂದು ನಾವು ಆಗ್ರಹ ಮಾಡುತ್ತಲೇ ಬಂದಿದ್ದೇವೆ.

**ಸಭಾಪತಿಯವರು:–** ಈಗ ಮೊದಲು ಪ್ರಶ್ನೋತ್ತರ ಕಲಾಪ ಆಗಲಿ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಇದನ್ನು ಯಾವ ನಿಯಮಾವಳಿಯಲ್ಲಿ ತಂದು ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ?

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಮೊದಲು ಪ್ರಶ್ನೋತ್ತರವಾಗಲಿ, ಅಮೇಲೆ ಅದನ್ನು ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಪತ್ರಿಕೆಯಲ್ಲಿ ಬಂದ ತಕ್ಷಣ ವರದಿಯನ್ನು ಮಂಡಿಸುವುದಕ್ಕಾಗುವುದಿಲ್ಲ. ಉಚ್ಚ ನ್ಯಾಯಾಲಯ ಏನು ruling ಕೊಟ್ಟಿದೆ ಎಂಬುದನ್ನು ಸರ್ಕಾರ ನೋಡಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಕಲಾಪವನ್ನು ನಡೆಸುವುದು ಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ. ನಾನು ಇದರ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಿಲ್ಲ. ನಾವು ಈ ವರದಿಯನ್ನು ಮಂಡಿಸಿ ಎಂದು ಹೇಳಿದ ಮೇಲೂ ಸರ್ಕಾರ ಮಂಡಿಸಿಲ್ಲ. ಇವತ್ತು ಘನತೆವೆತ್ತ ನ್ಯಾಯಾಲಯ ಸರ್ಕಾರಕ್ಕೆ ಛೀಮಾರಿ ಹಾಕಿ, ವರದಿಯನ್ನು ಇದೇ ಅಧಿವೇಶನದಲ್ಲಿ ಮಂಡಿಸಬೇಕೆಂದು ಹೇಳಿದೆ. ಇದು ಆಡಳಿತ ವ್ಯವಸ್ಥೆಗೆ ಕನ್ನಡಿ ಹಿಡಿಯುವಂತಹ ವಿಚಾರ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ಈಗ ಪ್ರಶ್ನೋತ್ತರ ಕಲಾಪವನ್ನು ನಡೆಸಬೇಕೇ ಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಪ್ರಶ್ನೋತ್ತರ ಕಲಾಪವನ್ನು ನಡೆಸೋಣ, ಆದರೆ ಇದರ ಬಗ್ಗೆ ಸರ್ಕಾರ ಸ್ಪಷ್ಟನೆಯನ್ನು ನೀಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಸರ್ಕಾರ ಈ ವರದಿಯನ್ನು ಮಂಡಿಸುತ್ತದೆಯೇ? 56,000 ಎಕರೆ ಭೂಮಿಯಲ್ಲಿ 26,000 ಎಕರೆ ಭೂಮಿಯನ್ನು ಕಬಳಿಸಲಾಗಿದೆ. ಎರಡು ಲಕ್ಷ ಕೋಟಿ ರೂಪಾಯಿ ಮೌಲ್ಯವನ್ನು ರಾಜಕಾರಣಿಗಳು, ಮಂತ್ರಿಗಳು ಕಬಳಿಸಿದ್ದಾರೆ. ಇದನ್ನು ಗೌರವಾನ್ವಿತ

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಖ್ಯಮಂತ್ರಿಗಳು ಗಮನಿಸಬೇಕು. ನಾವು ಈ ಸದನದಲ್ಲಿ ಅನ್ವರ್ ಮಾಣಿಪ್ಪಾಡಿ ವರದಿಯನ್ನು ಮಂಡಿಸಿ ಎಂದು ಹಲವಾರು ಸಂದರ್ಭಗಳಲ್ಲಿ ಹೇಳುತ್ತಲೇ ಬಂದಿದ್ದೇವೆ. ಆದರೆ ಸರ್ಕಾರ ನಿರ್ಲಕ್ಷ್ಯ ಮಾಡಿತು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಆರಂಭದಲ್ಲಿ ಶಿಸ್ತಿನ ಬಗ್ಗೆ ಪಾಠ ಮಾಡಿದ್ದರು. ಮೊದಲು ಪ್ರಶ್ನೋತ್ತರ ಕಲಾಪ ಮುಗಿಯಲಿ. ಚರ್ಚೆ ಮಾಡುವುದಕ್ಕೆ ಮೊದಲು ಪತ್ರದ ಮೂಲಕ ತಮ್ಮ ಅನುಮತಿಯನ್ನು ಕೇಳಬೇಕಾಗುತ್ತದೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ಈಗ ಪ್ರಶ್ನೋತ್ತರ ಕಲಾಪವನ್ನು ನಡೆಸಬೇಕೇ, ಬೇಡವೇ? ಬೇಡ ಎಂದರೆ ಪ್ರಶ್ನೋತ್ತರವನ್ನು ರದ್ದುಪಡಿಸೋಣ. ಇಲ್ಲದಿದ್ದರೆ ಪ್ರಶ್ನೋತ್ತರ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸಭಾಪತಿ ಪೀಠದಿಂದ ನೀಡಿದ್ದ ರೂಲಿಂಗ್‌ನ ವಿರುದ್ಧವಾಗಿ ಈ ಸದನಕ್ಕೆ ಅಗೌರವ ತೋರಿಸಿದ್ದಾರೆಂದು ಕೋರ್ಟ್‌ಗೆ ಹೋದಾಗ ನ್ಯಾಯಾಲಯ ಸರ್ಕಾರಕ್ಕೆ ಛೀಮಾರಿ ಹಾಕಿದೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೆ, ಈಗ ನಾನು ಪ್ರಶ್ನೋತ್ತರ ಕಲಾಪವನ್ನು ನಡೆಸಬೇಕೇ ಬೇಡವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪ್ರಶ್ನೋತ್ತರವನ್ನು ನಡೆಸೋಣ. ಆದರೆ ಇದು ಬಹಳ ಮಹತ್ವದ ವಿಚಾರವೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, ಸದನಕ್ಕೆ ಸರ್ಕಾರ ಗೌರವ ಕೊಡದಿರುವಾಗ ಉಚ್ಚ ನ್ಯಾಯಾಲಯ ಸರ್ಕಾರಕ್ಕೆ ಚಾಟಿ ಬೀಸಿದೆ. ಅನ್ವರ್ ಮಾಣಿಪ್ಪಾಡಿ ವರದಿಯನ್ನು ಸದನದಲ್ಲಿ ಮಂಡನೆ ಮಾಡಿ ಎಂದು ಪೀಠ ಆದೇಶ ಕೊಟ್ಟಿದೆ. ಸರ್ಕಾರ ನ್ಯಾಯಾಲಯಕ್ಕೆ ಸುಳ್ಳು ಹೇಳಿದೆ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೆ, ಇದರ ಬಗ್ಗೆ ಪ್ರಶ್ನೋತ್ತರ ಕಲಾಪದ ನಂತರ ಮಾಡೋಣ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಸದನದ ನಿಯಮ ಪಾಲಿಸುತ್ತಾರೆಯೋ ಇಲ್ಲವೋ ಎಂಬುದನ್ನು ಹೇಳಲಿ.

**(ಗೊಂದಲ)**

**ಶ್ರೀ ಹೆಚ್.ಡಿ.ಕುಮಾರಸ್ವಾಮಿ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಈಗ ಕೋರ್ಟ್ ಆದೇಶದ ಪ್ರತಿ ಬಂದ ಮೇಲೆ ಏನು ತೀರ್ಮಾನ ಮಾಡಬೇಕೋ ಅದನ್ನು ಮಾಡೋಣ. ಯಾರು ಎಲ್ಲೂ ಹೋಗುವುದಿಲ್ಲ. ನಮಗೆ ಕೋರ್ಟ್ ಆದೇಶದ ಪ್ರತಿ ಇನ್ನು ದೊರಕಿಲ್ಲ. ಕೋರ್ಟ್ ಆದೇಶದ ಪ್ರತಿ ತೆಗೆದುಕೊಂಡು ಬಂದ ನಂತರ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳೋಣ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ:–** ಮಾನ್ಯ ಸಭಾಪತಿಯವರೆ, ನಾನು ಕೊಟ್ಟಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆಂದು ತಾವೇ ಹೇಳಿದ್ದಿರಿ. **ಸಭಾಪತಿಯವರು:–** ಮೊದಲು ಪ್ರಶ್ನೋತ್ತರ ಕಲಾಪ ಮುಗಿಯಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಅಜೆಂಡಾದಲ್ಲಿ ಟಿಪ್ಪು ಜಯಂತಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆಂದು ತಾವೇ ಹೇಳಿದ್ದೀರಿ. ಆದರೆ ಇವತ್ತು ಆ ವಿಷಯ ಅಜೆಂಡಾದಲ್ಲಿ ಬಂದಿಲ್ಲ. ಇದು ಸದನದಲ್ಲಿ ಕೊಟ್ಟಂಥ ಭರವಸೆಯಾಗಿದೆ.

**ಶ್ರೀ ಎಸ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ಅಜೆಂಡಾದಲ್ಲಿ ಆ ವಿಷಯವನ್ನು ಕೈಬಿಡುವುದು ಹೇಗೆ? ಈಗ ತಾವು ನಮ್ಮ ರಕ್ಷಣೆಗೆ ಬರಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಶ್ನೋತ್ತರ ಕಲಾಪ ಮುಗಿಯಲಿ, ಅದಕ್ಕೆ ನಾನು ನಂತರ ಉತ್ತರ ಕೊಡುತ್ತೇನೆ.

**2. ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

ಚುಕ್ಕೆ ಪ್ರಶ್ನೆ ಸಂಖ್ಯೆ:01
ಉತ್ತರ ಲಗತ್ತಿಸಲಾಗಿದೆ

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ)(ಕೆ.ಸಿ.ಕೊಂಡಯ್ಯರವರ ಪರವಾಗಿ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ. ನಾನು ಅವರಿಗೆ ಅಭಿನಂದಿಸುತ್ತೇನೆ. ರಂಗಮಂದಿರ, ಸಾಂಸ್ಕೃತಿಕ ಭವನ ಮತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕಾಗಿ ಹಣ ಮಂಜೂರಾದ ಮೇಲೆ ಅದನ್ನು ಆರು ತಿಂಗಳೊಳಗಾಗಿ ವಿನಿಯೋಗಿಸದಿದ್ದರೆ ಆ ಹಣವನ್ನು ಸರ್ಕಾರಕ್ಕೆ ಮರುಕಳಿಸಬೇಕು, ಕಡ್ಡಾಯವಾಗಿ ಅದನ್ನು ವಾಪಸ್ ಪಡೆಯಲಾಗುವುದು ಎನ್ನುವ ಆದೇಶವನ್ನು ಉತ್ತರದಲ್ಲಿ ತಿಳಿಸಿದ್ದಾರೆ. ನಾನು ಮಾನ್ಯ ಸಚಿವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಸಿರಿಗೇರಿ ಗ್ರಾಮಕ್ಕೆ 10 ಲಕ್ಷ ರೂಪಾಯಿ, ಹಗರಿಬೊಮ್ಮನಹಳ್ಳಿ ತಾಲ್ಲೂಕು, ಬನ್ನಿಕಲ್ಲು ಗ್ರಾಮಕ್ಕೆ 10 ಲಕ್ಷ ರೂಪಾಯಿ, ಹೊಸಪೇಟೆ ತಾಲ್ಲೂಕಿನ ನಾಗೇನಹಳ್ಳಿ ಗ್ರಾಮಕ್ಕೆ 10 ಲಕ್ಷ ರೂಪಾಯಿ, ಹೀಗೆ 2016–17ನೇ ಸಾಲಿನಲ್ಲಿ 30 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಇಲ್ಲಿಯವರೆವಿಗೂ ಹಣ ಬಿಡುಗಡೆಯಾಗಿಲ್ಲ. ಹಾಗಾಗಿ ಈ ವಿಳಂಬಕ್ಕೆ ಯಾವ ಅಧಿಕಾರಿಗಳ ಮೇಲೆ ಮಾನ್ಯ ಸಚಿವರು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಇದಕ್ಕೆ ಕಾರಣವೇನು ಎಂಬುದನ್ನು ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, 2016–17ನೇ ಸಾಲಿನಲ್ಲಿ 169 ಬಯಲು ರಂಗಮಂದಿರ, ಸಾಂಸ್ಕೃತಿಕ ಭವನ, ರಂಗಮಂದಿರಗಳನ್ನು ನಿರ್ಮಾಣ ಮಾಡಲು ಅವಕಾಶ ನೀಡಲಾಗಿದೆ. ಅದರಲ್ಲಿ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಟ್ಟು 24 ರಂಗಮಂದಿರಗಳು ಪೂರ್ಣಗೊಂಡಿವೆ. 70 ಸಾಂಸ್ಕೃತಿಕ ಭವನಗಳು ಈಗಾಗಲೇ ಕಾರ್ಯನಿರತವಾಗಿವೆ. It is ongoing. ಅವುಗಳು ನಡೆಯುತ್ತಿವೆ. ಅವುಗಳಲ್ಲಿ ಕೆಲವು ನಿವೇಶನಗಳಿದ್ದು, ಅವರು ಕೆಲಸಕಾರ್ಯಗಳನ್ನು ಸ್ವಲ್ಪ ತಡ ಮಾಡಿದ್ದಾರೆ. ಕೆಲವರು ದಾಖಲೆಗಳನ್ನು ಕೊಟ್ಟಿದ್ದಾರೆ. ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಪ್ರಾರಂಭ ಮಾಡುತ್ತೇವೆ ಎಂದು ಹೇಳಿರುವುದನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ಹೇಳಿರುವ ರಂಗಮಂದಿರ ನಿರ್ಮಾಣಕ್ಕೆ ಏನಾದರೂ ತೊಡಕಿದ್ದರೆ ತಕ್ಷಣವೇ ಅದನ್ನು ಮಾಡುವುದಕ್ಕೆ ನಾನು ಜಿಲ್ಲಾಧಿಕಾರಿಯವರಿಗೆ ಹೇಳುತ್ತೇನೆ. ರಂಗಮಂದಿರಗಳ ಕಾಮಗಾರಿ ಪೂರ್ಣಗೊಳ್ಳುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೆ, ತಾವು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ಕೊಡುತ್ತೇನೆಂದು ಹೇಳಿದ್ದೀರಿ, ತಮಗೆ ಅಭಿನಂದನೆಗಳು. ಆದರೆ 2016–17ನೇ ಸಾಲಿನಲ್ಲಿ ಮಂಜೂರಾಗಿದ್ದರೂ ಕೂಡ ಇಲ್ಲಿಯವರೆಗೆ ಹಣ ಬಿಡುಗಡೆ ಮಾಡದಿರುವುದಕ್ಕೆ ಕಾರಣವೇನು? ಹಣ ಬಿಡುಗಡೆ ಯಾವಾಗ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಲಿ.

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೆ, ಹಣ ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡುತ್ತೇವೆ. ನಾವು 10 ರಿಂದ 20 ಲಕ್ಷ ರೂಪಾಯಿಗಳವರೆಗೆ ಕೊಡುತ್ತೇವೆ. ಅವರ ಬಜೆಟ್ ತುಂಬಾ ದೊಡ್ಡದಾಗಿರುತ್ತದೆ. ಬಜೆಟ್ ದೊಡ್ಡದಾಗಿದ್ದಾಗ ಬೇರೆ ಬೇರೆ ವ್ಯಕ್ತಿಗಳಿಂದ ಹಣ ಸಂಗ್ರಹ ಮಾಡಿಕೊಳ್ಳುವಾಗ ಈ ರೀತಿಯಾಗಿ ವಿಳಂಬ ಮಾಡಿಕೊಳ್ಳುತ್ತಿದ್ದಾರೆ. ತಕ್ಷಣವೇ ಇದನ್ನು ಪೂರ್ಣಗೊಳಿಸಿ ಮಾಡಬೇಕೆಂದು ಸೂಚನೆ ಕೊಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ಆದೇಶದ ಪ್ರತಿ ಇದೆ.

**ಡಾ:ಜಯಮಾಲ ರಾಮಚಂದ್ರ:–** ಆದೇಶದ ಪ್ರತಿಯನ್ನು ಕಳುಹಿಸಿಕೊಡಿ, ಖಂಡಿತವಾಗಿಯೂ ಅದನ್ನು ಪೂರ್ಣಗೊಳಿಸುತ್ತೇವೆ.

(ಮುಂದು)

(413)13–11–2018(11–00)ಬಿಕೆಪಿ–ಎಕೆ

**ಪ್ರಶ್ನೆ ಸಂಖ್ಯೆ 607/2018**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ತೇಜಸ್ವಿನಿ ಗೌಡ:–**ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಮದ್ಯ ಮಾರಾಟಕ್ಕೆ ಸನ್ನದು ಪಡೆದಿರುವವರ ಸಂಖ್ಯೆ ಎಷ್ಟು, ಅನಧಿಕೃತ ಅಂಗಡಿಗಳೆಷ್ಟು ಎನ್ನುವುದನ್ನು ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–**ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು 10566 ವಿವಿಧ ರೀತಿಯ ಸನ್ನದುಗಳು ಕಾರ್ಯನಿರ್ವಹಣೆ ಮಾಡುತ್ತಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅನಧಿಕೃತ ಅಂಗಡಿಗಳೆಷ್ಟು ಎನ್ನುವುದನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಅನಧಿಕೃತವಾದಂತಹ ಅಂಗಡಿಗಳು ಯಾವುದೂ ಇಲ್ಲ. ಅನಧಿಕೃತವಾಗಿ ಯಾರಿಗೂ ಸಹ ಅಂಗಡಿಗಳನ್ನು ಕೊಟ್ಟಿರುವುದಿಲ್ಲ. ಅದಕ್ಕೆ ಅವಕಾಶಗಳನ್ನು ಸಹ ಕೊಡುವುದಿಲ್ಲ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅನಧಿಕೃತ ಅಂಗಡಿಗಳ ಸಂಖ್ಯೆ ಎಂದರೆ ಈ ಕ್ಷಣ, ಈಗ ನಾವು social media ಯುಗದಲ್ಲಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳ ಮೂಲಕ ಈ ಕ್ಷಣದಲ್ಲಿ ಅಂಗಡಿಗಳಲ್ಲಿ ಯಾರ್‍ಯಾರು ಕೆಲಸ ಮಾಡುತ್ತಿದ್ದಾರೆನ್ನುವುದನ್ನು ಈ ತಕ್ಷಣ ವಿಚಕ್ಷಣಾ ದಳವನ್ನು ಕಳುಹಿಸಿದರೆ. . . . ಪರವಾನಿಗೆಯನ್ನು ಪಡೆಯತಕ್ಕವರು ಬೇರೆ. ಆದರೆ, ಅಲ್ಲಿ ಅಂಗಡಿಯನ್ನು ನಡೆಸುವಂತಹವರು ಬೇರೆ. ಈ ರೀತಿಯಲ್ಲಿ ಎಲ್ಲಾ ಕಾನೂನುಗಳನ್ನು ಉಲ್ಲಂಘನೆ ಮಾಡುವುದರಿಂದ ನಾವು ಯಾವ ರೀತಿಯಲ್ಲಿ ಸಮಾಜದಲ್ಲಿ ಒಂದು ಅನಾರೋಗ್ಯಕರ ಸ್ಥಿತಿಗೆ ಬಂದಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹಿಂದೆಯೂ ಕೂಡ ಈ ವಿಚಾರದಲ್ಲಿ, ಕುಡಿತದಿಂದ ಉಂಟಾಗುವ ಪರಿಣಾಮಗಳ ವಿಚಾರದಲ್ಲಿ ತಮ್ಮ ಕಳಕಳಿಯನ್ನು ವ್ಯಕ್ತ ಮಾಡಿದ್ದರು. ಆ ಹಿನ್ನೆಲೆಯಲ್ಲಿ ಅವರಿಂದ ಹೆಚ್ಚು ಕಾಳಜಿಯನ್ನು ಬಯಸಿ ಈ ಪ್ರಶ್ನೆಯನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ನಾನು ಕೇಳಿದ ಪ್ರಶ್ನೆಯ ರೀತಿಯಲ್ಲಿ ಇರುವುದಿಲ್ಲವೆಂದು ಪ್ರಾಮಾಣಿಕವಾಗಿ ಹೇಳಿದರೆ ನಾನು ಅದಕ್ಕೆ ಸಂತೋಷ ಪಡುತ್ತೇನೆ. ರಾಜ್ಯದಲ್ಲಿ ಒಂದೂ ಸಹ ಅನಧಿಕೃತ ಅಂಗಡಿಗಳು ಇಲ್ಲವೆಂದು ಹೇಳಿದರೆ ಒಬ್ಬ ಮಹಿಳೆಯಾಗಿ ನನ್ನಷ್ಟು ಸಂತೋಷ ಯಾರಿಗೂ ಆಗುವುದಿಲ್ಲ. ಆದರೆ, ಇದು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರೆ ಸಂತೋಷ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಅನಧಿಕೃತವಾಗಿ ಯಾವುದೇ ಅಂಗಡಿಗಳು ನಡೆಯುವುದಕ್ಕೆ ಅವಕಾಶಗಳಿಲ್ಲ. ಇವತ್ತು ಯಾವುದಾದರೂ ಅಂಗಡಿ ನಡೆಯುತ್ತಿರುವ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿ ಇದ್ದಲ್ಲಿ, ಆ ಮಾಹಿತಿಯನ್ನು ನನಗೆ ಕೊಟ್ಟರೆ ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ. ತಾವು ಹೇಳಿರುವಂತಹದ್ದು ನಿಜ ಇದೆ. ಕೆಲವು ಅಂಗಡಿಗಳಲ್ಲಿ ಮದ್ಯವನ್ನು ಮಾರಾಟ ಮಾಡುತ್ತಾರೆ. ಅದಕ್ಕೆ ಪರವಾನಿಗೆ ಇರುವುದಿಲ್ಲ. ಆದರೆ, ಆ ಚಿಲ್ಲರೆ ಅಂಗಡಿಗಳಲ್ಲಿ ಮಾರಾಟ ಮಾಡುವಂತಹದ್ದು ಏನಿದೆ, ಅವರುಗಳು ಅಧಿಕೃತವಾಗಿ ಎಂ.ಎಸ್.ಐ.ಎಲ್.ನಿಂದ ನಾವು ಏನು ಉತ್ತಮವಾದಂತಹ ಮದ್ಯವನ್ನು ಸರಬರಾಜು ಮಾಡುತ್ತೇವೆ, ಅಲ್ಲಿಂದಲೇ ಅದನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವಂತಹದ್ದು ಇದೆ. ಇವತ್ತು ಏನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನಧಿಕೃತವಾಗಿ, ಆರೋಗ್ಯಕ್ಕೆ ಹಾನಿಕರವಾದಂತಹ ಸೆಕೆಂಡ್ಸ್ ಅನ್ನು ಮಾರಾಟ ಮಾಡತಕ್ಕಂತಹ ಮಾಹಿತಿಗಳು ನಿಮ್ಮಲ್ಲಿ ಇದ್ದು, ಅದನ್ನು ಕೊಟ್ಟರೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ಜನವಸತಿ ಹಾಗೂ ಶಾಲೆ-ಆಸ್ಪತ್ರೆಯಂತಹ ಸಾರ್ವಜನಿಕ ಸ್ಥಳಗಳಲ್ಲಿ ನಿಯಮ ಉಲ್ಲಂಘಿಸಿ, ತೆರೆದಿರುವ ಮದ್ಯ ಮಾರಾಟ ಅಂಗಡಿ ಹಾಗೂ ಬಾರ್‌ಗಳು ಅಂದರೆ ಅಲ್ಲಿಯೇ ಮದ್ಯ ಸೇವನೆಗೆ ಅವಕಾಶವನ್ನು ಕೊಡುವಂತಹ ವ್ಯವಸ್ಥೆ ಇದೆ. ಅಂಗಡಿಯಲ್ಲಿ ಮುಂದೆ ಮದ್ಯವನ್ನು ಮಾರಾಟ ಮಾಡುತ್ತಿರುತ್ತಾರೆ, ಹಿಂದೆ 4-5 ಚೇರ್‌ಗಳನ್ನು ಹಾಕಿ ಅಲ್ಲಿ ಮದ್ಯ ಸೇವನೆಗೂ ಅವಕಾಶವನ್ನು ಕೊಟ್ಟಿರುತ್ತಾರೆ. ಅವುಗಳು ಪೂರ್ಣರೂಪದ ಬಾರ್‌ಗಳ ಸ್ವರೂಪದಲ್ಲಿಯೂ ಇರುವುದಿಲ್ಲ. ಜನನಿಬಿಡ ಪ್ರದೇಶದಲ್ಲಿ ಅಂಗಡಿಗಳಿಂದ, ದೇವಸ್ಥಾನದಿಂದ ಇಂತಿಷ್ಟು ದೂರ ಇರಬೇಕೆಂದು ನಿಯಮ ಇದೆ. ಅದರ ಬಗ್ಗೆ ತುಂಬಾ ಕಡೆ violation ಆಗಿದೆ. ಈ ವಿಚಾರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು), ನಿಯಮಗಳು, 1967ರ ನಿಯಮ 5 ಅನ್ನು ಉಲ್ಲಂಘಿಸಿ, ಅಬಕಾರಿ ಇಲಾಖೆಯಲ್ಲಿ ಏನು ಒಂದು ಸನ್ನದುಗಳ ಸಾಮಾನ್ಯ ಷರತ್ತುಗಳಿವೆ ಅದನ್ನು ಉಲ್ಲಂಘನೆ ಮಾಡಿ, ಯಾವುದೇ ರೀತಿಯಲ್ಲಿ ಶಾಲಾ-ಆಸ್ಪತ್ರೆಗಳ, ದೇವಸ್ಥಾನಗಳ ಹತ್ತಿರದಲ್ಲಿ ಯಾವುದೇ ರೀತಿಯ ಮದ್ಯ ಮಾರಾಟ ಅಂಗಡಿಗಳನ್ನು ತೆರೆಯಲಿಕ್ಕೆ ಎಲ್ಲಿಯೂ ಅವಕಾಶಗಳನ್ನು ಕೊಟ್ಟಿರುವುದಿಲ್ಲ. ಅದಕ್ಕೆ 100 ಮೀಟರ್‌ಗಳ ಪರಿಮಿತಿಯನ್ನೂ ಸಹ ನಿಗದಿಪಡಿಸಲಾಗಿದ್ದು, ಅದನ್ನು ಉಲ್ಲಂಘನೆ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿಲ್ಲ ಎನ್ನುವಂತಹ ವಿಚಾರವನ್ನು ಸದಸ್ಯರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಅದರ ಜೊತೆಗೆ ತಾವು ಇನ್ನು ಕೆಲವು ಉಪ ಪ್ರಶ್ನೆಗಳನ್ನು ಕೇಳಿದ್ದೀರಿ. ಮದ್ಯ ಸರಬರಾಜು ಮಾಡುವಂತಹ ಬಾಟಲ್‌ಗಳ ಮೇಲ್ಭಾಗದಲ್ಲೇ ಮದ್ಯಪಾನ ಹಾನಿಕರ ಎಂದು ಹೇಳಿ ಎಚ್ಚರಿಕೆಯನ್ನು ಕೊಡತಕ್ಕಂತಹದ್ದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇವತ್ತು ಮದ್ಯಪಾನವನ್ನು ನಿಷೇದ ಮಾಡುವುದಕ್ಕಿಂತ ಹೆಚ್ಚಿನದಾಗಿ, ಮದ್ಯಪಾನಕ್ಕೆ ಪ್ರೋತ್ಸಾಹ ಕೊಡಬಾರದು ಎಂದು ಮದ್ಯಪಾನ ಸಂಯಮ ಮಂಡಳಿ ಎಂದು ಏನು ಮಾಡಿಕೊಳ್ಳಲಾಗಿದೆ ಅದರ ಮೂಲಕ ಜನರಿಗೆ ಮದ್ಯಪಾನವನ್ನು ಸೇವನೆ ಮಾಡದೇ ಇರತಕ್ಕಂತಹ ಸಲಹೆಗಳನ್ನು, ಮಾಹಿತಿಗಳನ್ನು ಕೊಡುವಲ್ಲಿ ಹಲವಾರು ರೀತಿಯಲ್ಲಿ ಏನು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ, ಇವುಗಳ ಮೂಲಕ ಮದ್ಯಪಾನ ಸೇವನೆ ಮಾಡುವುದನ್ನು ನಿಲ್ಲಿಸಬೇಕೆನ್ನುವುದು ಒಂದು ಕಡೆ ವಿಚಾರ ಇದೆ. ಮೊದಲಿನಿಂದಲೂ ಮದ್ಯಪಾನದ ಮಾರಾಟದ ಮೂಲಕ ಸರ್ಕಾರಕ್ಕೆ ಆದಾಯ ತರುವಂತಹ ನಿಟ್ಟಿನಲ್ಲಿ ಸರ್ಕಾರದಲ್ಲಿ ತೀರ್ಮಾನಗಳಿವೆ. ಆದರೆ, ನಾವು ಮಕ್ಕಳಿಗೆ ಅಂದರೆ 18 ವರ್ಷದೊಳಗಿನ ಮಕ್ಕಳಿಗೆ ಮದ್ಯಪಾನವನ್ನು ಮಾರಾಟ ಮಾಡುವಂತಹದ್ದಾಗಲಿ ಇರುವುದಿಲ್ಲ. ಇದಕ್ಕೆ ಯಾವುದೇ ರೀತಿಯಲ್ಲಿ ಅವಕಾಶಗಳಿರುವುದಿಲ್ಲ. ಇವತ್ತು ಮದ್ಯಪಾನ ಸೇವನೆ ಮಾಡುವಂತಹದ್ದನ್ನು ಸ್ವಲ್ಪಮಟ್ಟಿಗೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಡಿಮೆ ಮಾಡಬೇಕೆನ್ನುವ ದೃಷ್ಟಿಯಿಂದ ಹಲವಾರು ರೀತಿಯಲ್ಲಿ ತಿಳುವಳಿಕೆ ಮೂಡಿಸುವಲ್ಲಿ parallelly ಸರ್ಕಾರದಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ.

**ಡಾ॥ ತೇಜಸ್ವಿನಿ ಗೌಡ:-** ಮಾನ್ಯ ಸಭಾಪತಿಯವರೇ, ನನಗೆ ಒಂದು ನಿಮಿಷ ಅವಕಾಶ ಕೊಡಿ. ಇವತ್ತು ನಾನು ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಮದ್ಯಪಾನದ ಸೇವನೆಯಿಂದ ಅನಾರೋಗ್ಯ, ಮನೋರೋಗ, ನಪುಂಸಕತ್ವ ಸಮಸ್ಯೆಗಳು ಉಂಟಾಗುತ್ತವೆ. ಹೊರದೇಶಗಳಲ್ಲಿ ಆರ್ಥಿಕ ಚೈತನ್ಯ ಜಾಸ್ತಿ ಇರತಕ್ಕಂತಹವರು ಗುಣಮಟ್ಟದ ಮದ್ಯ ಸೇವನೆಯನ್ನು ಮಾಡುತ್ತಾರೆ. ಅದು ಅಲ್ಲಿನ ಉನ್ನತ ವರ್ಗದ ಸಂಸ್ಕೃತಿಯ ಒಂದು ಭಾಗ. ಇವತ್ತು ಮಧ್ಯಮ ವರ್ಗದವರು, ಬಡ ವರ್ಗದವರು ಅಸಹಾಯಕರಾಗಿ ಅವರುಗಳ ನೋವುಗಳನ್ನು ಮರೆಯುವುದಕ್ಕಾಗಿ ಈ ನಶೆಗೆ ಒಳಪಟ್ಟಿರುವುದಾಗಿದೆ. ಹಳ್ಳಿಗಳಲ್ಲಿ ಅವ್ಯಾಹತವಾಗಿ, ಕಾನೂನುಬಾಹಿರವಾಗಿ ಮದ್ಯ ಮಾರಾಟ ನಡೆಯುತ್ತಿರುತ್ತದೆ. ಆದರೆ, ಮದ್ಯ ಸೇವನೆಯಿಂದ ಅನಾರೋಗ್ಯ ಹೊಂದಿರುವವರು ಹಾಗೂ ಮನೋರೋಗಿಗಳು ಎಷ್ಟು ಇದ್ದಾರೆ ಎನ್ನುವ ನಿಖರವಾದ ಮಾಹಿತಿ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಆರೋಗ್ಯ ಮತ್ತು ಅಬಕಾರಿ ಇಲಾಖೆಗಳ ನಡುವೆ ಈ ಒಂದು ಮಾಹಿತಿಯನ್ನು ತೆಗೆದುಕೊಳ್ಳದಿದ್ದರೆ ಕುಟುಂಬ ವ್ಯವಸ್ಥೆ ಕುಸಿದು ಬೀಳುತ್ತಿದೆ, ಕುಟುಂಬವನ್ನು ಪೋಷಣೆ ಮಾಡಬೇಕಾದ ಪತಿ ಅಥವಾ ತಂದೆ ಇವತ್ತು ಮಕ್ಕಳನ್ನು ಬೀದಿಗೆ ಬಿಡುತ್ತಿದ್ದಾರೆ. ಇತ್ತೀಚೆಗೆ ಒಂದು ವಿಡಿಯೋ viral ಆಗಿದೆ. ತಾಯಿಯನ್ನು ಒಬ್ಬ ಮಗ ಹೊಡೆಯುತ್ತಿದ್ದಾನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಕಾಳಜಿ ಹೊಂದಿರುವವರಾಗಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರದ ಗಮನ ಸೆಳೆಯುವುದು ನನ್ನ ಉದ್ಧೇಶವಾಗಿದೆ. ಮತ್ತೆ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬರತಕ್ಕಂತಹ ಆದಾಯ ಅನಿವಾರ್ಯವೇ ಎಂದು ನಾನು ಕುಮಾರಣ್ಣನವರಿಗೆ ಕೇಳಿದ್ದೇನೆ. ಆದರೆ, ಅವರು ಇದರ ಬಗ್ಗೆ ಜಾರಿಕೆ ಉತ್ತರವನ್ನು ಕೊಟ್ಟಿದ್ದಾರೆ. ಅಬಕಾರಿ ಇಲಾಖೆಯ ಮದ್ಯ ಮಾರಾಟದಿಂದ ಆದಾಯ ಇಲ್ಲದೇ ಸರ್ಕಾರಕ್ಕೆ ಬೇರೆ ಸಂಪನ್ಮೂಲಗಳಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯ ಸಂಗ್ರಹ ಮಾಡುವ ಇಚ್ಛಾಶಕ್ತಿ ಈ ಇಲ್ಲವೇ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಧನ್ಯವಾದಗಳು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-**ಮಾನ್ಯ ಸಭಾಪತಿಯವರೇ, ಇವತ್ತು ಕಳಪೆ ಮದ್ಯ ಮಾರಾಟವಾಗಬಾರದು, ಕಳಪೆ ಮದ್ಯ ಕುಡಿಯುವುದರಿಂದ ಸಾರ್ವಜನಿಕವಾಗಿ ಒಂದು ಆರೋಗ್ಯ ಕೆಡಬಾರದು ಎನ್ನುವ ದೃಷ್ಟಿಯಿಂದಲೇ 12 ವರ್ಷಗಳ ಹಿಂದೆ ಸಾರಾಯಿ ಮಾರಾಟ ನಿಷೇದ ಮಾಡತಕ್ಕದ್ದನ್ನು ನಾನೇ ಮುಖ್ಯಮಂತ್ರಿಯಾಗಿದ್ದಾಗ ನಿಲ್ಲಿಸಿದ್ದೇವೆ. ಆದರೆ, ಇವತ್ತು ಇಲ್ಲಿ ಉತ್ತಮವಾದ ಗುಣಮಟ್ಟದ ಮದ್ಯವನ್ನು ಕೊಡಲಾಗುತ್ತಿದೆ. ಮಾನ್ಯ ಸದಸ್ಯರು ವಿದೇಶದಲ್ಲಿ ಆರ್ಥಿಕವಾಗಿ, ಸದೃಢವಾಗಿ ಉತ್ತಮವಾದ ಮದ್ಯವನ್ನು ಕುಡಿಯುವುದರಿಂದ ಅವರಿಗೆ ಅವರ ಆರೋಗ್ಯದ ಮೇಲೆ ಅಂತಹ ಪರಿಣಾಮಗಳಾಗುವುದಿಲ್ಲ ಎಂದು ಹೇಳಿದರು. ನಮ್ಮ ದೇಶದಲ್ಲಿರತಕ್ಕಂತಹ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಳಪೆ ಮಟ್ಟದ ಮದ್ಯವನ್ನು ಕೊಡುತ್ತೇವೆ ಎನ್ನುವುದು ಏನಿದೆ, ಅದು ಆಗಬಾರದು ಎನ್ನುವ ದೃಷ್ಟಿಯಿಂದಲೇ ಸಾರಾಯಿ ಮರಾಟವನ್ನು ಹಿಂದೆ ನಿಲ್ಲಸಿದ್ದೇವೆ. ಈ ದೇಶದಲ್ಲಿ ಜಿಎಸ್‍ಟಿ ಬಂದ ನಂತರ “ಒಂದು ದೇಶ, ಒಂದು ತೆರಿಗೆ” ಎಂದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೀರ್ಮಾನ ಮಾಡಿದ ಮೇಲೆ ರಾಜ್ಯ ಸರ್ಕಾರಕ್ಕೆ ಪ್ರಮುಖವಾಗಿ ಇರತಕ್ಕಂತಹ ಮೂಲ ಆದಾಯ ಈ ಒಂದು ಮೂಲದಿಂದಲೇ ಬರಬೇಕಾಗಿರುವುದು ಇವತ್ತಿನ ಅನಿವಾರ್ಯ ಪರಿಸ್ಥಿತಿ. ಇದರ ಬಗ್ಗೆ ಯಾವ ರೀತಿ ಹೋಗಬೇಕೆಂದು ಮುಂದಿನ ದಿನಗಳಲ್ಲಿ ಸಾಧಕ-ಭಾದಕಗಳನ್ನು ಲೆಕ್ಕಾಚಾರ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಜನರಿಗೆ ಕಡಿಮೆ ಬೆಲೆಯಲ್ಲಿ ಗುಣಮಟ್ಟದ ಮದ್ಯವನ್ನು ಒದಗಿಸಬೇಕು, ಆ ಮೂಲಕ ಸರ್ಕಾರಕ್ಕೂ ಆದಾಯ ಬರಬೇಕು ಹಾಗೂ ಜನರ ಆರೋಗ್ಯದ ಮೇಲೆ ಪರಿಣಾಮ ಆಗದೇ ಇರುವಂತಹ ರೀತಿಯಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ನಿರಂತರವಾದ ಪ್ರಕ್ರಿಯೆ ಇದಾಗಿದೆ.

**ಪ್ರಶ್ನೆ ಸಂಖ್ಯೆ 457/2018**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಕೊಡಗು ಜಿಲ್ಲೆಯ ಸಂಕಷ್ಟದ ಸಮಯದಲ್ಲಿ ಸಭಾನಾಯಕರು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಖುದ್ದಾಗಿ ಕೊಡಗು ಜಿಲ್ಲೆಗೆ ಭೇಟಿಯನ್ನು ಕೊಟ್ಟು ಅಲ್ಲಿನ ಜನರಿಗೆ ಸಾಂತ್ವನ ಹೇಳುವುದರ ಮೂಲಕ ಅನೇಕ ಅಭಿವೃದ್ಧಿ ಕೆಲಸಗಳನ್ನು ಅಲ್ಲಿನ ಜನತೆಯ ಪರವಾಗಿ ಮಾಡಿಕೊಟ್ಟಿದ್ದಾರೆ. ಹೀಗಾಗಿ, ಅವರಿಗೆ ಈ ಸದನದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲಿಕ್ಕೆ ಬಯಸುತ್ತೇನೆ. ಅದೇ ರೀತಿ ಇವತ್ತು ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ನಿಜಕ್ಕೂ ಸಮರ್ಪಕವಾಗಿದೆ. ನಾನು ಕೂಡ ಅದೇ ಜಿಲ್ಲೆಯವಳಾಗಿದ್ದು, ನಾನು ಕೂಡ ಆ ಸಂತ್ರಸ್ತರಲ್ಲಿ ಒಬ್ಬಳಾಗಿದ್ದು, ಇವತ್ತು ಮಾನ್ಯ ಸಚಿವರು ಕೊಟ್ಟಂತಹ ಉತ್ತರ ನಿಜಕ್ಕೂ ನನಗೆ ತೃಪ್ತಿದಾಯಕವಾಗಿದೆ. ಜೊತೆಗೆ ಇನ್ನು ಕೆಲವು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ.

ಮುಂದು. .

(414) 13.12.2018 11.10 SV-RN

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ಮುಂದು):-**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವತಿಯಿಂದ ಮಾತೃಪೂರ್ಣ ಎಂಬ ಯೋಜನೆಯನ್ನು ಜಾರಿಗೆ ತರಲಾಗಿದೆ. ಕೊಡಗು ಜಿಲ್ಲೆಯು ಗುಡ್ಡಗಾಡಿನ ಪ್ರದೇಶವಾಗಿರುವುದರಿಂದ ಈ ಒಂದು ಯೋಜನೆಯಡಿಯಲ್ಲಿ ಅಂಗನವಾಡಿಗೆ ಬಂದು ಕಿಟ್ ಅನ್ನು ತೆಗೆದುಕೊಂಡು ಹೋಗಬೇಕು ಎಂಬುದನ್ನು ಬದಲಾವಣೆ ಮಾಡಿ ಪೂರ್ಣ ಗರ್ಭಿಣಿಯರಿಗೆ ಅಲ್ಲಿಯೇ ಕಿಟ್ ಅನ್ನು ಸಿದ್ಧಪಡಿಸಿ ವಿತರಣೆ ಮಾಡುವ ಕೆಲಸವನ್ನು ಇಲಾಖೆಯು ಮಾಡಬೇಕು. ಅನೇಕ ಮಕ್ಕಳನ್ನು ಬಾಲ ಮಂದಿರಕ್ಕೆ ಹಾಗೂ ಬಾಲಕಿಯರ ಮಂದಿರಕ್ಕೆ ಸೇರಿಸಿರುವುದು ನನ್ನ ಗಮನಕ್ಕೆ ಬಂದಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದಕ್ಕೂ ಸಹ ನಾನು ಅವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ಭಾರತೀಯ ವಿದ್ಯಾಭವನದವರು ‘ಪ್ರಾಜೆಕ್ಟ್ ಕೂರ್ಗ್’ ವತಿಯಿಂದ ಸಂತ್ರಸ್ತ ಮಹಿಳೆಯರಿಗೆ ಟೈಲರಿಂಗ್ ತರಬೇತಿ ಹಾಗೂ ಆಹಾರ ಪದಾರ್ಥಗಳ ಉತ್ಪಾದನೆಯ ಬಗ್ಗೆ ತರಬೇತಿಯನ್ನು ನೀಡಲಾಗುತ್ತದೆ ಎಂದು ಹೇಳಿದರು. ಅದು ಸತ್ಯವಾಗಿದ್ದು, ಅದರ ಉದ್ಘಾಟನೆಗೆ ನಾನೇ ಹೋಗಿರುತ್ತೇನೆ. ಭಾರತೀಯ ವಿದ್ಯಾ ಭವನದವರು ಆ ಮಹಿಳೆಯರಿಗೆ ಈಗಾಗಲೇ ರೂ.3,000/–ಗಳ styfund ಅನ್ನು ಕೊಡುತ್ತಿದ್ದಾರೆ. ನಿಜಕ್ಕೂ ಅದು ಶ್ಲಾಘನೀಯ. ಅವರಿಗೆ ತರಬೇತಿಯನ್ನು ನೀಡುವ ಸಂದರ್ಭದಲ್ಲಿ ಹೊಲಿಗೆ ಯಂತ್ರವನ್ನು ನೀಡಲಾಗಿದೆ. ಈಗಾಗಲೇ ಹೊಲಿಗೆ ತರಬೇತಿ ಪ್ರಾರಂಭವಾಗಿ ಎರಡು ತಿಂಗಳು ಕಳೆದಿದ್ದು, ಹಲವು ಮಹಿಳೆಯರು ಹೊಲಿಗೆಯನ್ನೂ ಕಲಿತಿದ್ದಾರೆ. ಅಂಗನವಾಡಿ ಅಥವಾ ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ಹೊಲಿಯುವ ಸಂದರ್ಭದಲ್ಲಿ ಅಲ್ಲಿ ಹೊಲಿಗೆಯನ್ನು ಕಲಿತಿರುವಂತಹ ಸಂತ್ರಸ್ತ ಮಹಿಳೆಯರಿಗೆ ಪ್ರಯೋಜನವಾಗುವ ರೀತಿಯಲ್ಲಿ ಅವರನ್ನು ಪರಿಗಣಿಸಬೇಕು ಎಂಬ ಒಂದು ಬೇಡಿಕೆಯನ್ನು ನಾನು ಸರ್ಕಾರದ ಮುಂದೆ ಇಡುತ್ತಿದ್ದೇನೆ.

ಸಾಂಬಾರ ಪದಾರ್ಥಗಳ ಬಗ್ಗೆ ಸುಳ್ಯದಿಂದ ಮಹಿಳೆಯೊಬ್ಬರು ಬಂದು ಸಂತ್ರಸ್ತ ಮಹಿಳೆಯರಿಗೆ ತರಬೇತಿಯನ್ನು ನೀಡಿದ್ದಾರೆ. ಅಂತಹ ಸಾಂಬಾರ ಪದಾರ್ಥಗಳಿಗೆ ಮಾರುಕಟ್ಟೆಯನ್ನು ಒದಗಿಸಬೇಕಾಗಿದೆ. ಈಗಾಗಲೇ ಅವರು ತಯಾರಿಸಿರುವಂತಹ ವಸ್ತುಗಳಿಗೆ ಸರ್ಕಾರದ ವತಿಯಿಂದ ರಾಜಾಸೀಟ್‌ನಲ್ಲಿ ಮಾರಾಟ ಮಳಿಗೆಯನ್ನು ಮಾಡಲಾಗಿದೆ. ಆದರೆ ಶಾಲಾ ಮಕ್ಕಳ ಬಿಸಿಯೂಟ ಹಾಗೂ ಅಂಗನವಾಡಿ ಮಕ್ಕಳ ಆಹಾರ ತಯಾರಿಕೆಗೆ ಅವಶ್ಯವಿರುವ ಮಸಾಲೆ ಪದಾರ್ಥಗಳನ್ನು ಅವರಿಂದಲೇ ಖರೀದಿಸುವಂತಹ ವ್ಯವಸ್ಥೆಯನ್ನು ಮಾಡಿದರೆ ಅನುಕೂಲವಾಗುತ್ತದೆ.
ಮಾನ್ಯ ಮುಖ್ಯಮಂತ್ರಿಯವರು ಇಂದು ಈ ಸದನದಲ್ಲಿದ್ದಾರೆ. ಅವರು ನಾಲ್ಕೈದು ಬಾರಿ ಕೊಡಗಿಗೆ ಭೇಟಿ ನೀಡಿ ಸಂಕಷ್ಟದಲ್ಲಿರುವ ಜನರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನ ಮಾಡಿರುತ್ತಾರೆ. ಅದಕ್ಕಾಗಿ ನಾವು ಅವರನ್ನು, ಮಾನ್ಯ ಉಪ ಮುಖ್ಯಮಂತ್ರಿಯವರನ್ನು, ಮಂತ್ರಿಮಂಡಲವನ್ನು ಧನ್ಯವಾದಗಳನ್ನರ್ಪಿಸುತ್ತೇನೆ. ಮತ್ತೊಂದು ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರಬಯಸುತ್ತೇನೆ. ಕೇವಲ ಆರು ಗ್ರಾಮ ಪಂಚಾಯ್ತಿಗಳು ಅದರಲ್ಲಿ 35 ಗ್ರಾಮಗಳು ನೆರೆ ಹಾವಳಿಗೆ ತುತ್ತಾಗಿದ್ದು, ಇಡೀ ಕೊಡಗು ಜಿಲ್ಲೆಯಲ್ಲಿ ಹೆಚ್ಚಿನ ಅನಾಹುತವಾಗಿರುವುದಿಲ್ಲ. ಕೊಡಗು ಜನತೆ ಸಂಕಷ್ಟದಲ್ಲಿದ್ದಾರೆ. ಆದರೆ ಆ ಆರು ಪಂಚಾಯ್ತಿಗಳನ್ನು ವಿಶೇಷವಾಗಿ ಪರಿಗಣಿಸಿ, ಎ.ಪಿ.ಎಲ್. ಪಡಿತರ ಕಾರ್ಡುದಾರರಿಗೆ 4–6 ವರ್ಷಗಳವರೆಗೆ ಬಿ.ಪಿ.ಎಲ್. ಕಾರ್ಡ್ ಅನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಇಷ್ಟೆಲ್ಲಾ ಕೆಲಸವನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಮಾಡಿಕೊಡುತ್ತಾರೆಂಬ ಭರವಸೆ ನನಗೆ ಇದೆ. ನನಗೆ ಅವರ ಬಗ್ಗೆ ನಿಜಕ್ಕೂ ಹೆಮ್ಮೆ ಎನಿಸುತ್ತದೆ. ಅವರು ಆ ಸಂಕಷ್ಟದಲ್ಲಿಯೂ ಬಂದು ಆಶ್ರಯ ಕೇಂದ್ರಗಳಿಗೆ ಭೇಟಿ ಕೊಟ್ಟು ಅಲ್ಲಿಯ ಮಹಿಳೆಯರಿಗೆ ಸಾಂತ್ವನ ಹೇಳುವುದರ ಮೂಲಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ಅವರು ಕೊಡಗಿನ ಜನತೆಗೆ ಅಪಾರವಾದ ಕೊಡುಗೆಯನ್ನು ಕೊಟ್ಟಿದ್ದಾರೆ ಎಂದು ಹೇಳುವುದಕ್ಕೆ ನಾನು ಇಚ್ಛಿಸುತ್ತೇನೆ.

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಇಡೀ ದೇಶವೇ ಒಂದು ಕ್ಷಣ ಕೊಡಗಿಗೆ ಆದಂತಹ ಆತಂಕವನ್ನು, ಆಘಾತವನ್ನು ಸಹಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ. ಆ ನೋವು, ಯಾತನೆಯಿಂದ ನಾವಿನ್ನೂ ಹೊರ ಬಂದಿಲ್ಲ. ಇಂತಹ ಸಂದರ್ಭದಲ್ಲಿ ನಾವು ಎಷ್ಟು ಕೊಟ್ಟರೂ ಸಾಲದು. ಅದನ್ನು ಸಂಪೂರ್ಣವಾಗಿ ಸರಿ ಪಡಿಸುವಂತಹ ಕೆಲಸವನ್ನು ಕರ್ನಾಟಕ ಸರ್ಕಾರ ಈಗಾಗಲೇ ಮಾಡಿದೆ. ಅದರ ಉಸ್ತುವಾರಿಯನ್ನು ವಹಿಸಿಕೊಂಡಂತಹ ಪ್ರತಿಯೊಬ್ಬರೂ, ಪ್ರತಿ ಇಲಾಖೆಯೂ ಅದು ನಮ್ಮ ಧರ್ಮ ಎಂದು ಭಾವಿಸಿಕೊಂಡು ಆ ಕೆಲಸವನ್ನು ಮಾಡಬೇಕಾಗಿದೆ. ಹಲವಾರು ಯೋಜನೆಗಳನ್ನು ಈ ಭಾಗಕ್ಕೆ ನಾವು ಕೊಟ್ಟಿದ್ದೇವೆ. ಮಾನ್ಯ ಶಾಸಕರು ಕೇಳಿರುವುದರಲ್ಲಿ ಉದ್ಯೋಗಿನಿ ಯೋಜನೆಯಡಿಯಲ್ಲಿ 22 ಉದ್ಯೋಗಿನಿ ಯೋಜನೆಗಳನ್ನು ಕೊಡಗು ಜಿಲ್ಲೆಗೆ ನೀಡಲಾಗಿದೆ. ಅದರ ಜೊತೆಗೆ ಇನ್ನೂ 10 ಉದ್ಯೋಗಿನಿ ಯೋಜನೆಯನ್ನು ಹೆಚ್ಚುವರಿಯಾಗಿ ಅಲ್ಲಿಗೆ ನೀಡಲಾಗಿದೆ. ಪ್ರತಿ ಗುಂಪಿಗೆ ರೂ.2 ಲಕ್ಷದ ಹಾಗೆ ಕಿರುಸಾಲ ಯೋಜನೆಯನ್ನು ಆ ಭಾಗಕ್ಕೆ ಹೆಚ್ಚು ನೀಡುತ್ತಿದ್ದೇವೆ. ಸಮೃದ್ಧಿ ಯೋಜನೆಯ ಮುಖಾಂತರ 35 ಜನರಿಗೆ ಸೌಲಭ್ಯವನ್ನು ನೀಡಲಾಗಿದೆ. ಇದರ ಜೊತೆಗೆ ಮಾನ್ಯ ಶಾಸಕರು ಎರಡು ಪ್ರಶ್ನೆಯನ್ನು ಕೇಳಿದ್ದಾರೆ. ಮಾತೃಪೂರ್ಣ ಯೋಜನೆಯನ್ವಯ ಗರ್ಭಿಣಿ, ಬಾಣಂತಿಯರು ಕೇಂದ್ರಕ್ಕೆ ಬರಲಾಗಲಿಲ್ಲ ಎನ್ನುವ ಸಂದರ್ಭದಲ್ಲಿ ಅವರಿಗಾಗಿ ಕಿಟ್ ವಿತರಣೆಯನ್ನು relax ಮಾಡಬೇಕು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯ ಗುಡ್ಡಗಾಡು ಪ್ರದೇಶ, ಮಲೆನಾಡು ಪ್ರದೇಶಗಳಲ್ಲಿ ಯಾವುದೇ ಫಲಾನುಭವಿ ಬಂದು ಕೇಳಿದಾಗ ಅವರಿಗೆ ಈ ರೀತಿಯ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಟ್ಟಿರುತ್ತೇವೆ. ಇಲ್ಲಿಯೂ ಕೂಡ ಅಂತಹ ಗರ್ಭಿಣಿ ಸ್ತ್ರೀಯರನ್ನು ನೋಡಿಕೊಳ್ಳುವುದಕ್ಕೆ ಯಾರೂ ಇಲ್ಲವೆಂದಾಗ 8ನೇ ತಿಂಗಳು, 9ನೇ ತಿಂಗಳು ಮತ್ತು 10ನೇ ತಿಂಗಳು ಅವರಿಗೆ ಮನೆಯಲ್ಲಿ ಸಂಕಷ್ಟವಿದ್ದರೆ ಯಾರೂ ಇಲ್ಲದೆ ಹೋದಾಗ ಅವರಿಗೆ ಈ ವ್ಯವಸ್ಥೆಯನ್ನು ಮಾಡುವುದಕ್ಕೆ ಅವಕಾಶವನ್ನು ನೀಡುತ್ತಿದ್ದೇವೆ. ಕೊಡಗು ಜಿಲ್ಲೆಗೂ ಆ ಸೌಲಭ್ಯವನ್ನು ವಿಸ್ತರಿಸಲಾಗುವುದು ಎಂಬ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಉಳಿದಂತೆ ಸಾಂಬಾರ ಪದಾರ್ಥದ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವೃತ್ತಿಯನ್ನು ಮಾಡುವುದಕ್ಕೆ ಜನತಾ ಬಜಾರ್‌ಗೆ ಅನುಮತಿಸಲಾಗಿದ್ದು, ಸಂತ್ರಸ್ತ ಮಹಿಳೆಯರನ್ನು ಅಲ್ಲಿ ಬಳಸಿಕೊಳ್ಳಬೇಕೆಂದು ಹೇಳಲಾಗುವುದು. ಅದರಿಂದ ಅವರಿಗೂ ಉದ್ಯೋಗ ಲಭಿಸಿದಂತಾಗುತ್ತದೆ.

ಸಮವಸ್ತ್ರದ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. 3–6 ವರ್ಷದ ಅಂಗನವಾಡಿ ಮಕ್ಕಳಿಗೆ ಸಮವಸ್ತ್ರವನ್ನು ಕೊಡಬೇಕು. ಅದರಲ್ಲಿಯೂ ಸ್ವೆಟರ್ಸ್, ಶೂಗಳನ್ನು ಕೊಡಬೇಕು. ಬೇರೆ ಶಾಲಾ ಮಕ್ಕಳು ಸಮವಸ್ತ್ರವನ್ನು ಧರಿಸಿದಾಗ ಈ ಮಕ್ಕಳಿಗೂ ಆ ತರಹದ ಸಮವಸ್ತ್ರವನ್ನು ಧರಿಸಬೇಕೆನ್ನಿಸುವುದು ಸಹಜ. ಈ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ. ಮುಂದಿನ ಬಜೆಟ್‌ನಲ್ಲಿ ಖಂಡಿತವಾಗಿಯೂ ಇದರ ಬಗ್ಗೆ ಗಮನ ಹರಿಸಲಾಗುವುದು ಎಂದು ಹೇಳುವುದಕ್ಕಿಚ್ಛಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, ಸಮವಸ್ತ್ರದ ಬಗ್ಗೆ ಮಾನ್ಯ ಸಚಿವರು ಹೇಳಿರುವುದು ಸರಿಯಿದೆ. 40 ಜನರು ಟೈಲರಿಂಗ್ ಅನ್ನು ಕಲಿತು ಹೊರಬಂದಿದ್ದು, ಅವರಿಗೆ ಶಾಲಾ ಸಮವಸ್ತ್ರವನ್ನು ಹೊಲಿದುಕೊಡುವುದಕ್ಕೆ ಒಂದು ಪ್ರಾವಿಜನ್ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಶಾಸಕರು ಹೇಳಿದಂತೆ ರಾಜಾಸೀಟ್‌ನಲ್ಲಿ ಇದನ್ನು exhibit ಮಾಡಬೇಕೆಂದು ಕೊಂಡಿದ್ದೇವೆ. ಇವರಿಗೆ ಕೆಲಸವನ್ನು ಕೊಡಬೇಕು. ಅದು ನಿಜ. ಇದರ ಬಗ್ಗೆ ಖಂಡಿತವಾಗಿಯೂ ನಾನು ಪರಿಶೀಲನೆ ಮಾಡುತ್ತೇನೆ.

**ಶ್ರೀಮತಿ ಜಯಮ್ಮ:–** ಮಾನ್ಯ ಸಭಾಪತಿಯವರೇ, ಉದ್ಯೋಗಿನಿ ಯೋಜನೆಯನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಮಹಿಳಾ ಸ್ವಸಹಾಯ ಗುಂಪುಗಳು, ಸ್ತ್ರೀಶಕ್ತಿ ಗುಂಪುಗಳು ನಮಗೆ ಯಾವಾಗಲೂ ಒಂದು ಬೇಡಿಕೆಯನ್ನು ಇಡುತ್ತಾರೆ. ಉದ್ಯೋಗಾವಕಾಶಗಳನ್ನು ಹೆಚ್ಚುಗೊಳಿಸುವ ದೃಷ್ಟಿಯಿಂದ ಅದರಲ್ಲಿಯೂ ಗ್ರಾಮೀಣ ಭಾಗದ ಮಹಿಳೆಯರಿಗೆ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ನೀಡಲಾಗುತ್ತಿರುವ ಸಮವಸ್ತ್ರವನ್ನು ಹೊಲಿದುಕೊಡುವಂತಹ ಕೆಲಸವನ್ನು ಸ್ತ್ರೀಶಕ್ತಿ ಸಂಘಗಳಿಗೆ ಕೊಟ್ಟರೆ ಹೆಚ್ಚಿನ ರೀತಿಯಲ್ಲಿ ಉದ್ಯೋಗಾವಕಾಶವನ್ನು ಒದಗಿಸಬಹುದು. ಅದರಿಂದ ಅವರಿಗೆ ಸ್ಥಿರವಾದ ಮಾರುಕಟ್ಟೆಯನ್ನು ಒದಗಿಸಿದಂತಾಗಿ ಬಹಳಷ್ಟು ಉಪಕಾರವಾಗುತ್ತದೆ. ಆ ಬಗ್ಗೆ ಮಾನ್ಯ ಸಚಿವರು ಆಲೋಚನೆ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಡಾ:ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಬೇರೆ ಬೇರೆ ಇಲಾಖೆಗಳ ಜೊತೆಯಲ್ಲಿ ಚರ್ಚೆ ಮಾಡಿ ನಾನು ಕ್ರಮ ಕೈಗೊಳ್ಳುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀ ಎಂ.ನಾರಾಯಣಸ್ವಾಮಿಯವರದ್ದಾಗಿದ್ದು, ಉತ್ತರವನ್ನು ನೀಡಲು ಕಾಲಾವಕಾಶವನ್ನು ಕೇಳಲಾಗಿದೆ. ಮುಂದಿನ ಪ್ರಶ್ನೆ ಶ್ರೀ ನಿರಾಣಿ ಹಣಮಂತ ರುದ್ರಪ್ಪ ಅವರದ್ದು. ತಾವು ಪ್ರಶ್ನೆಯನ್ನು ಕೇಳಿ.

**(...ಮುಂದು)**

**(415) 13.12.2018 1120 RN KG**

**ಪ್ರಶ್ನೆ ಸಂಖ್ಯೆ 494 (503)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ಎಂಬ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಲಿಖಿತ ಉತ್ತರದಲ್ಲಿ 12,642 ಜನ ಅತಿಥಿ ಉಪನ್ಯಾಸಕರು ಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ ಕರ್ತವ್ಯ ಮಾಡುತ್ತಿದ್ದಾರೆಂದು ತಿಳಿಸಿದ್ದಾರೆ. ಖಾಲಿ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಮತ್ತು ಆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹುದ್ದೆಗಳನ್ನು ತುಂಬುದಕ್ಕೆ ಏನು ಕ್ರಮ ಜರುಗಿಸಲಾಗಿದೆ ಎನ್ನವಂಥದ್ದನ್ನು ಮಾನ್ಯ ಸಚಿವರು ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ. ಸುಮಾರು 15 ರಿಂದ 20 ವರ್ಷಗಳ ಕಾಲ ಅವರು ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರ ವಯೋಮಿತಿ ಮೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಯೇ ಎಂಬದನ್ನು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಲಿಖಿತದಲ್ಲ ತಿಳಿಸಿದಾರೆ. ವಯೋಮಿತಿ ಮೀರುವಂತಹ ಅತಿಥಿ ಉಪನ್ಯಾಸಕರನ್ನು ಸೇವೆಯಲ್ಲಿ ಖಾಯಂಗೊಳಿಸುವುದಕ್ಕೆ ಏನು ಕ್ರಮ ಜರುಗಿಸಲಾಗಿದೆ ಮತ್ತು ಅವರಿಗೆ ಯಾವ ಸೇವಾಭದ್ರತೆಯನ್ನು ಒದಗಿಸುತ್ತದೆ ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕು. ಜೊತೆಗೆ CRIS ನಲ್ಲಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ದಿನಗೂಲಿ ಮತ್ತು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸಿದ ನೌಕರರನ್ನು ಖಾಯಂ ಮತ್ತು ವಿಲೀನಗೊಳಿಸಿರುವಂತೆ ಅತಿಥಿ ಉಪನ್ಯಾಸಕರಿಗೂ ಸಹ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಸಭಾಪತಿಯವರೇ, ಕಾಲೇಜು ಶಿಕ್ಷಣ ವ್ಯವಸ್ಥೆ ಎಂದರೆ, ಇವತ್ತು ಸಮಾಜವನ್ನು ಕಟ್ಟುವಂತಹ ನಿಟ್ಟಿನಲ್ಲಿ ಶೈಕ್ಷಣಿಕ ಪ್ರಗತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತಹ ಪದವಿ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯಿಂದ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತಿದೆ. ಆ ಹಿನ್ನೆಲೆಯಲ್ಲಿ ಈ ಅತಿಥಿ ಉಪನ್ಯಾಸಕರ ಪಾತ್ರ ಬಹಳ ದೊಡ್ಡದಾಗಿದೆ. ಲಕ್ಷಾಂತರ ಜನ ವಿದ್ಯಾರ್ಥಿಗಳು ಇವತ್ತಿನ ದಿವಸ ಕಾಲೇಜುಗಳಲ್ಲಿ ಶಿಕ್ಷಣದ ತೊಂದರೆಯನ್ನು ಅನುಭವಿಸುವಂತಹ ಪರಿಸ್ಥಿತಿ ಇದೆ. ಅತಿಥಿ ಉಪನ್ಯಾಸಕರು ಕಡಿಮೆ ವೇತನದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಅವರಿಗೆ ಸೇವಾ ಭದ್ರತೆಯನ್ನು ಒದಗಿಸಿಕೊಡಬೇಕು. ಜೊತೆಗೆ ಖಾಲಿ ಇರುವಂತಹ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆಂಬ ಮಾಹಿತಿಯನ್ನು ಮಾನ್ಯ ಸಚಿವರು ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಸೇವಾ ಭದ್ರತೆಯನ್ನು ಒದಗಿಸಿದ ನಂತರ ಕಡಿಮೆ ವೇತನದಲ್ಲಿ ಸೇವೆ ಸಲ್ಲಿಸುತ್ತಿರುವ ಅವರಿಗೆ ಎಷ್ಟು ವೇತನವನ್ನು ಕೊಡುತ್ತೀರಿ ಎಂಬ ಬಗ್ಗೆ ಕೇಳಿದಾಗ, ಎನ್‌ಇಟಿ/ಎಸ್‌ಎಲ್‌ಇಟಿ/ ಪಿಹೆಚ್‌ಡಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಗೌರವ ಧನ ರೂ13,000/– ಮತ್ತು ಇತರೆ ಅತಿಥಿ ಉಪನ್ಯಾಸಕರಿಗೆ ಮಾಸಿಕ ಗೌರವಧನ ರೂ.11,000/–ಗಳನ್ನು ನಿಗದಿ ಪಡಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ, ಇವತ್ತಿನ ದಿವಸಗಳಲ್ಲಿ ರೂ.13000/– ಮತ್ತು ರೂ.11,000/– ಗಳ ವೇತನ ಜೀವನಕ್ಕೆ ಸಾಕಾಗುವುದಿಲ್ಲ. ಅಲ್ಲದೇ, ಈಗ ಕೊಡುತ್ತಿರುವ ಈ ವೇತನವನ್ನು ಸಹ ಕಾಲಕಾಲಕ್ಕೆ ನೀಡುತ್ತಿಲ್ಲ. ಆದ್ದರಿಂದ, ಇವತ್ತಿನ ದಿವಸಗಳಲ್ಲಿ ತಿಂಗಳಿಗೆ ಕನಿಷ್ಠ ಪಕ್ಷ ರೂ.25000/– ಗಳ ಗೌರವ ಧನವನ್ನು ಕೊಡಬೇಕೆಂದು ಮತ್ತು ಈ ಮೊತ್ತವನ್ನು ಆದಷ್ಟು ಶೀಘ್ರದಲ್ಲಿಯೇ ಕೊಡಬೇಕೆಂದು ಈ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈ ಮೊತ್ತವನ್ನು ಸರ್ಕಾರ ಯಾವಾಗ ಪಾವತಿ ಮಾಡುತ್ತದೆ ಎಂಬುದನ್ನು ಹೇಳಬೇಕು. ಅದನ್ನು ಪ್ರತಿ ತಿಂಗಳು ಕೊಡುವುದಕ್ಕೆ ಸರ್ಕಾರ ಏನು ಕ್ರಮ ಜರುಗಿಸಿದೆ ಎನ್ನುವುದನ್ನು ಹೇಳಬೇಕೆಂದು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತಿದೇನೆ.

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ಬಗ್ಗೆ ಉತ್ತರವನ್ನು ನೀಡಿದ್ದಾರೆ. ಮೊದಲನೆದಾಗಿ, ಸರ್ಕಾರವನ್ನು ಈ ಸಂದರ್ಭದಲ್ಲಿ ನಾನು ಅಭಿನಂದಿಸುವುದಕ್ಕೆ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಷ್ಟಪಡುತ್ತೇನೆ. ಇದಕ್ಕೆ ಕಾರಣವೇನೆಂದರೆ, 12000 ಜನ ಅತಿಥಿ ಉಪನ್ಯಾಸಕರನ್ನು ಏಕಕಾಲದಲ್ಲಿ ನೇಮಕ ಮಾಡುವುದಕ್ಕೆ ಈ ಸರ್ಕಾರ ಮೊದಲೇ ತೀರ್ಮಾನ ಮಾಡಿ 2016-2107ನೇ ಸಾಲಿನಲ್ಲಿ ಕೆಲಸ ಮಾಡಿದಂತಹ, ಅದರಲ್ಲೂ ಸುಮಾರು 15 ವರ್ಷಗಳ ಕಾಲ ಕೆಲಸ ಮಾಡಿದಂತಹ 4,000 ಸಾವಿರ ಜನ ಶಿಕ್ಷಕರು ತೋಟದಲ್ಲಿ ಕೆಲಸ ಮಾಡುವುದಕ್ಕೆ ಹೋಗಿದ್ದರು. ಅವರನ್ನು ಸರ್ಕಾರ ಕರೆದು ಕೆಲಸ ಕೊಟ್ಟಿದೆ. ಅವರೆಲ್ಲರೂ NET/SLET with all qualification ಇದ್ದಂತಹ 4,000 ಶಿಕ್ಷಕರನ್ನು ಸೇರಿಸಿ ಕೊಟ್ಟಿರುವುದರಿಂದ ಈ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಅಭಿನಂದಿಸಬೇಕಾಗುತ್ತದೆ. ಅದು ನಮ್ಮ ಕರ್ತವ್ಯವೆಂದು ಅಭಿನಂದಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸೇವಾಭದ್ರತೆಯನ್ನು ಒದಗಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲವೆಂದು ಉತ್ತರದಲ್ಲಿ ತಿಳಿಸಿದ್ದಾರೆ. 12,000 ಜನ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿದಂತಹ ಸಂದರ್ಭದಲ್ಲಿ ಎನ್‌ಇಟಿ/ಎಸ್‌ಎಲ್‌ಇಟಿ/ಪಿಹೆಚ್‌ಡಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಗೌರವ ಧನ ರೂ13,000/- ಮತ್ತು ಇತರೆ ಅತಿಥಿ ಉಪನ್ಯಾಸಕರಿಗೆ ಮಾಸಿಕ ಗೌರವ ಧನ ರೂ.11,000/-ಗಳನ್ನು ನಿಗದಿ ಪಡಿಸಲಾಗಿದೆ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಸರ್ಕಾರ ನೇಮಕಾತಿ ಮಾಡಿದಂತಹ ಅತಿಥಿ ಉಪನ್ಯಾಸಕರಿಗೆ ರೂ.40,000/- ರೂಪಾಯಿಗಳ ವೇತನ ಕೊಡಬೇಕಾಗುತ್ತದೆ. ಆ ರೂ.40,000/- ರೂಪಾಯಿಗಳಲ್ಲಿ 10 ರಿಂದ 15 ವರ್ಷಗಳಿಂದ ಇವರು ರೂ.11,000/- ಮತ್ತು ರೂ.13,000/- ಗಳಿಗೆ ಕೆಲಸ ಮಾಡಿಕೊಂಡು ಬಂದಿರುವಂತಹ ಅತಿಥಿ ಉಪನ್ಯಾಸಕರಿಗೆ ಕೊಟ್ಟಿರುವಂತಹ ಗೌರವ ಧನವನ್ನು ನೋಡಬೇಕಾಗುತ್ತದೆ. ತಿಂಗಳಿಗೆ ಐದು ಕೋಟಿ ರೂಪಾಯಿಗಳು ಖರ್ಚು ಆಗುವಂಥದ್ದು ಲೆಕ್ಕಮಾಡಬೇಕಾಗುತ್ತದೆ. ತಿಂಗಳಿಗೆ ರೂ.40,000/- ವೇತನವಾದರೆ ಅದು 12,000 ಜನ ಶಿಕ್ಷಕರಿಗೆ ಎಷ್ಟು ಆಗುತ್ತದೆಂದು ಲೆಕ್ಕಮಾಡಬೇಕಾಗುತ್ತದೆ. ತಿಂಗಳಿಗೆ ರೂ.11,000/- ಮತ್ತು 13,000/- ವೇತನವಾದರೆ ಶಿಕ್ಷಕರು ಸರ್ಕಾರಕ್ಕೆ ಎಷ್ಟು ಹಣವನ್ನು ಉಳಿತಾಯ ಮಾಡಿಕೊಟಿದ್ದಾರೆ ಎಂಬುದನ್ನು ಸಹ ನೋಡಬೇಕಾಗುತ್ತದೆ. ಜೊತೆಗೆ ಗುಣಮಟ್ಟದ ಶಿಕ್ಷಣವನ್ನು ಕೊಡುವಲ್ಲಿ ಅತಿಥಿ ಉಪನ್ಯಾಸಕರು ಎಲ್ಲೂ ಹಿಂದೆ ಬಿದ್ದಿಲ್ಲ. ಎಲ್ಲರೂ NET/SLET Ph.D., ಮಾಡಿರುವಂಥವರಿಗೆ ಸರ್ಕಾರ ಕೆಲಸ ಕೊಟ್ಟಿದೆ. ಜೊತೆಗೆ ಸರ್ಕಾರಕ್ಕೆ ಆರ್ಥಿಕ ಹೊರೆ ಎಷ್ಟು ಉಳಿಸಿದ್ದಾರೆ ಎನ್ನುವ ವಿಚಾರವನ್ನು ಸಹ ಮಾನ್ಯ ಸಚಿವರು ಗಾಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಅವರಿಗೆ ಕೊಟ್ಟಿರುವಂತಹ ಅವಧಿಗಿಂತ ಮಕ್ಕಳ ವಿಚಾರದಲ್ಲಿ ಬಹಳ ಗಂಭೀರತೆಯಿಂದ ಮತ್ತು ಕಾಲೇಜಿನ ವಿಚಾರದಲ್ಲಿ in the interest of institutuions. ಸರ್ಕಾರ ನೀಡಿರುವಂತಹ 8 ರಿಂದ 10 ಗಂಟೆಗಳ ಅವಧಿಗೆ ಸೀಮಿತವಾಗದೆ, ಅವರು 12 ಗಂಟೆಯಿಂದ 14 ಗಂಟೆಗಳ ಕಾಲ ಕೆಲಸ ಮಾಡಿದ್ದಾರೆ. ಹಾಗಾಗಿ, ಅವರಿಗೆ ಸೇವಾಭದ್ರತೆ ಕೊಡುವಂತಹ ವಿಚಾರದಲ್ಲಿ ಸರ್ಕಾರ ಮತ್ತು ಮಾನ್ಯ ಸಚಿವರು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಅಲ್ಲದೇ, ಅವರು ಸರ್ಕಾರಕ್ಕೆ ಆರ್ಥಿಕ ಹೊರೆಯನ್ನು ಸುಮಾರು 10 ರಿಂದ 15 ವರ್ಷಗಳಿಂದ ಉಳಿಸಿಕೊಂಡು ಬಂದಿದ್ದಾರೆ. ಹಾಗಾಗಿ, ಈ ಸಂದರ್ಭದಲ್ಲಿಯೂ ಯುಜಿಸಿ ಮಾನದಂಡ ಪ್ರಕಾರ ಹೋಗುತ್ತೇವೆಂದರೆ, 10 ರಿಂದ 15 ವರ್ಷಗಳಿಂದ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೆಲಸ ಮಾಡಿಕೊಂಡು ಬಂದು ಜೊತೆಗೆ ಸರ್ಕಾರಕ್ಕೆ ಆರ್ಥಿಕ ಹೊರೆಯನ್ನು ಉಳಿಸಿಕೊಂಡು ಬಂದತಂಹ ಸಂದರ್ಭದಲ್ಲಿ ಅವರಿಗೆ ಕೊಡುವಂಥದ್ದು ನ್ಯಾಯವೇ ಆಗಿದೆಎನ್ನುವಂಥದ್ದು ನನ್ನ ಪ್ರಶ್ನೆ. ಇದು ನನ್ನ ಅಭಿಪ್ರಾಯ ಮಾತ್ರ ಅಲ್ಲ. ಇಲ್ಲಿ ಇರುವಂತಹ ಎಲ್ಲಾ ಮಾನ್ಯ ಸದಸ್ಯರ ಅಭಿಫ್ರಾಯವು ಬಹುಶಃ ಅದೇ ಎಂದು ಕಾಣುತ್ತದೆ. ಮಾನ್ಯ ಸಚಿವರು ಅನೇಕ ಬಾರಿ ಅತಿಥಿ ಉಪನ್ಯಾಸಕರ strike ನಲ್ಲಿ ಮತ್ತು ಅವರು ಕೊಟ್ಟಂತಹ ಅರ್ಜಿಗಳನ್ನು ನೋಡಿದ್ದಾರೆ. ಮಾನ್ಯ ಸಚಿವರು ಭೇಟಿ ಮಾಡಿದ್ದರೆ. ಮಾನ್ಯ ಮುಖ್ಯಮಂತ್ರಿಯವರು ಸಹ ಸದನದಲ್ಲಿಯೇ ಇದ್ದಾರೆ. ಅವರಿಗೂ ಸಹ ಅನೇಕ ಅರ್ಜಿಗಳನ್ನು ಕೊಟ್ಟಿದ್ದಾರೆ. ಹಾಗಾಗಿ, ಅತಿಥಿ ಉಪನ್ಯಾಸಕರ ಬಗ್ಗೆ ಸಹಾನುಭೂತಿಯ ಜೊತೆಗೆ ಕುಟುಂಬ ವ್ಯವಸ್ಥೆಯನ್ನು ನಿರ್ವಹಣೆ ಮಾಡುವುದಕ್ಕೆ ಸೇವಾಭದ್ರತೆಯನ್ನು ನೀಡಬೇಕಾಗುತ್ತದೆ, ನಾವು ಅವರಿಗೆ qualifications ಇಲ್ಲದೇ ಕೊಡಬೇಡಿ ಎಂದು ಹೇಳುತ್ತಿಲ್ಲ. ಅವರೆಲ್ಲೂ qualifications ಇದ್ದವರು. ಅವರಿಗೆ ಸೇವಾಭದ್ರತೆ ಕೊಡುವುದನ್ನು ಕೈಬಿಟ್ಟರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಹಾಗಾಗಿ, ಅವರ ಕುಟುಂಬಗಳ ನಿರ್ವಹಣೆ ಮತ್ತು ಸುಮಾರು 10 ರಿಂದ 15 ವರ್ಷಗಳಿಂದ ಸರ್ಕಾರಕ್ಕೆ ಅನೇಕ ರೀತಿಯಲ್ಲಿ ಸಹಾಯ ಮಾಡಿರುವಂತಹ ಉಪನ್ಯಾಸಕರನ್ನು ಎಲ್ಲಾ ರೀತಿಯಲ್ಲೂ ಪರಿಗಣಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ಇದ್ದಾರೆ. ಚುನಾವಣಾ ಪ್ರಣಾಳಿಕೆಯಿಂದ ಹಿಡಿದು ಅನೇಕ ಬೇರೆ ಬೇರೆ ಸಂದರ್ಭಗಳಲ್ಲಿ ಅವರಿಗೆ ಭರವಸೆಗಳನ್ನು ಕೊಟ್ಟಿದ್ದಾರೆಂದು ನಾವು ಮಾಧ್ಯಮಗಳಲ್ಲಿ ನೋಡಿದ್ದೇವೆ. ಪ್ರತಿಯೊಂದು ಕಾಲೇಜಿನಲ್ಲಿ 10 ರಿಂದ 12 ಜನ ಖಾಯಂ ಉಪನ್ಯಾಸಕರು ಇದ್ದಾರೆ. ಸುಮಾರು 40 ರಿಂದ 60 ಜನ ಅತಿಥಿ ಉಪನ್ಯಾಸಕರು ಇದ್ದಾರೆ. ಕಳೆದ 10 ರಿಂದ 15 ವರ್ಷಗಳಿಂದ ಹುದ್ದೆಗಳು ಖಾಲಿ ಇವೆ. ಅದನ್ನು ಭರ್ತಿ ಮಾಡುತ್ತಿಲ್ಲ. ಒಂದು ಕಾನೂನು ಬದ್ಧ ಸಂಸ್ಥೆ ಇದೆಯೋ ಅದು ಶೋಷಣೆಯನ್ನು ಮಾಡುತ್ತಿದೆ ಎಂದು ನನಗೆ ಅನಿಸುತ್ತಿದೆ. ಶೋಷಣೆಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹುದ್ದೆಗಳು ಖಾಲಿ ಇದ್ದರೂ ಸಹ, ಭರ್ತಿ ಮಾಡುತ್ತಿಲ್ಲ. ಯಾರೋ ‘ಅತಿಥಿ ಉಪನ್ಯಾಸಕರು’ ಎಂದು ಬಹಳ ಬುದ್ಧಿವಂತಿಕೆಯ ಹೆಸರನ್ನು ಇಟ್ಟಿದ್ದಾರೆ. ‘ಅತಿಥಿ ಉಪನ್ಯಾಸಕರು’ ಎಂದರೆ, ಬೆಳಿಗ್ಗೆ ಬರಬೇಕು ಸಂಜೆ ಹೊರಟು ಹೋಗಬೇಕು ಎಂದು ಅರ್ಥ. ಈ ಪದವನ್ನು ಅತಿ ಬುದ್ಧಿವಂತಿಕೆಯಿಂದ ಪ್ರಯೋಗ ಮಾಡಿಬಿಟ್ಟಿದ್ದಾರೆ. ಮೊನ್ನೆ ದಿವಸ ಶಿಕ್ಷಣ ಸಚಿವರು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ಸಭೆಯನ್ನು ಕರೆದಾಗ ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ರೂ.25,000/– ಗಳ ಗೌರವಧನ ಕೊಡುತ್ತಿದ್ದಾರೆಂದು ತಿಳಿಯಿತು. ಅವತ್ತು ಪ್ರಧಾನ ಕಾರ್ಯದರ್ಶಿಯವರು ಉಪಸ್ಥಿತರು ಇದ್ದರು. ಅದೇ ವೇತವನ್ನು ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಕೊಡುವುದಕ್ಕೆ ತೊಂದರೆ ಏನು? ಅದನ್ನು ಕೊಡಲೇ ಜಾರಿಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅವರಿಗೆ ಸೇವಾ ಭದ್ರತೆ ಎಂದರೆ, ಅವರನ್ನು ಖಾಯಂ ಮಾಡಿ ಎಂದು ನಾವು ಕೇಳುತ್ತಿಲ್ಲ. ಅವರು ಪ್ರತಿ ವರ್ಷ ಗುತ್ತಿಗೆ ಕಾರ್ಮಿಕರ ತರಹ ಅರ್ಜಿ ಹಾಕಿಕೊಳ್ಳಬೇಕು. ಅವರನ್ನು ತೆಗೆದುಕೊಂಡರೆ ಮಾತ್ರ ಕೆಲಸಕ್ಕೆ ಬರಬೇಕು, ಇಲ್ಲವೆಂದರೆ ಇಲ್ಲ. ಅವರು ಈಗಾಗಲೇ ವಯೋಮಿತಿ ಮೀರುತ್ತಿದ್ದಾರೆ. ಅವರಿಗೆ ಆಸ್ಥಿರತೆ ಕಾಡುತ್ತಿದೆ. ಮುಂದಿನ ಶೈಕ್ಷಣಿಕ ವರ್ಷ ನಮ್ಮನ್ನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ತೆಗೆದುಕೊಳ್ಳುತ್ತಾರೋ ಅಥವಾ ಇಲ್ಲವೋ ಎಂಬ ಒಂದು ಸಂಕಟ ಕಾಡುತ್ತಿದೆ. ವಯಸ್ಸು ಆಗಿರುವುದರಿಂದ ಅವರಿಗೆ ಬೇರೆ ಕಡೆ ಉದ್ಯೋಗ ಸಿಗುವುದಿಲ್ಲ. ಅವರಲ್ಲಿ ಈಗಾಗಲೇ NET/SLET Ph.D., ಅರ್ಹತೆಗಳನ್ನು ಯಾರು ಹೊಂದಿದ್ದಾರೋ ಅವರನ್ನು ಸತತವಾಗಿ ಕೆಲಸಕ್ಕೆ ತೆಗೆದುಕೊಳ್ಳಿ. ಮುಂದೆ ಅವರನ್ನು ಖಾಯಂ ಮಾಡುವುದಕ್ಕೆ ಆಗುತ್ತದೆಯೋ ಅಥವಾ ಇಲ್ಲವೋ ಅದು secondary ಪ್ರಶ್ನೆ. ಆ ವಿಷಯ ಬಂದಾಗ ಅದನ್ನು ಮಾಡಬಹುದು.

(416)13-12-2018(11-30)ಎಂವಿ-ವಿಕೆ

**ಶ್ರೀ ಆಯನೂರು ಮಂಜುನಾಥ್ (ಮುಂದು):-**

ಈಗಾಗಲೇ ನಮ್ಮ ಸ್ನೇಹಿತರುಗಳು ಸಲಹೆ ಕೊಟ್ಟ ಹಾಗೆ ಒಂದು ಬಾರಿ ಸನ್ಮಾನ್ಯ ಮುಖ್ಯಮಂತ್ರಿಗಳು ಗಟ್ಟಿ ಮನಸ್ಸು ಮಾಡಿ, ಈ ಸಮಸ್ಯೆಯನ್ನು ಬಗೆಹರಿಸಬೇಕಾಗುತ್ತದೆ. ಯಾರು ಅರ್ಹರಿದ್ದಾರೆ ಅವರನ್ನು ಇಲಾಖೆಯಲ್ಲಿ ಉಳಿಸಿ, ಉಳಿದಂತಹವರನ್ನು ಬೇರೆ ಇಲಾಖೆಗಳಿಗೆ ಒಂದು ವಿಶೇಷ ಪ್ರಕರಣದ ತರಹ ಅವರನ್ನು ಸೆಟಲ್ ಮಾಡುವಂಥದ್ದು ಒಳ್ಳೆಯದು. ಒಂದು ನಿಶ್ಚಿತ ಸಂಖ್ಯೆ ಇದ್ದ ಮೇಲೆ ಅಲ್ಲಿ ಪಿಎಫ್ ಅನ್ನು ಕೊಡಬೇಕೆಂದು ಸರ್ಕಾರದ ನಿಯಮ ಮತ್ತು ಕಾನೂನು ಇದೆ. ಕಾರ್ಮಿಕ ಇಲಾಖೆ ತಮ್ಮ ಕೈಯಲ್ಲೇ ಇದೆ. ಇಷ್ಟು ವರ್ಷವಾದರು ಕೂಡ ಅವರಿಗೆ ಪಿಎಫ್ ಹಣವನ್ನು ಕೊಟ್ಟಿಲ್ಲ. ಸರ್ಕಾರಿ ಕಾಲೇಜುಗಳಲ್ಲಿ ಕಾನೂನು ಅನ್ವಯವಾಗುತ್ತದೆ ಎನ್ನುವುದು ಇದ್ದರು ಸಹ, ಆ ಕಾನೂನನ್ನು ಉಲ್ಲಂಘನೆ ಮಾಡಿ, ಯಾವುದೇ ಕಾಲೇಜಿನಲ್ಲಿ ಪಿಎಫ್ ಅನ್ನು ಕೊಡುವುದಿಲ್ಲವೆಂದರೆ, ಇದರ ವಿರುದ್ಧ ಯಾರ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಕ್ರಮವನ್ನು ತೆಗೆದುಕೊಳ್ಳಬೇಕೆಂದು ಯಾರಾದರೂ ಒಬ್ಬ ಶಿಕ್ಷಕ ಮನಸ್ಸನ್ನು ಮಾಡಿದರೆ, the Principal, the Employer, the Principal Secretary to the Education Department ಅಥವಾ ಆಯಾಯ ಕಾಲೇಜಿನ ಪ್ರಾಚಾರ್ಯರು ಕಾರಣರಾಗುತ್ತಾರೆ. ಪಿಎಫ್‌ನ ಉಲ್ಲಂಘನೆಯಾದರೆ ತಮಗೆ ಗೊತ್ತಿರುವ ಹಾಗೆ ಅದರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡುತ್ತಾರೆ, ಇಂತಹ ಒಂದು ಪ್ರಕರಣ ಆಗುವ ಬದಲು, ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಪಿಎಫ್ ಸೌಲಭ್ಯವನ್ನು ಕೂಡ ಕೊಡಬೇಕು. ಕೂಡಲೇ ಅವರಿಗೆ ಭದ್ರತೆ ಕೊಡುವಂತಹ ವಿಷಯದಲ್ಲಿ ತಾವು ಮನಸ್ಸು ಮಾಡುವುದು ಒಳ್ಳೆಯದು.

ನಿರುದ್ಯೋಗ ಸಮಸ್ಯೆ ಇಷ್ಟೊಂದು ಕಾಡುತ್ತಿರುವಾಗ, ಈ ಇಡೀ ಸದನದ ಎಂ.ಎಲ್.ಸಿ.ಗಳ ಅಭಿಪ್ರಾಯ ಒಂದೇ ರೀತಿ ಇದೆ. ಆ ಕಾರಣಕ್ಕಾಗಿ ಈ ವ್ಯವಸ್ಥೆಯನ್ನು ಮಾಡಬೇಕು. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಶಿಕ್ಷಣ ಸಚಿವರು ಇದ್ದಾರೆ. ಈಗ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹೇಗೆ ಈ ಸೌಲಭ್ಯವನ್ನು ಕೊಡುತ್ತಿದ್ದಾರೆ ಹಾಗೆಯೇ ಬೇರೆ ವಿಶ್ವವಿದ್ಯಾನಿಲಯದವರಿಗೂ ಸಹ 25 ಸಾವಿರ ರೂಪಾಯಿಗಳನ್ನು ಒದಗಿಸಿಕೊಡಬೇಕು. ಈಗ ಕಾಲೇಜುಗಳಲ್ಲಿ ಕೆಲಸ ಮಾಡುವವರಿಗೂ ಕೂಡ, ಅದು ಯುಜಿಸಿಯ ನಿಯಮಾವಳಿಗೆ ಅನ್ವಯವಾಗುತ್ತದೆ. ಅದರ ಪ್ರಕಾರ ದಯಮಾಡಿ ನಿಯಮಾವಳಿಗೆ ಅನ್ವಯವಾಗಿ ಒದಗಿಸಿಕೊಡಬೇಕೆಂದು ಪ್ರಾರ್ಥನೆಯನ್ನು ಮಾಡುತ್ತೇನೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಉನ್ನತ ಶಿಕ್ಷಣದ ಬಗ್ಗೆ ಮತ್ತು ಉಪನ್ಯಾಸಕರ ಬಗ್ಗೆ ಬಹಳಷ್ಟು ವಿಚಾರಗಳನ್ನು ನಿನ್ನೆ ರಾತ್ರಿ ಎಂಟು ಗಂಟೆಯವರೆವಿಗೂ ಎಲ್ಲಾ ಸದಸ್ಯರುಗಳು ಕೂಡ ಬಹಳ ಮುಕ್ತವಾಗಿ ಮಾತನಾಡಿದ್ದಾರೆ. ಇವತ್ತು ಕೂಡ ಸದಸ್ಯರಾದ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು ಮತ್ತು ಮಾನ್ಯ ಭೋಜೇಗೌಡರು ಕೇಳಿರುವಂತಹ ಈ ಪ್ರಶ್ನೆಗೆ ನಮ್ಮಲ್ಲಿ ಸುಮಾರು 12674 ಅತಿಥಿ ಉಪನ್ಯಾಸಕರು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ನಮ್ಮಲ್ಲಿ ಸುಮಾರು 412 ಸರ್ಕಾರಿ ಕಾಲೇಜುಗಳಿವೆ. ಆ ಪೈಕಿ ಇವತ್ತು ವೇತನವನ್ನು ನೀಡಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಅದು ಮತ್ತೊಂದು ಪ್ರಶ್ನೆ. ನಮ್ಮ ವಿಧಾನ ಪರಿಷತ್ತಿನ ಸದಸ್ಯರ ಜೊತೆ ಸಭೆ ನಡೆಸಿದ ಮೇಲೆ, ಎಲ್ಲಾ ಜಂಟಿ ನಿರ್ದೇಶಕರನ್ನು ಸಭೆಗೆ ಕರೆದು, ಯಾರ್ಯಾರು ಜವಾಬ್ದಾರರು ಆಗುತ್ತಾರೆ ಅವರನ್ನು ಅಮಾನತ್ತುಗೊಳಿಸುತ್ತೇವೆ. ಯಾವ್ಯಾವ ಪ್ರಾಚಾರ್ಯರು ವಿತರಣೆ ಮಾಡಿಲ್ಲ ಮತ್ತು ಯಾವ್ಯಾವ ಜಂಟಿ ನಿರ್ದೇಶಕರು ಕ್ರಮ ಕೈಗೊಂಡಿಲ್ಲವೆಂದು ಹೇಳಿದ ಮೇಲೆ, ಅವರು ಎಲ್ಲಾ ಕಡೆಯಲ್ಲಿಯೂ ವಿತರಣೆ ಮಾಡಿದ್ದಾರೆ. ಆದರೆ, ಮೂವತ್ತು ಕಾಲೇಜುಗಳಲ್ಲಿ ಮಾತ್ರ ತಾಂತ್ರಿಕ ತೊಂದರೆಯಾಗಿದೆ. ಅದು ಏನೆಂದರೆ, ಅಲ್ಲಿ ಪ್ರಾಚಾರ್ಯರು ವರ್ಗಾವಣೆಯಾಗಿರುವುದು ಮತ್ತು ಕೆಲವು ಮಾಹಿತಿ ಇಲ್ಲದೆ ಇರುವಂಥದ್ದು ಕೂಡ ಇದೆ. ಈ ತಿಂಗಳಿನಲ್ಲಿ ಸಂಪೂರ್ಣವಾಗಿ ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ. ಬಜೆಟ್‌ನಲ್ಲಿ 80 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದಾರೆ. ಈಗಾಗಲೆ 60 ಕೋಟಿ ರೂಪಾಯಿ ಹಣವನ್ನು ಬಿಡುಗಡೆ ಮಾಡಿದ್ದಾರೆ. ನಾವು ಆ 60 ಕೋಟಿ ರೂಪಾಯಿ ಹಣವನ್ನು ವಿತರಣೆ ಮಾಡಿದ್ದೇವೆ. ಇನ್ನು 20 ಕೋಟಿ ರೂಪಾಯಿ ಹಣವನ್ನು ಮಾತ್ರ ಬಿಡುಗಡೆ ಮಾಡಬೇಕು. ಜನವರಿ ತಿಂಗಳಿನಲ್ಲಿ ಪೂರ್ತಿ 47 ಕೋಟಿ ರೂಪಾಯಿಗಳು ಅವರ ವೇತನಕ್ಕೆ ಸಂಪೂರ್ಣ ಬರುತ್ತದೆ. ಮುಂಗಡವಾಗಿ ಎಲ್ಲರಿಗೂ ಕೊಡುತ್ತೇವೆ. ಮೊದಲ ಬಾರಿಗೆ ಅವರು ನೇಮಕಾತಿ ಹೊಂದಿ ಬಂದಂತಹ ಸಂದರ್ಭದಲ್ಲಿ ಅವರು ಕರ್ತವ್ಯಕ್ಕೆ ಸೇರುವುದು ಮತ್ತು ಕೆಲವು ಮಾಹಿತಿ ತಲುಪುವುದು ವಿಳಂಭವಾಗಿತ್ತು. ಆದರೆ ಈ ಸಂದರ್ಭದಲ್ಲಿ ಸಂಪೂರ್ಣವಾಗಿ ವಿತರಣೆ ಮಾಡಿದ್ದೇವೆ. ನಿನ್ನೆಯ ದಿವಸ ನಾನು ಇಲಾಖೆ ಕಾರ್ಯದರ್ಶಿಯವರೊಡನೆ ಸಭೆ ಮಾಡಿದ್ದೇನೆ. ಈಗ ಮೂವತ್ತು ಕಾಲೇಜುಗಳಲ್ಲಿ ಮಾತ್ರ ಬಾಕಿ ಇದೆ. ಅದರ ಪೂರ್ಣ ಅಂಕಿ–ಅಂಶವನ್ನು ಪಡೆದಿದ್ದೇನೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಹಣ ಬಿಡುಗಡೆಯಾಗಿದೆ ಅದು ಸತ್ಯವಿದೆ. ಆದರೆ ನೀವು advance grant ಎಂದು ಕೊಟ್ಟ ಮೇಲೂ, ಕೆಳಗಿನ ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದರೆ, ಇರುವಂತಹ ಜಂಟಿ ನಿರ್ದೇಶಕರುಗಳೆಲ್ಲರೂ ಸಹ (Incharge) ಇದ್ದಾರೆ. ನೀವು ಬೆಂಗಳೂರಿನ ಪ್ರಾಚಾರ್ಯರಿಗೆ ಕಲ್ಬುರ್ಗಿಯ ಜಂಟಿ ನಿರ್ದೇಶಕರ ಚಾರ್ಜ್ ಅನ್ನು ನೀಡಿದ್ದಾರೆ. ಅದು ಪ್ರಿನ್ಸಿಪಾಲರ ಹೆಡ್ ಆಫ್ ಅಕೌಂಟ್‌ಗೆ ಹೋಗಿ ಅಲ್ಲಿಯೇ ಉಳಿದಿದೆ. ಆದರೆ, ಅದು ಶಿಕ್ಷಕರಿಗೆ ತಲುಪಿಲ್ಲ. ನನ್ನ ಆತಂಕ ಏನೆಂದರೆ, ಸರ್ಕಾರ ಮುಂಗಡವಾಗಿ ಬಿಡುಗಡೆ ಮಾಡಿದರು ಸಹ, ಶಿಕ್ಷಕರಿಗೆ ಹಣ ಸೇರಬೇಕಾದ ಸಮಯಕ್ಕೆ ಸೇರಲಿಲ್ಲವೆಂದರೆ ಇದಕ್ಕೆ ಏನು ಅರ್ಥ? ಹಣವನ್ನು ಸರ್ಕಾರ ನೀಡಿದೆ, ಅದರಲ್ಲಿ ಎರಡು ಮಾತಿಲ್ಲ. ಆದರೆ, ಅದು ತಲುಪಬೇಕಾದ ಶಿಕ್ಷಕರಿಗೆ ತಲುಪಿಲ್ಲ. ನೀವು ಅದರ ಬಗ್ಗೆ ಹೇಳಿ. ನೀವು ಹಣವನ್ನು ಬಿಡುಗಡೆ ಮಾಡಿರುವುದರ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ, ನಾವು ಕೊನೆಗೆ ಉಪವಾಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರುವುದು ತಪ್ಪಿಲ್ಲ. ಇಷ್ಟೆಲ್ಲಾ ಹಬ್ಬಗಳು ಬಂದಾಗಲೂ ಸಹ ವೇತನವಾಗಿಲ್ಲ. ದಯವಿಟ್ಟು ಅದನ್ನು ಇನ್ನೊಮ್ಮೆ ಪರಿಶೀಲನೆ ಮಾಡಬೇಕೆಂಬುದು ನನ್ನ ಒತ್ತಾಯಪೂರ್ವಕ ವಿನಂತಿಯಾಗಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಬಹು ಮುಖ್ಯವಾಗಿರುವಂತಹ ಶಿಕ್ಷಣ ಇಲಾಖೆ, ಇಡೀ ದೇಶದ ಮತ್ತು ರಾಜ್ಯದ ಒಂದು ಹೃದಯ ಭಾಗವಿದ್ದಂತೆ. ಶಿಕ್ಷಕರ ವೇತನದಲ್ಲಿ ಈ ತರಹದ ತಾರತಮ್ಯ ಅಥವಾ ಅವರಿಗೆ ಸಿಗಬೇಕಾದಂತಹ ವೇತನ ಸಿಗದೇ ಇದ್ದಾಗ, ನಾವು ಅವರಿಗೆ ಅತ್ಯುತ್ತಮವಾಗಿ ಪಾಠವನ್ನು ಮಾಡಿ ಎಂದು ಹೇಳುವಂತಹ ನೈತಿಕತೆಯನ್ನು ಕಳೆದುಕೊಳ್ಳುತ್ತೇವೆ. ದಯವಿಟ್ಟು ಪಿ.ಹೆಚ್.ಡಿ., ನೆಟ್ ಮತ್ತು ಸ್ಲೆಟ್ ಆಗಿರುವಂತಹ ಶಿಕ್ಷಕರಿಗೆ ಕನಿಷ್ಠ 20 ರಿಂದ 25 ಸಾವಿರ ರೂಪಾಯಿಗಳಷ್ಟು ವೇತನವನ್ನು ಕೊಡುವಂತಹ ಅವಶ್ಯಕತೆ ಇದೆ. ನಾವು ಅತ್ಯುತ್ತಮವಾದ ಶಿಕ್ಷಣವನ್ನು ಇಡೀ ರಾಜ್ಯದ ಮಕ್ಕಳಿಗೆ ಕೊಡುವುದಕ್ಕೆ ಬಯಸುತ್ತೇವೆ. ಆದರೆ, ಕಲಿಸುವಂತಹ ಶಿಕ್ಷಕರಿಗೆ ಅತ್ಯುತ್ತಮವಾದ ವೇತನವನ್ನು ನಾವು ಕೊಡದೇ ಇದ್ದಾಗ, ನಾವು ಅವರಿಂದ ಅತ್ಯುತ್ತಮವಾದ ಗುಣಮಟ್ಟದ ಶಿಕ್ಷಣವನ್ನು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಶಿಕ್ಷಣ ಮಂತ್ರಿಗಳು ಉತ್ತಮ ಮತ್ತು ದೊಡ್ಡ ಇಲಾಖೆಯಾದ ಉನ್ನತ ಶಿಕ್ಷಣ ಇಲಾಖೆಯನ್ನು ಹೊಂದಿದ್ದಾರೆ. ಅದರ ಜೊತೆಗೆ ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾರೆ. ಈ ಇಲಾಖೆಗೆ ಹೊಸ ಕಾಯಕಲ್ಪವನ್ನು ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು ಎನ್ನುವಂತಹ ಒತ್ತಾಯಪೂರ್ವಕ ಮನವಿಯನ್ನು ಮಾನ್ಯ ಸಭಾಪತಿಯವರ ಮುಖಾಂತರ ಮಾಡುವುದಕ್ಕೆ ಬಯಸುತ್ತೇನೆ. ಇದು ಬಹಳ ದೊಡ್ಡ ಮತ್ತು ಗೌರವಯುತವಾದ ಪ್ರಶ್ನೆ, ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರವನ್ನು ಕೊಡಬೇಕೆಂದು ನಿರೀಕ್ಷೆ ಮಾಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿರುವುದಕ್ಕಾಗಿ ಧನ್ಯವಾದಗಳು. ಈಗಾಗಲೇ ಈ ವಿಚಾರದಲ್ಲಿ ಸದಸ್ಯರಾದ ಮಾನ್ಯ ಭೋಜೇಗೌಡರು ಒಳ್ಳೆಯ ಪ್ರಶ್ನೆಯನ್ನು ಎತ್ತಿದ್ದಾರೆ. ಉಪ ಪ್ರಶ್ನೆ ಕೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅವಕಾಶವಿದೆ. ಆದರೆ, ಮಾನ್ಯ ಸಭಾಪತಿಯವರು ನನಗೆ ಅವಕಾಶವನ್ನು ನೀಡಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರವನ್ನು ನೀಡಿದರೆ, ಅದರಲ್ಲಿ ಇನ್ನೇನಾದರು ಉಳಿದರೆ, ನಾವು ಮಾತನಾಡಬಹುದು ಎಂದು.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಇಲ್ಲಿ ತಾವು ಕೇಳಿರುವ ಪ್ರಶ್ನೆ ಉಪನ್ಯಾಸಕರ ಸೇವೆಯನ್ನು ಖಾಯಂ ಮಾಡುವುದು, ಸೇವಾ ಭದ್ರತೆ ಕಲ್ಪಿಸುವುದು ಮತ್ತು ಗೌರವಧನವನ್ನು ಬಿಡುಗಡೆ ಮಾಡಬೇಕೆನ್ನುವ ಬಗ್ಗೆ. ಮಾನ್ಯ ಸಚಿವರು ಶಿಕ್ಷಕರ ಗೌರವಧನ ಬಿಡುಗಡೆಯಾಗದೇ ಇರುವಂಥದ್ದರ ಬಗ್ಗೆ ತಿಳಿಸಿದ್ದಾರೆ.

**ಸಭಾಪತಿಯವರು:–** ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಹಾಕಬಹುದೆ?

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಿನ್ನೆಯ ದಿವಸ ಸದನದಲ್ಲಿ ಚರ್ಚೆಯಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆ ಕೇಳಿರುವುದು ನಾನು ಮತ್ತು ಸದಸ್ಯರಾದ ಮಾನ್ಯ ನಿರಾಣಿ ಹಣಮಂತ್ ರುದ್ರಪ್ಪನವರು. ದಯಮಾಡಿ ಮಾನ್ಯ ಸಚಿವರು ಇದಕ್ಕೆ ಉತ್ತರವನ್ನು ನೀಡಲಿ.

**ಸಭಾಪತಿಯವರು:–** ನಿಮಗೆ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಗುಲ್ಬರ್ಗ ವಿಭಾಗಕ್ಕೆ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ (Incharge) ಪ್ರಿನ್ಸಿಪಾಲರನ್ನು ಜಂಟಿ ನಿರ್ದೇಶಕರಾಗಿ ಕೊಟ್ಟಿದ್ದಾರೆ. ಅವರು ಅಲ್ಲಿ ಮತ್ತು ನಮ್ಮಲ್ಲಿ ಒಟ್ಟೊಟ್ಟಿಗೆ ಹೇಗೆ ಕೆಲಸ ಮಾಡಬೇಕು? ಮಾನ್ಯ ಸಚಿವರ ಕಡೆಯಿಂದ ಏನು ತಪ್ಪಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಚಿವರು ನಮಗೆ ಗೌರವ ಧನದ ಹಣವನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ಅಲ್ಲಿನ ಜಂಟಿ ನಿರ್ದೇಶಕರು ಇಲ್ಲಿಯವರೆಗೂ ನಮ್ಮ ಉಪನ್ಯಾಸಕರಿಗೆ ಗೌರವಧನವನ್ನು ನೀಡಿಲ್ಲ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಇವತ್ತಿನವರೆಗೂ ಸಹ ಬಳ್ಳಾರಿ ಜಿಲ್ಲೆ, ರಾಯಚೂರು ಜಿಲ್ಲೆ, ಗುಲ್ಬರ್ಗ ಜಿಲ್ಲೆ ಮತ್ತು ಬೀದರ್ ಜಿಲ್ಲೆಗಳಲ್ಲಿ ಇಲ್ಲಿಯವರೆವಿಗೂ ಸಹ ಉಪನ್ಯಾಸಕರಿಗೆ ವೇತನ ತಲುಪಿಲ್ಲ. 2016–17ನೇ ಸಾಲಿನ ಎರಡು ತಿಂಗಳ ವೇತನವನ್ನು ಇಲ್ಲಿಯವರೆಗೂ ನೀಡಿಲ್ಲ. ವೇತನ ಬಾಕಿಯನ್ನು ಕೊಡಬೇಕೆಂದು ನಾನು ನೇರವಾಗಿ ಹೇಳುವುದಕ್ಕೆ ಬಯಸುತ್ತೇನೆ. ಇದು ನನಗೆ ನೇರವಾಗಿ ಬರವಣಿಗೆಯಲ್ಲಿ ಬಂದಿದೆ. ಮಾನ್ಯ ಜಂಟಿ ನಿರ್ದೇಶಕರು ಇಲ್ಲಿಂದ ಹದಿನೈದು ದಿವಸಕ್ಕೆ ಒಂದು ಬಾರಿ ಅಲ್ಲಿಗೆ ಹೋಗುತ್ತಾರೆ. ಸೋಮವಾರ ಬೆಳಿಗ್ಗೆ ಹೋದವರು ಸಂಜೆ ಬರುತ್ತಾರೆ. ಅವರು ಹಣವನ್ನು demand ಕೂಡ ಮಾಡುತ್ತಿದ್ದಾರೆಂದು ದೂರು ಬಂದಿದೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಸದನದ ಹಿರಿಯ ಸದಸ್ಯರಾದ ಮಾನ್ಯ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ ನಾನು ಮತ್ತು ಮಾನ್ಯ ಭೋಜೇಗೌಡರು ಮತ್ತು ಐದಾರು ಜನ ಶಾಸಕರು, ಈ ಧರಣಿ ನಿರತ ಅತಿಥಿ ಉಪನ್ಯಾಸಕರನ್ನು ಭೇಟಿ ಮಾಡಿದ್ದೆವು. ಅವರು ಹೇಳುವುದು ಒಂದು ಕಡೆ ವೇತನ ಹೆಚ್ಚಳ ಇರಲಿ. ನಾವು ಕಳೆದ ಹತ್ತು, ಹದಿನೈದು, ಇಪ್ಪತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೇವೆ. ಜೆ.ಓ.ಸಿ.ಯವರ ಮಾದರಿಯಲ್ಲಿ ನಮಗೆ ಏನಾದರೂ ಸೇವಾಭದ್ರತೆಯನ್ನು ಮಾಡಿಸಿಕೊಡಿ ಎನ್ನುವಂತಹ ಅಹವಾಲನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಹಿಂದೆ ಜೆ.ಓ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದಂತಹ ಅರೆಕಾಲಿಕ ಉಪನ್ಯಾಸಕರನ್ನು, ಬೋಧಕರನ್ನು ಮತ್ತು ವರ್ಕರ್ ಟೀಚರ್ಸ್ ಅನ್ನು ಶ್ರೀ ಹರೀಶ್‌ಗೌಡ, ಐಎಎಸ್ ಅಧಿಕಾರಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿ ಅದರ ವರದಿಯನ್ನು ತೆಗೆದುಕೊಂಡು, ಇಲ್ಲೇ ವಿಶೇಷವಾದ ನಿಯಮವನ್ನು ರೂಪಿಸಿ ಅವರಿಗೆ ಬದುಕನ್ನು ಕೊಟ್ಟಂತಹ ಮತ್ತು ಭದ್ರತೆಯನ್ನು ಕೊಟ್ಟಂತಹ ಉದಾಹರಣೆ ನಮ್ಮ ಎದುರು ಇದೆ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಉನ್ನತ ಶಿಕ್ಷಣ ಸಚಿವರು ಇದ್ದಾರೆ, ಅವರೆಲ್ಲರೂ ಈಗಾಗಲೇ ಭೇಟಿ ಮಾಡಿದ್ದಾರೆ. ವಿಶೇಷವಾಗಿ ನಮ್ಮ ಹೃದಯವಂತ ಮಾನ್ಯ ಮುಖ್ಯಮಂತ್ರಿಗಳು ಶಿಕ್ಷಕ ಪ್ರೇಮಿಗಳಿದ್ದಾರೆ ಮತ್ತು ನೌಕರರ ಹಿತೈಷಿಗಳಿದ್ದಾರೆ. ಶ್ರೀ ಹರೀಶ್‌ಗೌಡರ ನೇತೃತ್ವದ ಸಮಿತಿಯ ಮಾದರಿಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ, ಯಾರೆಲ್ಲಾ ಹತ್ತು, ಹದಿನೈದು, ಇಪ್ಪತ್ತು ವರ್ಷಗಳ ಕಾಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಿರಂತರವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರಿಗೆ ಯಾವ ರೀತಿಯಲ್ಲಿ ಸೇವಾಭದ್ರತೆಯನ್ನು ಕೊಡುವುದಕ್ಕೆ ಸಾಧ್ಯ ಎನ್ನುವಂತಹ ದಿಶೆಯಲ್ಲಿ ಒಂದು ಪರಿಹಾರ ಕಂಡು ಕೊಡಬೇಕು ಎನ್ನುವಂಥದ್ದು ಅತಿಥಿ ಉಪನ್ಯಾಸಕರ ಆಶಯವಾಗಿದೆ. ಆ ದಿಶೆಯಲ್ಲಿ ಒಂದು ಪಾಸಿಟಿವ್ ಉತ್ತರವನ್ನು ಕೊಡಬೇಕೆಂಬುದು ನನ್ನ ಮನವಿ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಸದಸ್ಯರಾದ ಮಾನ್ಯ ಅರುಣ ಶಹಾಪುರರವರು ಮತ್ತು ನಮ್ಮ ಎಲ್ಲಾ ಸದಸ್ಯರು ಹೇಳಿದ ರೀತಿ, ಜೆ.ಡಿ.ಗಳು ಆ ಭಾಗದಿಂದ ಈ ಭಾಗಕ್ಕೆ ಬಂದು ಹೇಗೆ ಎರಡೂ ಕಡೆಗಳಲ್ಲಿ ಕೆಲಸ ನಿರ್ವಹಿಸಬೇಕೆಂದು ಏನು ಹೇಳಿದ್ದಾರೆ, ನಾವು ಅದನ್ನೆಲ್ಲಾ ಸರಿಪಡಿಸಿ ಒಂದನೇ ತಾರೀಖಿನಿಂದ ಜೆ.ಡಿ.ಗಳು ಅಲ್ಲಿರುವಂತಹ ಸ್ಥಳೀಯವಾದಂತಹ ಕಾಲೇಜ್‌ನಲ್ಲೇ ಪ್ರಿನ್ಸಿಪಾಲ್ ಮತ್ತು ಜೆ.ಡಿ.ಯನ್ನು ಮಾಡತಕ್ಕಂಥ ತೀರ್ಮಾನವನ್ನು ಮಾಡಿ, ಅವರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುವುದನ್ನು ತಪ್ಪಿಸುವ ತೀರ್ಮಾನವನ್ನು ನಾವು ಮಾಡಿದ್ದೇವೆ. ಅದು ಒಂದನೆ ತಾರೀಖಿನಿಂದ ಶೇಕಡಾ 100ರಷ್ಟು ಜಾರಿಗೆ ಬರುತ್ತದೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಅಭಿನಂದನೆಗಳು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮೊದಲು ಜೆ.ಡಿ.ಯವರಿಗೆ ವೇತನವನ್ನು ಕೊಡುವುದನ್ನು ನಿಲ್ಲಿಸಿದರೆ, ಅವರು ಬೇರೆಯವರಿಗೆ ಸರಿಯಾಗಿ ವೇತನವನ್ನು ನೀಡುತ್ತಾರೆ.

**ಶ್ರೀ ಜಿ.ಟಿ.ದೇವೇಗೌಡ:–** ಮಾನ್ಯ ಸಭಾಪತಿಯವರೇ, ಈಗ ಅದೆಲ್ಲಾ ಆಗಿದೆ. ಅದನ್ನು ನಾನು ಈಗಾಗಲೇ ಮಾಡಿದ್ದೇನೆ. ಮತ್ತೊಂದು ವಿಚಾರವೆಂದರೆ 2017ರಲ್ಲಿ 9,500/– ರೂಪಾಯಿ ಮತ್ತು 11,500/– ರೂಪಾಯಿ ಏನು ಇತ್ತು. ಈಗ NET/SET/SLET ಆಗಿರುವಂತಹವರಿಗೆ ಪ್ರತಿ ತಿಂಗಳ ವೇತನ 11,500/– ರೂಪಾಯಿ ಇದ್ದಂಥದ್ದನ್ನು 13,000/– ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ ಮತ್ತು 9,500/– ರೂಪಾಯಿ ಇದ್ದಂತಹವರಿಗೆ 11,000/– ರೂಪಾಯಿಗಳನ್ನು ಮಾಡಿದ್ದೇವೆ. ಈಗ ಹತ್ತು ಮತ್ತು ಹದಿನೈದು ವರ್ಷ ಸೇವೆ ಸಲ್ಲಿಸಿರುವುದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಏನು ಹೇಳುತ್ತಿದ್ದಾರೆ, ಅದಕ್ಕೆ ನಾವು ಅವರಿಗೆ ಐದು ವರ್ಷದ ವಯೋಮಿತಿಯನ್ನು ಹೆಚ್ಚಿಗೆ ಮಾಡಿದ್ದೇವೆ.

**(ಮುಂದು...)**

(417)13–12–2018(11–40)ಎಲ್‌ಎಲ್–ವಿಕೆ

**ಶ್ರೀ ಜಿ.ಟಿ. ದೇವೇಗೌಡ(ಮುಂದುವರೆದಿದ್ದು...):–**

ಈ ಹಿಂದೆ ಸಾಮಾನ್ಯ ವರ್ಗಕ್ಕೆ 40 ವರ್ಷ, ಹಿಂದುಳಿದ ವರ್ಗಕ್ಕೆ 43 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ 45 ವರ್ಷ ಇತ್ತು. ಈಗ ಸಾಮಾನ್ಯ ವರ್ಗಕ್ಕೆ 45 ವರ್ಷ, ಹಿಂದುಳಿದ ವರ್ಗಕ್ಕೆ 48 ವರ್ಷ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ 50 ವರ್ಷ ವಯೋಮಿತಿ ಸಡಿಲಿಕೆ ಮಾಡಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಸೇವಾ ಭದ್ರತೆ ಪಂಚಾಯತಿ ವಿಚಾರದಲ್ಲಿಯೂ ಇದೆ ಎಂದು ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ಹೇಳಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯದಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಂಚಾಯತಿ ವಿಚಾರದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯೇ ಬೇರೆ. ಅಲ್ಲಿಯೂ ಕೂಡ ಅವರನ್ನು ಖಾಯಂ ಸರ್ಕಾರಿ ನೌಕರರನ್ನಾಗಿ ಮಾಡಿರುವುದಿಲ್ಲ. ಆದರೆ, ಸರ್ಕಾರದಿಂದ ಸಂಬಳ ಕೊಡತಕ್ಕಂಥದ್ದನ್ನು ಮಾತ್ರ ಮಾಡಿದ್ದಾರೆ.

ಇವೊತ್ತಿನ ದಿವಸ ರಾಜ್ಯದಲ್ಲಿ ಸುಮಾರು 12674 ಅತಿಥಿ ಉಪನ್ಯಾಸಕರು ಇದ್ದಾರೆ. ಉಪನ್ಯಾಸಕ ಹುದ್ದೆಯ ನೇಮಕಾತಿಗೆ ಅರ್ಜಿ ಆಹ್ವಾನಿಸಿದ ಸಂದರ್ಭದಲ್ಲಿ ಅರ್ಹತೆ ಇರತಕ್ಕಂಥವರು ಅರ್ಜಿ ಹಾಕಬಹುದಾಗಿದೆ. ಅವರಿಗೆ ಕೊಟ್ಟಿರತಕ್ಕಂತಹ 5 ವರ್ಷ ವಯೋಮಿತಿ ಅವಕಾಶಗಳನ್ನು ಬಳಸಿ ಹೆಚ್ಚು ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಅಲ್ಲದೇ, ಸಂಪೂರ್ಣವಾಗಿ ಉನ್ನತ ಶಿಕ್ಷಣ ಇಲಾಖೆಯನ್ನು ಭದ್ರತೆಗೊಳಿಸುವುದಕ್ಕೆ ಮತ್ತು ಶಿಕ್ಷಣ ಗುಣಮಟ್ಟವನ್ನು ಕಾಪಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಹ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಆಸಕ್ತಿ ಹೊಂದಿದ್ದಾರೆ. ಶಿಕ್ಷಣ ಇಲಾಖೆ ವಿಷಯಗಳು ಹಣಕಾಸು ಇಲಾಖೆಗೆ ಹೋದಾಗ ಅವರು ಕೂಡಲೇ ಹಣ ಬಿಡುಗಡೆ ಮಾಡುತ್ತಾರೆ. ಅದಕ್ಕಾಗಿ ನಾನು ಹಣಕಾಸು ಇಲಾಖೆಯನ್ನು ಅಭಿನಂದಿಸುತ್ತೇನೆ. ಆದಾಗ್ಯೂ, ವಿಧಾನ ಪರಿಷತ್ತಿನ ಸದಸ್ಯರೆಲ್ಲರೂ ಕೊಟ್ಟಿರುವ ಮನವಿಯನ್ನು ಮನಗಂಡು ಅದನ್ನು ಮಾಡತಕ್ಕಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕರ ಪ್ರಮುಖವಾದಂತಹ ಬೇಡಿಕೆ ಎಂದರೆ ಸೇವಾ ಭದ್ರತೆ. ಅದಕ್ಕೆ ಮಾನ್ಯ ಸಚಿವರು ಯಾವುದೇ ಉತ್ತರ ನೀಡಿರುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಕೇಳಿರುವುದು ನಾನು, ನನಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಈಗ ಶ್ರೀ ಎಸ್.ಎಲ್. ಭೋಜೇಗೌಡರವರು ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನನಗೆ ಈ ವಿಷಯದಲ್ಲಿ ಒಂದು ಸ್ಪಷ್ಟೀಕರಣ ಬೇಕು.

**ಸಭಾಪತಿಯವರು:–** ಶ್ರೀ ಎಸ್.ಎಲ್. ಭೋಜೇಗೌಡರವರಿಗೆ ಮಾತನಾಡಲು ಕರೆದಿದ್ದೇನೆ. ಆದುದರಿಂದ, ದಯಮಾಡಿ ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ನಾವೆಲ್ಲರೂ ವಿನಂತಿ ಮಾಡಿರುವಂಥದ್ದು, ಸೇವಾ ಭದ್ರತೆ ಕೊಡಬೇಕೆಂದು. ಸೇವಾ ಭದ್ರತೆ ಏತಕ್ಕೆ ಕೊಡಬೇಕೆಂದರೆ, ಮಾನ್ಯ ಸಚಿವರು *" ಉಪನ್ಯಾಸಕರ ನೇಮಕಾತಿಗೆ ಅರ್ಜಿ ಆಹ್ವಾನಿಸುತ್ತೇವೆ. ಅರ್ಜಿ ಆಹ್ವಾನಿಸಿದ ಸಂದರ್ಭದಲ್ಲಿ ಅವರು ಅರ್ಜಿ ಹಾಕಲಿ, ಅವರಿಗೆ 5 ವರ್ಷ ವಯೋಮಿತಿ ಸಡಿಲಿಕೆ ಮಾಡಿದ್ದೇವೆ"* ಎಂದು ಹೇಳಿದರು. ಅದು ಒಪ್ಪುವಂತಹ ವಿಚಾರ. ಆದರೆ, 5

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಷ ವಯೋಮಿತಿ ಸಡಿಲಿಕೆ ಮಾಡಿದ ಮಾತ್ರಕ್ಕೆ 10–15 ವರ್ಷಗಳ ಕಾಲ ಸೇವೆ ಮಾಡಿದ ಅತಿಥಿ ಉಪನ್ಯಾಸಕರು ಈಗಿನ ಸ್ಪರ್ಧೆಯಲ್ಲಿ ಅವರು ಮೇಲೆ ಬರುತ್ತಾರೆ ಎನ್ನುವುದರಲ್ಲಿ ನೂರಕ್ಕೆ ನೂರರಷ್ಟು ಅನುಮಾನವಿದೆ. ಏಕೆಂದರೆ, ಅದರಲ್ಲಿ ವೇಯ್ಟೇಜ್ ಇಲ್ಲ. ಹಾಗಾಗಿ, ಅವರ ವಿದ್ಯಾರ್ಹತೆಯಲ್ಲಿ ಯಾವುದೇ ಕಾರಣಕ್ಕೂ ವ್ಯತ್ಯಾಸ ಇರುವುದಿಲ್ಲ. 10–15 ವರ್ಷದ ಹಿಂದೆ ನಮ್ಮ education standard ಏನಿತ್ತು, ಈಗ ಏನು standard ಇದೆ. ಅವೊತ್ತಿನ ಮಕ್ಕಳು ಯಾವ ರೀತಿ competition ನಲ್ಲಿ ಬಂದರು, ಇವೊತ್ತಿನ ಮಕ್ಕಳು ಯಾವ ರೀತಿ competition ನಲ್ಲಿ 90 ಪರ್ಸೆಂಟ್ ಮತ್ತು ರ್‍ಯಾಂಕುಗಳಲ್ಲಿ ಬರುತ್ತಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು 15 ವರ್ಷ ಹಿಂದೆ ಯೋಚನೆ ಮಾಡಲಿ. ಅದಕ್ಕೆ ನಾನು ಹೇಳುವುದೇನೆಂದರೆ, 15 ವರ್ಷ ಕೆಲಸ ಮಾಡಿದಂತಹ ಅತಿಥಿ ಉಪನ್ಯಾಸಕರುಗಳನ್ನು ಮನೆಗೆ ಕಳುಹಿಸಿದರೆ, ಅವರು ಬೇಸಾಯ ಅಥವಾ ಜಮೀನು ಕೆಲಸ ಸಹ ಮಾಡುವುದಕ್ಕಾಗುವುದಿಲ್ಲ. ಹಾಗಾದರೆ, 12 ಸಾವಿರ ಜನ ಅತಿಥಿ ಉಪನ್ಯಾಸಕರನ್ನು ಜಮೀನು ಕೆಲಸ ಮಾಡುವುದಕ್ಕೆ ಈ ಸರ್ಕಾರ ಕಳುಹಿಸುತ್ತದೆಯೇ? ಆದುದರಿಂದ, ಅವರಿಗೆ ಸೇವಾ ಭದ್ರತೆ ಕೊಡಬೇಕು. ಗುಣಮಟ್ಟದ ಶಿಕ್ಷಣದಲ್ಲಿ ಈಗಿನ ಯಾವುದೇ ಪಿ.ಹೆಚ್.ಡಿ. ಅಥವಾ ಡಾಕ್ಟರೇಟ್ ಮಾಡಿದಂತಹ ಉಪನ್ಯಾಸಕರುಗಳಿಗಿಂತಲೂ ಹೆಚ್ಚಿನ ಗುಣಮಟ್ಟದ ಶಿಕ್ಷಣವನ್ನು ಕೊಡುವುದಕ್ಕೆ ಅವರಿಗೆ 15 ವರ್ಷಗಳ ದೀರ್ಘ ಅನುಭವವಿದೆ. ಸರ್ಕಾರ ಇವೆಲ್ಲವನ್ನೂ ಮನಗಂಡು ಅವರಿಗೆ ಸೇವಾ ಭದ್ರತೆ ಕೊಡಬೇಕು. ನಾಳೆ ದಿವಸ ಆ ಹುದ್ದೆಗೆ ಹೊಸದಾಗಿ ಬಂದಂತಹ ಉಪನ್ಯಾಸಕರುಗಳಿಗೆ 40 ರಿಂದ 50 ಸಾವಿರ ಸಂಬಳ ಕೊಡುತ್ತಾರೆ. ಇಲ್ಲಿ ಸೇವಾ ಭದ್ರತೆಯನ್ನು ನಾವು ಕೇಳುತ್ತಿದ್ದೇವೆ. ಅಲ್ಲದೇ, ಅವರು 25 ಸಾವಿರ ಹಣವನ್ನು ಉಳಿಸುತ್ತಾರೆ ಮತ್ತು ಶಿಕ್ಷಕರ ಕೊರತೆಯನ್ನು ಸಹ ನೀಗಿಸುತ್ತಿದ್ದಾರೆ. ಆದುದರಿಂದ, ದಯಮಾಡಿ ಇದರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸಹ ಈ ಸದನದಲ್ಲಿ ಹಾಜರಿದ್ದಾರೆ. ಅವರಿಗೆ ಈ ಎಲ್ಲಾ ವಿಚಾರಗಳು ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಮಂತ್ರಿಗಳು ದಯಮಾಡಿ ಇದರ ಬಗ್ಗೆ ಗಮನಹರಿಸಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಇವೊತ್ತಿನ ದಿವಸ ಬಹಳ ಪ್ರಮುಖವಾದ ವಿಚಾರದ ಮೇಲೆ ಚರ್ಚೆಗೆ ಪ್ರಶ್ನೋತ್ತರ ವೇಳೆಯಲ್ಲಿ ತಾವು ಅವಕಾಶ ಕೊಟ್ಟಿದ್ದೀರಿ. ಅತಿಥಿ ಉಪನ್ಯಾಸಕರು ಸುಮಾರು 10–15 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಉನ್ನತ ಶಿಕ್ಷಣ ಇಲಾಖೆಯಲ್ಲಿ ಅತಿಥಿ ಉಪನ್ಯಾಸಕರುಗಳು ಇಲ್ಲವೆಂದರೆ ಯಾವ ಕಾಲೇಜುಗಳು ನಡೆಯುವುದಿಲ್ಲ. ಅವು ಬಂದ್ ಆಗುತ್ತವೆ. ಅವರು ಗುಣಾತ್ಮಕ ಶಿಕ್ಷಣ ಕೊಡುತ್ತಿದ್ದಾರೆ, ಪರೀಕ್ಷಾ ಕೆಲಸ ಮಾಡುತ್ತಿದ್ದಾರೆ, ಒಳ್ಳೆಯ ಫಲಿತಾಂಶ ತರುತ್ತಿದ್ದಾರೆ ಹಾಗೂ ಮೌಲ್ಯಮಾಪನ ಕೂಡ ಮಾಡುತ್ತಿದ್ದಾರೆ. ಆದರೆ, ಅವರು ತುಂಬಾ ಸಂಕಷ್ಟದಲ್ಲಿದ್ದಾರೆ. ಯಾವ ಪರಿಸ್ಥಿತಿ ಎಂದರೆ, ಕೆಲವರು ಖಾಯಂ ಉಪನ್ಯಾಸಕರು ಎಂದು ಹೇಳಿ ಮದುವೆ ಮಾಡಿಕೊಂಡು, ಈಗ ಅತಿಥಿ ಉಪನ್ಯಾಸಕರು ಎಂದು ಗೊತ್ತಾದ ಮೇಲೆ ಡೈವೋರ್ಸ್ ಕೇಸ್‌ಗಳು ಜಾಸ್ತಿಯಾಗುತ್ತಿದೆ. ಆ ಉಪನ್ಯಾಸಕರುಗಳು ಎಂ.ಎ. ಮಾಡಿದ್ದಾರೆ, ಪಿ.ಹೆಚ್.ಡಿ. ಮಾಡಿದ್ದಾರೆ, NET/SET/SLET ಮಾಡಿದ್ದಾರೆ. ಆದರೆ, ಅವರ ಕುಟುಂಬದಲ್ಲಿ ಅವರಿಗೆ ಗೌರವ ಇಲ್ಲದೇ ಇರುವ ರೀತಿ ಆಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅತಿಥಿ ಉಪನ್ಯಾಸಕರು ಬಹಳ ಅತಂತ್ರ ಪರಿಸ್ಥಿತಿಯಲ್ಲಿದ್ದಾರೆ. ಅವರದ್ದು ಎರಡು ಬೇಡಿಕೆಗಳಿವೆ. ಏನೆಂದರೆ, ಎಲ್ಲಿಯವರೆಗೆ ನಮ್ಮನ್ನು ಅತಿಥಿ ಉಪನ್ಯಾಸಕರು ಎಂದು ಪರಿಗಣಿಸುತ್ತಾರೆ, ಅಲ್ಲಿಯವರೆಗೆ ಇರುವಂತಹ ಗೌರವಧನವನ್ನು ಹೆಚ್ಚು ಮಾಡಬೇಕು. ಎರಡನೆಯದು, ಮುಂದೆ ಸರ್ಕಾರ ಉಪನ್ಯಾಸಕರ ನೇಮಕಾತಿಗೆ ಆದೇಶ ಮಾಡುವಂತಹ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರುಗಳು, ಯು.ಜಿ.ಸಿ. ವಿದ್ಯಾರ್ಹತೆ ಇರುವವರು ಹೇಗಾದರೂ ಕೂಡ ಒಳಗಡೆ ಬರುವುದಕ್ಕೆ ಅವರಿಗೆ ವಿಶೇಷವಾದ ಹೆಚ್ಚಿನ ಒಂದು weightage ಕೊಡಬೇಕೆನ್ನುವುದೇ ಅವರ ಮೂಲಭೂತವಾದಂತಹ ಪ್ರಶ್ನೆಗಳು.

ಮಾನ್ಯ ಮಂತ್ರಿಗಳು ವೇತನ ಬಿಡುಗಡೆ ಬಗ್ಗೆ ವಹಿಸಿರುವಂತಹ ಕಾಳಜಿ, ಈ ಸರ್ಕಾರ ಈಗಾಗಲೇ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ಕೊಡುವುದಕ್ಕೆ ಹಣ ಬಿಡುಗಡೆ ಮಾಡಿರತಕ್ಕಂಥದ್ದು, ಎಲ್ಲವನ್ನೂ ಕೂಡ ನಾನು ಸ್ವಾಗತ ಮಾಡುತ್ತೇನೆ. ಇವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿದ್ದಾರೆ. ಅವರು ಹಿಂದೆ ಮುಖ್ಯಮಂತ್ರಿಯಾಗಿದ್ದಾಗಲೂ ಕೂಡ ಇಡೀ ರಾಜ್ಯದ ಇತಿಹಾಸದಲ್ಲಿ ಶಿಕ್ಷಣ ಇಲಾಖೆಗೆ, ಉನ್ನತ ಶಿಕ್ಷಣ ಇಲಾಖೆಗೆ ಮತ್ತು ಪ್ರಾಥಮಿಕ ಶಿಕ್ಷಣ ಇಲಾಖೆಗೆ ದೊಡ್ಡ ಕಾಯಕಲ್ಪ ಕೊಟ್ಟಂತಹ ದೊಡ್ಡ ಕೀರ್ತಿ ಅವರಿಗೆ ಇದೆ. ಆದುದರಿಂದ, ದಯಮಾಡಿ ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಮುಂದೆ ನೇಮಕಾತಿ ಸಂದರ್ಭದಲ್ಲಿ ನಿರ್ದಿಷ್ಟ weightage ಕೊಡತಕ್ಕಂಥದ್ದು, ಜೊತೆಗೆ ಗೌರವಧನವನ್ನು ನಿಯಮಾನುಸಾರ ಹೆಚ್ಚು ಮಾಡತಕ್ಕಂಥದ್ದಕ್ಕೆ ಸ್ಪಷ್ಟವಾಗಿ ಮಾನ್ಯ ಸಚಿವರಿಂದ ನಾನು ಉತ್ತರ ಬಯಸುತ್ತೇನೆ.

**ಶ್ರೀ ಜಿ.ಟಿ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ಶಿಕ್ಷಕರ ಕ್ಷೇತ್ರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿರುವಂತಹ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಶಿಕ್ಷಣ ಇಲಾಖೆಯಲ್ಲಿ ನನಗಿಂತಲೂ ಹೆಚ್ಚಿನ ಅನುಭವ ಇದೆ. ಅದಕ್ಕಾಗಿ, 10–12 ವಿಧಾನ ಪರಿಷತ್ತಿನ ಸದಸ್ಯರುಗಳ ಜೊತೆ ನಾವು ಈಗಾಗಲೇ ಒಂದು ದಿನ ಮೀಟಿಂಗ್ ಮಾಡಿದ್ದೇವೆ. ಯು.ಜಿ.ಸಿ. ನಿಯಮಾವಳಿಗಳ ಪ್ರಕಾರವೇ ಎಲ್ಲಾ ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು ನಡೆಯುತ್ತಿರುತ್ತವೆ. ಶೇಕಡ 100 ರಷ್ಟು ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ನಾವು ಎಲ್ಲಾ ಕ್ರಮ ಕೈಗೊಳ್ಳುತ್ತೇವೆ. ಆದರೆ, ಅತಿಥಿ ಉಪನ್ಯಾಸಕರುಗಳ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕಂಥದ್ದಕ್ಕೆ, ವೇತನ ಜಾಸ್ತಿ ಮಾಡುವಂಥದ್ದಕ್ಕೆ, ಒಂದು ಯೂನಿವರ್ಸಿಟಿಯಲ್ಲಿ 25 ಸಾವಿರ ವೇತನ ಕೊಡುತ್ತಿದ್ದಾರೆ ಎಂದು ಶ್ರೀ ಆಯನೂರು ಮಂಜುನಾಥ್‌ರವರು ಏನು ಹೇಳಿದ್ದಾರೆ, ಈ ಎಲ್ಲಾ ಪ್ರಸ್ತಾಪಗಳಿಗೆ ನಾವೆಲ್ಲರೂ ಅವೊತ್ತಿನ ದಿವಸ ಏನು ತೀರ್ಮಾನ ಮಾಡಿದ್ದೇವೆ. ಈ ಎಲ್ಲಾ ಪೂರ್ಣ ಮಾಹಿತಿಗಳನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳ ಜೊತೆ ಒಂದು ಗಂಟೆ ಮೀಟಿಂಗ್ ಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಎಲ್ಲಾ ಸಮಸ್ಯೆಗಳನ್ನು ಯಾವ ರೀತಿ ಮಾಡಬಹುದು ಕಾನೂನಿನ ಅಡಿಯಲ್ಲಿ ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಏನು ಮಾಡಬಹುದು ಎನ್ನುವುದರ ಬಗ್ಗೆ ಚರ್ಚೆ ಮಾಡಿ ತೀರ್ಮಾನ ಕೈಗೊಳ್ಳಬೇಕೆಂದು ಅವೊತ್ತಿನ ದಿವಸವೇ ತೀರ್ಮಾನ ಮಾಡಿದ್ದೇನೆ. ಅದಕ್ಕೆ ನಾನು ಈಗಲೂ ಬದ್ಧನಾಗಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

**ಸಭಾಪತಿಯವರು:–** ಶ್ರೀ ಅಪ್ಪಾಜಿಗೌಡರು ತಮ್ಮ ಪ್ರಶ್ನೆಯನ್ನು ಕೇಳಲಿ.

**(ಗೊಂದಲ)**

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಒಂದು ಅಂಶವನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಇಲ್ಲ ಆಗುವುದಿಲ್ಲ. ಅಪ್ಪಾಜಿಗೌಡರೇ ತಾವು ತಮ್ಮ ಪ್ರಶ್ನೆಯನ್ನು ಕೇಳಿ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಹಾಜರಿದ್ದಾರೆ...

**ಸಭಾಪತಿಯವರು:–** ಮುಂದಿನ ಪ್ರಶ್ನೆಯನ್ನು ಕೇಳಿದ್ದು ಆಗಿದೆ, ಅದಕ್ಕೆ ಉತ್ತರ ಸಹ ಕೊಟ್ಟಿದ್ದು ಆಗಿದೆ. ಈಗ ಅದನ್ನು ಬ್ರೇಕ್ ಮಾಡುವುದಕ್ಕಾಗುತ್ತದೆಯೇ?

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಒಂದು ಅಂಶವನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ. ಅದಕ್ಕೆ ಉತ್ತರ ಕೊಡುವುದನ್ನು ಅವರಿಗೆ ಬಿಡುತ್ತೇನೆ. **(ಗೊಂದಲ)** ಸಾಮಾಜಿಕ ಭದ್ರತೆ ಹೆಸರಿನಲ್ಲಿ ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಮಹಿಳೆಯರಿಗೆ ಭದ್ರತೆ ಕೊಡುತ್ತೇವೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ರೀತಿಯಾದರೆ ಸದನ ನಡೆಸುವುದು ಕಷ್ಟವಾಗುತ್ತದೆ.

**ಶ್ರೀ ಆಯನೂರು ಮಂಜುನಾಥ್:–** ಮಾನ್ಯ ಸಭಾಪತಿಯವರೇ, ಅತಿಥಿ ಉಪನ್ಯಾಸಕ ಮಹಿಳೆಗೆ, ಆಕೆ ಗರ್ಭವತಿಯಾದರೆ, ಸರ್ಕಾರ ಆಕೆಗೆ ಸಂಬಳ ನೀಡುವುದಿಲ್ಲ. ವೇತನ ಕಡಿತವಾಗುತ್ತದೆ. ಆದರೆ, ಮಹಿಳೆಯ ಪೌಷ್ಠಿಕಾಂಶಕೋಸ್ಕರ, ಅವಳ ಆರೋಗ್ಯಕ್ಕೋಸ್ಕರ ನಾವು ರಕ್ಷಣೆಯನ್ನು ಕೊಡುತ್ತೇವೆ. ಆಕೆ ವಿದ್ಯಾವಂತಳಾಗಿದ್ದಾಳೆ, ಮಾಸ್ಟರ್ ಡಿಗ್ರಿ ಮಾಡಿದ್ದಾಳೆ ಎಂಬ ಕಾರಣಕ್ಕಾಗಿ ಆಕೆಯ ಸಂಬಳದಲ್ಲಿ ಕಡಿತವಾಗುತ್ತದೆ. ಪೌಷ್ಠಿಕಾಂಶ ಬಿಡಿ. ಹೊಟ್ಟೆ ಕೂಡ ತುಂಬುವುದಿಲ್ಲ. ಅಲ್ಲಿ ಮಾನವೀಯತೆಯ ಅಂಶ ಇದೆ. ಹಳ್ಳಿಯ ಮಹಿಳೆಗೂ ಈ ವಿದ್ಯಾವಂತ ಮಹಿಳೆಗೂ ಅಗಾಧವಾದಂತಹ ವ್ಯತ್ಯಾಸ ಏನಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನದಲ್ಲಿ ಮಹಿಳಾ ಸಚಿವರು ಇದ್ದಾರೆ. ದಯಮಾಡಿ, ಇದನ್ನು ಗಮನಿಸಬೇಕೆಂದು ವಿನಂತಿ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ:–522**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎನ್ ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಬಹಳ ಸುದೀರ್ಘವಾಗಿ ಸುಮಾರು 84 ಪುಟಗಳ ಉತ್ತರವನ್ನು ಕೊಟ್ಟಿದ್ದಾರೆ. ಅದು ಬಹಳ ತಡವಾಗಿ ಕೂಡ ನನ್ನ ಕೈ ಸೇರಿದೆ. ನಾನು ಮಾನ್ಯ ಸಚಿವರಲ್ಲಿ ಕಳೆದ ಮೂರು ವರ್ಷಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಕ್ಕಳ ಅಭಿವೃದ್ಧಿಗಾಗಿ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ವತಿಯಿಂದ ಬಿಡುಗಡೆಯಾದ ಕಾರ್ಯಕ್ರಮಗಳು ಮತ್ತು ಸದರಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುದಾನದ ಸಂಪೂರ್ಣ ವಿವರ ಕೇಳಿದ್ದೆನು. ಸಂಪೂರ್ಣವಾಗಿ ವಿವರ ಕೊಟ್ಟಿದ್ದಾರೆ. ಮುಖ್ಯವಾಗಿ ಈ ಕಾರ್ಯಕ್ರಮಗಳ ಅನುಷ್ಠಾನ ಮಾಡಲು ಮಾರ್ಗಸೂಚಿಗೆ ಯಾವ ಮಾನದಂಡ ಅನುಸರಿಸುತ್ತಿದ್ದಾರೆ ಎಂದು ಕೇಳಿದ್ದೆನು.

(ಮುಂದುವರೆದಿದೆ...)

(418) 13–12–2018 (11.50) ವೈಎಲ್–ಬಿಎನ್ಎಸ್

ಶ್ರೀ ಎನ್.ಅಪ್ಪಾಜಿಗೌಡ(ಮುಂದು):–

ಅದನ್ನು ಸಹ ಉತ್ತರದಲ್ಲಿ ನೀಡಿದ್ದಾರೆ. ನಾನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಸದಸ್ಯನಾಗಿ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಈ ವಿಚಾರದ ಬಗ್ಗೆ ಸುಮಾರು ಚರ್ಚೆಗಳು ಇವೆ. ಮಾನ್ಯ ಪ್ರಧಾನ ಕಾರ್ಯದರ್ಶಿಯವರು ಸಹ ಆ ಸಭೆಗೆ ಬಂದಿದ್ದರು. ಈ ವಿಷಯದಲ್ಲಿ ಕೊಟ್ಟಿರುವ ಅಂಕಿ–ಅಂಶಕ್ಕೂ ಹಾಗೂ ಅಲ್ಲಿ ನಿಜವಾಗಿಯೂ ನಡೆಯುವ ಕಾರ್ಯಕ್ರಮಕ್ಕೂ ಬಹಳ ವ್ಯತ್ಯಾಸ ಇದೆ. ಇದನ್ನು ಸರಿಪಡಿಸಬೇಕೆಂಬುದು ನನ್ನ ಆಗ್ರಹವಾಗಿದೆ. ಮಾನ್ಯ ಸಚಿವರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ನನಗೆ ಅದರ ಬಗ್ಗೆ ಅಭಿಮಾನ ಇದೆ. ಜೊತೆಗೆ ಬಾಲ ವಿಕಾಸ ಅಕಾಡೆಮಿಗೆ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರದ ವತಿಯಿಂದ ಆಯವ್ಯಯದಲ್ಲಿ ಸೇರಿಸಿ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಹೆಚ್ಚಿನ ರೀತಿಯಲ್ಲಿ ಕೆಲಸಗಳನ್ನು ಮಾಡಬೇಕೆಂಬುದು ನನ್ನ ಆಗ್ರಹವಾಗಿದೆ. ಹಾಗೆಯೇ ಈ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಯಾವ್ಯಾವ ಸಂಘ ಸಂಸ್ಥೆಗಳಿಗೆ ವಹಿಸಲಾಗಿದೆ ಹಾಗೂ ಏಜೆನ್ಸಿಗಳನ್ನು ಆಯ್ಕೆ ಮಾಡುವಾಗ ನಿಗದಿಪಡಿಸುವ ಮಾನದಂಡದಲ್ಲಿ ಎಲ್ಲೋ ಒಂದು ಕಡೆ ಪಾರದರ್ಶಕತೆ ಇಲ್ಲ ಎಂಬುದು ನನ್ನ ಭಾವನೆಯಾಗಿದೆ. ವಿಶೇಷವಾಗಿ ಮಂಡ್ಯ ಜಿಲ್ಲೆಯಲ್ಲಿ 3 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮದ ಬಗ್ಗೆ ಕೇಳಿದ್ದೇನೆ. ಮಾನ್ಯ ಸಚಿವರು ನೀಡಿರುವ ಹೇಳಿಕೆಯಲ್ಲಿ ಬಹಳ ದೀರ್ಘವಾದ ಉತ್ತರ ಇದೆ. ಆದರೆ, ಯಾವುದೇ ಕಾರ್ಯಕ್ರಮವನ್ನು ನಡೆಸಿರುವಂಥ ಪರಿಸ್ಥಿತಿ ಅಲ್ಲಿ ಕಾಣುತ್ತಿಲ್ಲ. ಏಕೆಂದರೆ, ನಾನು ಮಂಡ್ಯ ಜಿಲ್ಲೆಯಿಂದ ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡಿರುತ್ತೇನೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಇಲಾಖೆಯು ಕಟ್ಟಕಡೆಯ ವ್ಯಕ್ತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವಂಥ ಇಲಾಖೆಯಾಗಿದೆ. ಆದ್ದರಿಂದ ತಾವು ಕಳಕಳಿಯುಳ್ಳ ಸಚಿವರಾಗಿದ್ದೀರಿ. ದಯವಿಟ್ಟು ಇದರ ಬಗ್ಗೆ ಎಲ್ಲಾ ಶಾಸಕರನ್ನು, ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಿಕೊಂಡು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಡಾ॥ ಜಯಮಾಲಾ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಅತ್ಯಂತ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. ಆದರೆ, ಪಾರದರ್ಶಕತೆಯನ್ನು ಹೊಂದಬೇಕು ಹಾಗೂ ಹೆಚ್ಚಿನ ಹಣ ಬಿಡುಗಡೆ ಮಾಡಬೇಕು ಎಂಬುದರ ಕಡೆ ನಮ್ಮ ಗಮನಹರಿಸಿದ್ದಾರೆ. ಹಾಗೆಯೇ ಪ್ರತ್ಯೇಕವಾಗಿ ಮಂಡ್ಯ ಜಿಲ್ಲೆಯ ಬಗ್ಗೆ ಕೇಳಿದ್ದಾರೆ. ಈಗಾಗಲೇ ಮಂಡ್ಯ ಜಿಲ್ಲೆಗೆ 12,73,000 ರೂಪಾಯಿಗಳ ಯೋಜನೆಗಳನ್ನು ನೀಡಿದ್ದೇವೆ. ಇದಲ್ಲದೇ ತಾವೂ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಯಾವುದಾದರೂ ಸಂಸ್ಥೆಗಳು ಅಥವಾ

ಬೇರೆ ಯಾವುದಾದರೂ ತಮ್ಮ ಗಮನಕ್ಕೆ ಬಂದಿರುವುದನ್ನು ಹೇಳಿದರೆ, ಆ ಪ್ರಸ್ತಾವನೆ ಬಂದರೆ ಅದನ್ನು ಸೇರಿಸಿಕೊಳ್ಳುವುದಕ್ಕೆ ಮುಂದಿನ ದಿನಗಳಲ್ಲಿ ಖಂಡಿತವಾಗಿ ಕಾರ್ಯನಿರ್ವಹಿಸುತ್ತೇನೆ ಹಾಗೂ ಬಾಲ ವಿಕಾಸ ಅತ್ಯಂತ ಒಳ್ಳೆಯ ಕೆಲಸವನ್ನು ಮಾಡುವಂಥ ಜಾಗ. ಮಕ್ಕಳ ಮನೋವಿಕಾಸ ಮಕ್ಕಳ ಮನರಂಜನೆ, ಮಕ್ಕಳ ಬದುಕಿನ ಜೊತೆಯಲ್ಲಿ ಎಲ್ಲಾ ಸಾಂಸ್ಕೃತಿಕ ಚುಟುವಟಿಕೆಯಿಂದ ಹಿಡಿದು ಆ ಮಕ್ಕಳನ್ನು ಹೆಕ್ಕಿ ತೆಗೆಯುವಂಥ ಕೆಲಸ ಈ ಕೇಂದ್ರದ ಮೂಲಕ ನಡೆಯುತ್ತಿದೆ. ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಹೇಳಿದರೆ ಈ ವಿಚಾರದ ಬಗ್ಗೆ ಅವರ ಜೊತೆ ಚರ್ಚೆ ಮಾಡಿ ತಿಳಿಸುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 515**

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೋರಿರುತ್ತಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ಸರಳವಾಗಿರುವ ಪ್ರಶ್ನೆಯನ್ನೇ ಕೇಳಿದ್ದೇನೆ. ಅದರಲ್ಲಿ ಅಂತಹ ವಿಚಾರವೇನು ಇಲ್ಲ. ಮಾನ್ಯ ಸಚಿವರು ಏತಕ್ಕಾಗಿ ಕಾಲಾವಕಾಶವನ್ನು ಕೋರಿದ್ದಾರೆ. 3 ವರ್ಷಗಳಲ್ಲಿ ಎಷ್ಟು ಉದ್ಯೋಗ ಖಾಲಿ ಇದೆ ಎಂಬುದಕ್ಕೆ ಉತ್ತರ ನೀಡುವುದು ಕಷ್ಟವೇ ಎಂಬುದನ್ನು ನೀವೇ ಹೇಳಿ. ನೀವು ಸದಸ್ಯರಾದ ಸಂದರ್ಭದಲ್ಲಿ ನಿಮ್ಮ ಪ್ರಶ್ನೆಗೂ ಉತ್ತರ ಬರುತ್ತಿರಲಿಲ್ಲ. ನೀವು ಸಭಾಪತಿಗಳಾದ ಮೇಲೆ ನನ್ನ ಪ್ರಶ್ನೆಗೂ ಉತ್ತರ ಬರುತ್ತಿಲ್ಲ. ಏಕೆ ಎಂಬುದು ಗೊತ್ತಾಗುತ್ತಿಲ್ಲ. ನಿನ್ನೆಯ ಪ್ರಶ್ನೆಗೂ ಸಹ ಉತ್ತರ ಸಿಗಲಿಲ್ಲ. ಇವತ್ತಿನ ಪ್ರಶ್ನೆಗೂ ಸಹ ಉತ್ತರ ಬಂದಿಲ್ಲ. ದಯವಿಟ್ಟು ತಾವು ನನ್ನ ನೆರವಿಗೆ ಬರಬೇಕು.

**ಸಭಾಪತಿಯವರು:–** ಆಯಿತು.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 571**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಶಿಕ್ಷಣ ಭೀಷ್ಮರವರು (ಸಚಿವರಾದ ಜಿ.ಟಿ.ದೇವೇಗೌಡರವರನ್ನು ಉದ್ದೇಶಿಸಿ) ಸದನದಲ್ಲಿ ಕುಳಿತ್ತಿದ್ದು, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರು ಸಹ ಸದನಕ್ಕೆ ಆಗಮಿಸಿದ್ದಾರೆ.

(ಗೊಂದಲ)

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಭೀಷ್ಮ ಎಂದು ಅವರನ್ನು ಕರೆಯುತ್ತಾ ಅವರನ್ನು ಶರಶಯ್ಯೆಯಲ್ಲಿ ಇಡುತ್ತಿರೇನೋ ಎಂದು ನಮಗೆ ಹೆದರಿಕೆಯಾಗಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಎನ್.ಪಿ.ಎಸ್. ಯೋಜನೆಗೆ ಒಳಪಟ್ಟಿರುವ ನೌಕರರ ಸಂಖ್ಯೆ ಬಗ್ಗೆ ಪ್ರಶ್ನೆಯನ್ನು ಕೇಳಿದ್ದು, ಈಗಾಗಲೇ ಎನ್.ಪಿ.ಎಸ್. ನೌಕರರ ಹೋರಾಟದಲ್ಲಿ ನಾನು ಮತ್ತು ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಇಲ್ಲಿರತಕ್ಕಂಥ ವಿರೋಧ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪಕ್ಷದ ನಾಯಕರು, ಮಾನ್ಯ ಬಿಜೆಪಿಯ ಕರ್ನಾಟಕ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಎಲ್ಲರೂ ಹೋರಾಟದ ಸಂದರ್ಭದಲ್ಲಿ ಭೇಟಿ ನೀಡಿದ್ದೆವು. ಮಾನ್ಯ ಸಚಿವರಾದ ಬಂಡೆಪ್ಪ ಖಾಶೆಂಪೂರ್‌ರವರು ಸಹ ಬಂದಿದ್ದರು. ನಾಳೆ ದಿವಸ ವಿರೋಧ ಪಕ್ಷದ ನಾಯಕರು ನಾವು ಹೋರಾಟದ ಸಂದರ್ಭದಲ್ಲಿ ಬಂದಿರುವುದನ್ನು ಹೇಳಲಿಲ್ಲ ಎಂದು ಹೇಳಬಾರದಲ್ಲವೇ? ಹಾಗಾಗಿ ವಿರೋಧ ಪಕ್ಷದ ನಾಯಕರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ 2-3 ಪ್ರಶ್ನೆಗಳು ಏನು ಉದ್ಭವಿಸಿದೆ ಅಲ್ಲಿ ಯಾರ ರಾಜಕೀಯವೂ ಇರುವುದಿಲ್ಲ. ಈ ಮಾತನ್ನು ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರರವರು ಒಪ್ಪಿಕೊಳ್ಳುತ್ತಾರೆಯೇ?

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಒಪ್ಪಿಕೊಳ್ಳುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಕೂಡಲೇ 4 ಜನ ಸಚಿವರನ್ನು ಹಾಗೂ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನೂ ಸೇರಿಸಿಕೊಂಡು ಸ್ಥಳಕ್ಕೆ ಕಳುಹಿಸಿಕೊಟ್ಟಿದ್ದರು. ಆ ಸ್ಥಳಕ್ಕೆ ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ.ಶಿವಕುಮಾರರವರು ಸಹ ಆಗಮಿಸಿದ್ದರು. ಸುದೀರ್ಘವಾಗಿ ಅವರ ಮನವೊಲಿಸುವಂಥ ಎಲ್ಲಾ ವಿಚಾರಗಳನ್ನು ಮಾತನಾಡಿದ್ದರು. ನಂತರ ಅದೆಲ್ಲಾವನ್ನು ಮೀರಿ ಕೊನೆಗೆ ಎಲ್ಲಾ ಹೋರಾಟಗಾರರನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರವೇ ಕರೆದುಕೊಂಡು ಬಂದರು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಇವತ್ತು ಪಿಂಚಣಿ ಯಾವಾಗ ಅವಶ್ಯಕತೆ ಇದೆ ಎಂಬುದು ಬಹಳ ಮೂಲಭೂತವಾದಂಥ ಪ್ರಶ್ನೆ. ಒಬ್ಬ ಮನುಷ್ಯನಿಗೆ ಯಾವಾಗ ಆರ್ಥಿಕ ಭದ್ರತೆ ಬೇಕಾಗುತ್ತದೆ ಎಂಬುದು ಮೂಲಭೂತ ಪ್ರಶ್ನೆಯಾಗಿದೆ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ನೀಡುತ್ತಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮೊದಲು ಮಾತನಾಡಿ ಬಿಡುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ಸಭಾಧ್ಯಕ್ಷರಿಗೆ, ವಿಧಾನ ಪರಿಷತ್ತಿನಲ್ಲಿರುವ ಶಾಸಕರಿಗೆ, ವಿಧಾನ ಸಭೆಯಲ್ಲಿರತಕ್ಕಂಥ ಶಾಸಕರಿಗೆ, ಲೋಕಸಭೆಯಲ್ಲಿರುವ ಶಾಸಕರಿಗೆ ಪಿಂಚಣಿಯ ಅವಶ್ಯಕತೆ ಇದೆ. ಆದರೆ, ನೂತನ ಪಿಂಚಣಿ ಯೋಜನೆ ಅಡಿಯಲ್ಲಿ ಕೆಲಸ ಮಾಡುವ ನೌಕರರಿಗೆ ಪಿಂಚಣಿಯ ಅವಶ್ಯಕತೆ ಇಲ್ಲವೇ ಎನ್ನುವ ಪ್ರಶ್ನೆ ಇದೆ. ಆದುದರಿಂದ ಆ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡಬೇಕು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗೆ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ 5,31,124 ಹಾಗೂ ಇದರಲ್ಲಿ ಎನ್.ಪಿ.ಎಸ್. ನೌಕರರ ಸಂಖ್ಯೆ 2,06,862 ಎಂದು ಉತ್ತರವನ್ನು ಒದಗಿಸಲಾಗಿದೆ. ಈ ಒಂದು ಹೊಸ ವ್ಯವಸ್ಥೆಯನ್ನು 2004ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. 2006ನೇ ಸಾಲಿನಲ್ಲಿ ನಮ್ಮ ರಾಜ್ಯದಲ್ಲಿ implement ಮಾಡಿದ್ದಾರೆ. ಇದರ ಬಗ್ಗೆ ನಡೆಯುತ್ತಿರುವ ಚರ್ಚೆ ಏನಿದೆ, ಅದರ ಬಗ್ಗೆ ಎರಡು ರಾಜ್ಯಗಳಲ್ಲಿ ನೂತನ ಪಿಂಚಣಿ ಯೋಜನೆಯನ್ನು ಹೊರತುಪಡಿಸಿ, ಉಳಿದ ಎಲ್ಲಾ ರಾಜ್ಯಗಳಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೆ ತರುವ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ನಿನ್ನೆಯ ದಿವಸ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಈ ವಿಷಯದಲ್ಲಿ ಕೆಲವು ಸಂಘಟನೆಗಳವರು ಹಳೆಯ ಪದ್ಧತಿಯನ್ನು ಜಾರಿಗೆ ತರಬೇಕೆಂದು ನನ್ನ ಜೊತೆ ಚರ್ಚೆ ಮಾಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಎಸ್.ಎಲ್.ಭೋಜೇಗೌಡರು ಹೇಳಿದ ಹಾಗೆ ಮಾನ್ಯ ಸಚಿವರು ಮತ್ತು ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹೋಗಿ ಚರ್ಚೆ ಮಾಡಿ, ಅಂತಿಮವಾಗಿ ಸಂಜೆ ಬಂದು ಈ ವಿಚಾರದ ಬಗ್ಗೆ ನನ್ನ ಬಳಿ ಚರ್ಚೆ ಮಾಡಿದ್ದಾರೆ. ಇದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ, ಇದರಲ್ಲಿರುವ ಸಾಧಕ–ಬಾಧಕಗಳನ್ನು ನೋಡಿ ಮುಂದೆ ಏನು ತೀರ್ಮಾನ ಕೈಗೊಳ್ಳಬೇಕೆನ್ನುವುದರ ಬಗ್ಗೆ ಅಂತಿಮವಾದ ನಿರ್ಣಯ ಮಾಡುತ್ತೇವೆ. ಇವತ್ತು ಈ ವಿಷಯದಲ್ಲಿ ಸಮಿತಿ ವರದಿ ಬಂದ ನಂತರ ಎನ್.ಪಿ.ಎಸ್. ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರ ಏನು ಸೂಕ್ತವಾದ ತೀರ್ಮಾನ ತೆಗೆದುಕೊಳ್ಳುತ್ತದೆ ಎಂಬುದನ್ನು ಅವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

**ಶ್ರೀ ಆಯನೂರು ಮಂಜುನಾಥ್(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವರು ಸಮಯವನ್ನು ನಿಗದಿ ಮಾಡಲಿ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ನಿಂತಿದ್ದಾರೆ. ಮಾನ್ಯ ಸದಸ್ಯರೆ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೇ, ಹಾಗೆಯೇ 60 ದಿವಸದೊಳಗೆ ಎನ್ನುವಂಥದ್ದು ಏನಿದೆ, ಅದರ ಬಗ್ಗೆಯೂ ಹೇಳಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳಿಗೂ ಸಹ ನೂತನ ಪಿಂಚಣಿ ಯೋಜನೆಯನ್ನು ತೆಗೆದು, ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂಬ ಭಾವನೆ ಇದೆ. ಅದಕ್ಕೆ ಸಂಬಂಧಿಸಿದಂತೆ ಆರ್ಥಿಕವಾದ ವಿಚಾರವನ್ನು ಹೇಳುತ್ತಿದ್ದಾರೆ. ಅದಕ್ಕೆ ನಮ್ಮಿಂದ ಯಾವುದೇ ಗೊಂದಲ ಇಲ್ಲ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಸಮಿತಿಯನ್ನು ಏನು ರಚನೆ ಮಾಡಿದ್ದಾರೆ ಆ ಸಮಿತಿಗೆ ಇರುವ ಕಾಲಮಿತಿ ಎಷ್ಟು? ಯಾವಾಗ ಪೂರ್ಣ ಪ್ರಮಾಣದಲ್ಲಿ ಸಮಿತಿಯು ತನ್ನ ವರದಿಯನ್ನು ಕೊಡುತ್ತದೆ ಹಾಗೂ ಹಳೆಯ ಪಿಂಚಣಿಯನ್ನು ಘೋಷಣೆ ಮಾಡುತ್ತಾರೆಯೆ ಎಂಬುದಷ್ಟೇ ನಮ್ಮ ಮುಂದಿರುವ ಚರ್ಚೆಯಾಗಿದೆ.

(ಮುಂದು) . . .

**(419) 13-12-2018 SK-BNS/12.00**

**ಶ್ರೀ ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನ್ನದು ಒಂದು ಪ್ರಶ್ನೆ ಇದೆ. 2006ರ ರ ನಂತರ ಶಿಕ್ಷಣ ಸಂಸ್ಥೆಗಳ ಅಡಿಯಲ್ಲಿ ಬರುವ ಕೃಷಿ ವಿಶ್ವವಿದ್ಯಾಲಯದಲ್ಲಿ ನೇಮಕೊಂಡವರಿಗೆ ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವೈದ್ಯಕೀಯ ಕಾಲೇಜಿನಲ್ಲಿ ನೇಮಕಗೊಂಡ ವೈದ್ಯರಿಗೆ ನೂತನ ಪಿಂಚಣಿ ಯೋಜನೆಯೂ ಇಲ್ಲ ಮತ್ತು ಹಳೆಯ ಪಿಂಚಣಿ ಯೋಜನೆಯೂ ಇಲ್ಲದಿರುವುದರಿಂದ ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಿಗೆ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 2006ರ ನಂತರ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಾತಿಯಾಗಿರುವವರಿಗೆ ಸರ್ಕಾರ 10% contribution ಕೊಡಬೇಕು. ಅಲ್ಲಿನ ಶಿಕ್ಷಕರು contribution ಕೊಡುತ್ತಾರೆ. ಆದರೆ, ಸರ್ಕಾರ ಈಗ ಅದನ್ನು ಕೊಡುತ್ತಿಲ್ಲ. ದಯವಿಟ್ಟು, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ, ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ನೇಮಕವಾದರವರಿಗೂ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನೇಮಕವಾದವರಿಗೆ ಕೂಡ 2006 ರ ನಂತರ N.P.S. (New Pension Scheme) ಅಥವಾ O.P.S. (Old Pension Scheme) ಯಾವುದಾದರೂ ಕೊಡಬೇಕು. ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಏನೂ ಇಲ್ಲ. ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:–**ಮಾನ್ಯ ಸಭಾಪತಿಯವರೇ, ನಾನು ಬೆಳಿಗ್ಗೆಯಿಂದ ಕುಳಿತುಕೊಂಡು ಮಾನ್ಯ ಸದಸ್ಯರುಗಳ ಚರ್ಚೆಯನ್ನು ಕೇಳುತ್ತಿದ್ದೇನೆ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸುದೀರ್ಘವಾಗಿ ಹತ್ತಾರು ವರ್ಷಗಳಿಂದ ಇರುವ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಇರುವಂತಹ ಸಮಸ್ಯೆಗಳನ್ನು ಸರಿಪಡಿಸುವುದಕ್ಕೆ ಹೊಸದಾಗಿ ಮೈತ್ರಿ ಸರ್ಕಾರ ಬಂದು ಸುಮಾರು ಏಳು ತಿಂಗಳು ಕಳೆದಿದೆ. ಶಿಕ್ಷಣ ಕ್ಷೇತ್ರದ ಬಗ್ಗೆ ನಮಗೆ ಅಪಾರವಾದ ಗೌರವವಿದೆ. ಹಂತವಾಗಿ ಆ ಶಿಕ್ಷಕರುಗಳ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕಾಗುತ್ತದೆ, ಅದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಿ, ಏನು ತೀರ್ಮಾನಗಳನ್ನು ಕೈಗೊಳ್ಳಬೇಕು, ಸದನದಲ್ಲಿರುವ ಮಾನ್ಯ ಸದಸ್ಯರುಗಳ ಬೇಡಿಕೆಗಳು ಏನಿವೆ? ಅದರ ಬಗ್ಗೆ ಪ್ರಾಮಾಣಿಕವಾಗಿ ಸರ್ಕಾರ ಸ್ಪಂದಿಸುತ್ತದೆ. ಈ ವಿಷಯದಲ್ಲಿ ಕಾಲ ನಿಗದಿಯ ಬಗ್ಗೆ ಮಾನ್ಯ ಸದಸ್ಯರು ಆದಷ್ಟು ಬೇಗ ಕೊಡುವುದಕ್ಕೆ ನಾವು ಸಮಿತಿಯವರಿಗೆ ಹೇಳಿದ್ದೇವೆ. ಆ ಹೋರಾಟಗಾರರಲ್ಲಿರುವ ಪದಾಧಿಕಾರಿಗಳೊಬ್ಬರನ್ನು ಆ ಸಮಿತಿಯಲ್ಲಿ ಹಾಕಬೇಕು ಎನ್ನುವ ಒಂದು ಬೇಡಿಕೆಯನ್ನು ನಿನ್ನೆಯ ದಿನ ಅವರು ಚರ್ಚೆ ಮಾಡಿದ್ದಾರೆ. ಅದರ ಬಗ್ಗೆಯೂ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ತೀರ್ಮಾನ ಮಾಡುತ್ತೇವೆ.

**ಶ್ರೀ ಎಸ್. ವಿ. ಸಂಕನೂರ:–** ನಮ್ಮ ಅನುದಾನಿತ ಶಾಲೆಗಳಿಗೆ 10% Contribution from Government ಕೊಡಬೇಕು.

**ಶ್ರೀ ಹೆಚ್. ಡಿ. ಕುಮಾರಸ್ವಾಮಿ:–**ಮಾನ್ಯ ಸಭಾಪತಿಯವರೇ, 2006ರಲ್ಲಿ ಅನುದಾನಿತ ಶಾಲೆಗಳಿಗೆ ಏನಾದರೂ ಶಕ್ತಿ ತುಂಬಿದ್ದರೆ, ಅದು ನಮ್ಮ ಸರ್ಕಾರದಿಂದ ಬಂದಿರುತ್ತದೆ. ಅಲ್ಲಿಯವರೆಗೂ ಯಾರೂ ಸಹ ಜವಾಬ್ದಾರಿಯನ್ನು ತೆಗೆದುಕೊಂಡಿರಲಿಲ್ಲ. ಎಲ್ಲದರ ಬಗ್ಗೆ ಪರಿಶೀಲಿಸುತ್ತೇನೆಂಬ ಒಂದು ಮಾತನ್ನು ಇದರಲ್ಲಿ ಸೂಕ್ಷ್ಮವಾಗಿ ಹೇಳಿದ್ದೇನೆ. ನನಗೆ ಸ್ವಲ್ಪ ಸಮಯ ಕೊಡಿ. ಇವತ್ತು ಸರ್ಕಾರವನ್ನೂ ನಡೆಸಬೇಕಲ್ಲವೇ? ಸರ್ಕಾರದ ಖಜಾನೆಯಲ್ಲಿರುವ ಹಣವನ್ನು ಹಂಚಬೇಕಾದರೆ, ಎಲ್ಲಾ ಕಡೆಯ ಸಾಧಕ–ಬಾಧಕವನ್ನು ನೋಡಿಕೊಂಡು ನಾನು ಹಂಚಬೇಕು. ಮಾನ್ಯ ಸದಸ್ಯರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವ field ಅನ್ನು represent ಮಾಡುತ್ತಿದ್ದಾರೋ ಅವರು ಅಲ್ಲಿನ ಕಷ್ಟವನ್ನು ಹೇಳುತ್ತಿದ್ದಾರೆ. ಅದರೆಲ್ಲದರ ಬಗ್ಗೆ ಪ್ರಮಾಣಿಕವಾಗಿ ಮಾನವೀಯತೆಯ ದೃಷ್ಟಿಯಿಂದ ಇವತ್ತು ಪ್ರತಿಯೊಬ್ಬರೂ ಬದುಕಬೇಕು. ಆ ದೃಷ್ಟಿಯಿಂದ ಸಕಾರಾತ್ಮಕವಾಗಿ ಸ್ಪಂದಿಸುತ್ತೇನೆ.

(ಗೊಂದಲ)

**ಶ್ರೀ ಎಸ್. ವ್ಹಿ. ಸಂಕನೂರ:–** ಮಾನ್ಯ ಸಭಾಪತಿಯವರೇ, ...

**ಶ್ರೀ ಹೆಚ್. ಡಿ. ಕುಮಾರಸ್ವಾಮಿ:–**ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳುತ್ತಿದ್ದೇನೆ. ಈಗ ಮಾನ್ಯ ಸದಸ್ಯರು Provident Fund ಕುರಿತಾಗಿ ಮತ್ತೊಂದು ವಿಷಯದಲ್ಲಿ ಸಲಹೆಗಳನ್ನು ಏನು ಕೊಟ್ಟಿದ್ದಾರೆ, ನಾವು ಇದರ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

**ಪ್ರಶ್ನೆ ಸಂಖ್ಯೆ: 555**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಎಸ್.ಎಲ್. ಧರ್ಮೇಗೌಡ:–**ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು. ಈ ಒಂದು ಬಾಲ ಮಂದಿರದ ವಿಚಾರದಲ್ಲಿ ಆರು ವರ್ಷದೊಳಗಿನ ಮಕ್ಕಳು ಇಟ್ಟುಕೊಳ್ಳುವಂತಹ ವ್ಯವಸ್ಥೆ ಇರುವಂತಹದ್ದು ಮತ್ತು ಮಕ್ಕಳ ಸಹಾಯವಾಣಿ, ಬೀದಿ ಮಕ್ಕಳು, ಚಿಂದಿ ಆಯುವ ಮಕ್ಕಳು, ಏಕ ಪೋಷಕರ ಮಕ್ಕಳು ಮತ್ತು ಇವರಿಗೆ ಸಹಾಯ ಒದಗಿಸುವಂತಹ ನಿಟ್ಟಿನಲ್ಲಿ ಈಗಾಗಲೇ ಚಿಕ್ಕಮಗಳೂರಿನಲ್ಲಿ ಇದೆ. ಅಲ್ಲಿ ಬಾಲಕಿಯರ ಸಂಖ್ಯೆ ಹೆಚ್ಚು ಆದಂತಹ ಸಂದರ್ಭದಲ್ಲಿ, ಅವರನ್ನು ಹಾಸನಕ್ಕೆ ಮತ್ತು ಉಡುಪಿಗೆ ಕಳುಹಿಸಬೇಕು. ಅಲ್ಲಿ ಆರು ವರ್ಷದೊಳಗಿನ ಮಕ್ಕಳನ್ನು ಮಾತ್ರ ಇಟ್ಟುಕೊಳ್ಳುವಂತಹ ಅವಕಾಶ ಇರುವಂತಹದ್ದು. ನವೋದಯ ಎನ್ನುವಂತಹ ಖಾಸಗಿ ಸಂಸ್ಥೆಯವರಿಗೆ ಕೊಟ್ಟಿದ್ದೀರಿ. ಆರು ವರ್ಷಗಳು ಮೇಲ್ಪಟ್ಟಂತಹ ಮಕ್ಕಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲವೆಂದು, ಅವರು ಕೆಲವು ಸಂದರ್ಭದಲ್ಲಿ reject ಮಾಡುತ್ತಾರೆ. ಇದು ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ಬಂದಿದೆ. ಈ ಹಿಂದೆ ಇದ್ದಂತಹ ಸಚಿವರಿಗೂ ಮನವಿ ಮಾಡಿದ್ದರು. ಆದರೆ ಅದು ಫಲಪ್ರದವಾಗಿರುವುದಿಲ್ಲ. ದಯಮಾಡಿ ಈ ನಿಟ್ಟಿನಲ್ಲಿ ಉಡುಪಿಯಲ್ಲಿ ಬಾಲಕರಿಗೆ ಮಂದಿರವಿದೆ. ಬಾಲಕಿಯರಿಗೂ ಒಂದು ಬಾಲಮಂದಿರವನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿರುವಂತಹ ಕೆಲವು ಬಾಲಮಂದಿರಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದು, ಅಲ್ಲಿ ಅವಶ್ಯಕತೆ ಇಲ್ಲದೇ ಇದ್ದಿದ್ದನ್ನು, ಉಡುಪಿಗೆ ತಾವು ವರ್ಗಾವಣೆ ಮಾಡಿ ಪ್ರಾರಂಭ ಮಾಡಬಹುದು. ಅದಕ್ಕೆ ಮೂಲಭೂತವಾಗಿ ಬೇಕಾಗಿರುವಂತಹ ಕಟ್ಟಡ ಮತ್ತು ಎಂಟು ಕೊಠಡಿಗಳು ಖಾಲಿ ಇವೆ. ಅದನ್ನು ಏಕೆ ಉಪಯೋಗಿಸಿಕೊಳ್ಳಬಾರದು? ಈಗಾಗಲೇ ಮಾನ್ಯ ಸಚಿವರು ಮಕ್ಕಳ ಬಗ್ಗೆ ಸಹಾನೂಭೂತಿಯ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸಚಿವರು ನಮ್ಮ ಜಿಲ್ಲೆಯ ಹೆಣ್ಣು ಮಗಳಾಗಿದ್ದು, ಈ ಭಾಗದಲ್ಲಿ ಕೆಲಸವನ್ನು ಮಾಡಬೇಕು. ನಮ್ಮ ಜಿಲ್ಲೆಯ ಬಾಲಕಿಯರ ಪಾಲನೆಗೆ ಅವಕಾಶವಾಗಲಿಲ್ಲವೆಂದರೆ, ಇದು ಎಲ್ಲೋ ಒಂದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಡೆ ಕೊರತೆಯಾದಂತಾಗುತ್ತದೆ. ಮಾನ್ಯ ಸಚಿವರಿಗೆ ದಯವಿಟ್ಟು, ಮನವಿ ಮಾಡಬೇಕು. ಈ ಕೆಲಸ ಆಗುತ್ತದೆ ಎಂದು ನನಗೆ ಸಾರ್ವಜನಿಕರು ಮತ್ತು ಸಂಘ–ಸಂಸ್ಥೆಯವರು ಹೇಳಿದರು. ದಯವಿಟ್ಟು, ತಾವು ಇದನ್ನು ಮನಗಂಡು, ನಾನು ಇದರ ಬಗ್ಗೆ ತುಂಬಾ ನಿರೀಕ್ಷೆಯನ್ನು ಇಟ್ಟುಕೊಂಡಿದ್ದೇನೆಂಬ ಮಾತನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ.

**ಡಾ. ಜಯಮಾಲಾ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಬಾಲ ಮಂದಿರದಲ್ಲಿ ಹೆಚ್ಚು ಮಕ್ಕಳು ಬಂದಾಗ, ಉಡುಪಿ ಮತ್ತು ಹಾಸನ ಜಿಲ್ಲೆಗಳಿಗೆ ಕಳುಹಿಸುವಂತಹ ಪ್ರಕ್ರಿಯೆ ಇದೆ. ಈಗಾಗಲೇ, ನಮ್ಮ ರಾಜ್ಯದಲ್ಲಿ ಒಟ್ಟು 27 ಜಿಲ್ಲೆಗಳಲ್ಲಿ 29 ಬಾಲಕಿಯರ ಬಾಲಮಂದಿರಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 2 ಬಾಲಮಂದಿರಗಳು ಮನೋವಿಕಲ ಬಾಲಕಿಯರಿಗಾಗಿ ಇರುವಂತಹದ್ದಾಗಿದೆ. ಇನ್ನೂ ಎರಡು ಕೇಂದ್ರಗಳನ್ನು ಎರಡು ಜಿಲ್ಲೆಗಳಿಗೆ ವಿಸ್ತಾರ ಮಾಡಬೇಕಾಗಿದೆ. ಈಗಾಗಲೇ ಈ ಪ್ರಸ್ತಾವನೆ ಜಾರಿಯಲ್ಲಿದ್ದು, ಅದರ ಬಗ್ಗೆ ಆರ್ಥಿಕ ಇಲಾಖೆಯವರಿಗೆ ಮಂಜೂರಾತಿಗಾಗಿ ಕೇಳಿದ್ದೇವೆ. ಇದನ್ನು ಮಾಡಬೇಕೆಂಬುದು ಕೂಡ ಸಹಜ. ನಾನು ಇದರ ಬಗ್ಗೆ ಖಂಡಿತವಾಗಿಯೂ ಕ್ರಮ ವಹಿಸಿ, ಹಂತ–ಹಂತವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಶ್ರೀ ಎಸ್.ಎಲ್.ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಅಲ್ಲಿ ಖಾಲಿ ಇದೆ. Just ಒಂದು ಗೋಡೆ ಇಟ್ಟರೆ ಸಾಕು ಮತ್ತೇ ಏನೂ ಬೇಕಾಗಿಲ್ಲ.

**ಡಾ. ಜಯಮಾಲಾ ರಾಮಚಂದ್ರ:–** ಇದನ್ನು ಖಂಡಿತವಾಗಿಯೂ ಮಾಡಿಕೊಡುತ್ತೇನೆ.

**ಶ್ರೀ ಎಸ್.ಎಲ್ ಧರ್ಮೇಗೌಡ:–** ರಾಜ್ಯದಲ್ಲಿರುವ ಯಾವುದಾದರೂ ಬಾಲ ಮಂದಿರ ಉಪಯೋಗಿಸದೇ ಇದ್ದರೆ, ಅದನ್ನು ಇಲ್ಲಿಗೆ ವರ್ಗಾವಣೆ ಮಾಡಿಕೊಡಬೇಕೆಂದು ನಾನು ತಮಗೆ ವಿನಂತಿ ಮಾಡುತ್ತೇನೆ.

**ಡಾ. ಜಯಮಾಲಾ ರಾಮಚಂದ್ರ:–** ಇದನ್ನು ಮಾಡಿಕೊಡುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಮಾನ್ಯ ಪಿ.ಆರ್ ರಮೇಶ್‌ರವರದು.

**ಶ್ರೀ. ಎಂ.ಕೆ. ಪ್ರಾಣೇಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಾಲಮಂದಿರ...

**ಡಾ. ಜಯಮಾಲಾ ರಾಮಚಂದ್ರ :–** ಮಾನ್ಯ ಸಭಾಪತಿಯವರೇ, ಸದಸ್ಯರು ಬಾಲ ಮಂದಿರದ ಬಗ್ಗೆ ಹೇಳಿದ್ದಾರೆ. ಪ್ರಾಂತ್ಯವಾರುಗಳಾಗಿ ಬೀದರ್, ಉಡುಪಿ, ಬೆಂಗಳೂರು ಹಾಗೂ ಮೈಸೂರು ವಿಭಾಗವಾರು ಕೊಟ್ಟಿದ್ದೇವೆ. ಮೂವತ್ತು ಜಿಲ್ಲೆಗಳಿಗೂ ಬಾಲ ಮಂದಿರವಾಗಬೇಕು ಎನ್ನುವುದು ಇದೆ. ನಾನು ಅಲ್ಲಿಗೆ ಭೇಟಿ ನೀಡಿದಾಗ ಮಾನ್ಯ ಸದಸ್ಯರು ಹೇಳಿರುವಂತಹ ಬಾಲ ಮಂದಿರವನ್ನು ಕೂಡ ಗಮನಿಸುತ್ತೇನೆ.

**ಪ್ರಶ್ನೆ 516**
**(ಉತ್ತರವನ್ನು ಲಗತ್ತಿಸಲಾಗಿದೆ.)**

**ಶ್ರೀ ಪಿ.ಆರ್. ರಮೇಶ್:–**ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಏನೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಒಟ್ಟು ವಿದ್ಯುತ್ ಉತ್ಪಾದನೆಯ ಬಗ್ಗೆ ಅವರು ಕೊಟ್ಟಿರುವಂತಹ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಹಿತಿಯಲ್ಲಿ ಜಲವಿದ್ಯುತ್ 2014-15ನೇ ಸಾಲಿನಲ್ಲಿ ಮಿಲಿಯನ್ ಯೂನಿಟ್ ಪ್ರಮಾಣ ಸುಮಾರು ಶೇಕಡ 50 ರಿಂದ 60 ರಷ್ಟು ಇಳಿಕೆಯಾಗಿದೆ. ಎರಡನೆಯದಾಗಿ, ರಾಜ್ಯದಲ್ಲಿ ಒಟ್ಟು ವಿದ್ಯುತ್ ಉತ್ಪಾದನೆಯ ಪ್ರಮಾಣ 64,830.00 ಮಿಲಿಯನ್ ಯೂನಿಟ್‌ಗಳು ವಾರ್ಷಿಕವಾಗಿ ಉತ್ಪಾದನೆಯಾಗುತ್ತಿದೆ ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಇದು ಪ್ರತಿ ದಿನ ತೆಗೆದುಕೊಂಡರೆ, 177 ಮಿಲಿಯನ್ ಯೂನಿಟ್‌ಗಳು ಆಗುತ್ತದೆ. ನನ್ನ ನಾಲ್ಕನೇ ಪ್ರಶ್ನೆಗೆ ಏನೆಂದರೆ, ರಾಜ್ಯದಲ್ಲಿ ಪ್ರಸ್ತುತ ದಿನವಹಿ ಸರಾಸರಿ ವಿದ್ಯುತ್ ಬಳಕೆ ಪ್ರಮಾಣವು 208 ಮಿಲಿಯನ್ ಯೂನಿಟ್‌ಗಳಾಗಿದ್ದು, ಮುಂಬರುವ ಬೇಸಿಗೆ ಹಾಗೂ ಪರೀಕ್ಷಾ ಸಮಯದಲ್ಲಿ 238 ಮಿಲಿಯನ್ ಯೂನಿಟ್‌ಗಳಿಗೆ ಏರಿಕೆಯಾಗಬಹುದೆಂದು ಅಂದಾಜಿಸಲಾಗಿದೆ. ಕೇಂದ್ರ ಘಟಕಗಳಿಂದ ಮತ್ತು ರಾಜ್ಯದ ಆಂತರಿಕ ಮೂಲದ ವಿದ್ಯುತ್ ಘಟಕಗಳಿಂದ ಘೋಷಣೆಯಂತೆ ವಿದ್ಯುತ್ ಲಭ್ಯವಾದಲ್ಲಿ ಯಾವುದೇ ಕೊರತೆಯಿಲ್ಲದೆ ವಿದ್ಯುತ್ ಸರಬರಾಜು ಮಾಡಬಹುದಾಗಿದೆ ಎಂದು ಇಲಾಖೆಯವರು ಉತ್ತರದಲ್ಲಿ ಕೊಟ್ಟಿದ್ದಾರೆ. ಇಲಾಖೆಯವರು ನೀಡಿರುವ ಮೊದಲನೇ ಉತ್ತರದಲ್ಲಿಯೇ ಸುಮಾರು 30 ಕ್ಕಿಂತ ಹೆಚ್ಚಿಗೆ ಮಿಲಿಯನ್ ಯೂನಿಟ್‌ಗಳು ಕಡಿಮೆ ಇರುವಂತಹದ್ದನ್ನು ಇಲಾಖೆಯವರೇ ಉತ್ತರ ಕೊಟ್ಟಿರುವುದನ್ನು ನೋಡಿದರೆ, ಇದು ಬಹಳ ಗಂಭೀರವಾಗಿದೆ. ನಮ್ಮಲ್ಲಿ ವಿದ್ಯುತ್ ಉತ್ಪಾದನೆ ಏನಿದೆ, ಆ ಉತ್ಪಾದನಯನ್ನು ತೋರಿಸುವಂತಹದ್ದು, ಒಂದಾದರೆ, ನಾವು ಉಪಯೋಗಿಸುವಂತಹ ಪ್ರಮಾಣ ಮಿಲಿಯನ್ ಯೂನಿಟ್‌ಗಳಲ್ಲಿ ವ್ಯತ್ಯಾಸ ಇರುವಂತಹದ್ದು ಬಹಳ ಗಂಭೀರವಾದ ವಿಚಾರವಾಗಿದೆ. ಎರಡನೇಯದಾಗಿ, ಬೆಂಗಳೂರಿಗೆ 43 ರಿಂದ 48 ಮಿಲಿಯನ್ ಯೂನಿಟ್‌ಗಳ ವಿದ್ಯುತ್ ಪ್ರತಿ ದಿನ ಬೇಕು. ನನಗೆ ಅನಿಸುವುದೇನೆಂದರೆ, ಬೆಂಗಳೂರು ನಗರ ಮತ್ತು ಬೆಂಗಳೂರು ಜಿಲ್ಲೆಗೆ ಪ್ರತಿ ದಿನ more than 60 million units ಬೇಕಾಗುತ್ತದೆ. ಆದರೆ ಇಲಾಖೆ ನೀಡಿರುವ ಉತ್ತರವೇ ಬೇರೆ ಇದೆ.

(ಮುಂದು..)

(420)13.12.2018,12.10,ಟಿಸಿಹೆಚ್/ಕೆಎಸ್

**ಶ್ರೀ ಪಿ.ಆರ್.ರಮೇಶ್ (ಮುಂದು):-**

ಹಾಗಾಗಿ, ಬೆಂಗಳೂರಿನಲ್ಲಿ ಇಷ್ಟೊಂದು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯ ಅವಶ್ಯಕತೆ ಇರುವುದರಿಂದ, ಅದಕ್ಕೆ ತಕ್ಕಂತಹ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದಕ್ಕೆ ಏನಾದರೂ ಯೋಜನೆ ಇದೆಯೇ? ಉತ್ತರದಲ್ಲಿ ವಿದ್ಯುತ್ ಕೊರತೆ ಇದೆಯೆಂದು ಏನು ತೋರಿಸಿದ್ದಾರೆ, ಈ ಕೊರತೆಯನ್ನು ಯಾವ ರೀತಿ ನೀಗಿಸುತ್ತೀರಿ ಎಂಬ ಬಗ್ಗೆ ನನಗೆ ಉತ್ತರ ಕೊಡಬೇಕು.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಗೌರವಾನ್ವಿತ ಸದಸ್ಯರು ಏನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತಿನ ದಿವಸ ಅವರು ಕೇಳಿದಂತಹ ಪ್ರಶ್ನೆಗಳಿಗೆ ವರ್ಷಾವಾರು ವಿದ್ಯುಚ್ಛಕ್ತಿ ಉತ್ಪಾದನೆ ಆಗುತ್ತಿರುವ ಬಗ್ಗೆ ವಿವರಣೆಯನ್ನು ಕೊಟ್ಟಿದ್ದೇವೆ. ಇದರ ಜೊತೆಗೆ ವಿದ್ಯುಚ್ಛಕ್ತಿಯನ್ನು ಖರೀದಿ ಮಾಡಿರುವ ಬಗ್ಗೆ ಕೂಡ ಪ್ರಶ್ನೆ ಕೇಳಿದ್ದಾರೆ. ವರ್ಷಾವಾರು ಖರೀದಿ ಮಾಡಿರುವ ಬಗ್ಗೆ ಕೂಡ ಉತ್ತರದಲ್ಲಿ ವಿವರಿಸಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೆಂಗಳೂರು ನಗರಕ್ಕೆ ಸುಮಾರು 43–48 ಮಿಲಿಯನ್ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡುತ್ತಿದ್ದೇವೆ. ಇವತ್ತಿನ ದಿವಸ ಬೆಂಗಳೂರು ನಗರ ಜಿಲ್ಲೆಗೆ ಪ್ರಸಕ್ತ ವರ್ಷದಲ್ಲಿ 2,837 ಮೆಗಾವ್ಯಾಟ್ ವಿದ್ಯುಚ್ಛಕ್ತಿಯ ಗರಿಷ್ಠ ಬೇಡಿಕೆ ದಾಖಲಾಗಿರುತ್ತದೆ. ಮುಂದಿನ ದಿನಗಳಲ್ಲಿ ಬೆಂಗಳೂರು ನಗರಕ್ಕೆ ಇದರ ಪ್ರಮಾಣ 2,800–2,950 ಮೆಗಾವ್ಯಾಟ್‌ಗಳವರೆಗೆ ಏರಿಕೆ ಆಗಬಹುದು ಎನ್ನತಕ್ಕಂಥ ಅಂದಾಜು ಮಾಡಲಾಗಿದೆ. ಅದಕ್ಕಾಗಿ ಈಗಾಗಲೇ 2018–19ನೇ ಸಾಲಿಗೆ 2,000 ಮೆಗಾವ್ಯಾಟ್ ವಿದ್ಯುಚ್ಛಕ್ತಿಯನ್ನು ಹೆಚ್ಚುವರಿಯಾಗಿ ಪೂರೈಕೆ ಮಾಡಿಕೊಂಡಿದ್ದೇವೆ. ಈಗಾಗಲೇ ವಿದ್ಯುಚ್ಛಕ್ತಿ ಉತ್ಪಾದನೆ ಆಗುತ್ತಿದ್ದು ವಿದ್ಯುಚ್ಛಕ್ತಿಗೆ ಯಾವುದೇ ಕೊರತೆ ಇಲ್ಲ. ಇವತ್ತಿನ ದಿವಸ ಬೇರೆ ಬೇರೆ ಮೂಲಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಈಗಾಗಲೇ ಪಾವಗಡದ ಬಳಿ 600 ಮೆಗಾವ್ಯಾಟ್ ಸಾಮರ್ಥ್ಯದ ಸೋಲಾರ್ ವ್ಯವಸ್ಥೆಯನ್ನು 2,000 ಮೆಗಾವ್ಯಾಟ್‌ಗೆ ಹೆಚ್ಚಿಸಲು ಕೆಲಸಗಳು ಪ್ರಾರಂಭ ಆಗಿವೆ. ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ವಿದ್ಯುಚ್ಛಕ್ತಿಯ ಕೊರತೆಗಳು ಆಗದಂತೆ ಈಗಾಗಲೇ ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ. ಇವತ್ತಿನ ದಿವಸ ರಾಜ್ಯದಲ್ಲಿ ದಿನವಹಿ ಸರಾಸರಿ 208 ಯುನಿಟ್‌ಗಳಷ್ಟು ವಿದ್ಯುತ್ತನ್ನು ಸರಬರಾಜು ಮಾಡುತ್ತಿದ್ದೇವೆ. ಬೇಸಿಗೆ ಕಾಲದಲ್ಲಿ 238 ಮಿಲಿಯನ್ ವಿದ್ಯುತ್ ಬೇಕಾಗಬಹುದು ಎನ್ನತಕ್ಕಂಥ ಅಂದಾಜು ಇದ್ದು, ಅದೆಲ್ಲವನ್ನು ಸರಿದೂಗಿಸುವುದಕ್ಕೆ ಈಗಾಗಲೇ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದೇವೆ, ಯಾವುದೇ ಸಮಸ್ಯೆಗಳು ಇಲ್ಲ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂತಹ ಉತ್ತರ ಸರಿಯಾಗಿದೆ ಅಂದುಕೊಂಡರೂ ಕೂಡ ಬೆಂಗಳೂರು ನಗರದಲ್ಲಿ ನಾವು ಹಿಂದೆ Distribution Automatic System (DAS) ಏನು ಒಂದು ಮೂಲಭೂತ ವ್ಯವಸ್ಥೆಯನ್ನು ಮಾಡುವುದಿತ್ತು. ಇದರ ಕೆಲಸ ಕಾರ್ಯಗಳು ಸುಮಾರು ಐದಾರು ವರ್ಷಗಳಿಂದ ಬಹಳ ಆಮೆಗತಿಯಲ್ಲಿ ನಡೆಯುತ್ತಿದೆ. ಹಾಗಾಗಿ, ಬೆಂಗಳೂರು ನಗರಕ್ಕೆ ವಿದ್ಯುಚ್ಛಕ್ತಿ ಬೇಡಿಕೆ ಏನಿದೆ, ಅದಕ್ಕೆ ಮೂಲಭೂತ ಸೌಕರ್ಯಗಳನ್ನು ವಿದ್ಯುಚ್ಛಕ್ತಿಯ ಪ್ರಮಾಣಕ್ಕೆ ತಕ್ಕಂತೆ ಪ್ರಸರಣ ಮಾಡಬೇಕಾದರೆ, ಈಗ ತಾವು ಹೇಳಿದ ರೀತಿಯಲ್ಲಿ ಪ್ರತಿವರ್ಷ ಅಥವಾ ಎರಡು ವರ್ಷಕ್ಕೊಮ್ಮೆ ಸುಮಾರು ಶೇ.30–40 ರಷ್ಟು ಹೆಚ್ಚಳ ಆಗುತ್ತಿದೆ. ಅದಕ್ಕೆ ತಕ್ಕಂತೆ ಮೂಲಭೂತ ಸೌಕರ್ಯಗಳು, ಸರಬರಾಜು, ಸ್ವಯಂಚಾಲಿತ ವ್ಯವಸ್ಥೆ ಇರಬಹುದು, ಅಲ್ಲಿನ ಕಛೇರಿಗಳ ವ್ಯವಸ್ಥೆ ಇರಬಹುದು ಇದನ್ನು ನಾವು ಮುಂದಾಲೋಚನೆಯನ್ನು ಇಟ್ಟುಕೊಂಡು ಮಾಡುವುದು ಬಹಳ ಅವಶ್ಯಕತೆ ಇದೆ. ಇವತ್ತಿನ ದಿವಸ ಬೆಂಗಳೂರು ಸುಮಾರು 800 ಚದರ ಕಿಲೋಮೀಟರ್‌ಗಳಷ್ಟು ವಿಸ್ತಾರವಾಗಿದೆ. ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇವತ್ತಿಗೂ ಕೂಡ 2–3 ಗಂಟೆಗಳ ಕಾಲ load shedding ಇದೆ. ವಿದ್ಯುಚ್ಛಕ್ತಿ ಕೊರತೆಯಿಂದಾಗಿ ಬೋರ್‌ವೆಲ್‌ನಲ್ಲಿ ನೀರು ಸಕಾಲಕ್ಕೆ ಸಿಗುತ್ತಿಲ್ಲ. ಹಾಗಾಗಿ, ಇದನ್ನು ಸರಿದೂಗಿಸಲು ಮುಂದಾಲೋಚನೆಯನ್ನು ಇಟ್ಟುಕೊಂಡು ಈ ರೀತಿಯ ಒಂದು ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಇದರ ಜೊತೆಗೆ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂತಹ ಉತ್ತರದಲ್ಲಿ 11,000 ಮಿಲಿಯನ್ ಮೆಘಾವ್ಯಾಟ್‌ನಷ್ಟು ವಿದ್ಯುತ್ ಕಡಿಮೆ ಇರುವುದಾಗಿ ಇಲಾಖೆಯ ಅಧಿಕಾರಿಗಳು ಮಾಹಿತಿ ಕೊಟ್ಟಿದ್ದಾರೆ. ಮಾನ್ಯ ಮುಖ್ಯಂತ್ರಿಗಳು ಈ ಬಗ್ಗೆ cross verification ಅನ್ನು ಮಾಡಬಹುದು.

“ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಯಾವುದೇ ರೀತಿಯ load shedding ಇಲ್ಲ. ಕೆಲವು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂದರ್ಭಗಳಲ್ಲಿ ಹಾಗೂ ಕೆಲಸ ಕಾಮಗಾರಿಗಳು ನಡೆಯುತ್ತಿದ್ದಂತಹ ಸಮಯಗಳಲ್ಲಿ ಕೆಲವು ಭಾಗಗಳಲ್ಲಿ ಈ ರೀತಿ ಆಗಿರುತ್ತದೆ. ಅದನ್ನು load shedding ಎನ್ನುವುದಕ್ಕಾಗುವುದಿಲ್ಲ. ಕೆಲಸದ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜನ್ನು ನಿಲ್ಲಿಸಿರುತ್ತಾರೆ. ಆದ್ದರಿಂದ ಬೆಂಗಳೂರು ನಗರದಲ್ಲಿ ಯಾವುದೇ ರೀತಿಯ load shedding ಇವತ್ತಿನವರೆಗೂ ಇಲ್ಲ. ಟ್ರಾನ್ಸ್‌ಮಿಷನ್ ಲೈನ್‌ಗಳು ಮತ್ತು ಇನ್ನಾವುದೋ ಒಂದು ತಾಂತ್ರಿಕ ದೋಷಗಳಿಂದ ಕೆಲಸಗಳು ನಡೆದಂತಹ ಸನ್ನಿವೇಶಗಳಲ್ಲಿ ಒಂದು ಅಥವಾ ಎರಡು ಗಂಟೆಗಳ ಕಾಲ ವಿದ್ಯುತ್ ಸಂಪರ್ಕವನ್ನು ನಿಲ್ಲಿಸಿರುತ್ತಾರೆ ಅಷ್ಟೆ. ಆದ್ದರಿಂದ ಇವತ್ತಿನ ಪರಿಸ್ಥಿತಿಯಲ್ಲಿ ರಾಜ್ಯದಲ್ಲಿ ಕೆಲವು ತಿಂಗಳಿನಲ್ಲಿ ಉಳಿದಿರತಕ್ಕಂಥ ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಬೇರೆಯವರಿಗೆ ಮಾರಾಟ ಮಾಡತಕ್ಕಂಥ ಸಾಮರ್ಥ್ಯತೆಯನ್ನು ವಿದ್ಯುಚ್ಛಕ್ತಿ ಮಂಡಳಿಯವರು ಹೊಂದಿದ್ದಾರೆ ಎನ್ನುವ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.547**

**(ಉತ್ತರ ಲಗತ್ತಿಸಿದೆ)**

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ನಾನು ಕೇಳಿರುವಂತಹ ಪ್ರಶ್ನೆಗಳಿಗೆಲ್ಲಾ ಅವರು ಸಂಬಂಧಪಟ್ಟಂತಹ ಉತ್ತರವನ್ನು ಸದನದ ಮುಂದೆ ಇಟ್ಟಿದ್ದಾರೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರವು 2008ರಲ್ಲಿ ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಲ್ಲಿ ಪ್ರಾರಂಭ ಆಯಿತು. ಅಂದರೆ ಸುಮಾರು 10 ವರ್ಷ ಆಯಿತು. ಇದನ್ನು ಪ್ರಾರಂಭ ಮಾಡಿರುವಂತಹ ಉದ್ದೇಶ ಇರುವಂಥದ್ದು, ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿಪಡಿಸಬೇಕು, ಬಂದರು ಕೂಡ ಇದೆ, ಅಲ್ಲಿಗೆ ಹೆಚ್ಚಿಗೆ ಕೈಗಾರಿಕೆಗಳು ಬರಬೇಕು ಮತ್ತು ಕರಾವಳಿ ಜಿಲ್ಲೆಗಳಿಗೆ ಉದ್ಯೋಗ ಸೃಷ್ಟಿ ಮಾಡುವಂತಹ ಕೈಗಾರಿಕೆಗಳು ಬರಬೇಕು, ಪ್ರವಾಸೋದ್ಯಮದ ಬಳಕೆ ಆಗಬೇಕು. ಇದಕ್ಕೆ ಬೇಕಾದಂತಹ facelift ಅನ್ನು ಕೊಡಬೇಕು ಎಂದು ಕರಾವಳಿ ಪ್ರಾಧಿಕಾರವನ್ನು ಘೋಷಣೆ ಮಾಡಿದ್ದಾರೆ. ಆದರೆ, ಇತ್ತೀಚೆಗೆ ಇದರ ನಡವಳಿಕೆಯನ್ನು ನೋಡಿದಾಗ, 2008–09ರಲ್ಲಿ ಪ್ರಾರಂಭಿಕ ಅನುದಾನ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 2017–18ನೇ ಸಾಲಿನವರೆಗೆ ಆ ಅನುದಾನ ಸುಮಾರು 20 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಯಿತು. ಆದರೆ, 2017–18ನೇ ಸಾಲಿನಲ್ಲಿ 20 ಕೋಟಿ ರೂಪಾಯಿಗಳಷ್ಟು ಹಣ ಏನು ಬಿಡುಗಡೆ ಆಗಿತ್ತು, ಅದು 2018–19ನೇ ಸಾಲಿನಲ್ಲಿ 9 ಕೋಟಿ ರೂಪಾಯಿಗಳಿಗೆ ಇಳಿದಿದೆ. ಅಂದರೆ 11 ಕೋಟಿ ರೂಪಾಯಿಗಳಷ್ಟು ಅನುದಾನವನ್ನು ಬಿಡುಗಡೆ ಮಾಡಬೇಕಾಗಿತ್ತು. ಅದರೆ ಇದರ ಅರ್ಥ ಎಲ್ಲೋ ಒಂದು ಕಡೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಎನ್ನುವಂಥದ್ದು ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ ಎಂದು ಸ್ಪಷ್ಟವಾಗಿ ಬಜೆಟ್‌ನಲ್ಲಿ ಬಿಡುಗಡೆಯಾದಂತಹ ಅನುದಾನದಿಂದ ತಿಳಿದು ಬರುತ್ತದೆ. ಆದರೆ, ನಾನು ಪ್ರಶ್ನೆ ಕೇಳಿರುವುದೇನೆಂದರೆ, 2018–19ನೇ ಸಾಲಿನಲ್ಲಿ ಎಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಮಗಾರಿಗಳನ್ನು ಕೈಗೊಂಡಿದ್ದಿರಿ ಎಂದು ಕೇಳಿದ್ದೇನೆ. ಈಗ ನಾವು ವರ್ಷದ ಕೊನೆಯಲ್ಲಿ ಇದ್ದೇವೆ. ಅವರು ಏನು ಹೇಳುತ್ತಾರೆ ಎಂದರೆ, ಕಳೆದ ಬಾರಿ ಕೈಗೊಂಡಿರುವಂತಹ ಕಾಮಗಾರಿಗಳಿಗೆ ಕೊಡುವುದಕ್ಕೆ ನಮ್ಮ ಬಳಿ ದುಡ್ಡು ಇಲ್ಲ. ಹಾಗಾಗಿ, ಈ ವರ್ಷದ ಕಾಮಗಾರಿಗಳನ್ನು ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಇದರ ಅರ್ಥವೇನೆಂದರೆ, ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿದ್ದಾರೆ. ಇದರ ನಂತರದ ಬೆಳವಣಿಗೆಗಳನ್ನು ನೋಡಿದಾಗ, ಎಲ್ಲೋ ಒಂದು ಕಡೆ ಇದನ್ನು ಮುಚ್ಚುವಂತಹ ಆಲೋಚನೆಯಲ್ಲಿ ಸರ್ಕಾರ ಇದೆ ಎಂದು ನನಗೆ ಅನ್ನಿಸುತ್ತಿದೆ. 10 ವರ್ಷಗಳಿಂದ ಯಾವುದೇ Review meeting ಕೂಡ ಆಗಲಿಲ್ಲ. ಇನ್ನು ಇದಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿ ಇರಲಿಲ್ಲ. ಹಾಗಾಗಿ, ಸದರಿ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿ ಇದ್ದಾರಾ ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಪೂರ್ಣ ಪ್ರಮಾಣದ ಕಾರ್ಯದರ್ಶಿಯವರನ್ನು ನೇಮಕ ಮಾಡಲಾಗಿದೆ ಎಂದು ಹೇಳಲಾಗಿದೆ. ನಾನು ಆ ಕಾರ್ಯದರ್ಶಿಯವರನ್ನು ತಮ್ಮನ್ನು ಸದರಿ ಪ್ರಾಧಿಕಾರಕ್ಕೆ ಕಾರ್ಯದರ್ಶಿಯಾಗಿ ನೇಮಿಸಿದ್ದಾರೆಯೇ ಎಂದು ಕೇಳಿದೆನು. ಅದಕ್ಕೆ ಅವರು 'ಹೌದು ಸರ್, ನನಗೆ ಒಂದೇ ಇಲಾಖೆ ಅಲ್ಲದೇ ಬೇರೆ ಬೇರೆ 10 ಹೆಚ್ಚುವರಿ ಇಲಾಖೆಗಳಿಗೆ ಪ್ರಭಾರದಲ್ಲಿದ್ದೇನೆ' ಎಂದು ಹೇಳಿದರು. ಅಂದರೆ ಅವರು ದಿವಸಕ್ಕೆ ಅರ್ಧ ಗಂಟೆಗಳ ಕಾಲ ಮಾತ್ರ ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮಯ ಮೀಸಲಿಡಲು ಕೂಡ ಅವರಿಂದ ಸಾಧ್ಯವಾಗುವುದಿಲ್ಲ. ಪೂರ್ಣ ಪ್ರಮಾಣದಲ್ಲಿ ಒಬ್ಬರು ಇಂಜಿನಿಯರ್ ಕೂಡ ಕರ್ತವ್ಯ ನಿಯೋಜಿಸಿಲ್ಲ. ಇದನ್ನು ಪ್ರಾರಂಭ ಮಾಡಿದ ಉದ್ದೇಶವೇನೆಂದರೆ, ಯೋಜನೆಗಳ ಸಂಪೂರ್ಣ ವರದಿಗಳನ್ನು ತಯಾರಿಸಲು ಅನುವು ಮಾಡಿಕೊಡುವುದು. Detailed Project Report (DPR) ಮಾಡುವುದಕ್ಕೆ ಈ ಒಂದು ಪ್ರಾಧಿಕಾರ ಇರುತ್ತದೆ. ಆದರೆ, ಈ ಪ್ರಾಧಿಕಾರದಲ್ಲಿ ಒಬ್ಬರು ಇಂಜಿನಿಯರ್ ಮಾತ್ರ ಇರುತ್ತಾರೆ. ಬೇರೆ ಬೇರೆ ಇಲಾಖೆಗಳಲ್ಲಿ ಅಮಾನತ್ತುಗೊಂಡವರನ್ನು, ಅವರ ಮೇಲೆ ಇಲಾಖಾ ವಿಚಾರಣೆ ಬಾಕಿ ಇದ್ದವರನ್ನು ಈ ಪ್ರಾಧಿಕಾರಕ್ಕೆ ನಿಯೋಜಿಸಲಾಗುತ್ತಿದೆ. ಈ ರೀತಿಯಾಗಿ ಈ ಪ್ರಾಧಿಕಾರ ನಡೆಯುತ್ತಿದೆ. ರಾಜ್ಯದ ಹಣ ಸರಿಯಾಗಿ ಉಪಯೋಗವಾಗದೆ ದುರ್ಬಳಕೆ ಆಗುತ್ತದೆ. ಇದ್ಯಾವುದಕ್ಕೂ ಪ್ರಯೋಜನ ಇಲ್ಲದಂತಾಗಿದೆ.

ಹಾಗಾಗಿ, ನಾವು ಮಾನ್ಯ ಮುಖ್ಯಮಂತ್ರಿಗಳ ಬಳಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಸ್ತುತ ಅವರು ಈ ಒಂದು ಖಾತೆಯ ಜವಾಬ್ದಾರಿಯನ್ನು ಹೊತ್ತು ಈ ಒಂದು ಪ್ರಾಧಿಕಾರವನ್ನು ನಡೆಸುತ್ತಿರುವುದರಿಂದ, ಕಳೆದ ಬಾರಿ ಈ ಪ್ರಾಧಿಕಾರಕ್ಕೆ 20 ಕೋಟಿ ರೂಪಾಯಿಗಳ ಅನುದಾನವನ್ನೇನು ಕೊಟ್ಟಿದ್ದರು. ಈ ಬಾರಿಯು ಹಣವನ್ನು ಬಿಡುಗಡೆ ಮಾಡಬೇಕು ಎನ್ನುವುದು ಮೊದಲನೆಯದು. ಇನ್ನು ಎರಡನೆಯದಾಗಿ, ಕೊನೇಪಕ್ಷ ಸದರಿ ಪ್ರಾಧಿಕಾರಕ್ಕೆ Review meeting ಆದರೂ ಕರೆಯಬೇಕು. ಈ ಪ್ರಾಧಿಕಾರ ನಡೆಯುತ್ತದೋ, ಇಲ್ಲವೋ ಗೊತ್ತಿಲ್ಲ. ಕರಾವಳಿ ಭಾಗದ ಶಾಸಕರುಗಳನ್ನು ಕರೆದು, ಇದನ್ನು ಅಭಿವೃದ್ಧಿಪಡಿಸಲು ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂದು ಚರ್ಚೆ ಮಾಡಬೇಕು. ಸದರಿ ಪ್ರಾಧಿಕಾರಕ್ಕೆ ಸ್ವಂತ ಕಟ್ಟಡ ಕೂಡ ಇಲ್ಲ. ಮೇಜು ಮತ್ತು ಕುರ್ಚಿಗಳೆಲ್ಲಾ ಹಾಳಾಗಿವೆ. ಪುನಃ ಮೇಜು ಮತ್ತು ಕುರ್ಚಿಗಳನ್ನು ಕೂಡ ತಂದಿಲ್ಲ. ಈ ರೀತಿಯ ಪರಿಸ್ಥಿತಿಯಲ್ಲಿ ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಇದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸನ್ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಹೆಚ್ಚು ಅನುದಾನವನ್ನು ಕೊಡಬೇಕು. ಈ ಪ್ರಾಧಿಕಾರವನ್ನು revivew ಮಾಡುವುದಕ್ಕೆ ಏನು ಮಾಡಬೇಕು ಎಂದು ಅವರು ತಿಳಿಸಬೇಕು. ಬೇರೆ ಬೇರೆ ಪ್ರಾಧಿಕಾರ ಮತ್ತು ಮಂಡಳಿಗಳ ಸಭೆ ಕರೆದು ರಿವ್ಯೂ ಮಾಡಿರುತ್ತೀರಿ. ಅದೇ ರೀತಿ ಈ ಪ್ರಾಧಿಕಾರಕ್ಕೂ ಕೂಡ ಸಭೆ ಕರೆದು ರಿವ್ಯೂ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹಣದ ಕೊರತೆಯಿಂದ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳಿದ್ದಾರೆ. ಆದರೆ ಅದಕ್ಕೆ ಹಣದ ಕೊರತೆ ಏನೂ ಇಲ್ಲ. 2017–18ನೇ ಸಾಲಿನಲ್ಲಿ 20 ಕೋಟಿ ಅನುದಾನ ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರೇ, ಹೇಳಿದರು. ಈಗಾಗಲೇ, ಸುಮಾರು 43 ಕೋಟಿ 66 ಲಕ್ಷ ರೂಪಾಯಿಗಳ ಕಾಮಗಾರಿಗೆ ಮಂಜೂರಾತಿ ನೀಡಿದ್ದಾರೆ.

(ಮುಂದು)

<u>**(421)13–12–2018(12–20)ಎಂಎಂ–ಕೆಎಸ್**</u>

**ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಂದು):–**

ಆಯವ್ಯಯದಲ್ಲಿ ಹಣ ಒದಗಿಸಿರುವುದು 20 ಕೋಟಿ ರೂಪಾಯಿಗಳು. ಕಳೆದ ವರ್ಷ 43 ಕೋಟಿ ರೂಪಾಯಿಗಳಿಗೆ ಆ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಮಂಜೂರಾತಿ ಕೊಟ್ಟಿದ್ದಾರೆ. ಉಳಿದಿರುವ 23 ಕೋಟಿ ಹಣದಿಂದ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಸರ್ಕಾರದಿಂದ ಕ್ರಮ ತೆಗೆದುಕೊಂಡಿದ್ದೇವೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಕೊರತೆಯಿರುವ ಅಧಿಕಾರಿಗಳನ್ನು ಮತ್ತು ಸಿಬ್ಬಂದಿಗಳನ್ನು ಈಗಾಗಲೇ ನೇಮಕಾತಿ ಮಾಡಿದ್ದೇವೆ. ಆ ಭಾಗದ ಅಭಿವೃದ್ಧಿಗೆ ಒಂದು ಸಭೆ ಕರೆಯಬೇಕೆಂದು ಕೇಳಿದ್ದಾರೆ. ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚನೆ ಮಾಡಿದಂತಹ ಮೂಲ ಉದ್ದೇಶ ಏನಿದೆ, ಅದರಿಂದ ಎಷ್ಟರಮಟ್ಟಿಗೆ ಯಶಸ್ಸು ಕಾಣುತ್ತಿದ್ದೇವೆ, ಎಲ್ಲೆಲ್ಲಿ ಲೋಪಗಳಿವೆ ಅದನ್ನು ಸರಿಪಡಿಸುವುದಕ್ಕೆ ವರ ಸಲಹೆಯಂತೆ ತಕ್ಷಣವೇ ಸಭೆಯೊಂದನ್ನು ಕರೆಯಲು ಸಿದ್ಧವಾಗಿದ್ದೇನೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 572**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಶರಣಪ್ಪ ಮಟ್ಟೂರು:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದಾರೆ, ಅವರಿಗೆ ಅಭಿನಂದನೆಗಳು. ನನ್ನ ಉಪ ಪ್ರಶ್ನೆಯೇನೆಂದರೆ, ಬಿ.ಕೆ. ಪವಿತ್ರ ಪ್ರಕರಣದ ಆದೇಶವನ್ನು ಎಲ್ಲಾ ಕಡೆಯೂ quote ಮಾಡುತ್ತಿದ್ದೀರಿ. The relevant portion of the Order passed by the Hon'ble Supreme Court on 20th March 2018 in

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

*'MISCELLANEOUS APPLICATION NOS.696-722 OF 2018'* in ***'B.K.PAVITHRA AND ORS. Versus UNION OF INDIA AND ORS.'*** reads as follows;

*"....We do not find any ground to extend the time for implementation of the judgment on the ground of pendency of matters before a large Bench or on the ground of pendency of a proposed legislation since the judgment has attained finality.*

*Our attention has been invited to orders dated 22nd January, 2018 and 19th February, 2018 in Special Leave Petition (Civil) Nos.642-661 of 2018 (R.T. Chandramouli & Ors versus The State of Karnataka and ors) and Special Leave Petition (Civil) D.No.4001 of 2018 (L.Shashikumar and Ors.Versus State of Karnataka and ors.) of this Court wherein order of status quo has been passed. However, thereafter the very same Bench in another matter arising out of the same issue, passed the following order on 12th March,2018 in Special Leave Petition (Civil) No.7201 of 2018 (Chandranna A.& ors. Versus State of Karnataka and ors)*

> *"These matters are connected with the case of B.K.Pavithra Versus Union of India & Ors.[(2017) 4 SCC 620. It will be appropriate if these matters along with other connected matters are listed before the same Bench [Hon'ble Mr. Justice Adarsh Kumar Goel and Hon'ble Mr.Justice Uday Umesh Lalit]"*

*Accordingly, applications of the State of Karnataka for extension of time are dismissed.*

*Sh. Mukul Rohtagi, learned senior counsel fairly stated that seniority list has already been revised in compliance of judgment of this Court. Only consequential action remains to be taken. Let the same be taken within one month from today.*

*In case the judgment is not complied within one month, the Chief Secretary of the State of Karnataka may remain present in this Court on 25th April, 2018....."*

ಇದರಲ್ಲಿ ಮೀಸಲಾತಿ ಆಧಾರದ ಮೇಲೆ ಬಡ್ತಿಯನ್ನು ಹೊಂದಿರುವ ಸರ್ಕಾರಿ ನೌಕರರಿಗೆ ಎಲ್ಲಿ exceed ಆಗಿದೆಯೋ ಅಂತಹ ಇಲಾಖೆಗಳಲ್ಲಿ ಮಾತ್ರ ಬಿ.ಕೆ. ಪವಿತ್ರ ಪ್ರಕರಣದ ಆದೇಶ ಅನ್ವಯವಾಗುತ್ತದೆ ಎಂಬ ಸಲಹೆಯನ್ನು ಕೊಡಬಯಸುತ್ತೇನೆ ಇದು ಮೊದಲನೆಯದು. ಎರಡನೆಯದಾಗಿ, ತಾವು ಕೂಡ fair ಆಗಿ ಇದರಲ್ಲಿ ಹೇಳಿರುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಯಲ್ಲಿ ಉಪಯೋಗಿಸಕೂಡದು"

ಅಭಿನಂದನೆಗಳು. ಅಧಿನಿಯಮ 2017 ದಿನಾಂಕ 23-6-2018ರಂದು ಜಾರಿಗೆ ಬಂದಿರುತ್ತದೆ. ಇದರಲ್ಲಿ, some of the employees who have taken the benefit of promotion, in view of the directions issued by the Hon'ble Supreme Court, aggrieved by that Order passed by the Government in 2017, has been challenged before the Hon'ble Supreme Court ಎನ್ನುವ ಮಾತನ್ನು ಸಹ ತಾವು ಹೇಳಿದ್ದೀರಿ. ಪ್ರೌಢಶಾಲೆಗಳಲ್ಲಿ ಕೆಲಸ ಮಾಡುವ ಸಹ ಶಿಕ್ಷಕರಿಗೆ ಮುಖ್ಯೋಪಾಧ್ಯಾಯರ ಬಡ್ತಿಯಲ್ಲಿ ತೊಂದರೆಯಾಗಿರುವುದರಿಂದ ಮೂರು ವರ್ಷಗಳಿಂದ ಬಡ್ತಿಯನ್ನು ಕೊಟ್ಟಿಲ್ಲ. ವಿಶೇಷವಾಗಿ ಹೈದರಾಬಾದ್-ಕರ್ನಾಟಕದಲ್ಲಿ ಹಾಗೇ ನಿಂತಿದೆ. ಬೇರೆ ಭಾಗಗಳಲ್ಲಿ ಕೂಡ ಈ ರೀತಿ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನನ್ನ ಮನವಿಯೇನೆಂದರೆ, ಇದರಿಂದ ಗುಣಾತ್ಮಕವಾದ ಶಿಕ್ಷಣವನ್ನು ಕೊಡುವುದಕ್ಕೆ ಆಗುತ್ತಿಲ್ಲ, ಬಡ್ತಿಗೆ ಅರ್ಹತೆಯಿದ್ದರೂ ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ. ಮೂರನೇ ಉಪಪ್ರಶ್ನೆಯೇನೆಂದರೆ, ನಿಯಮ 32ರಡಿಯಲ್ಲಿ ಬಡ್ತಿ ಕೊಟ್ಟರೆ ಸದರಿ ಪ್ರಕರಣದ ಬಗ್ಗೆ ತಮಗೆ ಗೊತ್ತಿದೆ, ತಮಗೂ ಕೂಡ ಅದರ ಬಗ್ಗೆ ಒಳ್ಳೆಯ ಜ್ಞಾನ, ಕಾಳಜಿ ಇದೆ. ಇದನ್ನೂ ನಿಯಮ 32ರಡಿ ಬಡ್ತಿ ಕೊಡುವುದಕ್ಕೆ ನಿರ್ದೇಶನ ಕೊಡುವುದಕ್ಕೆ ಆಗುವುದೇ ಎಂಬ ಮಾತನ್ನು ಕೇಳಬಯಸುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನ್ಯಾಯಾಲಯದ ಕೆಲವು ತೀರ್ಪುಗಳನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಹಲವಾರು ರಿಟ್ ಅರ್ಜಿಗಳು ಸುಪ್ರೀಂ ಕೋರ್ಟ್‌ನ ಮುಂದೆ ಇರುವ ಹಿನ್ನೆಲೆಯಿಂದ ಮತ್ತು ಎರಡು ವರ್ಗದ ಜನರಲ್ಲಿರುವ ದೊಡ್ಡ ಮಟ್ಟದ ಭಿನ್ನಾಭಿಪ್ರಾಯಗಳು, ಹೋರಾಟಗಳ ಹಿನ್ನೆಲೆಯಲ್ಲಿ ಈಗಾಗಲೇ ಸುಪ್ರೀಂ ಕೋರ್ಟ್‌ನ ಮುಂದೆ ತಿಂಗಳಿನಲ್ಲಿ 2-3 ದಿನ ರಿಟ್‌ಗಳ ಚರ್ಚೆಯಾಗುತ್ತಿದ್ದು, ಸರ್ಕಾರದಲ್ಲಿ ಬಡ್ತಿ ವಿಷಯದಲ್ಲಿ ಇರುವ ಗೊಂದಲವನ್ನು ನಿವಾರಣೆ ಮಾಡುವುದಕ್ಕೆ ನ್ಯಾಯಾಲಯದ ತೀರ್ಪು ಬರುವವರೆಗೆ ಯಾವುದೇ ಬಡ್ತಿಯನ್ನು ಕೊಡಬಾರದು ಎಂಬ ನಿರ್ಧಾರ ಮಾಡಿ ಸರ್ಕಾರದಿಂದ ಆದೇಶ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಸುಮಾರು 1,100ಕ್ಕೂ ಹೆಚ್ಚಿನ ಮುಖ್ಯೋಪಾಧ್ಯಾಯರ ಬಡ್ತಿ ನೆನೆಗುದಿಗೆ ಬಿದ್ದಿರುವುದು ನನ್ನ ಗಮನದಲ್ಲಿದೆ. ಇದಕ್ಕೆ ಆದಷ್ಟು ಬೇಗ ಸ್ಪಷ್ಟವಾದ ತೀರ್ಮಾನವನ್ನು ಪಡೆಯಬೇಕೆಂದು ನಮ್ಮ Advocate General ರವರು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ಪ್ರತಿಯೊಂದು ಪ್ರಕರಣ ಬಂದಾಗಲೂ ಅವರೇ ಖುದ್ದಾಗಿ ಹೋಗುತ್ತಿದ್ದಾರೆ. ಮುಖ್ಯಕಾರ್ಯದರ್ಶಿಯವರು ಈ ವಿಷಯವನ್ನು ಪ್ರತಿ ದಿನವೂ ಗಮನಿಸುತ್ತಿದ್ದಾರೆ. ಆದಷ್ಟು ಬೇಗ ಇದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಆಡಳಿತ ಮಂಡಳಿ ಒಂದೇ ಒಂದು ಕಾಲೇಜು ಅಥವಾ ಪ್ರೌಢಶಾಲೆಗಳಿದ್ದರೆ ಅಲ್ಲಿ ರೋಸ್ಟರ್ ಅನ್ವಯವಾಗುವುದಿಲ್ಲ. ಯಾರು ಹಿರಿಯ ಶಿಕ್ಷಕರಿರುತ್ತಾರೆ ಅಥವಾ ಯಾರು ಹಿರಿಯ ಉಪನ್ಯಾಸಕರಿರುತ್ತಾರೆ ಅವರು ಸಹಜವಾಗಿ ಪ್ರಾಚಾರ್ಯರಾಗುತ್ತಾರೆ. Single Management ನಲ್ಲಿ ರೋಸ್ಟರ್ ಅನ್ವಯವಾಗದಿರುವುದರಿಂದ ನಿವೃತ್ತಿಯ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊನೆಯ 2–3 ವರ್ಷದಲ್ಲಿ ಮುಖ್ಯ ಶಿಕ್ಷಕರು ಪ್ರಾಂಶುಪಾಲರಾಗುತ್ತಾರೆ. ಅವರಿಗೆ ಈ ರೋಸ್ಟರ್ ಯಾವ ಕಾರಣಕ್ಕೂ ಅನ್ವಯವಾಗುವುದಿಲ್ಲ. ಇದು ಅನುದಾನಿತ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ. ಆದ್ದರಿಂದ ಇವುಗಳನ್ನು clear ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಅನುದಾನಿತ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ ಎನ್ನುವುದು ಒಂದು ಭಾಗ. ಈ ಸಮಸ್ಯೆ ಸೂಕ್ಷ್ಮವಾದ ವಿಚಾರವಾಗಿದೆ. ಆದ್ದರಿಂದ ತೀರ್ಪು ಬರುವವರೆಗೆ ಬಡ್ತಿ ಕೊಡುವುದನ್ನು ನಿಲ್ಲಿಸಿ ಸರ್ಕಾರದಿಂದ ಆದೇಶ ಮಾಡಲಾಗಿದೆ. ನ್ಯಾಯಾಲಯದ ತೀರ್ಪನ್ನು ನೋಡಿ ಒಂದು ತೀರ್ಮಾನಕ್ಕೆ ಬರುತ್ತೇವೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರು ತಂದಿರುವ ವಿಚಾರವೇನೆಂದರೆ, Single management ಇದ್ದಾಗ ಅಲ್ಲಿ competition ಪ್ರಶ್ನೆ ಬರುವುದಿಲ್ಲ. Promotions shall be based on the seniority list there.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:–** ಕಾನೂನಿನ ವ್ಯಾಪ್ತಿಯೊಳಗೆ ಅವಕಾಶಗಳಿದ್ದರೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅದನ್ನು ಸರಿಪಡಿಸಿಕೊಡಲು ಪ್ರಯತ್ನ ಮಾಡುತ್ತೇನೆ.

**ಚುಕ್ಕೆ ಪ್ರಶ್ನೆ ಸಂಖ್ಯೆ: 489**
**(ಉತ್ತರದ ಪ್ರತಿ ಲಗತ್ತಿಸಿದೆ)**

**ಶ್ರೀ ಅ. ದೇವೇಗೌಡ:–** ಮಾನ್ಯ ಸಭಾಪತಿಯವರೇ, ರಾಜ್ಯದ 6ನೇ ವೇತನ ಆಯೋಗದ ವರದಿಯನ್ನು ಜಾರಿಗೆ ತಂದಿದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ ವೇತನದಲ್ಲಿ ಆಗಿರುವ ತಾರತಮ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಒಪ್ಪಿಕೊಂಡಿದ್ದಾರೆ ಆದರೆ ಇದು ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಬೇರೆ ರಾಜ್ಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರಿಗೆ ಸಮಾನಾಂತರವಾಗಿ ವೇತನವನ್ನು ನೀಡುತ್ತಾ ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ ಈಗಾಗಲೇ, Head of the Department ಆಗಿರುವಂತಹ ಐ.ಎ.ಎಸ್ ಅಧಿಕಾರಿಗಳಿಗೆ, ಕಾರ್ಯದರ್ಶಿಗಳಿಗೆ 7ನೇ ವೇತನ ಆಯೋಗವನ್ನು ಜಾರಿಗೆ ತಂದಿದ್ದಾರೆ. ದಯಮಾಡಿ ತಮ್ಮ ಅಧಿಕಾರಾವಧಿಯಲ್ಲಿ ಶ್ರೀ ಎಂ.ಆರ್. ಶ್ರೀನಿವಾಸ ಮೂರ್ತಿಯವರ ವೇತನ ಆಯೋಗದ ಶಿಫಾರಸ್ಸನ್ನು ಜಾರಿಗೊಳಿಸಬೇಕು, ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಸರ್ಕಾರಿ ನೌಕರರು ಕೆಲಸ ನಿರ್ವಹಿಸಬೇಕಾದರೆ ಸರ್ಕಾರಿ ನೌಕರರ ವೇತನ ತಾರತಮ್ಯವನ್ನು ಸರಿಪಡಿಸಬೇಕೆಂದು ಆಗ್ರಹಿಸುತ್ತೇನೆ. ಜೊತೆಗೆ 1 ಲಕ್ಷದ 50 ಸಾವಿರ ಹುದ್ದೆಗಳು ಖಾಲಿ ಇರುವುದರಿಂದ KPSC (Karnataka Public Service Commission) ಮುಖಾಂತರ ಆಯ್ಕೆ ಮಾಡುವುದನ್ನು ಬದಲಾಯಿಸಬೇಕೆಂದು ಈ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ. 2–3 ವರ್ಷವಾದರೂ UPSC (Union Public Service Commission) ಮಾದರಿಯಲ್ಲಿ ಕೆ.ಎ.ಎಸ್ ಆಗಿರಬಹುದು, ಬೇರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುದ್ದೆಗಳಾಗಿರಬಹುದು ನೇಮಕ ಮಾಡುವುದನ್ನು ಪೆಂಡಿಂಗ್ ಇಟ್ಟುಕೊಂಡು ಮಧ್ಯೆ ಒಂದು ಏಜೆನ್ಸಿಯ ರೀತಿ ಕಾಯುತ್ತಾ, ಯಾವುದೇ ಹುದ್ದೆಗಳನ್ನು ಭರ್ತಿ ಮಾಡದೇ ಕುಳಿತಿರುವುದು ತಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರಿ ನೌಕರರಿಗೆ ವಸತಿ ಸೌಲಭ್ಯ ಒದಗಿಸುವುದು, ಕೇಂದ್ರೀಯ ವಿದ್ಯಾಲಯದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡುವುದು, ಹಾಗೂ Central Government Health Scheme (CGHS) ಅನ್ನು introduce ಮಾಡಿದ್ದಾರೆ. ನಿವೃತ್ತರಾಗಿರುವ ನೌಕರರಿಗೂ ಆರೋಗ್ಯ ವಿಮೆಯನ್ನು ಮಾಡಿದ್ದಾರೆ.

(ಮುಂದು)

(422) 13-12-2018/12-30/ಕೆಹೆಚ್-ಜಿಆರ್

**ಶ್ರೀ ಅ.ದೇವೇಗೌಡ (ಮುಂದು):-** ನಮ್ಮ ರಾಜ್ಯ ಸರ್ಕಾರದಲ್ಲಿ ಯಾವುದೇ ನೀತಿ ಇಲ್ಲ. ನಮ್ಮ ಸರ್ಕಾರಿ ನೌಕರರು ನಿವೃತ್ತಿ ಹೊಂದಿದ ತಕ್ಷಣವೇ ಅವರ ಜೀವಿತಾವಧಿ ಕಡಿಮೆಯಾಗುತ್ತಿದೆ ಎಂಬುದು ನನ್ನ ಭಾವನೆ. ನಾನೂ ಸರ್ಕಾರಿ ನೌಕರನಾಗಿದ್ದೆ. ಈಗಾಗಲೇ ನನ್ನ ಜೊತೆಯಲ್ಲಿದ್ದವರು ಸಹ ಸತ್ತು ಹೋಗಿದ್ದಾರೆ. ಇದರಿಂದ ಬಹಳ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ದಯಮಾಡಿ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಕೊಡಬೇಕು. ಕೇಂದ್ರ ಸರ್ಕಾರದಲ್ಲಿ ಕೆಲಸ ಮಾಡುವವರ ವಿದ್ಯಾರ್ಹತೆ ಮತ್ತು ವೃತ್ತಿ ಒಂದೇ, ಆದರೆ ಅವರಿಗೂ ಮತ್ತು ನಮಗೂ ವ್ಯತ್ಯಾಸ ಏಕೆ ಬರುತ್ತಿದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ರಾಜ್ಯ ಸರ್ಕಾರದಲ್ಲಿ ಏನಾಗಿದೆ ಎಂದರೆ ವೇತನ ಆಯೋಗವನ್ನು 5 ವರ್ಷಕ್ಕೊಮ್ಮೆ ಸರಿಯಾಗಿ ರಚನೆ ಮಾಡದೇ, 5 ರಿಂದ 8 ವರ್ಷಗಳು ತೆಗೆದುಕೊಳ್ಳುತ್ತಿರುವುದರಿಂದ ಈ ರೀತಿಯ ವ್ಯತ್ಯಾಸಗಳಾಗಿವೆ. ಇದನ್ನೆಲ್ಲಾ ಬಿಟ್ಟು ತಮ್ಮ ಅಧಿಕಾರ ಅವಧಿಯಲ್ಲಿ ಕೇಂದ್ರ ಸರ್ಕಾರದ ವೇತನ ಆಯೋಗವನ್ನು ಇನ್ನು ಮುಂದೆ ಜಾರಿಗೆ ತರುವಂತಹ ಕೆಲಸ ಮಾಡಬೇಕು. ರಾಜ್ಯ ಮತ್ತು ಕೇಂದ್ರ ಸರ್ಕಾರದ ವೇತನದಲ್ಲಿ ಶೇಕಡಾ 80 ರಷ್ಟು ವ್ಯತ್ಯಾಸ ಇದೆ. ಇದರ ಬಗ್ಗೆ ಮಾಹಿತಿಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ನೌಕರರ ಸಂಘದ ಅಧ್ಯಕ್ಷರನ್ನು ಕರೆಯಿಸಿ ಇದನ್ನು ಸರಿಪಡಿಸಬೇಕೆಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಕೇಂದ್ರ ಸರ್ಕಾರದ ವೇತನ ಆಯೋಗದ ನಿಯಮಾವಳಿಗಳಿಗೂ ಮತ್ತು ರಾಜ್ಯ ಸರ್ಕಾರದ ವೇತನ ಆಯೋಗದ ನಿಯಮಾವಳಿಗಳಿಗೂ ವ್ಯತ್ಯಾಸವಿದೆ. ಮೊದಲಿನಿಂದಲೂ ಅವರದೇ ಆದಂತಹ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಪ್ರತಿ 10 ವರ್ಷಕ್ಕೊಂದು ಬಾರಿ ವೇತನ ಆಯೋಗದ ಬಗ್ಗೆ ಶಿಫಾರಸ್ಸು ಮಾಡವಂತಹದ್ದು ಏನಿದೆ? ರಾಜ್ಯ ಸರ್ಕಾರದಲ್ಲಿ 5 ರಿಂದ 6 ವರ್ಷಗಳಿಗೊಂದು ಬಾರಿ ವೇತನ ಆಯೋಗವನ್ನು ರಚನೆ ಮಾಡಿ ಅವರು ಕೊಡುವಂತಹ ಶಿಫಾರಸ್ಸನ್ನು ನಾವು ಪಾಲಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ರೀತಿಯಲ್ಲಿ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾವು ಕೆಲವು ನಿಯಮಾವಳಿಯನ್ನು ರಚನೆ ಮಾಡಿಕೊಂಡಿದ್ದೇವೆ. ಆ ವ್ಯಾಪ್ತಿಯಲ್ಲಿಯೇ ನಾವು ಕೆಲಸ ಮಾಡುತ್ತಿದ್ದೇವೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಈಗಾಗಲೇ 6ನೇ ವೇತನ ಆಯೋಗದವರು ಕೊಟ್ಟಿರುವಂತಹ ಶಿಫಾರಸ್ಸನ್ನು ಜಾರಿಗೆ ತರುವುದಕ್ಕೆ ಸರ್ಕಾರ ಏನು ತೀರ್ಮಾನ ಮಾಡಿದೆ. ಮಾನ್ಯ ಸದಸ್ಯರು ಕೆಲವು ಸಣ್ಣ-ಪುಟ್ಟ lapses ಗಳ ಬಗ್ಗೆ ಏನು ಹೇಳುತ್ತಿದ್ದಾರೆ? ತಾವು ಏನು ಕಳುಹಿಸಿದ್ದೀರಿ. ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಪದಾಧಿಕಾರಿಗಳನ್ನು ಕರೆಯಿಸಿ ನಾನು ಚರ್ಚೆ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 452**

**(ಉತ್ತರವನ್ನು ಲಗತ್ತಿಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಒದಗಿಸಿದ್ದಾರೆ. ಸರ್ಕಾರಿ ಶಾಲೆ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಕಲಿಯುತ್ತಿರುವಂತಹ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು 2006-07ನೇ ಸಾಲಿನಲ್ಲಿಯೇ ಈ ರಾಜ್ಯದಲ್ಲಿ ಒಂದು ಮಹತ್ತರ ತೀರ್ಮಾನವನ್ನು ಕೈಗೊಂಡು, ದಿನಾಂಕ:01/06/1987 ರಿಂದ 1994-95ನೇ ಸಾಲಿನವರೆಗೂ ಪ್ರಾರಂಭವಾಗಿರುವಂತಹ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳಿಗೆ ಸುಮಾರು ರೂ.385.00 ಕೋಟಿ ಅನುದಾನವನ್ನು ಅಂದು ಕೊಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಯವರಿಗೆ ಆ ಕೊಡುಗೆ ಸಲ್ಲುತ್ತದೆ. ಆದರೆ ಇಂದು 1995 ರಿಂದ 2001ನೇ ಸಾಲಿನವರೆಗೆ ಇರುವಂತಹ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿರುವಂತಹ ಮಕ್ಕಳಿಗೆ ಸರ್ಕಾರದಿಂದ ಉಚಿತವಾಗಿ ಶಿಕ್ಷಣ ಸಿಗುತ್ತಿದೆ. ಆದರೆ ಆರ್.ಟಿ.ಇ., ಅಡಿಯಲ್ಲಿ ಯಾವ ಮಕ್ಕಳು ಸೇರ್ಪಡೆಯಾಗಿದ್ದಾರೋ, ಅವರಿಗೆ ಉಚಿತ ಶಿಕ್ಷಣ ಸೌಲಭ್ಯ ಮತ್ತು ವಿದ್ಯಾರ್ಥಿ ವೇತನ ಮಾತ್ರ ಸಿಗುತ್ತಿದೆ. ಸಮವಸ್ತ್ರ, ಪಠ್ಯಪುಸ್ತಕ, ನೋಟುಬುಕ್ ಮತ್ತು ಇದೇ ಮಾನ್ಯ ಮುಖ್ಯಮಂತ್ರಿಯವರು ತಂದಂತಹ ಸೈಕಲ್‌ನ್ನು ಒಂದು ಹೊಸ ಯೋಜನೆ ಇದ್ಯಾವುದೂ ಕೂಡ ಈ ಅನುದಾನರಹಿತ ಶಾಲೆಗಳಲ್ಲಿ ಕಲಿಯುತ್ತಿರುವಂತಹ ಬಡ ಮಕ್ಕಳಿಗೆ ಸಿಗುತ್ತಿಲ್ಲ. ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉಚಿತವಾಗಿ ಯಾವುದಾದರೂ ಸೌಲಭ್ಯವನ್ನು ಕಲ್ಪಿಸಬೇಕೆಂಬುದು ನನ್ನ ಮೊದಲನೇ ಪ್ರಶ್ನೆಯಾಗಿದೆ.

ಎರಡನೆಯದು, ಪ್ರಮುಖವಾಗಿ 1995ನೇ ಸಾಲಿನಿಂದ 2001ನೇ ಸಾಲಿನವರೆಗೆ ಪ್ರಾರಂಭವಾಗಿರುವಂತಹ ಅನುದಾನರಹಿತ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟಿವೆ ಎಂಬುದರ ಬಗ್ಗೆ ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಈ ಹಿಂದೆ ಶಾಲೆಗಳಿಗೆ ರೂ.385.00 ಕೋಟಿಗಳನ್ನು ಕೊಟ್ಟಿದ್ದಾರೋ, ಅದರಲ್ಲಿ ಶೇಕಡಾ 50 ರಷ್ಟು ಭಾಗ ಹಣವನ್ನು ಕೊಟ್ಟರೆ, ಈ ಎಲ್ಲಾ ಶಾಲೆಗಳಿಗೂ ಕೂಡ ವೇತನಾನುದಾನವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಇವತ್ತಿನ ದಿವಸ ಎಸ್.ಎಸ್.ಎಲ್.ಸಿ., ಮತ್ತು ಪಿ.ಯು.ಸಿ., ಶಾಲೆಗಳ ಶೇಕಡಾವಾರು ಫಲಿತಾಂಶ ಸರ್ಕಾರಿ ಶಾಲೆಗಳಿಗಿಂತ ಮತ್ತು ಅನುದಾನ ರಹಿತ ಶಾಲೆಗಳಿಗಿಂತ ಉತ್ತಮವಾದ ಫಲಿತಾಂಶ ಬರುತ್ತಿದೆ. ಇವತ್ತಿನ ದಿವಸ ಶೇಕಡಾ 50 ರಷ್ಟು ಹೆಚ್ಚು ಪರ್ಸೆಂಟ್ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಫಲಿತಾಂಶಗಳು ಬರುತ್ತಿದೆ. ಈ ಫಲಿತಾಂಶಕ್ಕೆ ಕಾರಣ ಆ ಶಾಲೆಗಳಲ್ಲಿ ಕೆಲಸ ಮಾಡುವಂತಹ ಭೋದಕರು. ಅದರಲ್ಲಿ ಕೆಲವರು ಇಂದಲ್ಲಾ ನಾಳೆ ನಮಗೆ ಅನುದಾನ ಸಿಗುತ್ತದೆ ಎಂದು ಉಚಿತವಾಗಿ ಪಾಠ ಮಾಡುತ್ತಿದ್ದಾರೆ. ಕೆಲವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೋದಕರು 10-15 ವರ್ಷಗಳಿಂದ ರೂ.2000 ಗಳಿಗೆ ದುಡಿಯುತ್ತಿದ್ದಾರೆ. ದಯಮಾಡಿ ಈ ಅವಧಿಯಲ್ಲಿ ಪ್ರಾರಂಭವಾಗಿರುವಂತಹ ಶಾಲೆಗಳಿಗೆ ಆಶಾಕಿರಣವನ್ನು ತೋರಬೇಕು. ತಾವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅಂದುಕೊಂಡಂತಹ ಅನುದಾನದಿಂದ ಏಕಕಾಲದಲ್ಲಿ 20 ತಿಂಗಳಿನಲ್ಲಿ 26 ಸಾವಿರ ಶಿಕ್ಷಕರಿಗೆ ಉದ್ಯೋಗವಕಾಶವನ್ನು ಮಾಡಿಕೊಟ್ಟಿದ್ದೀರಿ. ಅದರಲ್ಲೂ ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳ ಬಗ್ಗೆ ಮತ್ತು ಆ ಶಾಲೆಗಳಲ್ಲಿ ಕಲಿಯುತ್ತಿರುವಂತಹ ಮಕ್ಕಳ ಬಗ್ಗೆ ತಾವು ತೋರಿದಂತಹ ಉದಾರತೆ ಇವತ್ತಿನ ದಿವಸ ದೊಡ್ಡ ಇತಿಹಾಸ ಕರ್ನಾಟಕ ರಾಜ್ಯದಲ್ಲಿ ಇದೆ. ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ ಎಂದು ಅವರು ಉತ್ತರವನ್ನು ಕೊಟ್ಟಿದ್ದಾರೆ. ದಯವಿಟ್ಟು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ತಾವು ಚಿಂತಕರು, ಶಿಕ್ಷಣದ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡಿರುವಂತಹವರು, ಅನುದಾನರಹಿತ ಕನ್ನಡ ಮಾಧ್ಯಮ ಶಾಲೆಗಳಿಗೆ ವೇತನಾನುದಾನವನ್ನು ಕೊಡುವುದರ ಬಗ್ಗೆ ಪರಿಶೀಲಿಸಬೇಕು. ಮುಂದಿನ ಮುಂಗಡ ಪತ್ರದಲ್ಲಾದರೂ ಕೂಡ ವೇತನಾನುದಾನವನ್ನು ಕೊಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರಲ್ಲಿ ಉತ್ತರವನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಹೆಚ್.ಡಿ. ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ದಿನಾಂಕ:01-06-1987 ರಿಂದ 1994-95ನೇ ಸಾಲಿನವರೆಗೆ ಇದ್ದಂತಹ ಅನುದಾನ ರಹಿತ ಶಾಲಾ-ಕಾಲೇಜುಗಳಿಗೆ 2006ನೇ ಸಾಲಿನಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗಲೇ ಒಂದು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಆ ಒಂದು ತೀರ್ಮಾನದಲ್ಲಿ ಸುಮಾರು 179 ಕಾಲೇಜುಗಳು ಸೇರಿರಲಿಲ್ಲ. ತಾವೂ ಕೂಡ 10 ವರ್ಷಗಳಿಂದ ಅರ್ಜಿಗಳನ್ನು ಸಲ್ಲಿಸುತ್ತಲೇ ಬಂದಿದ್ದೀರಿ. ಮತ್ತೆ ಮೈತ್ರಿ ಸರ್ಕಾರ ರಚನೆಯಾದ ಮೇಲೆ ಒಂದು ಸಭೆಯನ್ನು ಮಾಡಲಾಯಿತು. ಸರ್ಕಾರದ ಮುಂದೆ 10 ವರ್ಷಗಳಿಂದ 179 ಶಾಲೆಗಳು ಮತ್ತು ಕಾಲೇಜುಗಳು ಮನವಿಯನ್ನು ಸಲ್ಲಿಸಿಕೊಂಡೇ ತಿರುಗುತ್ತಿದ್ದವು. ಈಗಾಗಲೇ ಅವುಗಳನ್ನು onetime settlement ಮಾಡುವುದಕ್ಕೆ ನಾವು ಪರಿಗಣಿಸಿದ್ದೇವೆ. 1995ನೇ ಸಾಲಿನಿಂದ 2001ನೇ ಸಾಲಿನವರೆಗೆ ತಾವು ಏನು ಕೇಳುತ್ತಿದ್ದೀರಿ. ಅದರ ಬಗ್ಗೆ ಸಧ್ಯದಲ್ಲಿ ಸರ್ಕಾರದ ಮುಂದೆ ಪ್ರಸ್ತಾವನೆ ಇರುವುದಿಲ್ಲ. ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳೇನಿವೆ? ಕನ್ನಡ ಶಾಲೆಯ ಮಕ್ಕಳಿಗೆ ಉತ್ತೇಜನ ಕೊಡುವುದಕ್ಕೆ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಎಷ್ಟರ ಮಟ್ಟಿಗೆ set right ಮಾಡುವುದಕ್ಕೆ ಸಾಧ್ಯ ಎಂಬುದನ್ನು ಪರಿಶೀಲನೆ ಮಾಡಿ ತೀರ್ಮಾನಕ್ಕೆ ಬರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಅನುದಾನ ರಹಿತ ಶಾಲೆಗಳಿಗೆ ಶಾಸಕರ ನಿಧಿಯಿಂದ ಕಟ್ಟಡ, ಕೊಠಡಿಗಳಿಗೆ ಅನುದಾನವನ್ನು ಕೊಡುತ್ತಿದ್ದೇವೆ. ಇನ್ನು ಕೆಲವು ಕಡೆ ಕನ್ನಡ ಶಾಲೆಗಳು ನಡೆಯುತ್ತಿದ್ದು, ಇತ್ತೀಚಿನ ದಿವಸಗಳಲ್ಲಿ ಮಾನ್ಯ ಶಾಸಕರ ನಿಧಿಯಿಂದ ಅನುದಾನವನ್ನು ಕೊಡುವುದರ ಬಗ್ಗೆ ಸುತ್ತೋಲೆಯಲ್ಲಿ ತೆಗೆದು ಹಾಕಲಾಗಿದೆ. ಅದಕ್ಕೆ ಪುನಃ ಅವಕಾಶ ಕೊಟ್ಟರೆ, ನಮ್ಮ ಕಡೆಯಿಂದ ಯಾರಾದರೂ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಶಾಲೆಯವರು ಬಂದು ಕಟ್ಟಡವನ್ನು ಕಟ್ಟಬೇಕೆಂದರೆ ಒಂದಿಷ್ಟು ಅನುದಾನವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂಬುದು ನನ್ನ ಆಗ್ರಹವಾಗಿದೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, 1995ನೇ ಸಾಲಿನ ನಂತರ ಪ್ರಾರಂಭವಾಗಿರುವ ಶಾಲೆಗಳಿಗೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಅನುದಾನವನ್ನು ಕೊಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲವೆಂದು ಹೇಳಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುವುದೇನೆಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿರುವಂತಹ ಮ್ಯಾನೇಜ್‌ಮೆಂಟ್‌ಗಳು ನಡೆಯುತ್ತಿವೆ. 1995ನೇ ಸಾಲಿನಿಂದ ಮುಂದೆ ಸಾಕಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಾಲೆಗಳು ಪದವಿ ಪೂರ್ವ ಕಾಲೇಜುಗಳನ್ನು ನಡೆಸಿದ್ದರೂ ಸಹ ಭೋದಕರಿಗೆ ವೇತನವನ್ನು ಕೊಡುತ್ತಿಲ್ಲ. ಇದ್ದರಿಂದ ಮ್ಯಾನೇಜ್‌ಮೆಂಟ್‌ಗಳಿಗೂ ತೊಂದರೆ ಆಗುತ್ತಿದೆ. ಈಗಾಗಲೇ ಮಾನ್ಯ ಮರಿತಿಬ್ಬೇಗೌಡರವರು ಹೇಳಿದ ಹಾಗೆ ಫಲಿತಾಂಶ ನೂರಕ್ಕೆ ನೂರರಷ್ಟು ಬರುತ್ತಿದೆ. ಇದಕ್ಕೆ ಸರ್ಕಾರ ಸ್ಪಂದಿಸಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಮೊದಲನೆಯದಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮ್ಯಾನೇಜ್‌ಮೆಂಟ್‌ಗಳಿಗಾದರೂ ಈ ಸೌಲಭ್ಯಗಳನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಕಾಶ್ ರಾಥೋಡ್ ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಅಂಶಗಳ ಬಗ್ಗೆ ಹೇಳುವುದದರೆ, ಶಾಸಕರ ನಿಧಿಯಿಂದ ಕೊಡುವಂತಹ ಅನುದಾನವನ್ನು ನಿಲ್ಲಿಸಿದ್ದಾರೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಅದರ ಬಗ್ಗೆ ಖಾಸಗಿ ಅನುದಾನ ರಹಿತ ಶಾಲೆಗಳ ಬಗ್ಗೆ ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೂ ನಾನು ಸರ್ಕಾರದ ಜೊತೆ ಚರ್ಚೆ ಮಾಡಿ ತೀರ್ಮಾನಕ್ಕೆ ಬರುತ್ತೇನೆ. ಮಾನ್ಯ ಪ್ರಕಾಶ್ ರಾಥೋಡ್‌ರವರು ಹೇಳಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಶಾಲೆಗಳನ್ನು ನಡೆಸುತ್ತಿರುವುದಕ್ಕೆ ಯಾವ ಒಂದು ಶಕ್ತಿಯನ್ನು ತುಂಬಬೇಕಾಗುತ್ತದೆ ಎಂಬುದನ್ನು ಗಮನಿಸುತ್ತೇನೆ.

(ಮುಂದು)

**(423) 13-12-2018 (12-40) ಎಸ್‌ಪಿಆರ್-ಜಿಆರ್**

**ಪ್ರಶ್ನೆ ಸಂಖ್ಯೆ 565**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಆಯನೂರು ಮಂಜುನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದ ಕೆಲಸವು ಪ್ರಾರಂಭವಾಯಿತು. 11 ವರ್ಷಗಳ ಅವಧಿಯ ನಂತರವೂ ಸಹ ಸದರಿ ಕೆಲಸಕ್ಕೆ ಪೂರ್ಣ ಪ್ರಮಾಣದ ಮುಕ್ತಿ ದೊರೆತಿಲ್ಲ. 2015 ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಒಪ್ಪಂದವನ್ನು ರದ್ದು ಮಾಡಿರುವುದಾಗಿ ಹಾಗೂ ಹೊಸ ಟೆಂಡರ್‌ನ್ನು ಕರೆದ ನಂತರ ಕೆಲಸ ಪ್ರಾರಂಭಿಸುವುದಾಗಿಯೂ ಸಹ ಲಿಖಿತ ಉತ್ತರದಲ್ಲಿ ತಿಳಿಸಲಾಗಿದೆ. ಈ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಕಾಲಹರಣವಾಗಿದೆ. ಯಾವುದೇ ಪ್ರದೇಶವು ಆರ್ಥಿಕವಾಗಿ ಬೆಳವಣಿಗೆಯಾಗಬೇಕು ಎನ್ನುವಂತಹ ವಿಚಾರದಲ್ಲಿ ಅದಕ್ಕೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರಕವಾಗುವಂತೆ ಎಲ್ಲಾ ರೀತಿಯ ಸೌಲಭ್ಯ ಹಾಗೂ ಉತ್ತೇಜನಗಳನ್ನು ಕೊಡಬೇಕು. ಆ ದೃಷ್ಟಿಯಿಂದ ಸರ್ಕಾರವು ಟೆಂಡರ್‌ನ್ನು ಪುನಃ ಆಹ್ವಾನಿಸಿ, ಯಾವಾಗ ಕೆಲಸವನ್ನು ಪ್ರಾರಂಭ ಮಾಡುತ್ತದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕೆಂದು ನಾನು ಕೋರುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣವನ್ನು ಪ್ರಾರಂಭ ಮಾಡುವ ಯೋಜನೆಗೆ 2006 ನೇ ಸಾಲಿನಲ್ಲಿ ಅಧಿಕಾರದಲ್ಲಿದ್ದ ಸರ್ಕಾರವು ತೀರ್ಮಾನವನ್ನು ತೆಗೆದುಕೊಂಡು, ಟೆಂಡರ್ ಪ್ರಕ್ರಿಯೆಯನ್ನು ಜಾರಿಗೊಳಿಸಿತ್ತು. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಗುತ್ತಿಗೆದಾರರು ಸದರಿ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುವ ವಿಚಾರದಲ್ಲಿ ಸ್ವಲ್ಪ ಹಿಂದೆ ಸರಿದಿರುವ ಹಿನ್ನೆಲೆಯಲ್ಲಿ ಟೆಂಡರ್ ಕರಾರು ರದ್ದಾಗಿರುತ್ತದೆ. ಇವತ್ತಿನ ದಿವಸ ದೇಶದಲ್ಲಿ 'ಉಡಾನ್' ಎಂಬಂತಹ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಇವುಗಳ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಅಂಶಗಳ ಬಗ್ಗೆ ಗಮನ ವಹಿಸಲಾಗುವುದು. ಸದರಿ ವಿಮಾನ ನಿಲ್ದಾಣ ಕೆಲಸಕ್ಕೆ ವಶಪಡಿಸಿಕೊಂಡ ಭೂಮಿಯಲ್ಲಿ ಎರಡು ಕಾರ್ಖಾನೆಗಳನ್ನು ನಡೆಸಲು ಅನುಮತಿ ನೀಡಲಾಗಿದೆ ಎಂದು ಈಗಷ್ಟೆ ಪ್ರವಾಸೋದ್ಯಮ ಇಲಾಖೆಯ ಮಾನ್ಯ ಸಚಿವರು ನನ್ನ ಗಮನ ಸೆಳೆದಿದ್ದು, ಈ ವಿಚಾರವು ನನಗೆ ತಿಳಿದಿಲ್ಲ. ಈ ಅಂಶದ ಬಗ್ಗೆ ಲಿಖಿತ ಉತ್ತರದಲ್ಲಿ ಎಲ್ಲಿಯೂ ಸಹ ನಮೂದಿಸಿಲ್ಲ. ಈ ವಿಚಾರದಲ್ಲಿ ಅತೀ ಶೀಘ್ರದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಸರ್ಕಾರವು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸುವ ಪ್ರಸ್ತಾವನೆಗಳಿವೆ. ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣ ನಿರ್ಮಿಸಲು ಸರ್ಕಾರವು ಈಗಾಗಲೇ ಹಣ ವಿನಿಯೋಗಿಸಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಹೀಗಾಗಿ ತಕ್ಷಣದಲ್ಲೇ ಸದರಿ ಭೂಮಿಯನ್ನು ಯಾವ ರೀತಿಯಾಗಿ ಸದ್ಬಳಕೆ ಮಾಡಬೇಕು ಎಂಬ ಬಗ್ಗೆ ಗಮನ ಹರಿಸಿ, ಕಾಮಗಾರಿಯನ್ನು ಪ್ರಾರಂಭಿಸಲು ಪ್ರಯತ್ನಿಸಲಾಗುವುದು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಬೆಳಗಾವಿಯಲ್ಲಿಯೇ ಚಳಿಗಾಲದ ಅಧಿವೇಶನವು ನಡೆಯುತ್ತಿದೆ. ಬೆಳಗಾವಿಯ ನೂತನ ವಿಮಾನ ನಿಲ್ದಾಣದ ಉದ್ಘಾಟನಾ ಸಮಾರಂಭಕ್ಕೆ ಕೇಂದ್ರ ಸಚಿವರಾಗಿದ್ದ ದಿವಂಗತ ಅನಂತ ಕುಮಾರ್ ರವರು ಆಗಮಿಸಿದ್ದರು. ಅದೇ ಸಮಾರಂಭಕ್ಕೆ ಕೇಂದ್ರದ ಮಾನ್ಯ ವಿಮಾನಯಾನ ಮಂತ್ರಿಗಳು ಹಾಗೂ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳೂ ಸಹ ಹಾಜರಾಗಿದ್ದರು. ಆ ಸಂದರ್ಭದಲ್ಲಿ ಬೆಳಗಾವಿ ವಿಮಾನ ನಿಲ್ದಾಣಕ್ಕೆ ವೀರ ಮಹಿಳೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರನ್ನು ಇಡಬೇಕು ಎಂಬ ಪ್ರಸ್ತಾವದ ಬಗ್ಗೆ ಚರ್ಚೆಯಾಯಿತು. ಆಗ ರಾಜ್ಯ ಸರ್ಕಾರವು ಸದರಿ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ಕೇಂದ್ರಕ್ಕೆ ಕಳುಹಿಸಲಿ, ಆಗ ನಾವು ಅದನ್ನು ಅನುಮೋದಿಸಿ, ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರನ್ನು ಇಡುತ್ತೇವೆ ಎಂಬುದಾಗಿ ದಿವಂಗತ ಅನಂತ ಕುಮಾರ್ ರವರು ಹೇಳಿರುವುದನ್ನು ನಾವು ಇಲ್ಲಿ ಸ್ಮರಿಸಬಹುದು. ಈ ಹಿನ್ನೆಲೆಯಲ್ಲಿ ಸರ್ಕಾರವು ಈ ವಿಚಾರದಲ್ಲಿ ತೀರ್ಮಾನವನ್ನು

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಂಡು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು ಎಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

**ಶ್ರೀ ಆರ್.ಪ್ರಸನ್ನ ಕುಮಾರ್:-** ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರವು ಶಿವಮೊಗ್ಗ ವಿಮಾನ ನಿಲ್ದಾಣ ನಿರ್ಮಾಣದ ಬಗ್ಗೆ ತಾಂತ್ರಿಕ ಸಮಸ್ಯೆಗಳಿವೆ ಎಂಬುದಾಗಿ ಹೇಳಿತ್ತು. ಸದರಿ ಅಂಶವು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ?

**ಶ್ರೀ ಎಸ್.ರುದ್ರೇಗೌಡ(ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶಿವಮೊಗ್ಗ ವಿಮಾನ ನಿಲ್ದಾಣದ ಬಗ್ಗೆ ಕೆಲವು ಮಾಹಿತಿಗಳನ್ನು ನಾನು ಸದನಕ್ಕೆ ನೀಡಲಿಚ್ಛಿಸುತ್ತೇನೆ. ಸುಮಾರು 650 ಎಕರೆಯಷ್ಟು ಜಮೀನನ್ನು ಈ ಕೆಲಸಕ್ಕಾಗಿ ವಶಪಡಿಸಿಕೊಳ್ಳಲಾಗಿದೆ. ಈ ಹಿಂದೆ ಟೆಂಡರ್‌ನ್ನು ಬೇರೆ ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಒಟ್ಟಾರೆಯಾಗಿ ಕಾಮಗಾರಿಯ ವೆಚ್ಚವನ್ನು ಕಡಿತಗೊಳಿಸುವ ದೃಷ್ಟಿಯಿಂದ ಸದರಿ ನಿಲ್ದಾಣದ ರನ್ ವೇ orientation ಗೂ ಹಾಗೂ ಮಾಡಿರುವ ಕೆಲಸಕ್ಕೆ ಯಾವುದೇ ರೀತಿಯಾದ ಸಂಬಂಧ ಇರಲಿಲ್ಲ. ಮಾನ್ಯ ಜಿ.ಎಂ.ಸಿದ್ದೇಶ್ವರವರು ಈ ಹಿಂದೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇಂತಹ ತಾಂತ್ರಿಕ ಸಮಸ್ಯೆಯ ಬಗ್ಗೆ ಸಮಿತಿಯನ್ನು ನೇಮಕ ಮಾಡಿದ್ದರು. ಈ ವಿಚಾರದ ಬಗ್ಗೆ ಸಮಿತಿಯೊಂದಿಗೆ ವಿಸ್ತೃತವಾದ ಚರ್ಚೆಯನ್ನು ಮಾಡಿ ಅವಶ್ಯವಿದ್ದ ಮಾಹಿತಿಯನ್ನು ನೀಡಿದ್ದೇವೆ. ಸದರಿ ವಿಮಾನ ನಿಲ್ದಾಣದಲ್ಲಿ ಬಳಿ ಇರುವ ಕಾರ್ಖಾನೆಗಳ ಚಿಮಣಿಗಳು ಅಡ್ಡ ಬರುತ್ತವೆ ಎಂಬುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಮಾಹಿತಿಯನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕು. ವಾಸ್ತವವಾಗಿ ಅಲ್ಲಿ ಈ ರೀತಿಯ ಚಿತ್ರಣವಿಲ್ಲ. ಓರಿಯಂಟೇಷನ್‌ನ್ನು ಸರಿಯಾಗಿ ಮಾಡಿದರೆ, ಯಾವುದೂ ಸಹ ಅಡ್ಡಿಯಾಗುವುದಿಲ್ಲ. ಶಿವಮೊಗ್ಗದಲ್ಲಿನ ಕೈಗಾರಿಕೆಗಳ ಬೆಳವಣಿಗೆಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದಲೇ ಅಲ್ಲಿ ವಿಮಾನ ನಿಲ್ದಾಣ ಮಾಡಲಾಗುತ್ತಿದೆ. ಈ ಕಾರಣದಿಂದಾಗಿ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಪರಿಶೀಲನೆ ಮಾಡಬೇಕೆಂದು ತಮ್ಮ ಮುಖಾಂತರ ಮನವಿಯನ್ನು ಮಾಡುತ್ತೇನೆ.

**ಶ್ರೀ ಹೆಚ್.ಡಿ.ಕುಮಾರಸ್ವಾಮಿ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರನ್ನು ಇಡಬೇಕೆಂಬ ಪ್ರಸ್ತಾವನೆಯನ್ನು ನಾವು ಈಗಾಗಲೇ ಕೇಂದ್ರದ ವಿಮಾನಯಾನ ಮಂತ್ರಾಲಯಕ್ಕೆ ಕಳುಹಿಸಿದ್ದೇವೆ. ಆದರೆ ಅದಕ್ಕೆ ಅನುಮೋದನೆ ದೊರೆತಿಲ್ಲ. ಈ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳು ನನಗೆ ನೀಡಿದ್ದು, ಅದನ್ನು ಸದನದ ಗಮನಕ್ಕೆ ತರಲಿಚ್ಛಿಸುತ್ತೇನೆ. ಆದಾಗ್ಯೂ ಸಹ ಈ ವಿಚಾರದಲ್ಲಿ ಮತ್ತೊಮ್ಮೆ ಪ್ರಯತ್ನ ಮಾಡಲಾಗುವುದು. ವಿಮಾನ ನಿಲ್ದಾಣದ ಮರು ನಾಮಕರಣಕ್ಕೆ ಯಾವುದೇ ಹಣ ವ್ಯಯವಾಗುವುದಿಲ್ಲ. ಬೆಳಗಾವಿ ವಿಮಾನ ನಿಲ್ದಾಣಕ್ಕೆ ಕಿತ್ತೂರು ರಾಣಿ ಚೆನ್ನಮ್ಮನವರ ಹೆಸರು ಇಡುವುದರಿಂದ ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಇದಕ್ಕೆ ನನ್ನ ಸಹಮತಿ ಇದೆ. ವಿಮಾನಯಾನ ಮಂತ್ರಾಲಯಕ್ಕೆ ಕೇವಲ ಪ್ರಸ್ತಾವನೆಯನ್ನು ಕಳುಹಿಸುವುದಲ್ಲದೇ ಮುಂದಿನ ಬಾರಿ ದೆಹಲಿಗೆ ಭೇಟಿ ನೀಡಿದಾಗ, ನಾನೇ ಖುದ್ದಾಗಿ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿ ಈ

ವಿಚಾರದ ಬಗ್ಗೆ ಮಾತನಾಡಿ, ಸದರಿ ಪ್ರಸ್ತಾವನೆಗೆ ಒಪ್ಪಿಗೆ ನೀಡಿ ಎಂಬುದಾಗಿ ಮತ್ತೊಂದು ಬಾರಿ ಮನವಿ ಮಾಡುತ್ತೇನೆ. ಮುಂದುವರೆದಂತೆ, ನನಗೆ ಬಂದ ಮಾಹಿತಿಯನ್ವಯ ಶಿವಮೊಗ್ಗ ವಿಮಾನ ನಿಲ್ದಾಣದ ಕೆಲಸಕ್ಕೆ ಸಂಬಂಧಪಟ್ಟಂತೆ ಹಲವಾರು ತಕರಾರುಗಳಿವೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಹೇಳಿರುವ ಮಾಹಿತಿಯನ್ನು ಪಡೆದುಕೊಳ್ಳುತ್ತೇನೆ. ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ಯಾವ ರೀತಿಯ ಭೂಮಿಯ ಲಭ್ಯತೆ ಇದೆ, ಒಂದು ವೇಳೆ ತಾಂತ್ರಿಕ ಸಮಸ್ಯೆಗಳಿದ್ದರೆ, ಅವುಗಳನ್ನು ಯಾವ ರೀತಿಯಾಗಿ ಸರಿಪಡಿಸಬಹುದು ಎಂಬ ಅಂಶಗಳ ಬಗ್ಗೆ ಸಭೆಯೊಂದನ್ನು ಕರೆದು ಅಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

**ಸಭಾಪತಿಯವರು:–** ಪ್ರಶ್ನೋತ್ತರ ಅವಧಿ ಪೂರ್ಣಗೊಂಡಿದೆ.

**ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**ಡಾ॥ ಜೈಮಾಲ ರಾಮಚಂದ್ರ (ಸಭಾನಾಯಕರು):–**ಮಾನ್ಯ ಸಭಾಪತಿಯವರೆ, ದಿನಾಂಕ: 13ನೇ ಡಿಸೆಂಬರ್ 2018 ಸಮೂಹ–4ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 127 ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರಗಳನ್ನು ಲಗತ್ತಿಸಲಾಗಿದೆ)

**3. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು**

**ಅ) ವಿಷಯ:– ಆರೋಗ್ಯ ಇಲಾಖೆಯಲ್ಲಿನ ಗುತ್ತಿಗೆ ನೌಕರರಿಗೆ ವೇತನ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡುವ ಕುರಿತು**

* * *

**ಶ್ರೀ ಘೋಟ್ನೆಕರ ಶ್ರೀಕಾಂತ ಲಕ್ಷ್ಮಣ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ನೌಕರರಿಗೆ ವೇತನದ ಜೊತೆಗೆ ಇತರ ಸೌಲಭ್ಯಗಳನ್ನು ಕಲ್ಪಿಸಲು ಒಂದು ನೀತಿಯನ್ನು (H.R.Policy) ಮಾಡಬೇಕಾಗಿದ್ದು, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಇದನ್ನು ಮಾಡಬೇಕೆಂದು ಹಲವು ಸುತ್ತೋಲೆಗಳನ್ನು ಕೇಂದ್ರ ಸರ್ಕಾರ ಕಳುಹಿಸಿದ್ದು ಹರಿಯಾಣ ರಾಜ್ಯ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಅದನ್ನು ಜಾರಿಗೆ ತರಲಾಗಿದೆ. ಅದರ ಜೊತೆಗೆ ಕರ್ನಾಟಕದಲ್ಲಿ ದಿನಗೂಲಿ ನೌಕರರಿಗೆ ಇರುವ ರೀತಿಯ ಭದ್ರತೆ ಮತ್ತು ಸಮಾನ ವೇತನವನ್ನು ಕಲ್ಪಿಸಲು ಸರ್ಕಾರಕ್ಕೆ ಯಾವ ಅಡ್ಡಿಯೂ ಇಲ್ಲ. ಆರೋಗ್ಯ ಇಲಾಖೆಯ ಎಲ್ಲಾ ಹಂತದ ಎಲ್ಲಾ ರೀತಿಯ ಗುತ್ತಿಗೆ (ಸುಮಾರು 30,000 ಕ್ಕೂ ಹೆಚ್ಚು) ನೌಕರರು ಅಕ್ಟೋಬರ್ 25 ರಂದು ಈಗಾಗಲೇ ರಾಜ್ಯ ಮತ್ತು ರಾಷ್ಟ್ರವ್ಯಾಪಿ ಒಂದು ದಿನದ ಹೋರಾಟವನ್ನು ಹಮ್ಮಿಕೊಂಡು ಮನವಿ ಸಲ್ಲಿಸಿದ್ದು, ಗುತ್ತಿಗೆ ನೌಕರರು ಸಂಪೂರ್ಣವಾಗಿ ಸಂಘಟಿತಗೊಳ್ಳುತ್ತಿದ್ದು, ಈ ಹಿಂದೆಯೇ ಅಕ್ಟೋಬರ್ 25 ರಂದು ಸಂಪೂರ್ಣ ಶಾಂತಿಯುತವಾದ ಎಲ್ಲರಿಗೂ ಆರೋಗ್ಯ ನೌಕರರಿಗೆ ಭದ್ರತೆ ಘೋಷಣೆಯಡಿ ನಡೆದ ಐತಿಹಾಸಿಕವಾದ ಹೋರಾಟ ಮಾಡಿ ಮಾನ್ಯ ಮುಖ್ಯಮಂತ್ರಿಗಳು, ಆರೋಗ್ಯ ಮಂತ್ರಿಗಳು, ಇಲಾಖೆಯ ಆಯುಕ್ತರೆಲ್ಲರಿಗೂ ಜಿಲ್ಲಾಧಿಕಾರಿಗಳ ಮುಖಾಂತರ ಮನವಿಗಳನ್ನು ತಲುಪಿಸಿರುತ್ತಾರೆ. ಎಲ್ಲಾ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪ್ರಮುಖ ಇಲಾಖೆ ಹಾಗೂ ಸರ್ಕಾರದ ಕಾರ್ಯಕ್ರಮಗಳನ್ನು ತಳಹಂತದಲ್ಲಿ ಅನುಷ್ಠಾನ ಮಾಡುವಲ್ಲಿ ನಮ್ಮ ಗುತ್ತಿಗೆ ನೌಕರರ ಸೇವೆ ಪ್ರಮುಖವಾದುದು. ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ನೀಡುತ್ತಿರುವ ಇವರಿಗೆ ಎಲ್ಲಾ ಹಕ್ಕುಗಳನ್ನು ಹಾಗೂ ಸರ್ಕಾರದ ಸೇವಾ ನಿಯಮಗಳ ರೀತಿಯಲ್ಲಿ ಸೇವಾ ಭದ್ರತೆ ನೀಡಿ, ಈ ವರ್ಗದ ಮೇಲೆ ಆಗುತ್ತಿರುವ ಶೋಷಣೆಗಳಿಗೆ ಕಾಯ್ದೆಯ ಮುಖಾಂತರ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಆರೋಗ್ಯ ಸಚಿವರ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಡಾ||ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆ.

**ಆ)ವಿಷಯ:– ಮಡಿಕೇರಿ ನಗರಸಭೆ ವ್ಯಾಪ್ತಿಯು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಮನೆ ನಿರ್ಮಾಣ ಮಾಡಲು ನಗರಾಭಿವೃದ್ಧಿ ಇಲಾಖೆ ಸುತ್ತೋಲೆಯಿಂದ ತೊಂದರೆಯಾಗಿರುವ ಬಗ್ಗೆ**

* * *

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಗರಾಭಿವೃದ್ಧಿ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ದಿನಾಂಕ: 04/05/2017 ರಲ್ಲಿ ಹೊರಡಿಸಲಾದ ಸುತ್ತೋಲೆಯಂತೆ ಭೂ ಪರಿವರ್ತನೆ ಅಥವಾ ಲೇಔಟ್ ಪ್ಲಾನ್ ಅನುಮೋದನೆ ಆಗದ ಜಾಗದಲ್ಲಿ ಕಟ್ಟಡ ನಿರ್ಮಿಸಲು ಅನುಮತಿ ನೀಡದಂತೆ ಆದೇಶ ನೀಡಲಾಗಿತ್ತು. ಆದರೆ ಈ ಆದೇಶವನ್ನು ವಿರೋಧಿಸಿ ಮಡಿಕೇರಿ ನಗರಸಭೆಯು ಗುಡ್ಡಗಾಡು ಪ್ರದೇಶವಾಗಿರುವುದರಿಂದ ಕೊಡಗಿನ ಮಟ್ಟಿಗೆ ಈ ನಿರ್ಣಯವನ್ನು ಕೈಬಿಡಲು ಆಗ್ರಹಿಸಲಾಗಿತ್ತು ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಹ ನೀಡಲಾಗಿತ್ತು.

ಆದರೆ ಈ ಸುತ್ತೋಲೆ ಬಂದು ಒಂದೂವರೆ ವರ್ಷ ಕಳೆದರೂ ಇನ್ನೂ ಈ ವಿಷಯದಲ್ಲಿ ಸರ್ಕಾರ ಒಂದು ಸ್ಪಷ್ಟವಾದ ನಿರ್ಧಾರವನ್ನು ನೀಡದಿರುವುದರಿಂದ ಮಡಿಕೇರಿ ವ್ಯಾಪ್ತಿಯ ಎಲ್ಲಾ ನಾಗರೀಕರು ಬವಣೆ ಪಡುವಂತಹದಾಗಿದೆ. ಏಕೆಂದರೆ ತುಂಬಾ ಶಿಥಿಲವಾದ ಮನೆಗಳನ್ನು ಕೆಡವಿ ಹೊಸ ಮನೆ ಕಟ್ಟಬೇಕೆಂದರೆ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಈ ಸುತ್ತೋಲೆ ಅನ್ವಯ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ.

ಮಡಿಕೇರಿ ನಗರದಲ್ಲಿಯೇ ಬಹಳಷ್ಟು ಅರ್ಜಿಗಳು ತಿರಸ್ಕೃತಗೊಂಡಿರುತ್ತವೆ. ಜನರು ಜಾಗ ಹೊಂದಿದ್ದರೂ ಸಹ ಮನೆಗಳನ್ನು ಕಟ್ಟದಂತಹ ಸ್ಥಿತಿ ನಿರ್ಮಾಣವಾಗಿದೆ. ಇದೇ ರೀತಿಯಲ್ಲಿ ಮುಂದುವರೆದರೆ ಅನಧಿಕೃತ ಮನೆಗಳು ಮತ್ತು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಟ್ಟಡಗಳು ನಿರ್ಮಾಣವಾಗುವ ಸಾಧ್ಯತೆಗಳು ಹೆಚ್ಚಿವೆ. ಅನುಮತಿಗಾಗಿ ಕಾಯುತ್ತಿರುವವರಿಗೆ ಮನೆಗಳು ಕುಸಿದು ಬೀಳುವ ಸಾಧ್ಯತೆಗಳು ಇವೆ.

ಆದ್ದರಿಂದ ರಾಜ್ಯ ಸರ್ಕಾರವು ಈ ಸುತ್ತೋಲೆಯನ್ನು ಹಿಂಪಡೆದು ಅಥವಾ ಮಲೆನಾಡಿನ ಗುಡ್ಡಗಾಡು ಪ್ರದೇಶಗಳಿಗೆ ಇದರಿಂದ ವಿನಾಯಿತಿಯನ್ನು ನೀಡುವಂತೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಈ ಮೂಲಕ ಆಗ್ರಹಿಸುತ್ತೇನೆ.

(ಮುಂದು)

(424)13–12–2018(12–50)ಎಲ್‌ಎಂ/ಎಂಡಿ

**ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಗಳೆ, ಈ ಸಮಸ್ಯೆ ಬರಿ ಮಡಿಕೇರಿ ಜಿಲ್ಲೆಯದಲ್ಲ. ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಕಾನೂನು ಇಲಾಖೆಯ ಜೊತೆಯಲ್ಲಿ ನಾವು ಚರ್ಚೆ ಮಾಡಿ process ಮಾಡುತ್ತಿದ್ದೇವೆ. The Karnataka *Municipalities Act, 1964 section 387* ಪ್ರಕಾರ ಯಾರು ಮನೆಗಳನ್ನು ಕಟ್ಟುತ್ತಿದ್ದಾರೆ, ಅವರು Karnataka *Town and Country Planning Act* ಪ್ರಕಾರ ಅನುಮತಿ ತೆಗೆದುಕೊಳ್ಳಬೇಕು ಎಂದು ಕಾನೂನು ಇತ್ತು. ಆದರೆ ಅವತ್ತಿನ ಜನರಿಗೆ ಅದು ಗೊತ್ತಿರಲಿಲ್ಲ, ಅದಕ್ಕಾಗಿ ಅವರು ಅನುಮತಿಯನ್ನು ತೆಗೆದುಕೊಂಡಿರುವುದಿಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ 2017ರಲ್ಲಿ ಈ ಆದೇಶ ಬಂದಿರುವುದರಿಂದ ಎಲ್ಲರಿಗೂ ಅಡಚಣೆಯಾಗಿದೆ. ತದನಂತರ ಮೀಸಲಾತಿ ಮಾಡಿದ ರೀತಿಯಲ್ಲಿ ರಾಮನಗರದಲ್ಲಿ ಮಾಡಿ ಸುಮಾರು 1090 ಖಾತೆಗಳನ್ನು ಕೊಟ್ಟರು, ಲೋಕಾಯುಕ್ತದವರು ತಕ್ಷಣ ಹೋಗಿ ಕೇಸ್ ಹಾಕಿ 1090 ಖಾತೆಗಳನ್ನು ರದ್ದುಪಡಿಸಿ, ಇಡೀ ರಾಜ್ಯಕ್ಕೆ ಕೊಟ್ಟಿದ್ದಾರೆ. ಕಾನೂನು ಮತ್ತು ನಿಯಮಗಳ ಸಮಸ್ಯೆ ಇರುವುದರಿಂದ, ಇದನ್ನು ಚರ್ಚೆ ಮಾಡುವಾಗ ಅಕ್ರಮ–ಸಕ್ರಮ ಬರುತ್ತದೆ ಎನ್ನುವುದು ಜನರಿಗೆ ಗೊತ್ತಿರಲಿಲ್ಲ. ಈಗ ಇದನ್ನು ಸರಿ ಮಾಡಿ ಕೊಡಲು ಹೇಳಿದ್ದೇವೆ. ಇದರ ಬಗ್ಗೆ ನಾವು ಕಾನೂನು ಇಲಾಖೆ ಜೊತೆಯಲ್ಲಿ ಚರ್ಚೆ ನಡೆಸಿ ಆದಷ್ಟು ಬೇಗ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುತ್ತೇವೆ.

**ಶ್ರೀ ಎಸ್.ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಗಳೆ, ಮಡಿಕೇರಿಯಲ್ಲಿ ನಡೆದಿರುವ ಅತಿವೃಷ್ಟಿ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅದರ ಪಕ್ಕದಲ್ಲಿರುವ ಗ್ರಾಮ ಪಂಚಾಯಿತಿಗಳ ಬಗ್ಗೆ ಮಾತ್ರ ನಾವು ಹೇಳುತ್ತಿದ್ದೇವೆ. ಅದರ ಪರಿಣಾಮ ಮಡಿಕೇರಿ ನಗರದ ಇಂದಿರಾ ನಗರ ಹಾಗೂ ಅನೇಕ ಬಡಾವಣೆಗಳಲ್ಲಿಯು ಆಗಿದೆ. ಹೀಗಾಗಿ ಅಲ್ಲಿ ಮನೆ ಕಟ್ಟಲು ಸಮಸ್ಯೆಯಾಗಿದೆ. ಇದರ ಬಗ್ಗೆ ನಾನು ಕಳೆದ ಅಧಿವೇಶನದಲ್ಲಿಯು ಪ್ರಸ್ತಾಪ ಮಾಡಿದೆ. ಆದರೆ ಸರ್ಕಾರ ಏಕೋ ವಿಳಂಬ ಧೋರಣೆಯನ್ನು ಅನುಸರಿಸುತ್ತಿದೆ ಎಂದು ನಾನು ನೇರವಾಗಿ ಆರೋಪವನ್ನು ಮಾಡುತ್ತೇನೆ. ಇಡೀ ಮಡಿಕೇರಿ ಟೌನ್‌ನಲ್ಲಿ ಯಾರೂ ಮನೆ ಕಟ್ಟಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಮಂತ್ರಿಗಳು ಮಡಿಕೇರಿ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಗರವನ್ನಾದರೂ ವಿಶೇಷವಾಗಿ ಪರಿಗಣನೆಗೆ ತೆಗೆದುಕೊಂಡು ಆದಷ್ಟು ಶೀಘ್ರವಾಗಿ ಮನೆಗಳನ್ನು ಕಟ್ಟಿಕೊಳ್ಳಲು ನಮಗೆ ಅನುಮತಿ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಗಳೆ, ಇಡೀ ರಾಜ್ಯಕ್ಕೆ ಅನ್ವಯವಾಗುವಂತಹ ಕಾನೂನು ಮಾಡಬೇಕಾಗುತ್ತದೆಯೇ ಹೊರತು ಪ್ರತ್ಯೇಕವಾಗಿ ಕಾನೂನು ಮಾಡಲು ಆಗುವುದಿಲ್ಲ. ಬರಿ ಮಡಿಕೇರಿ ಮಾತ್ರವಲ್ಲ ಇಡೀ ರಾಜ್ಯದ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನ ಮಾಡಿ ಆದಷ್ಟು ಬೇಗ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ.

3. **ನ್ಯಾಯ ಬೆಲೆ ಅಂಗಡಿಯಲ್ಲಿ ಕೆಲವು ವಸ್ತುಗಳನ್ನು ಬಲವಂತವಾಗಿ ಮಾರಾಟ ಮಾಡುತ್ತಿರುವ ಬಗ್ಗೆ.**

**ಶ್ರೀ ಎಂ.ಕೆ.ಪ್ರಾಣೇಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು.

ದಿನಾಂಕ: 15–11–2018ರ ಗುರುವಾರದಂದು ವಿಜಯವಾಣಿ ದಿನಪತ್ರಿಕೆಯಲ್ಲಿ "ನ್ಯಾಯಬೆಲೆಯಲ್ಲಿ ವಂಚನೆ ಬಲೆ" "ಪಡಿತರ ಕಾರ್ಡ್‌ದಾರರಿಗೆ ಶುಲ್ಕ, ತಿಂಗಳಿಗೆ 24 ಕೋಟಿ ರೂಪಾಯಿಗಳ ವಸೂಲಿ" ಎನ್ನುವ ಶೀರ್ಷಿಕೆಯಡಿ ಪ್ರಕಟವಾದ, ಬಡ ಕುಟುಂಬಗಳಿಗೆ ನ್ಯಾಯಯುತವಾಗಿ ಪಡಿತರ ವಿತರಿಸಬೇಕಾದ ನ್ಯಾಯಬೆಲೆ ಅಂಗಡಿಗಳು ಗ್ರಾಹಕರಿಗೆ ಹಣ ಸುಲಿಯುವುದಕ್ಕಾಗಿ ದಿನಕ್ಕೊಂದು ವಂಚನೆಯ ಬಲೆ ಹೆಡೆಯುತ್ತಿದೆ. ಶುಲ್ಕ ಈ ಸಾಲಿಗೆ ಹೊಸ ಸೇರ್ಪಡೆ, ವಿವಿಧ ಶುಲ್ಕಗಳ ಹೆಸರಿನಲ್ಲಿ ಗ್ರಾಹಕರಿಂದ ಅಕ್ರಮವಾಗಿ ಹಣ ಪೀಕುತ್ತಿರುವ ಪಡಿತರ ಅಂಗಡಿಗಳ ಸಿಬ್ಬಂದಿ, ಯಾರಾದರೂ ಇದನ್ನು ಪ್ರಶ್ನಿಸಿದಲ್ಲಿ ರೇಷನ್ ಕಾರ್ಡನ್ನೇ ರದ್ದುಗೊಳಿಸುವ ಧಮ್ಕಿ ಹಾಕುತ್ತಿದಾರೆ.

**ರಿಯಾಲಿಟಿ ಚೆಕ್‌ನಲ್ಲಿ ಕಂಡಿದ್ದು**

1. ಬೇರೆ ಬೇರೆ ಕಾರಣಗಳನ್ನು ನೀಡಿ ಹೆಚ್ಚುವರಿ ಹಣ ವಸೂಲಿ
2. ಅಕ್ಕಿ, ಬೇಳೆ ಜತೆ ಉಪ್ಪು, ಸಕ್ಕರೆ, ಸೋಪು ಬಲವಂತ ಮಾರಾಟ
3. ಬೇಳೆಕಾಳಿಗೆ ನಿಗದಿತ ದರಕ್ಕಿಂತ 5 ರೂ. ಹೆಚ್ಚುವರಿ ವಸೂಲಿ
4. ಸರ್ಕಾರ ನಿಗದಿಪಡಿಸಿರುವ ಅಕ್ಕಿಗಿಂತ 2 ಕೆ.ಜಿ. ಕಡಿಮೆ ವಿತರಣೆ
5. ಹೆಬ್ಬೆಟ್ಟಿನ ಗುರುತಿನ ಚೀಟಿ ಪಡೆಯಲು 15 ರೂ. ಸ್ವೀಕಾರ
6. ಸಕ್ಕರೆ, ಸೋಪು ನಿರಾಕರಿಸಿದರೆ ಪಡಿತರ ಕೊಡಲು ಹಿಂದೇಟು
7. ಅಂತ್ಯೋದಯಕ್ಕೆ ಬಿಪಿಎಲ್‌ಗೆ ನೀಡುವಷ್ಟೆ ಅಕ್ಕಿ
8. 1 ಕೆ.ಜಿ ಬೇಳೆ 38 ರೂಪಾಯಿಗೆ ನಿಗದಿಯಾಗಿದ್ದರೂ ಪಡಿತರದಾರದಿಂದ 40 ರೂ. ಪಡೆಯಲಾಗುತ್ತಿದೆ.

**ಬಲವಂತದ ಮಾರಾಟ:–** ಸಕ್ಕರೆ, ಉಪ್ಪು, ಎಣ್ಣೆ ಮತ್ತು ಸೋಪು ವಿತರಿಸದಂತೆ ರಾಜ್ಯ ಸರ್ಕಾರ ಆದೇಶಿಸಿದ್ದರೂ. ಕೆಲ ನ್ಯಾಯಬೆಲೆ ಅಂಗಡಿಗಳು ಕಡಿಮೆ ಬೆಲೆಗೆ ತಂದ ಈ ವಸ್ತುಗಳನ್ನು ರೇಷನ್ ವಿತರಣೆ ವೇಳೆ ಹೆಚ್ಚಿನ ಬೆಲೆಗೆ ನೀಡುತ್ತಿದೆ. ಕೋಲಾರ ಜಿಲ್ಲೆಯಲ್ಲಿ ತೊಗರಿ ಬೇಳೆಗೆ ಸರ್ಕಾರ ನಿಗದಿಪಡಿಸಿರುವ 38 ರೂಪಾಯಿಗಳ ಬದಲಾಗಿ 40 ರೂಪಾಯಿಗಳ್ನು ವಸೂಲಿ ಮಾಡುತ್ತಿದ್ದಾರೆ. ಜಿಲ್ಲೆಯ ಬಹುತೇಕ ನ್ಯಾಯಬೆಲೆ ಅಂಗಡಿಗಳಲ್ಲಿ ಹೆಚ್ಚುವರಿಯಾಗಿ 12

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದ್ದಾರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಬಯೋಮೆಟ್ರಿಕ್ ಶುಲ್ಕ 20 ರೂಪಾಯಿಗಳನ್ನು ಮತ್ತು ನಿರ್ವಹಣಾ ವೆಚ್ಚವೆಂದು 20 ರೂಪಾಯಿಗಳನ್ನು ಸಂಗ್ರಹ ಮಾಡುತ್ತಿದ್ದಾರೆ. ಚಿಕ್ಕಮಗಳೂರು ಮತ್ತು ಎನ್.ಆರ್.ಪುರ ವ್ಯಾಪ್ತಿಯ ಕಾಳಸಂತೆಯಲ್ಲಿ ಪಡಿತರ ಮಾರಾಟ, ಬಯೋಮೆಟ್ರಿಕ್ ಶುಲ್ಕವೆಂದು 10 ರಿಂದ 20 ರೂಪಾಯಿಗಳನ್ನು ವಸೂಲಿ ಮಾಡುತ್ತಿದ್ದಾರೆ, ದಾವಣಗೆರೆ ಜಿಲ್ಲೆಯಲ್ಲಿ ಅಕ್ಕಿ ಮತ್ತು ಬೇಳೆಗೆ ನಿಗದಿತ ದರಕ್ಕಿಂತ 5ರಿಂದ 10 ರೂಪಾಯಿಗಳನ್ನು ಹೆಚ್ಚು ಸಂಗ್ರಹ ಮಾಡುತ್ತಿದ್ದಾರೆ. ಈ ರೀತಿ ರಾಜ್ಯದ ವಿವಿಧ ಭಾಗಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ವಂಚನೆಗಳು ಕಂಡು ಬಂದಿರುತ್ತವೆ. ಆದಕಾರಣ ಈ ಎಲ್ಲಾ ಅಂಶಗಳ ಕುರಿತು ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ನಡೆಯುತ್ತಿರುವ ವಂಚನೆಗಳನ್ನು ತಡೆಗಟ್ಟುವ ವಿಚಾರವಾಗಿ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಮಂತ್ರಿಗಳಿಂದ ಮಾಹಿತಿಯನ್ನು ಒದಗಿಸಿ ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಪ್ರತಿಯೊಂದು ನ್ಯಾಯಬೆಲೆ ಅಂಗಡಿಗಳನ್ನು ಪ್ರತಿಯೊಂದು ಸಾಮಾನಿಗೂ ಹೆಚ್ಚಿನ ಹಣವನ್ನು ವಸೂಲಿ ಮಾಡುತ್ತಿದ್ದಾರೆ. ಅಕ್ಕಿ ತೆಗೆದುಕೊಳ್ಳಬೇಕಾದರೆ ಅದರ ಜೊತೆಯಲ್ಲಿ ಎಣ್ಣೆ, ಸೋಪು ಅಥವಾ ಅಂಗಡಿಯವನು ಕೊಡುವ ಬೇರೆ ವಸ್ತುವನ್ನು ತೆಗೆದುಕೊಳ್ಳಲೇ ಬೇಕು. ಇದು ಯಾವ ನ್ಯಾಯ? ಆದ್ದರಿಂದ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳಿಂದ ಒಂದು ಸ್ವಯಂಪ್ರೇರಿತ ಹೇಳಿಕೆಯನ್ನು ಕೊಡಿಸಬೇಕೆಂದು ವಿನಂತಿಸುತ್ತೇನೆ. ಇದರ ಬಗ್ಗೆ ಚರ್ಚೆಯಾಗಬೇಕಾದ ಅವಶ್ಯಕತೆ ಇದೆ.

**ಡಾ: ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಗಳೆ, ಅನ್ಯಾಯ ಬೆಲೆಯ ಅಂಗಡಿಗಳು ಇವು.

**ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಮತ್ತು ವಸತಿ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿರುವುದಕ್ಕೆ ಪೂರಕವಾಗಿ ಅವರ ಮಾಹಿತಿಗಾಗಿ ಹೇಳುತ್ತಿದ್ದೇನೆ. Bogus Ration Card ಗಳನ್ನು ಈಗಾಗಲೇ ರದ್ದುಪಡಿಸಲಾಗಿದೆ. ಕಡ್ಡಾಯವಾಗಿ ಎಲ್ಲ ಅಂಗಡಿಗಳಲ್ಲಿ Bio-metric system ನ್ನು ಅಳವಡಿಸಲಾಗಿದೆ. 26,000 ನ್ಯಾಯಬೆಲೆ ಅಂಗಡಿಗಳು ಇವೆ. ಸರ್ಕಾರ ಎಲ್ಲ ಅಂಗಡಿಗಳ ಮುಂದೆ ಹೋಗಿ ನಿಲ್ಲಲು ಆಗುವುದಿಲ್ಲ. ಎಲ್ಲಾ ಅಧಿಕಾರಿಗಳು ಸರಿಯಾಗಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಸ್ಥಳೀಯ ಮಟ್ಟದ ಶಾಸಕರು ಇದ್ದಾರೆ, ಜಿಲ್ಲಾಪಂಚಾಯಿತಿ ಸದಸ್ಯರು ಇರುತ್ತಾರೆ, ಗ್ರಾಮ ಪಂಚಾಯಿತಿ ಸದಸ್ಯರು ಇದ್ದಾರೆ, ವಿಧಾನಪರಿಷತ್ತಿನ ಸದಸ್ಯರು ಇರುತ್ತಾರೆ. ಪ್ರತಿಯೊಬ್ಬರು ತಮ್ಮ ಸ್ಥಳೀಯವಾಗಿರುವ ನ್ಯಾಯಬೆಲೆ ಅಂಗಡಿಗಳಿಗೆ ತಿಂಗಳಿಗೆ ಒಮ್ಮೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದರೆ ಅಂಗಡಿಗಳವರಿಗೆ ಭಯ ಇರುತ್ತದೆ. ಇವತ್ತು ಎಲ್ಲ ಅಂಗಡಿಗಳ ಮುಂದೆ ಸರ್ಕಾರ ಹೋಗಿ ನಿಲ್ಲಲು ಆಗುವುದಿಲ್ಲ. ಸರ್ಕಾರ ಪಾಲಿಸಿ ಮಾಡಬಹುದು, ವ್ಯವಸ್ಥೆ ಮಾಡಬಹುದು, ನಿಯಮ ಮಾಡಬಹುದು. ಹೀಗೆ ನನ್ನ ಕ್ಷೇತ್ರದಲ್ಲಿ ಮೋಸವಾದರೆ ಅದಕ್ಕೆ ನಾನು ಜವಾಬ್ದಾರನಾಗುತ್ತೇನೆ. ಹಾಗೆ ನಿಮ್ಮ ಕ್ಷೇತ್ರಗಳಲ್ಲಿಯು ನೀವು ಜವಾಬ್ದಾರಿ ವಹಿಸಿಕೊಂಡು ನ್ಯಾಯಬೆಲೆ ಅಂಗಡಿಗಳಿಗೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಅರುಣ ಶಹಾಪುರ:–** ನಿಯಂತ್ರಣ ಮಾಡಲು ಆಗುವುದಿಲ್ಲ ಎಂದರೆ ರಾಜಿನಾಮೆ ಕೊಡಬೇಕು.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಚಿವರು ಸರಿಯಾಗಿ ಹೇಳಿದ್ದಾರೆ. ಎಲ್ಲರೂ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡಬೇಕು.

**ಸಭಾಪತಿಯವರು:–** ಇದು ಶೂನ್ಯವೇಳೆ ಚರ್ಚೆಗೆ ಅವಕಾಶವಿಲ್ಲ. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಗಳೆ, ನಾಯ್ಯಬೆಲೆ ಅಂಗಡಿಗಳಿಂದ ಒಳ್ಳೆಯ ಗುಣಮಟ್ಟದ ಆಹಾರ ಸಿಗುತ್ತಿಲ್ಲ ಮತ್ತು ಅದು ಸರಿಯಾದ ಸಮಯಕ್ಕೆ ಸಹ ಸಿಗುತ್ತಿಲ್ಲ ಎನ್ನುವ ಆರೋಪ ಇದೆ. ಅದನ್ನು ಸಚಿವರು ಸರಿಪಡಿಸಬೇಕು.

(ಗೊಂದಲ)

**ಶ್ರೀ ಟಿ.ಎ.ಶರವಣ:–** ಸಂಬಂಧಪಟ್ಟ ಇಲಾಖೆಯ ಸಚಿವರಿಂದ ಉತ್ತರ ಕೊಡಿಸುತ್ತೇವೆ ಎಂದು ಸರ್ಕಾರ ಹೇಳುತ್ತಿದೆ.

**ಶ್ರೀ ಸಾ.ರಾ.ಮಹೇಶ್(ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಸೋಪು ಮತ್ತು ಇತರೆ ಬೇರೆ ವಸ್ತುಗಳನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಒತ್ತಾಯದಿಂದ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ. ಈ ವಿಚಾರವಾಗಿ ನನಗೆ ಬಂದ ಮಾಹಿತಿ ಪ್ರಕಾರ ಇದರ ಬಗ್ಗೆ ಒಂದು ಸುತ್ತೋಲೆ ಹೋಗಿದೆ.

(ಮುಂದು)

(425)13–12–2018(01–00)ಬಿಎಸ್‌ಡಿ–ಎಂಡಿ

ಶ್ರೀ ಸಾ.ರಾ ಮಹೇಶ್ (ಮುಂದು)

ಸುತ್ತೋಲೆಯಲ್ಲಿ ಅವುಗಳನ್ನು ಮಾರಬಾರದು ಎಂದು ತಿಳಿಸಲಾಗಿದ.ಎ ಆದರೆ ಕೆಲವು ಕಡೆ ನಾವೇ ಒತ್ತಾಯ ಮಾಡಿ, ಸಹಕಾರಿ ಕ್ಷೇತ್ರದಲ್ಲಿ ಬರುವ ಎಣ್ಣೆ ಇತ್ಯಾದಿಗಳನ್ನು ಇಡುವುದಕ್ಕೆ ಅನುಮತಿ ಕೊಡಿ ಎಂದು ಕೇಳಿರುವುದು ಇದೆ. ಹಾಗಾಗಿ ನನ್ನ ಹತ್ತಿರ ಸಂಘದವರೂ ಬಂದಿದ್ದರು. ಹಿಂದೆ ಎಣ್ಣೆಯನ್ನು ಮಾರಾಟ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಆದೇಶ ಮಾಡಿಸಿದ್ದೆವು. ಮೊನ್ನೆ ರದ್ದು ಮಾಡಲಾಗಿದೆ. ಅದರ ಬಗ್ಗೆ ಚರ್ಚೆ ಮಾಡಲಿ. ಅದನ್ನು ಮಾಡಬೇಕೋ ಅಥವ ಮಾಡಬಾರದೋ ಎಂಬುದು ಬೇರೆ ವಿಷಯ. ಆದರೆ ಒತ್ತಾಯಪೂರ್ವಕವಾಗಿ ಕೊಡಬೇಕೆಂದು ಯಾವ ಕಾನೂನಿನಲ್ಲಿಯೂ ಹೇಳಿಲ್ಲ. ಸಹಕಾರಿ ಕ್ಷೇತ್ರದಲ್ಲಿ ಎಲ್ಲೋ ಒಂದು ಕಡೆ ಅದನ್ನು ಮಾರಾಟ ಮಾಡಿದರೆ ಸಹಕಾರಿ ಕ್ಷೇತ್ರಕ್ಕೆ ಅನುಕೂಲವಾಗುತ್ತದೆ. ನಾವೇ ಎಣ್ಣೆಯನ್ನು ಕೊಡಬೇಕೆಂದು ತೀರ್ಮಾನ ಮಾಡಿ, ಟೆಂಡರ್ ಸಹ ಕರೆಯಲಾಗಿತ್ತು.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರು:–** ಮಾನ್ಯ ಪ್ರಾಣೇಶ್‌ರವರು ಹೇಳಿರುವ ವಿಚಾರವನ್ನು ಪರಿಶೀಲನೆ ಮಾಡಿ.

(ಗೊಂದಲ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಇದು ಶೂನ್ಯವೇಳೆ.

(ಗೊಂದಲ)

ಸಭಾಪತಿಯವರು:– ನಂತರ ಮಾನ್ಯ ಅರುಣ ಶಹಾಪುರ ರವರು ವಿಷಯ ಓದಿ.

**ಇ)ವಿಷಯ: ವಿಜಯಪುರದ ಬುರಾಣದಲ್ಲಿ ವಿಮಾನ ನಿಲ್ದಾಣ ನಿರ್ಮಾಣ ಮಾಡುವ ಕುರಿತು.**

– – –

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಜಯಪುರ ನಗರದ ಹೊರವಲಯದ ಬುರಾಣಪುರದಲ್ಲಿ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಕುರಿತು ವಿಜಯ ಕರ್ನಾಟಕ ದಿನಪತ್ರಿಕೆಯು ವಿಶೇಷವಾಗಿ ರಾಜಕೀಯ ನಾಯಕರು ಜನ ಪ್ರತಿನಿಧಿಗಳ, ಉದ್ಯಮಗಳು, ಪ್ರಗತಿಪರ ಕೃಷಿಕರು, ಹೋರಾಟಗಾರರ ಜೊತೆಗೆ ದಿನಾಂಕ 06–12–2018ರ ಗುರುವಾರದಂದು ಸಂವಾದ ಕಾರ್ಯಕ್ರಮವನ್ನು ನಡೆಸಿ ವಿಮಾನ ನಿಲ್ದಾಣವನ್ನು ಮಾಡುವ ಕುರಿತು ವಿಶೇಷ ಕಾಳಜಿ ವಹಿಸಿರುವುದು ಪ್ರಕಟವಾಗಿದೆ.

ಪ್ರವಾಸೋದ್ಯಮ, ತೋಟಗಾರಿಕೆ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಸೇರಿದಂತೆ ಎಲ್ಲಾ ದೃಷ್ಟಿಯಲ್ಲೂ ಐತಿಹಾಸಿಕ ನಗರಿ ವಿಜಯಪುರದಲ್ಲಿ ಏರ್‌ಪೋರ್ಟ್ ಆಗಲೇಬೇಕು. ನೆನೆಗುದಿಗೆ ಬಿದ್ದ ಈ ಮಹತ್ವದ ಯೋಜನೆ ಮತ್ತೊಂದು ಬಾರಾ ಕಮಾನ್ ಆಗಲು ಬಿಡಬಾರದು. ತಕ್ಷಣವೇ ಸ್ಪಷ್ಟ ರೂಪುರೇಷೆ ನೀಡಿ ನಮ್ಮೂರ ವಿಮಾನ ನಿಲ್ದಾಣ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ಆಗ್ರಹಿಸಲು ಈಗಾಗಲೇ ಸ್ಥಳೀಯ ಜನ ಪ್ರತಿನಿಧಿಗಳು, ಉದ್ಯಮಿಗಳು, ನಾನಾ ಕ್ಷೇತ್ರದ ಗಣ್ಯರು, ಸಾಮಾಜಿಕ ಹೋರಾಟಗಾರರು ಮಹತ್ವದ ನಿರ್ಣಯ ಕೈಗೊಂಡಿದ್ದಾರೆ.

ಈಗಾಗಲೇ ವಿಮಾನ ನಿಲ್ದಾಣಕ್ಕಾಗಿ ವಿಜಯಪುರ ನಗರದ ಬುರಾಣಪುರ ಗ್ರಾಮದಲ್ಲಿ 743 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಶಂಕು ಸ್ಥಾಪನೆಯನ್ನೂ ಮಾಡಲಾಗಿದೆ. ಭೂಮಿ ಸಮ ಮಾಡುವ ವಿಚಾರದಲ್ಲಿ ಅಂದಿನ ಚೆನ್ನೈ ಮಾರ್ಗ್ ಎಂಬ ಕಂಪನಿ ಭೂಮಿ ಸಮತಟ್ಟಗೊಳಿಸುವ ಕೆಲಸದಿಂದ ಹಿಂದೆ ಸರಿದಿತ್ತು. ಆ ನಂತರ ಭೂಮಿ ಸಮತಟ್ಟುಗೊಳಿಸುವ ಕಾಮಗಾರಿ ಅಂದಿಗೆ ನಿಂತುಹೋಗಿದೆ. ಪ್ರಸ್ತುತ ಭೂಮಿ ಸಮತಟ್ಟು ಮಾಡಲು ಒಟ್ಟು 100 ಕೋಟಿ ಅಂದಾಜು ಮಾಡಲಾಗಿದ್ದು, ಸದರಿ ಅನುದಾನವನ್ನು ಬಿಡುಗಡೆ ಮಾಡಿ ವಿಮಾನ ನಿಲ್ದಾಣ ಮಾಡುವ ನಿಟ್ಟಿನಲ್ಲಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ವಿಶೇಷ ಕಾಳಜಿ ವಹಿಸಿ, ತ್ವರಿತವಾಗಿ ಕಾಮಗಾರಿ ಕೈಗೊಳ್ಳಬೇಕೆಂದು" ಶೂನ್ಯವೇಳೆಯಲ್ಲಿ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಡಾ:ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರವನ್ನು ಒದಗಿಸುತ್ತೇನೆ.

**ಈ)ವಿಷಯ: ಕೋಶಿಕ್ ಕಾಲೇಜಿಗೆ ಬಿಬಿಎ (ಏವಿಯೇಷನ್ ಮ್ಯಾನೇಜ್‌ಮೆಂಟ್) ಕೋರ್ಸಿಗೆ 20 ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚುವರಿಯಾಗಿ ಮಂಜೂರು ಮಾಡುವ ಬಗ್ಗೆ.**

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, "ರಾಜ್ಯದಲ್ಲಿ ಉನ್ನತ ಶಿಕ್ಷಣವನ್ನು ಪೋಷಿಸುವುದು ಹಾಗೂ ಬೆಳೆಸುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಕೋಶಿಸ್ ಕಾಲೇಜಿಗೆ ಹೆಚ್ಚುವರಿಯಾಗಿ ಬಿಬಿಎ (ಏವಿಯೇಷನ್ ಮ್ಯಾನೇಜ್‌ಮೆಂಟ್) ವಿದ್ಯಾರ್ಥಿಗಳ ಪ್ರಮಾಣವನ್ನು ಅನುಮೋದಿಸುವುದರಲ್ಲಿ ಸರ್ಕಾರವು ಬೇಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಿದೆ.

ಸ್ಥಳೀಯ ವಿಚಾರಣಾ ಸಮಿತಿಯು (ಎಲ್‌ಐಸಿ) ಸಮಿತಿಯ ಶಿಫಾರಸ್ಸು ಇಲ್ಲದೇ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇದೆ. ಇದರಂತೆ ಈಗಾಗಲೇ ಸರ್ಕಾರವು ತನ್ನ ವಿವೇಚನಾ ಅಧಿಕಾರವನ್ನು ಬಳಸಿ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸಿ ಆದೇಶವನ್ನು ಹೊರಡಿಸಿರುವ ಉದಾಹರಣೆಗಳು ಇವೆ. ಉದಾಹರಣೆಗೆ ವೆಂಕಟಾದ್ರಿ ವಿದ್ಯಾಸಂಸ್ಥೆ, ಶ್ರೀನಿವಾಸಪುರ ಮತ್ತು ಮಾರುತಿ ಪದವಿ ಕಾಲೇಜು, ಹೊಸಕೋಟೆ ಹಾಗೂ ಶಿಡ್ಲಘಟ್ಟ ತಾಲ್ಲೂಕಿನ ಹೆಚ್.ಕ್ರಾಸ್ ಕಾಲೇಜಿಗಳು ಇದಕ್ಕೆ ಉದಾಹರಣೆಗಳಾಗಿವೆ. ಕೋಶಿಸ್ ವಿದ್ಯಾ ಸಂಸ್ಥೆಯು ಉತ್ತಮ ವಿದ್ಯಾಸಂಸ್ಥೆಯಾಗಿದ್ದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಹಾಗೂ ಉತ್ತಮ ಶಿಕ್ಷಕ ವೃಂದವನ್ನು ಹೊಂದಿರುತ್ತದೆ. ಈ ಕಾಲೇಜು ಗ್ರಾಮೀಣ ಪ್ರದೇಶದ ಹೆಚ್ಚಿನ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಈಗಾಗಲೇ ಈ ಕಾಲೇಜಿಗೆ ಬಿಬಿಎ (ಏವಿಯೇಷನ್ ಮ್ಯಾನೇಜ್‌ಮೆಂಟ್) ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರಮಾಣ ಪತ್ರವನ್ನು ನೀಡಿದ್ದು, ಅವಕಾಶವಿರುವ ಸಂಬಂಧ ಅವರು ಹೆಚ್ಚುವರಿಯಾಗಿ 20 ವಿದ್ಯಾರ್ಥಿಗಳನ್ನು ಈಗಾಗಲೇ ಕಾಲೇಜಿಗೆ ದಾಖಲು ಮಾಡಿಕೊಂಡು ಪಾಠ ಪ್ರವಚನ ನೀಡಿರುತ್ತಾರೆ. ಈ ಕೋರ್ಸಿಗೆ ಸಂಬಂಧಿಸಿದಂತೆ ಈ ದಿನ ದಿನಾಂಕ 13-12-2018ರಂದು ಪರೀಕ್ಷೆ ಇರುತ್ತದೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗಿರುತ್ತದೆ.

ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಕಾಲೇಜು ಹಾಗೂ ವಿಶ್ವವಿದ್ಯಾಲಯವು ಪತ್ರ ವ್ಯವಹಾರ ನಡೆಸಿದ್ದು, ಕಡತವು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಮಂಡನೆಯಾಗಿರುತ್ತದೆ. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತನ್ನ ವಿವೇಚನ ಅಧಿಕಾರ ಬಳಸಿ, ಈಗಾಗಲೆ ದಾಖಲೆ ಮಾಡಿಕೊಂಡಿರುವ 20 ಹೆಚ್ಚುವರಿ ವಿದ್ಯಾರ್ಥಿಗಳ ಭವಿಷ್ಯ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಕೋಶಿಸ್ ಕಾಲೇಜಿಗೆ ಬಿಬಿಎ (ಏವಿಯೇಷನ್ ಮ್ಯಾನೇಜ್‌ಮೆಂಟ್) ಕೋರ್ಸಿಗೆ 20 ಹೆಚ್ಚುವರಿ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸಿ, ಅನುಮೋದಿಸಿ ಈ ದಿನ ನಡೆದಿರುವ ಪರೀಕ್ಷೆಯನ್ನು ಮತ್ತೊಂದು ಬಾರಿ ನಡೆಸಲು ಅನುಮತಿ ನೀಡುವುದರೊಂದಿಗೆ ಆದೇಶ ಹೊರಡಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.”

**ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸುತ್ತೇನೆ.

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ:–** ಮಾನ್ಯ ಸಭಾಪತಿಯವರೇ, ಈಗ ತಾನೇ ಮಾನ್ಯ ಸಚಿವರು ಹಾಗೂ ಕಾರ್ಯದರ್ಶಿಗಳು ಇದ್ದರು. ಇವತ್ತು ಒಂದು ಪರೀಕ್ಷೆ ಮುಗಿದಿದ್ದು, ನಾಳಿದ್ದು ಮತ್ತೊಂದು ಪರೀಕ್ಷೆ ಇದ್ದು, ಸಂಜೆಯೊಳಗೆ ಇದಕ್ಕೆ ಪಾಸಿಟಿವ್ ಉತ್ತರ ತರಿಸಿಕೊಡಬೇಕೆಂದು ಮನವಿ ಮಾಡುತ್ತೇನೆ.

**ಉ)ವಿಷಯ: ರಾಜ್ಯದಲ್ಲಿ ಅನ್ಯ ಭಾಷೆಗಳನ್ನು ವೈಭವೀಕರಿಸುವ ಕೆಲಸ ಹಾಸ್ಯಾಸ್ಪದವಾಗುತ್ತಿರುವುದರಿಂದ ಕನ್ನಡ ವಿರುದ್ಧವಾಗಿರುವ ದ್ರಾವಿಡ ವಿಚಾರ ಕಲಾಮೇಳವನ್ನು ರದ್ದುಗೊಳಿಸುವ ಬಗ್ಗೆ.**

– – –

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, “ ಕನಾಟಕ ಸರ್ಕಾರದ ಅಂಗ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವು 2018ನೇ ಇಸವಿಯ ಅಂತಿಮ ದಿನಗಳಲ್ಲಿ ದ್ರಾವಿಡ ವಿಚರ ಕಲಾ ಮೇಳವನ್ನು ನಡೆಸುವುದಾಗಿ ಹೇಳಿಕೊಂಡಿದೆ. ಈ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಹೇಳಿಕೆ, ಪತ್ರಿಕೆ, ದೃಶ್ಯ ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಗೊಂಡಿದೆ. ಈ ಬಗ್ಗೆ ಮಲೆಯಾಳಂ ಭಾಷೆಯ ಕೆಲ ವ್ಯಕ್ತಿಗಳ ಜೊತೆ ನಿರ್ಣಾಯಕ ಚರ್ಚೆ ಮಾಡಿರುವುದಾಗಿ ಪ್ರಾಧಿಕಾರದ ಅಧ್ಯಕ್ಷರು ಹೇಳಿದ್ದಾರೆ. ಪ್ರಸ್ತುತ ರಾಷ್ಟ್ರ ಭಾಷೆಯಾಗಿರುವ ಹಿಂದಿಯನ್ನು ಹೊರತುಪಡಿಸಿ, ಇತರೆ ಕೆಲ ಭಾಷೆಗಳನ್ನು ಒಂದೇ ವೇದಿಕೆಯಲ್ಲಿ ತರುವುದು, ರಾಷ್ಟ್ರ ಭಾಷೆಯ ವಿರುದ್ಧ ಸಂಘಟಿತ ಶಕ್ತಿಯನ್ನು ರೂಪಿಸುವುದು ಈ ವಿಚಾರದ ಹಿಂದಿರುವ ಉದ್ದೇಶ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮೂಲಗಳು ಸ್ಪಷ್ಟ ಮಾತುಗಳಲ್ಲಿ ಹೇಳಿವೆ.

ಅಲ್ಲದೇ ಪ್ರಾಧಿಕಾರದ ಅಧಿಕಾರ ದುರುಪಯೋಗವಾಗುವುದು ಹೌದು. ದ್ರಾವಿಡ ಕಲೆ ಹೆಸರಿನಲ್ಲಿ ನಡೆಯುವ ವಿಚಾರ ಮೇಳ ರಾಜ್ಯದ ಸಾಂಸ್ಕೃತಿಕ ನುಡಿಗಟ್ಟುಗಳನ್ನು ಅರ್ಥೈಸಲಾಗದ ವ್ಯರ್ಥ ಪ್ರಯತ್ನ ಮತ್ತು ಅನ್ಯರಾರನ್ನೋ ತೃಪ್ತಿಪಡಿಸಲು ಪ್ರಾಧಿಕಾರದ ವ್ಯರ್ಥ ಶ್ರಮ. ದೇಶದ ಐಕ್ಯತೆಗೆ ಸವಾಲಾಗುವ ದೃಷ್ಟಿಯಿಂದ ಆರ್ಯ, ದ್ರಾವಿಡರನ್ನು ಕೆಲವರು ಹುಟ್ಟು ಹಾಕಿದ್ದಾರೆ ಎಂಬ ಆಪಾದನೆ ಸಾರ್ವಜನಿಕ ವಲಯದಿಂದ ಮೂಡಿ ಬರುತ್ತಿದೆ. ಕನ್ನಡ ಪ್ರಾಧಿಕಾರ

“ ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ಸ್ಥಾಪಿಸುವ ಉದ್ದೇಶ ಈ ದ್ರಾವಿಡ ವಿಚಾರ ಮೇಳದ ಮೂಲಕ ವ್ಯರ್ಥವಾಗುವ ಅಪಾಯವಿದೆ ಮತ್ತು ಪ್ರಾಧಿಕಾರದ ಅಧ್ಯಕ್ಷರ ವೈಯಕ್ತಿಕ ಆಸಕ್ತಿಗಾಗಿ ಪ್ರಾಧಿಕಾರವೇ ದುರುಪಯೋಗವಾಗುತ್ತಿದೆ ಎಂದು ವ್ಯಾಖ್ಯಾನಿಸಲಾಗಿದೆ.

ಆಡಳಿತದಲ್ಲಿ ಕನ್ನಡ ಜಾರಿಗೆ ತರುವುದರಲ್ಲಿರುವ ಅಡೆತಡೆಗಳನ್ನು ನಿವಾರಿಸಿ ಅವುಗಳ ನಿವಾರಣೆಗೆ ಬೇಕಾದ ಕ್ರಮವನ್ನು ಕೈಗೊಳ್ಳುವುದು. ಇವೆಲ್ಲವೂ ಪ್ರಾಧಿಕಾರದ ಮೂಲ ಉದ್ದೇಶವೇ ಹೊರತು ತಮಿಳು, ತೆಲುಗು, ಮಲೆಯಾಳಂ ಭಾಷೆಗಳ ವೈಭವೀಕರಣಕ್ಕೋಸ್ಕರ ಕನ್ನಡದ ಪ್ರಾಧಿಕಾರ ರಚಿಸಲಾಗಿರುವುದಿಲ್ಲ ಎಂಬ ಸತ್ಯ ಪ್ರಾಧಿಕಾರದ ಅಧ್ಯಕ್ಷರಿಗೆ ರಾಜ್ಯದ ಮುಖ್ಯ ಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಗಳು ನೆನಪು ಮಾಡಬೇಕೆಂದು ಕೋರುತ್ತೇನೆ.

ಈ ಮಧ್ಯೆ 2017–18ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಅನುಮೋದನೆಗೊಳ್ಳದ ದ್ರಾವಿಡ ವಿಚಾರ ಕಲಾ ಮೇಳ ಕಾರ್ಯಕ್ರಮ ನಡೆಸುವುದು ಪ್ರಾಧಿಕಾರದ ಕಾರ್ಯವೃತ್ತಿಯಲ್ಲಿ ಕಾನೂನು ಬಾಹಿರವಾಗುತ್ತದೆ. ದ್ರಾವಿಡ ವಿಚಾರ ಕಲಾ ಮೇಳ ನಡೆಸುವ ಮೂಲಕ ಕನ್ನಡ ಅಭಿವೃದ್ಧಿ ಪ್ರಾಧಿಕಾರ ತನ್ನ ಕಾರ್ಯಸೂಚಿಗೆ ವಿರುದ್ಧವಾಗಿ ಕೆಲಸ ಮಾಡಲು ಹೊರಟಿದೆ. ಈಗಾಗಲೇ ಕರ್ನಾಟಕದ ಕೆಲವೊಂದು ಭಾಗದಲ್ಲಿ ಅದರಲ್ಲಿ ಬೆಂಗಳೂರಿನ ಅತೀ ಮುಖ್ಯ ಪ್ರದೇಶದಲ್ಲಿ ತಮಿಳರ ಪ್ರಾಬಲ್ಯದಿಂದ ಕನ್ನಡದ ಅಸ್ಥಿತ್ವವೇ ಕಣ್ಮರೆಯಾಗುತ್ತಿದೆ. ತೆಲುಗಿನ ಅತೀ ಪ್ರಚಾರಕ್ಕೆ ಕನ್ನಡ ಭಾಷೆ ನಲುಗುತ್ತಿದೆ. ಮಲೆಯಾಳಂನ ವೈಭವೀಕರಣ ಕನ್ನಡ ಅಸ್ಥಿತ್ವದ ವಿಚಾರದಲ್ಲಿ ಪ್ರಕ್ಷುಬ್ಧತೆಗೆ ದಾರಿ ಮಾಡಿಕೊಡುತ್ತದೆ. ದೇಶದ ಕೆಲವು ಭಾಗಗಳಲ್ಲಿ ಭಾಷೆಯ ಹೆಸರಿನಲ್ಲಿ ರಾಷ್ಟ್ರೀಯತೆಯ ವಿರೋಧ ಚಟುವಟಿಕೆಗಳು ನಡೆಯುತ್ತಿದ್ದು, ಜನತಂತ್ರ ವಿರೋಧ ಕಲ್ಪನೆಗೆ ಇಂಬು ಕೊಡುವ ಕೆಲಸಕ್ಕೆ ದ್ರಾವಿಡ ವಿಚಾರ ಕಲಾ ಮೇಳ ವೇದಿಕೆಯಾಗುವ ಅಪಾಯವಿದೆ.

ಕರ್ನಾಟಕದ ಒಳಗೆ ಹಲವು ಭಾಷೆಗಳಿದ್ದು, ತುಳು, ಕೊಡವ, ಬ್ಯಾರಿ ಭಾಷೆ, ಅರೆಭಾಷೆ ಮುಂತಾದ ಹಲವು ಭಾಷೆಗಳಿಗೆ ರಾಜ್ಯ ಸರ್ಕಾರ ಆರ್ಥಿಕ ನೆರವು ಇನ್ನಿತರ ಪ್ರೋತ್ಸಾಹ ನೀಡಬೇಕಾದ ಅವಶ್ಯಕತೆ ಇದ್ದು, ಕರ್ನಾಟಕದಲ್ಲಿ ತನ್ನದೇ ಆದ ವಿಶಿಷ್ಟ ಪ್ರಕಾರಗಳಾದ ಕುಂದ ಕನ್ನಡ, ಧಾರವಾಡ ಕನ್ನಡ, ಮೈಸೂರು ಕನ್ನಡ, ಹೈದ್ರಾಬಾದ್ ಭಾಗದ ಕನ್ನಡ ಹವ್ಯಕ ಕನ್ನಡ, ಮುಂತಾದ ಭಾಷೆಗಳಿಗೆ ಪ್ರಾಧಿಕಾರದ ಚೌಕಟ್ಟಿನಲ್ಲಿ ಪುನರುಶ್ಚೇತನ ನೀಡುವುದು ಅವುಗಳನ್ನು ಉಳಿಸಿ–ಬೆಳೆಸಿ ಮುಂದಿನ ಪೀಳಿಗೆಗಳಿಗೆ ಕಾಯ್ದಿಡುವ ಕೆಲಸವನ್ನು ಸರ್ಕಾರದ ಪರವಾಗಿ ಪ್ರಾಧಿಕಾರ ಮಾಡಬೇಕಾಗಿತ್ತು. ದುರಾದೃಷ್ಟಕ್ಕೆ ತುಳುವಿನಂತ ಗ್ರಾಮೀಣ ಸೊಗಡಿನ ತಾಯ್ನಾಡಿನ ನೆಲದ ಭಾಷೆಯನ್ನು ನಿರ್ಲಕ್ಷಿಸಿ, ಅನ್ಯ ರಾಜ್ಯಗಳ ಭಾಷೆಗಳ ಮೆರವಣಿಗೆ ಮಾಡುತ್ತಿರುವ ಪ್ರಾಧಿಕಾರದ ಆಸಕ್ತಿಯೇ ಪ್ರಶ್ನಾರ್ಹ!.

ಕನ್ನಡಿಗರ ತೆರಿಗೆ ಹಣದಲ್ಲಿ ಅನ್ಯ ಶ್ರೀಮಂತ ಭಾಷೆಗಳನ್ನು ವೈಭವೀಕರಿಸುವ ಕೆಲಸ ಪ್ರಾಧಿಕಾರ ಮಾಡಿದರೆ ಹಾಸ್ಯಾಸ್ಪದವಾಗುತ್ತದೆ. ತುಂಬಾ ನೋವಿನಿಂದ ಹೇಳುವುದಾದರೆ ಕನ್ನಡ ವಿರೋಧ ಕೆಲಸಕ್ಕೆ ಪ್ರಾಧಿಕಾರ ಕೈಯಿಕ್ಕಿದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಮುಖ್ಯಮಂತ್ರಿಗಳು ಮತ್ತು ಕನ್ನಡ ಸಂಸ್ಕೃತಿ ಮಂತ್ರಿಗಳು ಮಧ್ಯೆ ಪ್ರವೇಶಿಸಿ ತಕ್ಷಣ ಕನ್ನಡ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿರುದ್ಧವಾಗಿರುವ ದ್ರಾವಿಡ ವಿಚಾರ ಕಲಾಮೇಳವನ್ನು ರದ್ದುಗೊಳಿಸಬೇಕು ಮತ್ತು ಇದರ ಹಿಂದೆ ಸಂಚು ರೂಪಿಸಿರುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

(ಮುಂದು)

**(426)13–12–2018(1–10)ಹೆಚ್‌ವಿ–ಎಕೆ**

**ಡಾಃಜಯಮಾಲ ರಾಮಚಂದ್ರ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭಾಷೆಗೆ ಸಂಬಂಧಿಸಿದ ಅತ್ಯಂತ ಮಹತ್ತರ ವಿಚಾರದ ಬಗ್ಗೆ ಗಮನಸೆಳೆದಿದ್ದಾರೆ. ಸಮಾಲೋಚನೆ ಸಭೆ ನಡೆಸಿರುವುದು ಸತ್ಯ ಸಂಗತಿಯಾಗಿದೆ. ಸಮಾಲೋಚನೆ ಸಭೆಯ ಹಿನ್ನೆಲೆ ಏನೆಂದರೆ, ಕೇಂದ್ರ ಸರ್ಕಾರದ ಸೇವೆಗಳಾದ ರೈಲ್ವೆ ನೇಮಕಾತಿ, ಬ್ಯಾಂಕಿಂಗ್ ಸೇವೆಗಳು ಅಥವಾ ಸ್ಟಾಫ್ ಸೆಲೆಕ್ಷನ್ ಕಮಿಶನ್ ವತಿಯಿಂದ ತುಂಬುವಂತಹ ಹುದ್ದೆಗಳಿಗೆ ಹಿಂದಿ ಮತ್ತು ಇಂಗ್ಲೀಷ್ ಭಾಷೆ ಬಲ್ಲವರಿಗೆ ಹೆಚ್ಚು ಆದ್ಯತೆ ದೊರೆಯುತ್ತಿದೆ. ಕನ್ನಡ ಮಾಧ್ಯಮದಲ್ಲಿ ಕಲಿತ ಮಕ್ಕಳು ಎಲ್ಲೋ ಒಂದು ಕಡೆ ಈ ಹುದ್ದೆಗಳಿಂದ ವಂಚಿತರಾಗುತ್ತಿದ್ದಾರೆ ಎನ್ನುವುದನ್ನು ಮನಗಂಡು ಈ ರೀತಿಯ ಆಲೋಚನೆಯನ್ನು ನಡೆಸಲಾಯಿತು. ಬೇರೆ ಭಾಷೆಗೆ ಅಥವಾ ಹಿಂದಿ ಭಾಷೆಗೆ ಮಹತ್ವನ್ನು ಕೊಡಬಾರದು ಅಥವಾ ಅವಮಾನಪಡಿಸಬೇಕು ಎನ್ನುವ ಉದ್ದೇಶದಿಂದ ಸಮಾಲೋಚನೆ ಮಾಡಿರುವುದಿಲ್ಲ. ನಮ್ಮ ಭಾಷೆಗೂ ಸಹ ಮಾನ್ಯತೆ ಸಿಗಲಿ ಎನ್ನುವ ದೃಷ್ಟಿಯಿಂದ ಈ ಸಮಾಲೋಚನಾ ಸಭೆಯನ್ನು ನಡೆಸಲಾಯಿತು.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ತುಳು, ಕೊಡವ, ಕೊಂಕಣಿ ಮತ್ತು ಬ್ಯಾರಿ ಭಾಷೆಗಳ ಅಕಾಡೆಮಿಗಳನ್ನು ಸ್ಥಾಪನೆ ಮಾಡಿ, ಅವುಗಳ ಮೂಲಕ ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುವಂತಹ ಅನೇಕ ಉತ್ತಮವಾದ ಕಾರ್ಯಗಳನ್ನು ನಮ್ಮ ಸರ್ಕಾರ ಹಮ್ಮಿಕೊಂಡಿದೆ. ಮಾನ್ಯ ಶಾಸಕರ ಕಾಳಜಿ ನನಗೆ ಅರ್ಥವಾಗುತ್ತಿದೆ. ಅವರು ಪ್ರಸ್ತಾಪ ಮಾಡಿರುವ ವಿಷಯವನ್ನು ಈಗಾಗಲೇ ಸರ್ಕಾರ ಕೈಬಿಟ್ಟಿದೆ.

## 4. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳಿಗೆ ಸಚಿವರಿಂದ ಉತ್ತರ

ವಿಷಯಃ– ಇ–ಆಡಳಿತ ತಂತ್ರಾಂಶದ ಲೋಪದಿಂದ 31 ಲಕ್ಷ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡದಿರುವ ಬಗ್ಗೆ.

– – –

**ಡಾಃಜಯಮಾಲ ರಾಮಚಂದ್ರ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ದಿನಾಂಕಃ12.12.2018ರಂದು ಮಾನ್ಯ ಅರುಣ ಶಹಾಪುರ್‌ರವರು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಪರವಾಗಿ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

(ಮಾನ್ಯ ಸಚಿವರ ಲಿಖಿತ ರೂಪದ ಉತ್ತರವನ್ನು ಲಗತ್ತಿಸಲಾಗಿದೆ)

## 5. ಪ್ರಕಟಣೆಗಳು

**ಸಭಾಪತಿಯವರುಃ–** ಅ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡುವಳಿಕೆಯ ನಿಯಮ 220ರ ಮೇರೆಗೆ 136ನೇ ಅಧಿವೇಶನದಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ಈ ಮುಂದಿನಂತೆ ರಚಿಸಲಾಗಿರುತ್ತದೆ;

1. ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ ಃ ಮಾನ್ಯ ಸಭಾಪತಿಯವರು
2. ಡಾಃ ಜೈಮಾಲ ರಾಮಚಂದ್ರ ಃ ಸಭಾ ನಾಯಕರು
3. ಶ್ರೀ ಕೋಟ ಶ್ರೀನಿವಾಸ ಪೂಜಾರಿ ಃ ವಿರೋಧ ಪಕ್ಷದ ನಾಯಕರು
4. ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ ಃ ವಿರೋಧ ಪಕ್ಷದ ಮುಖ್ಯ ಸಚೇತಕರು
5. ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಃ ವಿಧಾನ ಪರಿಷತ್ತಿನ ಸದಸ್ಯರು
6. ಶ್ರೀ ಎಸ್.ಆರ್.ಪಾಟೀಲ್ ಃ ವಿಧಾನ ಪರಿಷತ್ತಿನ ಸದಸ್ಯರು
7. ಶ್ರೀ ಆಯನೂರು ಮಂಜುನಾಥ ಃ ವಿಧಾನ ಪರಿಷತ್ತಿನ ಸದಸ್ಯರು

**ವಿಶೇಷ ಆಹ್ವಾನಿತರುಃ**

1. ಶ್ರೀ ಹೆಚ್.ಡಿ.ಕುಮಾರಸ್ವಾಮಿ ಃ ಮಾನ್ಯ ಮುಖ್ಯಮಂತ್ರಿಗಳು
2. ಶ್ರೀ ಕೃಷ್ಣಭೈರೇಗೌಡ ಃ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು

ಆ) ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 9ರ ಮೇರೆಗೆ ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರು ಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣಾ ಮಾಡಲು ಈ ಮುಂದಿನ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಗಿದೆ;

1. ಶ್ರೀ ಕೆ.ಸಿ.ಕೊಂಡಯ್ಯ ಃ ವಿಧಾನ ಪರಿಷತ್ತಿನ ಸದಸ್ಯರು
2. ಶ್ರೀ ಮರಿತಿಬ್ಬೇಗೌಡ ಃ ವಿಧಾನ ಪರಿಷತ್ತಿನ ಸದಸ್ಯರು
3. ಡಾಃತೇಜಸ್ವಿನಿಗೌಡ ಃ ವಿಧಾನ ಪರಿಷತ್ತಿನ ಸದಸ್ಯರು
4. ಶ್ರೀ ಪ್ರಕಾಶ್ ಕೆ.ರಥೋಡ್ ಃ ವಿಧಾನ ಪರಿಷತ್ತಿನ ಸದಸ್ಯರು

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 6. ವರದಿಯನ್ನೊಪ್ಪಿಸುವುದು

**ಶ್ರೀ ಐವನ್ ಡಿ'ಸೋಜಾ(ಸದಸ್ಯರು, ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಮಿತಿ)ಃ–** ಸನ್ಮಾನ್ಯ ಸಭಾಪತಿಯವರೇ, 2018–19ನೇ ಸಾಲಿನ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ ಮಧ್ಯಂತರ ವರದಿಗಳನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರುಃ–** ಒಪ್ಪಿಸಲಾಯಿತು.

## 7. ಅರ್ಜಿಯನ್ನೊಪ್ಪಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಉಡುಪಿ ಜಿಲ್ಲೆ, ಶಿವಳ್ಳಿ ಗ್ರಾಮದ ಸರ್ವೆ ನಂಬರ್ 51ರಲ್ಲಿ 0.50 ಎಕರೆ ಜಮೀನನ್ನು ಜಿ.ಎಸ್.ಬಿ.ಟ್ರಸ್ಟ್(ರಿ) ಮಣಿಪಾಲ ಇವರಿಗೆ ಮಂಜೂರಾತಿ ನೀಡುವ ಕುರಿತು ಅರ್ಜಿಯನ್ನು ಸದನದ ಮುಂದೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರುಃ–** ಒಪ್ಪಿಸಲಾಯಿತು.

## 8. ಚುನಾವಣಾ ಪ್ರಸ್ತಾವಗಳು

**ಡಾಃಜಯಮಾಲ ರಾಮಚಂದ್ರ(ಸಭಾ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ,

ಅ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಅಧಿನಿಯಮ 1994 ಕಲಂ 21(1)ರ ರೀತ್ಯಾ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

ಆ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾಯ್ದೆ 2009ರ ಪ್ರಕರಣ 20(ಐ)ರನ್ವಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತಿದ್ದೇನೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಸಭಾಪತಿಯವರುಃ–** ಈಗ ಗಮನಸೆಳೆಯುವ ಸೂಚನೆಗಳು, ಡಾಃವೈ.ಎ.ನಾರಾಯಣ ಸ್ವಾಮಿಯವರು ತಮ್ಮ ವಿಷಯವನ್ನು ಪ್ರಸ್ತಾಪಿಸಬೇಕು

**ಶ್ರೀ ಅರುಣ ಶಹಾಪುರಃ–** ಸನ್ಮಾನ್ಯ ಸಭಾಪತಿಯವರೇ, ಸಭೆ ಪ್ರಾರಂಭವಾಗುವುದಕ್ಕೂ ಮೊದಲು ಹಕ್ಕುಚ್ಯುತಿ ಸೂಚನೆಯನ್ನು ನೀಡಿದ್ದೆವು.

**ಸಭಾಪತಿಯವರುಃ–** ನಿನ್ನೆ ಮಾನ್ಯ ಸುನಿಲ್ ಸುಬ್ರಮಣ್ಯರವರು ಗಮನಸೆಳೆಯುವ ಸೂಚನೆಯಡಿಯಲ್ಲಿ ಪ್ರಸ್ತಾಪ ಮಾಡಿರುವ ವಿಷಯಕ್ಕೆ ಉತ್ತರ ನೀಡಲು ಮಾನ್ಯ ಮುಖ್ಯಮಂತ್ರಿಗಳು ಸಮಯಾವಕಾಶವನ್ನು ಕೇಳಿದ್ದಾರೆ.

## 9. ದಿನಾಂಕ 12.12.2018ರ ಗಮನ ಸೆಳೆಯುವ ಸೂಚನೆಯ ವಿಷಯವನ್ನು ಇಂದಿನ ಕಾರ್ಯಕಲಾಪದ ಪಟ್ಟಿಯಿಂದ ಕೈ ಬಿಟ್ಟಿರುವ ಬಗ್ಗೆ

**ವಿಷಯಃ ರಾಜ್ಯ ಸರ್ಕಾರದಿಂದ ಆಚರಿಸುತ್ತಿರುವ ಟಿಪ್ಪುಸುಲ್ತಾನ್ ಜಯಂತಿಯಿಂದಾಗಿ ಕೊಡವರ ಮನಸ್ಸಿಗೆ ನೋವನ್ನುಂಟು ಮಾಡಿರುವುದಲ್ಲದೆ, ಕೋಮು ಸೌಹಾರ್ದತೆ ಹಾಳು ಮಾಡುತ್ತಿರುವ ವಿಷಯವನ್ನು ಇಂದಿನ ಕಾರ್ಯ ಕಲಾಪಗಳ ಪಟ್ಟಿಯಿಂದ ಕೈಬಿಟ್ಟಿರುವ ಬಗ್ಗೆ.**

– – –

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು)ಃ–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಪರಂಪರೆಯಾಗಿ ನಡೆದುಕೊಂಡು ಬಂದಿರುವಂತೆ, ನಿನ್ನೆ ನಾವು ಸದನದಲ್ಲಿ ಆ ವಿಚಾರದ ಬಗ್ಗೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಮತ್ತು ಸಭಾನಾಯಕರು ಇಬ್ಬರೂ, 'ತಾವುಗಳು ಮಾನ್ಯ ಮುಖ್ಯಮಂತ್ರಿಗಳ ಹೆಸರನ್ನು ಪ್ರಸ್ತಾಪ ಮಾಡಿದ್ದೀರಿ, ಆದ್ದರಿಂದ ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇವೆ' ಎನ್ನುವ ಮಾತನ್ನು ಹೇಳಿದ್ದರು. ಅದು ಮಹತ್ವದ ವಿಚಾರ ಎನ್ನುವ ಕಾರಣದ ಹಿನ್ನೆಲೆಯಲ್ಲಿ ನಾವು ಅದನ್ನು ಸದನದಲ್ಲಿ ಚರ್ಚೆ ಮಾಡಲು ಬಯಸಿ ನೋಟಿಸ್ ಕೊಟ್ಟಿದ್ದೆವು ಆ ವಿಚಾರ ನಿನ್ನೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಿತ್ತು. ಈ ದಿನವೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬರುತ್ತದೆ ಎನ್ನುವ ನಿರೀಕ್ಷೆಯಲ್ಲಿದ್ದೆವು. ಆದರೆ, ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ಅದು ಬಂದಿಲ್ಲ. ಇದು ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ವಿಚಾರವಾಗಿರುವ ಕಾರಣ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡದಿದ್ದರೆ, ಮಾನ್ಯ ಗೃಹ ಸಚಿವರಿಂದ ಉತ್ತರ ಕೊಡಿಸಲು ನಿಯುಕ್ತಿಗೊಳಿಸುವ ಅಧಿಕಾರ ಈ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪೀಠಕ್ಕೆ ಮತ್ತು ಸರ್ಕಾರಕ್ಕೆ ಇದೆ. ಈ ರೀತಿ ಮಾಡುವುದನ್ನು ಬಿಟ್ಟು, ಕಾರ್ಯಕಲಾಪಗಳ ಪಟ್ಟಿಯಿಂದ ಆ ವಿಚಾರವನ್ನು ಕೈಬಿಟ್ಟಿರುವುದನ್ನು ನಾವು ಹೇಗೆ ಒಪ್ಪಿಕೊಳ್ಳಬೇಕು?

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿಃ–** ಸನ್ಮಾನ್ಯ ಸಭಾಪತಿಯವರೇ, ತಾವು ನಮ್ಮ ರಕ್ಷಣೆಗೆ ಬರಬೇಕು.

**ಸಭಾಪತಿಯವರುಃ–** ಈ ವಿಚಾರಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನೀಡಲು ನಿನ್ನೆ ಎರಡು ವಾರಗಳ ಕಾಲಾವಕಾಶವನ್ನು ಕೇಳಿ ನನಗೆ ಪತ್ರ ಬಂದ ಮೇಲೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಆ ವಿಷಯವನ್ನು ನಮೂದು ಮಾಡುವುದು ಎಷ್ಟು ಸರಿ? ಪತ್ರ ಬಂದ ಮೇಲೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಚಾರವನ್ನು ಹಾಕುವುದು ಸರಿಯಲ್ಲ ಎನ್ನುವ ದೃಷ್ಟಿಯಿಂದ ಅದನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಹಾಕಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಹಲವಾರು ಸಮಸ್ಯೆಗಳಿರಬಹುದು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ನಿನ್ನೆಯ ಕಾರ್ಯಕಲಾಪಗಳ ಪಟ್ಟಿಯನ್ವಯ ಈ ವಿಚಾರವನ್ನು ನಿಯಮ 72ರಡಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಆಗ ಸರ್ಕಾರ, 'ನೀವು ಮುಖ್ಯಮಂತ್ರಿಗಳ ಹೆಸರಿನಲ್ಲಿ ಪ್ರಸ್ತಾಪ ಮಾಡಿದ್ದೀರಿ, ಮಾನ್ಯ ಮುಖ್ಯಮಂತ್ರಿಗಳು ನಾಳೆ ಈ ಸದನಕ್ಕೆ ಬರುತ್ತಾರೆ. ಆಗ ಇದಕ್ಕೆ ಉತ್ತರ ಕೊಡಿಸಲಾಗುತ್ತದೆ' ಎನ್ನುವ ಮಾತನ್ನು ಹೇಳಿದೆ. ಯಾವುದೇ ಕಾರಣಕ್ಕೂ ನಾವು ತಪ್ಪು ಮಾಡುತ್ತಿಲ್ಲ. ತಾವು ನಮ್ಮ ರಕ್ಷಣೆಗೆ ಬರಬೇಕಾಗಿದೆ. ಸರ್ಕಾರಕ್ಕೆ ಸಮಸ್ಯೆಗಳು ಮತ್ತು ಗೊಂದಲಗಳು ಇರಬಹುದು. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಕೊಟ್ಟಿರುವ ಪ್ರಸ್ತಾವನೆಯನ್ನು ಸ್ವೀಕಾರ ಮಾಡಿ, ನಿನ್ನೆ ದಿನ ಆ ವಿಚಾರ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದ ನಂತರ ಈ ದಿನ ಅದನ್ನು ಕಾರ್ಯಕಲಾಪಗಳ ಪಟ್ಟಿಯಿಂದ ಕೈಬಿಟ್ಟರೆ ಅದಕ್ಕಿಂತ ಘೋರ ಅಪರಾಧ ಮತ್ತೊಂದಿಲ್ಲ ಎನ್ನುವುದು ನನ್ನ ಭಾವನೆಯಾಗಿದೆ. ದಯವಿಟ್ಟು ತಾವು ಇದರ ಬಗ್ಗೆ ಒಂದು ಸ್ಪಷ್ಟ ತೀರ್ಮಾನವನ್ನು ಹೇಳಬೇಕಾಗಿದೆ. ಮಾನ್ಯ ಗೃಹ ಸಚಿವರನ್ನು ಈ ಸದನಕ್ಕೆ ಕರೆದು ಸಂಜೆಯೊಳಗೆ ಈ ವಿಚಾರಕ್ಕೆ ಉತ್ತರ ಕೊಡಿಸಬೇಕೆನ್ನುವುದು ನಮ್ಮ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಹಿಂದೆ ಇಂತಹದೇ ಅನೇಕ ವಿಚಾರಗಳ ಬಗ್ಗೆ ಚರ್ಚೆಯೂ ಆಗಿದೆ. ಆಡಳಿತ ಮತ್ತು ವಿರೋಧ ಪಕ್ಷದಗಳ ನಡುವೆ ವಾಗ್ಯುದ್ಧ ನಡೆದಿದೆ. ವಿರೋಧ ಪಕ್ಷ ಮತ್ತು ಆಡಳಿತ ಪಕ್ಷಗಳು ಚರ್ಚೆ ಮಾಡದೇ ಮತ್ತೆಲ್ಲಿ ಮಾಡುವುದು? ಆದರೆ, ಯಾವುದೇ ಕಾರಣಕ್ಕೂ ಈ ವಿಚಾರವನ್ನು ಕಾರ್ಯಕಲಾಪ ಪಟ್ಟಿಯಿಂದ ಕೈ ಬಿಡುವುದು ಮತ್ತು ಉತ್ತರ ಕೊಡುವುದಕ್ಕೆ ಕಾಲಾವಕಾಶವನ್ನು ಕೇಳಿರುವುದು ಸರಿಯಲ್ಲ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶಿವಶಂಕರರೆಡ್ಡಿ(ಕೃಷಿ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಎರಡು ವಾರಗಳ ಕಾಲಾವಕಾಶವನ್ನು ಕೇಳಿದ್ದೇವೆ.

**ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನಾಳೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇವೆಂದು ಮಾನ್ಯ ಸಭಾ ನಾಯಕರು ಹೇಳಿದ್ದರು.

**ಸಭಾಪತಿಯವರು:-** ಮಾನ್ಯ ಕವಟಗಿಮಠ್‌ರವರೇ, ತಾವು ಒಂದು ನಿಮಿಷ ಕುಳಿತುಕೊಳ್ಳಿ, ಮಾನ್ಯ ಸಭಾ ನಾಯಕರು ಉತ್ತರ ಕೊಡುತ್ತಾರೆ.

**ಡಾ:ಜಯಮಾಲ ರಾಮಚಂದ್ರ(ಸಭಾ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಉತ್ತರ ಕೊಡಿಸುತ್ತೇವೆಂದು ಹೇಳಿರುವುದು ನಿಜ, ಉತ್ತರ ಕೊಡಿಸಬೇಕಾಗಿರುವುದೂ ನಿಜ. ಈ ಎರಡರಿಂದಲೂ ನಾವು ನುಣುಚಿಕೊಂಡು ಹೋಗುತ್ತಿಲ್ಲ. ತಾವು ದಯವಿಟ್ಟು ನಮಗೆ ಸ್ವಲ್ಪ ಕಾಲಾವಕಾಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಆಯನೂರು ಮಂಜುನಾಥ:-** ಸನ್ಮಾನ್ಯ ಸಭಾಪತಿಯವರೇ, ನಿನ್ನೆ ಆ ವಿಚಾರದ ಬಗ್ಗೆ ಚರ್ಚೆ ನಡೆದಂತಹ ಸಂದರ್ಭದಲ್ಲಿ ಎರಡು ವಾರಗಳ ಕಾಲಾವಕಾಶ ಬೇಕೆಂದು ಸರ್ಕಾರ ಸದನದಲ್ಲಿಯೇ ಹೇಳಬೇಕಾಗಿತ್ತು. ಈ ರೀತಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ suo moto ಅಧಿಕಾರವಿಲ್ಲ. ಸರ್ಕಾರವೇ ಬೇರೆ, ಸದನವೇ ಬೇರೆ. ಸರ್ಕಾರದ ಇಚ್ಛೆ ಮೇಲೆ ಈ ಸದನ ನಡೆಯುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸನ್ಮಾನ್ಯ ಸಭಾಪತಿಯವರೇ, ನಾಳೆ ಸದನ ಅರ್ಧ ದಿನ ಮಾತ್ರ ನಡೆಯುತ್ತದೆ. ಆದ್ದರಿಂದ ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ದಿನ ಸಂಜೆಯೊಳಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುವುದಾದರೆ, ಈ ಸದನದಲ್ಲಿ ಕುಳಿತುಕೊಳ್ಳುತ್ತೇವೆ. ಇಲ್ಲದಿದ್ದರೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಕ್ಕೆ ಸರ್ಕಾರದ ಮೇಲೆ ಒತ್ತಡ ತರುವುದಕ್ಕೆ ಹಲವು ಮಾರ್ಗಗಳಿವೆ. ನಾವು ಅದನ್ನು ಪ್ರಯೋಗ ಮಾಡುತ್ತೇವೆ. ಸತ್ಯಕ್ಕೆ ದೂರವಾಗಿರುವ ಉತ್ತರವನ್ನು ಅವರು ಕೊಡಬಾರದು. ಸುಳ್ಳು ಹೇಳುತ್ತಾರೆಂದರೆ ಅವರಿಗೆ ಬೇಸರವಾಗುತ್ತದೆ. ಆದರೆ, ಈ ದಿನ ಸಂಜೆಯೊಳಗೆ ಉತ್ತರ ಕೊಡುವುದಾದರೆ, ನಾವು ಅದನ್ನು ಸ್ವೀಕಾರ ಮಾಡುತ್ತೇವೆ.

**ಡಾ:ಜಯಮಾಲ ರಾಮಚಂದ್ರ:-** ಸನ್ಮಾನ್ಯ ಸಭಾಪತಿಯವರೇ, ನಾವು ಸುಳ್ಳು ಹೇಳುತ್ತಿಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಶಿವಶಂಕರರೆಡ್ಡಿ:–** ಸನ್ಮಾನ್ಯ ಸಭಾಪತಿಯವರೇ, ನಾಳೆ ಬೆಳಿಗ್ಗೆ ಉತ್ತರ ಕೊಡಿಸುವಂತಹ ಪ್ರಯತ್ನ ಮಾಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ನಾಳೆ ಬೆಳಿಗ್ಗೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿನ ಪ್ರಶ್ನೋತ್ತರ ಮತ್ತು ಶೂನ್ಯವೇಳೆ ಮುಗಿಸುವುದಕ್ಕೆ ಅರ್ಧ ದಿನವಾಗುತ್ತದೆ. ನಮಗೇನೂ ತೊಂದರೆಯಿಲ್ಲ ನೀವು ಎಷ್ಟು ಹೊತ್ತಿಗೆ ಬೇಕಾದರು ತೆಗೆದುಕೊಳ್ಳಿ. ಈ ವಿಚಾರದಲ್ಲಿ ದಾಕ್ಷಿಣ್ಯ ಮಾಡುವುದಕ್ಕೆ ಇದು ಸದನ. ಈ ಸದನದ ಪರಂಪರೆಯಲ್ಲಿ ಒಂದು ಬಾರಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಂತಹ ವಿಚಾರಕ್ಕೆ ಸರ್ಕಾರ ಬದ್ಧವಾದ ನಂತರ, ಸರ್ಕಾರ ನನಗೆ ಗೊತ್ತಿಲ್ಲ ಎಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ.

**ಶ್ರೀ ಯು.ಟಿ.ಖಾದರ್:–** ಸನ್ಮಾನ್ಯ ಸಭಾಪತಿಯವರೇ, ಯಾರು ಉತ್ತರ ಕೊಡುತ್ತಾರೆ ಎನ್ನುವುದು ಮುಖ್ಯವಲ್ಲ. ಏತಕ್ಕೋಸ್ಕರ ಕಾರ್ಯಕಲಾಪಗಳ ಪಟ್ಟಿಯಿಂದ ಈ ವಿಚಾರವನ್ನು ಕೈಬಿಡಲಾಗಿದೆ ಎನ್ನುವುದಕ್ಕೆ ಸರ್ಕಾರ ಉತ್ತರ ಕೊಡುತ್ತದೆ,

(ಮುಂದು)

(427)13–12–2018(1.20)ಪಿಕೆ–ಎಕೆ

(ಗೊಂದಲ)

**ಶ್ರೀ ಯು.ಟಿ.ಖಾದರ್:–** ಅಜೆಂಡಾದಲ್ಲಿ ಏಕೆ ಬಿಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಸಭಾಪತಿಯವರು ಹೇಳುತ್ತಾರೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಬಂದುದನ್ನು ಬಿಡಬಾರದು ಎನ್ನುವ ಕಾಯಿದೆ ಏನೂ ಇಲ್ಲ. ಮಾನ್ಯ ಹೊರಟ್ಟಿಯವರನ್ನು ಬೇಕಾದರೆ ಕೇಳಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಸಮಸ್ಯೆ ಇದ್ದರೆ ಹೇಳಲಿ. ಸರ್ಕಾರ ಒಂದು ಸಲ ಕಮಿಟ್ ಆದನಂತರ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಕ್ಕೆ ಆಗುವುದಿಲ್ಲ. ಸಂಜೆಯೊಳಗೆ ಉತ್ತರ ಕೊಡಿಸುತ್ತೇವೆ ಎಂದು ಹೇಳಿದರೆ ನಾವು ಸ್ವೀಕಾರ ಮಾಡುತ್ತೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–**ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಬಂದ ವಿಷಯವನ್ನು ಯಾವ ಕಾರಣಕ್ಕೋಸ್ಕರ ಬಿಟ್ಟುಬಿಟ್ಟರು ಎಂಬುದನ್ನು ಸರ್ಕಾರ ವಿರೋಧ ಪಕ್ಷದ ನಾಯಕರಿಗೆ ತಿಳಿಸಬೇಕು. ಅದಕ್ಕೆ ಅನೇಕ ಕಾರಣಗಳಿರಬಹುದು. ಹಾಗೆ ಒಂದು ವೇಳೆ ಅಜೆಂಡಾದಿಂದ ವಿಷಯವನ್ನು ಬಿಟ್ಟರೂ ಅದು ಅಂತಹ ದೊಡ್ಡ ಅಪರಾಧ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರ ಇದನ್ನು ಸ್ಪಷ್ಟಪಡಿಸಬೇಕು. ಕೆಲವು ಸಲ ಸಂಬಂಧಪಟ್ಟ ಮಂತ್ರಿಗಳಿರುವುದಿಲ್ಲ. ನಿಯಮ 330 ಇರಬಹುದು, ಗಮನ ಸೆಳೆಯುವ ಸೂಚನೆ ಇರಬಹುದು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇವುಗಳ ಅಡಿಯಲ್ಲಿ ಬರುವ ವಿಷಯಗಳು ಕೋರ್ಟ್‌ನಲ್ಲಿರುತ್ತದೆ. ಅಂತಹ ಸಂದರ್ಭಗಳಲ್ಲಿ ಅಜೆಂಡಾದಲ್ಲಿ ಬಂದಂತಹ ವಿಷಯವನ್ನು ತೆಗೆದು ಹಾಕಲಾಗುವುದು. ಸರ್ಕಾರ, ಅಜೆಂಡಾದಲ್ಲಿ ಇದ್ದುದನ್ನು ಏಕೆ ಬಿಟ್ಟಿದ್ದಾರೆ ಎನ್ನುವುದಕ್ಕೆ ಸರಿಯಾದ ಕಾರಣವನ್ನು ವಿರೋಧ ಪಕ್ಷದವರಿಗೆ ಹೇಳಬೇಕು. ನೀವು ಹೇಳಿದ್ದು ಅವರಿಗೆ ಮನವರಿಕೆಯಾದರೆ ಮುಂದಿನ ದಾರಿ ಹುಡುಕಬೇಕಾಗುತ್ತದೆ. ಸದನ ಪ್ರಾರಂಭವಾದ ಕೂಡಲೇ, ಅಜೆಂಡಾದಲ್ಲಿದ್ದ ಇಂತಹ ವಿಷಯವನ್ನು ಇಂತಹ ಕಾರಣಕ್ಕಾಗಿ ಬಿಟ್ಟಿದ್ದೇವೆ ಎಂದು ಸರ್ಕಾರ suo moto ಹೇಳಬೇಕು. ಆದರೆ ನೀವು ಹಾಗೆ ಹೇಳದೇ ಇದ್ದುದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ನೀವು ಉತ್ತರ ನೀಡಿದ ಮೇಲೆ ಒಂದು ತೀರ್ಮಾನ ತೆಗೆದುಕೊಳ್ಳಬಹುದಾಗಿರುತ್ತದೆ. ಅಜೆಂಡಾದಿಂದ ಕೈಬಿಟ್ಟಿದ್ದಕ್ಕೆ ಕಾರಣ ಕೊಡಬೇಕಾಗಿತ್ತು; justification ಕೊಡಬೇಕಾಗಿತ್ತು. ಆದರೆ ನೀವು ಹಾಗೆ ಮಾಡಲಿಲ್ಲ. ಅಜೆಂಡಾದಲ್ಲಿ ಇದ್ದ ವಿಷಯವನ್ನು ಏಕೆ ತೆಗೆದಿದ್ದೀರಿ ಎನ್ನುವುದಕ್ಕೆ ಕಾರಣವನ್ನು ಈಗಲಾದರೂ ಹೇಳಿ.

**ಸಭಾಪತಿಯವರು:–** ನಿನ್ನೆ ನನ್ನ ಕಚೇರಿಗೆ ಮುಖ್ಯಮಂತ್ರಿಯವರಿಂದ ಪತ್ರ ಬಂದಿತ್ತು. ಅದರಲ್ಲಿ ಎರಡು ವಾರಗಳ ಕಾಲಾವಕಾಶ ಕೇಳಲಾಗಿತ್ತು. ಅಜೆಂಡಾದಲ್ಲಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳಿಂದ ಪತ್ರ ಬಂದಮೇಲೂ ಅದನ್ನು ಅಜೆಂಡಾದಲ್ಲಿ ಹಾಕುವುದು ಸರಿಯಲ್ಲ. ಒಂದು ವೇಳೆ ಸಚಿವರು ಅಥವಾ ಸಭಾನಾಯಕರು, ಯಾವಾಗ ಉತ್ತರ ಕೊಡಿಸುತ್ತಾರೆ ಎನ್ನುವುದನ್ನು ಹೇಳಬಹುದು.

**ಶ್ರೀ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಆ ವಿಚಾರ ಇನ್ನು ಚರ್ಚೆಯೇ ಆಗಿಲ್ಲ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ನೀಡಲು ಎರಡು ವಾರಗಳ ಕಾಲಾವಕಾಶ ಬೇಕು ಎಂದು ಮುಖ್ಯಮಂತ್ರಿಗಳ ಕಚೇರಿಯಿಂದ ಪತ್ರ ಬಂದಿದೆ. ಆದರೆ 2 ವಾರಗಳ ಕಾಲ ಸದನ ನಡೆಯುವುದಿಲ್ಲ. ಮುಖ್ಯಮಂತ್ರಿಗಳಿಂದ ಪತ್ರ ಬಂದನಂತರ, ಅಜೆಂಡಾದಿಂದ ಬಿಟ್ಟಿದ್ದಕ್ಕೆ valid reason ಇರುತ್ತದೆ. ಆದರೆ, ಉತ್ತರ ಕೊಡಲು 15 ದಿವಸಗಳ ಕಾಲಾವಕಾಶ ಬೇಕು ಎನ್ನುವುದು ಸರಿಯಲ್ಲ. ಹಾಗಾಗಿ, ನಾಳೆಯೋ, ಸೋಮವಾರವೋ ಅಥವಾ ಮಂಗಳವಾರವೋ ಉತ್ತರ ಕೊಡಿಸುತ್ತೇವೆ ಎಂದು ಹೇಳಬೇಕು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲು 15 ದಿವಸಗಳ ಕಾಲಾವಕಾಶ ಬೇಕಾಗಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತನ್ನಿ. ಒಂದು ವೇಳೆ, 18 ನೇ ತಾರೀಖಿನಂದು ಉತ್ತರ ಕೊಡಿಸುತ್ತೇವೆ ಎಂದು ಹೇಳಿದರೂ ಪರವಾಗಿಲ್ಲ; ಆದರೆ ಅಜೆಂಡಾದಿಂದ ವಿಷಯನ್ನು ಕೈಬಿಟ್ಟಿದ್ದು ತಪ್ಪಲ್ಲ ಎಂದು ಹೇಳಬಲ್ಲೆ.

**ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರ ಭಾವನೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಅವರಿಂದ ಉತ್ತರ ಕೊಡಿಸುವ ವ್ಯವಸ್ಥೆ ಮಾಡಿಸುತ್ತೇನೆ. 2 ದಿವಸ ಕಾಲಾವಕಾಶ ಕೊಡಿ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾನಾಯಕರೇ, ಸದನ ಮುಗಿಯುವುದರೊಳಗಾಗಿ ಉತ್ತರ ಕೊಡಿಸುತ್ತೇವೆ ಎಂದು ಹೇಳಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇವತ್ತು ಸಂಜೆಯ ಒಳಗೆ ಉತ್ತರ ಕೊಡಿಸುತ್ತೇವೆ ಎಂದು ಹೇಳಿ. ಅಜೆಂಡಾದಲ್ಲಿರುವ ವಿಷಯಗಳ ಬಗ್ಗೆ ಚರ್ಚೆ ಮಾಡಬಹುದು, ಉತ್ತರ ಕೊಡಬಹುದು ಅಥವಾ ನಾವು ವಾದ ಮಾಡಬಹುದು; ಅದು ಪ್ರಜಾಪ್ರಭುತ್ವದ ಲಕ್ಷಣ. ಸರ್ಕಾರದವರು ಉತ್ತರ ಕೊಡುವ ಸಾಮರ್ಥ್ಯ ಹೊಂದಿದ್ದಾರೆ ಎಂದೇ ನಾವು ಪ್ರಶ್ನೆಯನ್ನು ಕೇಳಿದ್ದೆವು. ಸರಿ–ತಪ್ಪುಗಳ ಬಗ್ಗೆ ಚರ್ಚೆ ಮಾಡೋಣ. ಇಲ್ಲಿ ಗೊಂದಲಗಳಾಗುವುದು ಬೇಡ. ಸರ್ಕಾರಕ್ಕೆ ಸಮಸ್ಯೆಗಳಾದರೆ, ಸವಾಲುಗಳಾದರೆ ಇಂತಹ ಚರ್ಚೆಗಳು ನಡೆಯುತ್ತವೆ. ಆದರೆ ನಿನ್ನೆ ಸರ್ಕಾರ, ನಾಳೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇವೆ ಎಂದು ಹೇಳಿದೆ. ನಾಳೆ ಎಂದರೆ ಇವತ್ತು. ಇನ್ನೊಂದು ದಿವಸ ಕೊಡುತ್ತೇನೆ, ನಾಳೆ ಕೊಡಿಸುತ್ತೇನೆ ಅಥವಾ ಸೋಮವಾರ ಕೊಡಿಸುತ್ತೇನೆ ಎಂದು ಹೇಳುವುದು ಸರ್ಕಾರಕ್ಕೆ ಗೌರವ ತರುವಂಥದ್ದಲ್ಲ. ಇವತ್ತು ಎಷ್ಟೇ ಹೊತ್ತಾಗಲಿ ನಾವು ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಾಗಿದ್ದೇವೆ. ಮುಖ್ಯ ಮಂತ್ರಿಗಳಿಂದ ಇವತ್ತೇ ಉತ್ತರ ಕೊಡಿಸಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಇಂತಹ ವಿಷಯಗಳು ಇದ್ದಾಗ, ಇವತ್ತೇ ಸರ್ಕಾರ ಉತ್ತರ ಕೊಡಬೇಕು ಎಂದು ಹೇಳುವುದಕ್ಕೆ ಬರುವುದಿಲ್ಲ. ಯಾವ ಸರ್ಕಾರವೇ ಆಗಲಿ ಆ ರೀತಿ ಉತ್ತರ ಕೊಡುವುದೂ ಸಾಧ್ಯವಿಲ್ಲ. ಆದರೆ, ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವಾಗ ಉತ್ತರ ಕೊಡಬಹುದು ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಚರ್ಚೆ ಮಾಡಿ, ಇಂತಹ ನಿರ್ದಿಷ್ಟ ದಿನಾಂಕದಂದು ಉತ್ತರ ಕೊಡಿಸುತ್ತೇವೆ ಎಂದು ಮಧ್ಯಾಹ್ನ ಬಂದು ಹೇಳಿ. ಈ ಕುರಿತು ಹೆಚ್ಚಾಗಿ ಏಕೆ ಮಾತನಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಮಾರ್ಗದರ್ಶನದ ರೂಪದಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆದರೆ ಅವರು ಹೇಳಿದ್ದನ್ನೇ ಕೇಳಬೇಕು ಎನ್ನುವುದು ನಿಯಮಗಳಲ್ಲಿ ಇಲ್ಲ. ಪ್ರತಿಪಕ್ಷದವರಾದ ನಮಗೂ ಕೂಡ ಜವಾಬ್ದಾರಿ ಇದೆ. ನಾವು ಪೀಠಕ್ಕೂ ಗೌರವ ಕೊಡುತ್ತೇವೆ ಮತ್ತು ಹಿರಿಯರಾದ ಮಾನ್ಯ ಹೊರಟ್ಟಿಯವರ ಮಾತಿಗೂ ಗೌರವ ಕೊಡುತ್ತೇವೆ. ಆದರೆ, ಮಾನ್ಯ ಹೊರಟ್ಟಿಯವರು ಹೇಳಿದ್ದನ್ನೇ ಕೇಳಬೇಕು ಎಂದಿಲ್ಲ. ಇವತ್ತು ಸಂಜೆಯೊಳಗಾಗಿ ಸರ್ಕಾರ ಉತ್ತರ ಕೊಡುತ್ತದೆ ಎನ್ನುವುದಾದರೆ ಎಷ್ಟೇ ಹೊತ್ತಾದರೂ ನಾವು ಕುಳಿತುಕೊಳ್ಳುತ್ತೇನೆ.

**ಶ್ರೀ ಸಾ.ರಾ.ಮಹೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆಯೇ ನಾವು ಉತ್ತರ ಕೊಡಬೇಕು ಎಂಬ ಕಟ್ಟುಪಾಡುಗಳಿಲ್ಲ. ಉತ್ತರ ಕೊಡಲು ಸಮಯಬೇಕು ಎಂದು ಹೇಳುತ್ತಿದ್ದೇವೆ; ನಮಗೆ ಸಮಯ ಕೊಡಲಿ. ಇವತ್ತೇ ಉತ್ತರ ಕೊಡಬೇಕು ಎಂದು ನಮ್ಮ ಮೇಲೆ ಒತ್ತಾಯ ತರುವ ಹಾಗಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಸರ್ಕಾರ ರಾಜಧರ್ಮವನ್ನು ಪಾಲಿಸಬೇಕು. ಮನಸ್ಸಿಗೆ ಬಂದ ಹಾಗೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ನಾವು ಸರ್ಕಾರವನ್ನು ಕೇಳುತ್ತಿದ್ದೇವೆ. ಮಾನ್ಯ ಭೋಜೇಗೌಡರು ಸರ್ಕಾರವೇ?

(ಗೊಂದಲ)

**ಸಭಾಪತಿಯವರು:-** ಮಾನ್ಯ ಭೋಜೇಗೌಡರೇ ತಮಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**Sri S.L. BOJEGOWDA:** There should be a limit for everything. ಮಾನ್ಯ ವಿರೋಧ ಪಕ್ಷದ ನಾಯಕರ ಮಾತಿಗೆ ನಾವು ಗೌರವ ಕೊಡುತ್ತೇವೆ, ಆದರೆ ಇವತ್ತೇ ಉತ್ತರ ಕೊಡಬೇಕೆಂದು restrict ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಯು.ಟಿ.ಖಾದರ್(ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):-**ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಇದ್ದ ವಿಷಯವನ್ನು ಏಕೆ ಬಿಡಲಾಗಿದೆ ಎಂಬುದನ್ನು ತಾವು ಹೇಳಿದಿರಿ. ಉತ್ತರ ಕೊಡುವುದಕ್ಕೆ 2 ವಾರ ಕಾಲಾವಕಾಶ ತೆಗೆದುಕೊಂಡರೆ ಅಷ್ಟೊತ್ತಿಗೆ ಅಧಿವೇಶನ ಮುಗಿದಿರುತ್ತದೆ, ಅದರ ಒಳಗೆಯೇ ಉತ್ತರ ಕೊಡಬೇಕು ಅಥವಾ ಇವತ್ತು ಸಂಜೆಯ ಒಳಗೆ ಉತ್ತರ ಬರಬೇಕು ಎನ್ನುವುದು ವಿರೋಧ ಪಕ್ಷದವರ ವಾದವಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾವು ಯಾವ ಪ್ರಶ್ನೆ ಕೇಳಬೇಕು ಎನ್ನುವುದು ನಮಗೆ ಗೊತ್ತಿದೆ, ನಮ್ಮಲ್ಲಿ ಸ್ಪಷ್ಟತೆ ಇದೆ. ಸರ್ಕಾರದಲ್ಲಿ ಸ್ಪಷ್ಟತೆ ಇದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ನಿನ್ನೆ ಅಜೆಂಡಾದಲ್ಲಿ ಬಂದ ವಿಷಯಕ್ಕೆ ಸಂಬಂಧಪಟ್ಟಂತೆ ಇವತ್ತು ಮುಖ್ಯಮಂತ್ರಿಗಳು ಬಂದು ಉತ್ತರ ಕೊಡುತ್ತಾರೆ ಎಂದು ಹೇಳಿದ್ದಾರೆ. ನೀವು ಹೇಳಿದ್ದನ್ನು ನಾವು ಗೌರವದಿಂದ ಸ್ವೀಕಾರ ಮಾಡಿದೆವು; ಸರ್ಕಾರ ಹೇಳಿದ್ದನ್ನು ನಾವು ನಂಬಿಬಿಟ್ಟೆವು. ಆದರೆ ಇವತ್ತು, ಮುಖ್ಯಮಂತ್ರಿಗಳಿಂದ ಪತ್ರ ಬಂದಿದೆ, ಉತ್ತರವನ್ನು ಎರಡು ವಾರದ ನಂತರ ಕೊಡುತ್ತೇವೆ ಎಂದು ಹೇಳುವುದು ಪಲಾಯನವಾದ. ಅಜೆಂಡಾದಲ್ಲಿ ಬರುವ ವಿಚಾರಗಳ ಬಗ್ಗೆ ಉತ್ತರ ಕೊಡುವಾಗ ಕೆಲವು ಸಮಸ್ಯೆಗಳು ಬರುತ್ತವೆ. ಪ್ರಜಾಪ್ರಭುತ್ವದಲ್ಲಿ ನೀವು ಒಪ್ಪದೇ ಇರುವಂತಹ, ನಾವು ಒಪ್ಪದೇ ಇರುವಂತಹ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತವೆ. ಆ ಚರ್ಚೆಗಳು ವಿವಾದಗಳಿಗೆ ದಾರಿ ಮಾಡಿಕೊಡುತ್ತದೆ. ಸಭಾತ್ಯಾಗ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಆಗುತ್ತದೆ, ಧರಣಿಗಳು ನಡೆಯುತ್ತವೆ. ಕಟುವಾದ ಶಬ್ದಗಳ ವಿನಿಮಯ ಆಗುತ್ತದೆ. ಇದು ಪ್ರಜಾಪ್ರಭುತ್ವದ ಜೀವಂತಿಕೆಯ ಲಕ್ಷಣವಾಗಿರುತ್ತದೆ. ಸರ್ಕಾರ ಮಾತು ತಪ್ಪಬಾರದು. ಕರ್ನಾಟಕದ ಮುಖ್ಯಮಂತ್ರಿಯವರ ಪರವಾಗಿ ಸಭಾನಾಯಕರು ಕೊಟ್ಟಿರುವ ಮಾತಿನ ಪ್ರಕಾರ ಇವತ್ತು ಉತ್ತರ ಕೊಡಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಅವರ ಆಗ್ರಹ ತಪ್ಪಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರ ಏನು ನಿನ್ನೆ ಬದ್ಧತೆಯಿಂದ ಮಾತನಾಡಿದೆಯೋ ಆ ಮಾತನ್ನು ಉಳಿಸಿಕೊಳ್ಳಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಭೋಜೇಗೌಡರು ಮಾತನಾಡಲು ಕೈ ಎತ್ತುತ್ತಿದ್ದಾರೆ. ಅವರ ಅಭಿಪ್ರಾಯ ಹೇಳಲಿ.

(ಗೊಂದಲ)

**ಡಾ:ತೇಜಸ್ವಿನ ಗೌಡ:–** ಮಾನ್ಯ ಸಭಾನಾಯಕರಿಂದ ಉತ್ತರ ಪಡೆದುಕೊಳ್ಳುವುದು ನಮ್ಮ ಹಕ್ಕು.

(ಗೊಂದಲ)

(428)13–12–2018 ಡಿಎಸ್–ಆರ್‌ಎನ್ 1.30

**ಡಾ:ತೇಜಸ್ವಿನಿ ಗೌಡ:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಭಾನಾಯಕರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಬೇಕು. ಅವರಿಂದ ಉತ್ತರ ಬಯಸುವುದು ನಮ್ಮ ಹಕ್ಕು. ಬೇರೆಯವರು ಏಕೆ ಮಧ್ಯೆ ಪ್ರವೇಶ ಮಾಡಿ ಮಾತನಾಡುತ್ತಾರೆ? ಅವರು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುವುದಕ್ಕೆ ಸಮರ್ಥರಿದ್ದಾರೆ.

**ಶ್ರೀ ಯು.ಟಿ.ಖಾದರ್:–** ಅವರ ಮಾತನ್ನು ನೀವು ಒಪ್ಪುತ್ತೀರಾ?

**ಡಾ:ತೇಜಸ್ವಿನಿಗೌಡ:–** ಅವರು ಸಭಾನಾಯಕರಾಗಿದ್ದಾರೆ. ಮಹಿಳೆಯರಿಗೆ ಮಾತನಾಡುವುದಕ್ಕೆ ಬಿಡಿ.

**ಶ್ರೀ ಯು.ಟಿ.ಖಾದರ್:–** ನೀವು ಮಹಿಳೆಯರಿಗೆ ಗೌರವ ಕೊಡಿ.

**ಶ್ರೀ ಅರುಣಶಹಾಪುರ:–** ಮಾನ್ಯ ಸಭಾಪತಿಯವರೆ, ನಾನು ಒಂದು ಸಂಗತಿಯನ್ನು ಕೇಳುತ್ತೇನೆ.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ತಮ್ಮ ಪರವಾಗಿ ಮಾತನಾಡಿದ್ದಾರೆ, ತಾವು ಕುಳಿತುಕೊಳ್ಳಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೆ, ಈ ವಿಷಯದಲ್ಲಿ 15 ದಿನ ಕಾಲಾವಕಾಶ ಕೇಳುವುದಕ್ಕೆ ಏನಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾಹಿತಿ ಸಂಗ್ರಹ ಮಾಡಬೇಕಾಗಿದೆಯೇ, ರಾಜ್ಯದಾದ್ಯಂತ ಏನಾದರೂ ಮಾಹಿತಿ ತರಿಸಿಕೊಳ್ಳುವುದಿದೆಯೇ, ಏನೂ ಇಲ್ಲ. ಇದು ನೇರವಾಗಿ ಮುಖ್ಯಮಂತ್ರಿಗಳೇ ನಿಲುವು ತೆಗೆದುಕೊಂಡು ಹೇಳಬೇಕಾಗಿರುವ ಸಂಗತಿಯಾಗಿದೆ. 15 ದಿನಗಳ ಕಾಲಾವಕಾಶ ಕೇಳಿರುವುದನ್ನು ನೋಡಿದರೆ ಸರ್ಕಾರ ಎಲ್ಲೋ ಪಲಾಯನವಾದ ಮಾಡುವ ಸಲುವಾಗಿಯೇ ಇದನ್ನು ಮಾಡುತ್ತಿದೆ ಎನ್ನುವ ಭಾವನೆ ಬರುತ್ತಿದೆ. ಅಧಿವೇಶನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇರುವವರೆಗೂ ಸಮಯವನ್ನು ಕೇಳಿದ್ದಾರೆ ಅಂದರೆ, ಸರ್ಕಾರ ಸದನಕ್ಕೆ ಉತ್ತರ ಕೊಡದೆ ಬೆನ್ನು ತೋರಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಅರುಣ ಶಹಾಪುರ ರವರು ಮುಖ್ಯಮಂತ್ರಿಯಲ್ಲ. ಮುಖ್ಯಮಂತ್ರಿಯಾದವರಿಗೆ ಅವರದ್ದೇ ಲಿಮಿಟ್ಸ್ ಇರುತ್ತವೆ, ಅವರದ್ದೇ ಸಮಸ್ಯೆಗಳಿರುತ್ತವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಬಸವರಾಜ ಹೊರಟ್ಟಿಯವರೆ, ಈ ವಿಷಯ ನೋಡಿದರೆ 15 ದಿನಗಳ ಕಾಲಾವಕಾಶ ಬೇಕಾಗುತ್ತದೆ ಎಂದು ತಮಗೆ ಅನಿಸುತ್ತದೆಯೆ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಇವತ್ತೇ ಕೊಡಬೇಕೆಂದು ಕಾನೂನು ಎಲ್ಲಿದೆ? ನೀವು ಹೇಳಿದ ಹಾಗೆ ಸರ್ಕಾರ ನಡೆದುಕೊಳ್ಳಬೇಕೇ? ಸರ್ಕಾರ ಉತ್ತರ ಕೊಡುತ್ತದೆ, ಅದಕ್ಕೆ ನೀವು ಏಕೆ ಒತ್ತಾಯ ಮಾಡುತ್ತಿದ್ದೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಮ್ಮ ಅತ್ಯಂತ ಹಿರಿಯ ಸದಸ್ಯರಾಗಿರುವಂತಹ ಮಾನ್ಯ ಬಸವರಾಜ ಹೊರಟ್ಟಿಯವರ ರಕ್ಷಣಾತ್ಮಕ ಆಟ ನಮಗೆ ಅರ್ಥವಾಗುತ್ತದೆ. ಆದರೆ ಸರ್ಕಾರ commitment ಮಾಡಿರುವುದರಿಂದ, ಮುಖ್ಯಮಂತ್ರಿಗಳಿಗೆ ಸಮಯವಿಲ್ಲವೆಂದರೂ ಒಂದು ವೇಳೆ ಸರ್ಕಾರ ನಿರ್ಧಾರ ಮಾಡಿದರೆ ಅನ್ಯ ಮಂತ್ರಿಗಳಿಂದಲೂ ಉತ್ತರ ಕೊಡಿಸಿದಂತಹ ಉದಾಹರಣೆಗಳು, ಗೃಹ ಮಂತ್ರಿಗಳ ಮೂಲಕ ಉತ್ತರ ಕೊಟ್ಟಂಥ ಅನೇಕ ಉದಾಹರಣೆಗಳಿವೆ. ಆದ್ದರಿಂದ ಈ ರಕ್ಷಣಾತ್ಮಕವಾದಂತಹ ಆಟ ಬೇಡ. ಆದ್ದರಿಂದ ಸರ್ಕಾರದವರು 'ಇವತ್ತು ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ನಾವು ಉತ್ತರ ಕೊಡಿಸುತ್ತೇವೆ' ಎಂದು ನಿನ್ನೆ ಏನು ಮಾತು ಕೊಟ್ಟಿದ್ದಾರೆ, ಅದರಂತೆ ನಡೆದುಕೊಳ್ಳಬೇಕೆಂದು ನಾವು ಆಗ್ರಹ ಮಾಡುತ್ತಿದ್ದೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು well experienced. ಅವರ ಅನುಭವದ ಮಾತುಗಳನ್ನು ಕೇಳಿ ನನಗೆ ಬಹಳ ಆಘಾತವಾಯಿತು. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಇಷ್ಟು ಅನುಭವವಿದ್ದೂ, ಈಗ ಮಾತನಾಡುವಾಗ 'ರಕ್ಷಣಾತ್ಮಕ ಆಟ' ಎಂದು ಹೇಳಿದರು. ನಮ್ಮ ರಕ್ಷಣೆಗೆ ಸರ್ಕಾರ ಬರದೆ ಇನ್ನು ಯಾರು ಬರಬೇಕು?

(ಗೊಂದಲ)

**ಶ್ರೀ ಸ್ವಾ.ರಾ.ಮಹೇಶ್:–** ಸರ್ಕಾರದಲ್ಲಿ ಯಾರಾದರೂ ಉತ್ತರ ಕೊಡಬಹುದು, ಅದನ್ನು ತಾವು ಅರ್ಥ ಮಾಡಿಕೊಳ್ಳಿ.

**ಶ್ರೀ ಎಸ್.ಎಲ್.ಭೋಜೇಗೌಡ:–** ಮಾನ್ಯ ಸಭಾಪತಿಯವರೆ, ರಕ್ಷಣಾತ್ಮಕ ಆಟವನ್ನು ಯಾವಾಗ ಆಡಬೇಕೆಂಬುದು ಕ್ರಿಕೆಟ್ ಆಟಗಾರನಿಗೆ ಗೊತ್ತಿರುತ್ತದೆ. ರಕ್ಷಣಾತ್ಮಕ ಆಟವನ್ನು ಯಾವಾಗ ಆಡಿದ್ದಾರೆ? ಮುಖ್ಯಮಂತ್ರಿಗಳನ್ನು ಮಾತನಾಡಿಸಿ ಅವರ ಹತ್ತಿರ ಸಮಯ ತೆಗೆದುಕೊಂಡು ನಂತರ ಹೇಳುತ್ತೇನೆ ಎಂದು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು insisit ಮಾಡುವುದು ಎಷ್ಟರ ಮಟ್ಟಿಗೆ ಸರಿ ಎನ್ನುವುದನ್ನು ಅವರೇ ತಿಳಿದುಕೊಳ್ಳಬೇಕು, ಅದನ್ನು ನಾನು

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಹೇಳುವುದಿಲ್ಲ. Because of his vast knowledge and experience ಅವರು insist ಮಾಡುತ್ತಿದ್ದಾರೆಲ್ಲಾ, ಆ ರೀತಿ insist ಮಾಡುವುದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ನಾನು ಕೇಳುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ನಾನು ಸರ್ಕಾರಕ್ಕೆ ಆಗ್ರಹಪಡಿಸುತ್ತಿರುವುದೇನೆಂದರೆ, ಈ ಅಜೆಂಡಾಕ್ಕೆ ಸಂಬಂಧಪಟ್ಟಂತೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸುತ್ತೇನೆಂದು ಅವರು ನಿನ್ನೆ ಹೇಳಿದ್ದಾರೆ. ಅವರು ಈಗ ಕೊಟ್ಟಿರುವ ಸಮಯವನ್ನು ನಾವು ಒಪ್ಪುತ್ತಿಲ್ಲ. ನಾವು ಸರ್ಕಾರಕ್ಕೆ ಆಗ್ರಹಪೂರ್ವಕವಾದ ವಿನಂತಿಯನ್ನು ಮಾಡುತ್ತಿದ್ದೇವೆ. ಇದು ಪ್ರಜಾಪ್ರಭುತ್ವದಲ್ಲಿ ನಮಗಿರುವ ಹಕ್ಕು. "ದಯವಿಟ್ಟು ಇವತ್ತು ಸಂಜೆಯೊಳಗೆ ಈ ಅಜೆಂಡಾಕ್ಕೆ ಉತ್ತರವನ್ನು ಕೊಡಿಸುತ್ತೀರೋ ಇಲ್ಲವೋ? ಮಾನ್ಯ ಕೃಷ್ಣಭೈರೇಗೌಡರೆ, ತಾವು ಎರಡು ರೀತಿಯಲ್ಲಿ ಗಮನಿಸುತ್ತೀರಿ. ಇಂತಹ ಸಮಸ್ಯೆಗಳು ಬಂದಾಗ ಆಚೀಚೆ ಮಾಡುವುದೆಲ್ಲಾ ಸರ್ಕಾರದಲ್ಲಿರುತ್ತದೆ, ಅದನ್ನು ನಾನು ಒಪ್ಪಿಕೊಂಡೆ. ಇನ್ನೊಂದು ಬಹಳ ಬುದ್ಧಿವಂತಿಕೆಯಿಂದ ಉತ್ತರ ಕೊಟ್ಟು ಅದನ್ನು ಸರಿ ಮಾಡಿಕೊಳ್ಳುವ ಅವಕಾಶಗಳು ತಮಗಿದೆ. ಸರ್ಕಾರ ಎಂದೂ ಕೂಡ ಪಲಾಯನವಾದ ಮಾಡಬಾರದು. ನಾನು ಆ ರೀತಿಯ ಆರೋಪ ಮಾಡುತ್ತಿಲ್ಲ. ನಾವು ತಂದಿರುವಂತಹ ಅಜೆಂಡಾವನ್ನು ನೀವು ಒಪ್ಪಬಹುದು, ಒಪ್ಪದಿರಬಹುದು, ಚರ್ಚೆಗೆ ಬಂದರೆ ಒಂದಿಷ್ಟು ಇರಿಸು ಮುರಿಸು ಆಗುತ್ತದೆ ಎಂದಿರಬಹುದು, ಮಾಧ್ಯಮಗಳಲ್ಲಿ ಪ್ರಸಾರವಾಗುತ್ತದೆ ಏಕೆ ಎಂದು ಅನಿಸಿರಬಹುದು. ಒಂದು ರೀತಿಯಲ್ಲಿ ನೀವು ಜಾಗ್ರತರಾಗಿಯೂ ಇರಬಹುದು. ಇವೆಲ್ಲಾ ಸರ್ಕಾರದಲ್ಲಿರುತ್ತದೆ, ನಾನು ಇಲ್ಲ ಎಂದು ಹೇಳುವುದಿಲ್ಲ. ನಿನ್ನೆ ಅಜೆಂಡಾದಲ್ಲಿ ಬಂದಿದೆ, ನೀವು ಉತ್ತರ ಕೊಟ್ಟಾಯಿತು. ಸರ್ಕಾರ ವಚನಭ್ರಷ್ಟವಾಗಬಾರದು, ವಚನಭ್ರಷ್ಟವಾಗುವುದಿಲ್ಲ. ನಿಮ್ಮಂಥ ಬುದ್ಧಿವಂತರು ಇರುವಂತಹ ಸರ್ಕಾರದಲ್ಲೂ ಕೂಡ ಈ ರೀತಿ ತಪ್ಪಿ ನಡೆಯುತ್ತೀರಿ ಎಂದರೆ, ಸದನದಲ್ಲಿ ಪ್ರಜಾಪ್ರಭುತ್ವದ ರಕ್ಷಣೆಯನ್ನು ಹೇಗೆ ಮಾಡುತ್ತೀರಿ? ಮಾನ್ಯ ಯು.ಟಿ.ಖಾದರ್‌ರವರೆ, ತಾವು ಮೊನ್ನೆ ಇಡೀ ರಾಜ್ಯ ಒಪ್ಪುವಂತಹ ಉತ್ತರವನ್ನು ಕೊಟ್ಟಿದ್ದೀರಿ. ಉತ್ತರ ಸರಿಯೋ ತಪ್ಪೋ ಅದು ಬೇರೆ. ಆದರೆ ಉತ್ತರ ಕೊಡುವ ಶೈಲಿ ಏನಿದೆ, ಅದನ್ನು ಯಾರಾದರೂ ಒಪ್ಪಬಹುದು. ಹಾಗಾಗಿ ನಾನು ಹೇಳುವುದೇನೆಂದರೆ, ನಿಮ್ಮಂತಹ ಮಂತ್ರಿಗಳಿರುವಾಗ ಅತ್ಯಂತ ಗೌರವದಿಂದ ಅಜೆಂಡಾ ತನ್ನಿ. ಇವತ್ತು ಸಂಜೆ 6 ಗಂಟೆ ಅಥವಾ 7 ಗಂಟೆಗೆ ನಾವು ಉತ್ತರ ಕೊಡುತ್ತೇವೆ ಎಂದು ಹೇಳಿ. ಚರ್ಚೆ ಮಾಡೋಣ. ನಾವು ಯಾರಾದರೂ ತಪ್ಪು ಮಾಡಿದರೆ ಜನ ನಮ್ಮನ್ನು ಗಮನಿಸುತ್ತಾರೆ. ಪ್ರಜಾಪ್ರಭುತ್ವದ ರಕ್ಷಣೆಯೇ ಬೇಡ, ಒಂದಷ್ಟು ಸಮಯ ಕೇಳುವ ತಂತ್ರಕ್ಕೆ ಮಣಿಯುವುದು ಸರಿಯಲ್ಲ ಎಂದು ಅನಿಸುತ್ತಿದೆ. ಇದರ ಬಗ್ಗೆ ಸರ್ಕಾರಕ್ಕೆ ಸ್ಪಷ್ಟತೆ ಇಲ್ಲ. ಇವತ್ತು ಸಂಜೆಯೊಳಗೆ ಉತ್ತರ ಕೊಡುತ್ತೇವೆ ಎನ್ನುವ ಸ್ಪಷ್ಟತೆಯನ್ನು ಸರ್ಕಾರ ಹೇಳದಿದ್ದರೆ ವಿಪಕ್ಷವಾಗಿ ನಮ್ಮ ದಾರಿಯನ್ನು ನಾವು ನೋಡಿಕೊಳ್ಳಬೇಕಾಗುತ್ತದೆ.

**ಶ್ರೀ ಕೃಷ್ಣಬೈರೇಗೌಡ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೆ, ಈಗ ವಿರೋಧ ಪಕ್ಷದ ಸದಸ್ಯರು ತಂದಿರುವಂತಹ ಸೂಚನೆಗೆ ನಿನ್ನೆ ಸಭಾನಾಯಕರು ನಾಳೆ ಮುಖ್ಯಮಂತ್ರಿಯವರಿಂದ ಉತ್ತರ

ಕೊಡಿಸುತ್ತೇನೆಂದು ಹೇಳಿದ್ದರು. ಆದರೆ ಇವತ್ತು ಅದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಬಂದಿಲ್ಲ, ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಸಮಯ ಕೇಳಿದ್ದಾರೆ, ಆ ಕಾರಣದಿಂದ ಇವತ್ತು ಕಾರ್ಯಕಲಾಪಗಳ ಪಟ್ಟಿಯಲ್ಲಿ ಆ ವಿಚಾರ ನಮೂದಾಗಿಲ್ಲ ಎಂದು ತಾವು ಪ್ರಸ್ತಾಪ ಮಾಡಿದ್ದೀರಿ. ಅದಕ್ಕೆ ಅವರು ಸರ್ಕಾರ ಎಲ್ಲೋ ಈ ವಿಚಾರದಿಂದ ತಪ್ಪಿಸಿಕೊಳ್ಳುವಂತಹ ಪ್ರಯತ್ನ ಮಾಡುತ್ತಿದೆ ಎಂದು ಅರ್ಥೈಸಿದ್ದಾರೆ. ಇದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ ಸರ್ಕಾರಕ್ಕೆ ಪಲಾಯನವಾದ ಮಾಡುವ ಉದ್ದೇಶವೂ ಇಲ್ಲ, ಮಾಡುವುದಕ್ಕೂ ಆಗುವುದಿಲ್ಲ. ಏಕೆಂದರೆ ನಾವು ಪಲಾಯನ ಮಾಡಿಕೊಂಡಿದ್ದರೆ ಸರ್ಕಾರ ನಡೆಸುವುದಕ್ಕಾಗುವುದಿಲ್ಲ ಎನ್ನುವುದು ಅವರಿಗೂ ಗೊತ್ತಿರುವಂತಹ ವಿಚಾರ. ಏನೇ ಸಮಸ್ಯೆ ಬಂದರೂ ಅದನ್ನು ಎದುರಿಸುವುದೊಂದೆ ಪರಿಹಾರ ಬಿಟ್ಟರೆ ಅದರಿಂದ ಎಷ್ಟು ದಿನ ತಪ್ಪಿಸಿಕೊಳ್ಳುವುದಕ್ಕಾಗುತ್ತದೆ? ಹಾಗಾಗಿ ಆ ಉದ್ದೇಶ ಸರ್ಕಾರಕ್ಕಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದು ಈಗ ಅವರು ಬೇರೆ ಕಾರ್ಯಕಲಾಪಗಳಿಗೋಸ್ಕರ ಹೋಗಿದ್ದಾರೆ. ನಾನು ಮತ್ತು ಸಭಾನಾಯಕರು ಇಬ್ಬರು ಕೂಡ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ, ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇವೆ. ಅವರು ಸಮಯ ಏಕೆ ಕೇಳಿದ್ದಾರೆ ಎಂದು ನಾನು ಅವರ ಹತ್ತಿರ ಮಾತನಾಡುವುದಕ್ಕೆ ಆಗಿಲ್ಲ. ಈ ವಿಚಾರ ವೈಯಕ್ತಿಕವಾಗಿ ಹೇಳುವಂಥದ್ದಲ್ಲ, ಸರ್ಕಾರದ ಪ್ರತಿನಿಧಿಯಾಗಿ ನಿಂತರೂ ಕೂಡ ಸರ್ಕಾರದಿಂದ ಮುಖ್ಯಮಂತ್ರಿಗಳ ಪರವಾಗಿಯೂ ನಾನು ಹೇಳಬೇಕಾಗುತ್ತದೆ. ಆದರೆ ಸಮಯ ಏಕೆ ಕೇಳಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಈ ವಿಚಾರದಲ್ಲಿ ನಾನು ಮತ್ತು ಸಭಾನಾಯಕರು ಸನ್ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಮಾತನಾಡುತ್ತೇವೆ. ಸಮಯ ಏಕೆ ಕೇಳಿದ್ದಾರೆ ಎಂಬುದನ್ನು ಅವರಿಂದ ತಿಳಿದುಕೊಂಡು ಬಂದ ನಂತರ ಅದನ್ನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸುತ್ತೇನೆ. ಸಮಯ ಇಲ್ಲ, ಬೇಗ ಉತ್ತರ ಕೊಡಬಹುದು ಎಂದು ನಾವು ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತೇವೆ. ಮುಖ್ಯಮಂತ್ರಿಗಳಾಗಲಿ, ಉಪ ಮುಖ್ಯಮಂತ್ರಿಗಳಾಗಲಿ, ಸಭಾನಾಯಕರಾಗಲಿ ಅಥವಾ ನಾನಾಗಲಿ ಯಾರೋ ಒಬ್ಬರು ಸರ್ಕಾರದ ಪರವಾಗಿ ಉತ್ತರ ಕೊಡಬೇಕಾಗುತ್ತದೆ. ಅದರಲ್ಲಿ ನಮ್ಮದು ಬೇರೆ ಬದಲಾವಣೆ ಏನು ಇಲ್ಲ. ಮುಖ್ಯಮಂತ್ರಿಗಳಿಗೆ ಸಮಯಾವಕಾಶವಾಗಲಿಲ್ಲವೆಂದರೆ, ಅದರ ಬಗ್ಗೆ ನಾನು ಅವರ ಹತ್ತಿರ ಮಾತನಾಡಿ ಇದರ ಸಮಸ್ಯೆ ಏನು, ಏಕೆ ಎಂದು ಮಾತನಾಡಿ ಅವರಿಗೆ ಸ್ಪಷ್ಟವಾಗಿ ಮಧ್ಯಾಹ್ನದ ನಂತರ ನಾವು ಇಲ್ಲೇ ಉತ್ತರವನ್ನು ಹೇಳುತ್ತೇವೆ. ಅಲ್ಲಿಯವರೆವಿಗೂ ತಾವು ನಮಗೆ ಸ್ವಲ್ಪ ಸಮಯಾವಕಾಶವನ್ನು ಕೊಡಬೇಕೆಂದು ವಿನಂತಿಸುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಹಾರಿಕೆಯ ಉತ್ತರವನ್ನು ಕೊಡುತ್ತಿದ್ದಾರೆ. ಅವರು ಯಾವುದೋ ಒಂದು ಕಾರಣವನ್ನು ಹೇಳುತ್ತಾರೆಯೋ ಅಥವಾ ಈ ಅಜೆಂಡಾಕ್ಕೆ ಸಂಬಂಧಪಟ್ಟಂತೆ ಟಿಪ್ಪು ಜಯಂತಿ ವಿಚಾರವಾಗಿ ಸರ್ಕಾರದಿಂದ ಉತ್ತರ ಕೊಡುತ್ತಾರೆಯೋ; ಈಗ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಯೋ ಅಥವಾ ಗೃಹ ಮಂತ್ರಿಗಳು ಉತ್ತರ ಕೊಡುತ್ತಾರೆಯೋ ಎಂದು ತಾವು ನಿರ್ಣಯ ಮಾಡಿ. ಈ ವಿಚಾರದಲ್ಲಿ ಈಗ ನಮ್ಮ ಯಾವುದೇ ವಾದ ಇಲ್ಲ. ಇವತ್ತು ಸಂಜೆಯೊಳಗೆ ಸರ್ಕಾರದವರು ಉತ್ತರ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಡುತ್ತಾರೆಯೋ ಅಥವಾ ಉತ್ತರ ಕೊಡಬೇಕಾದ ಅವಶ್ಯಕತೆಗೆ ಪೂರಕವಾದ ಕಾರಣಗಳನ್ನು ಕೊಡುತ್ತಾರೆಯೋ ಎನ್ನುವಂತಹ ಎರಡು ಅಂಶಗಳ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ.

**ಶ್ರೀ ಕೃಷ್ಣಬೈರೇಗೌಡ:–** ಮಾನ್ಯ ಸಭಾಪತಿಯವರೆ, ಅದಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ಕಾಯಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ದಯವಿಟ್ಟು ಅದೆಲ್ಲಾ ಆಗುವುದಿಲ್ಲ. ಮುಖ್ಯಮಂತ್ರಿಗಳೇ ಉತ್ತರವನ್ನು ಕೊಡಬೇಕೆಂದು ತಾವು ಸರ್ಕಾರಕ್ಕೆ ತಿಳಿಸಿರುವಾಗ ನಾವು ಅದನ್ನು ಒಪ್ಪಿಕೊಂಡೆವು. ಈಗ ಮಧ್ಯಾಹ್ನ ಮೂರು ಗಂಟೆಗೆ ಬಂದು ಕಾರಣಗಳನ್ನು ಕೊಡುವುದಾದರೆ......

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ, ಉತ್ತರ ಈಗಲೇ ಕೊಡಬೇಕೆಂದು ಕೇಳಿರುವಂಥದ್ದು ಯಾವತ್ತೂ ಇಲ್ಲ. ಉತ್ತರ ಕೊಡಿಸುತ್ತೇವೆ ಎಂದು ಈಗಾಗಲೇ ನಾವು ಹೇಳಿದ್ದೇವೆ ಅಲ್ಲವೆ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ರೇವಣ್ಣನವರು ಬುದ್ಧಿವಂತರಿದ್ದಾರೆ. ಮಾನ್ಯ ಕೃಷ್ಣಬೈರೇಗೌಡರೆ, ತಾವು ಮಧ್ಯಾಹ್ನ 3 ಗಂಟೆಗೆ ಉತ್ತರ ಕೊಡುತ್ತೇವೆಂದು ಹೇಳಿದ್ದೀರಿ. ನಮ್ಮ ಅಜೆಂಡಾಕ್ಕೆ ಸರ್ಕಾರದಿಂದ ಉತ್ತರ ಕೊಡುತ್ತೀರೋ ಅಥವಾ ಅಜೆಂಡಾ ಏಕೆ ಮುಂದಕ್ಕೆ ಹೋಯಿತು ಎಂದು ಉತ್ತರ ಹೇಳುತ್ತೀರೋ ಅದು ನಮ್ಮ ಮುಂದೆ ಇರುವಂತಹ ಸಮಸ್ಯೆ. ಬೇರೆಯವರಾಗಿದ್ದರೆ ನಾನು ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ನೀವು ಪ್ರತಿ ಶಬ್ದದ ಮೇಲೂ ಒಂದೊಂದು ಅರ್ಥವನ್ನು ಕಲ್ಪಿಸುತ್ತೀರಿ. ಅದಕೋಸ್ಕರ ನಾನು ಹೇಳುತ್ತಿದ್ದೇನೆ. ಸರ್ಕಾರ ಆರೋಗ್ಯಕರವಾದಂತಹ ಚರ್ಚೆಗಳನ್ನು ಮಾಡುತ್ತದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, wait and see, ಉತ್ತರ ಕೊಡುವವರೆಗೆ ತಾಳ್ಮೆಯಿಂದ ಇರಿ. ನೀವು ಏಕೆ ತುದಿಗಾಲಿನಲ್ಲಿ ನಿಂತಿದ್ದೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ಹಿರಿಯ ಸದಸ್ಯರಾಗಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಂತಹ ಸಂದರ್ಭದಲ್ಲಿ ಏನು ಮಾಡುತ್ತಿದ್ದರು ಎನ್ನುವುದನ್ನು ನಾನು ಗಮನಿಸಿದ್ದೇನೆ. ಇಂತಹ ಸಮಯದಲ್ಲಿ ಅವರು ಮೂರು ಸಲ ಸದನದ ಬಾವಿಗೆ ಬಂದಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರೆ, ನೀವೇನು ಕೊಡುತ್ತೀರಿ ಆ ಉತ್ತರದಲ್ಲಿ ಎಷ್ಟು ವಾಕ್ಯಗಳು ಇರುತ್ತವೆ, ಎಷ್ಟು ಪದಗಳು ಇರುತ್ತವೆ; full stop, comma ಬಗ್ಗೆ ಎಲ್ಲಾ ತಾವು ಕೇಳುತ್ತಿದ್ದೀರಿ. You will come to know. Please wait. ಆ ವಿಚಾರದ ಬಗ್ಗೆ ಮಧ್ಯಾಹ್ನ ಹೇಳುತ್ತೇವೆ ಎಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಎಸ್.ಆರ್.ಪಾಟೀಲ್‌ರವರು ನೆನಪು ಮಾಡಿಕೊಳ್ಳಬೇಕು. ಅವರ ಸಮಜಾಯಿಷಿ ಮಾತುಗಳನ್ನು ನಾನು ಒಪ್ಪುತ್ತೇನೆ. ಅವರು ಆಡಳಿತ ಪಕ್ಷದಲ್ಲಿರುವಾಗ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುವ ಮಾತುಗಳು, ವಿಪಕ್ಷ ನಾಯಕರಾಗಿದ್ದಾಗ ಹೇಳುವ ಮಾತುಗಳು ಇವೆರಡನ್ನು ಸಹ ತಾವು ತುಲನೆ ಮಾಡಿನೋಡಿ. ಒಂದು ವೇಳೆ ಅವರು ಇವತ್ತು ನನ್ನ ಸ್ಥಾನದಲ್ಲಿ ಇದ್ದಿದ್ದರೆ ಈ ಸದನದ ಛಾವಣಿ ಹಾರುವಂತೆ ಘರ್ಜನೆಯನ್ನು ಮಾಡುತ್ತಿದ್ದರು. ಈ ವಿಚಾರದಲ್ಲಿ ಸರ್ಕಾರದ ಬಗ್ಗೆ ಆರೋಗ್ಯಕರವಾದ ಚರ್ಚೆಗಳನ್ನು ಮಾಡುವುದಕ್ಕೆ ನಮ್ಮ ವಿಪಕ್ಷ ಸಿದ್ಧವಾಗಿದೆ.

(ಮುಂದು)

(429)13–12–2018(1–40)ಬಿಕೆಪಿ–ಆರ್‌ಎನ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು)**

ಈ ವಿಚಾರದಲ್ಲಿ ಸರ್ಕಾರದ ಬಗ್ಗೆ ಆರೋಗ್ಯಕರವಾದಂತಹ ಚರ್ಚೆಗಳನ್ನು ಮಾಡಲಿಕ್ಕೆ ನಮ್ಮ ವಿರೋಧ ಪಕ್ಷ ಸಿದ್ಧವಾಗಿದೆ. ಟಿಪ್ಪು ಜಯಂತಿಯ ವಿಚಾರದಲ್ಲಿ ಸರ್ಕಾರದ ಜೊತೆಯಲ್ಲಿ ಆರೋಗ್ಯಕರವಾದ ಚರ್ಚೆಯನ್ನು ಮಾಡಬೇಕೆಂದು ನಾವುಗಳು ತೀರ್ಮಾನ ಮಾಡಿದ್ದೇವೆ. ಅಲ್ಲಿ, ಇಲ್ಲಿ ಚರ್ಚೆಯಾಗಬಾರದು, ಆ ಮೂಲಕ ಗೊಂದಲವಾಗಬಾರದು, ಈ ವಿಚಾರದಲ್ಲಿ ನಮ್ಮ ಸಮಸ್ಯೆಗಳನ್ನು ಸರ್ಕಾರಕ್ಕೆ ಹೇಳಬೇಕು, ವಿಚಾರಗಳನ್ನು ಮಂಡನೆ ಮಾಡಬೇಕು, ನಮ್ಮ ಕಡೆ ಸರ್ಕಾರ ಗಮನಕೊಡಬೇಕು ಎನ್ನುವಂತಹ ವಿಚಾರದಲ್ಲಿ ಆರೋಗ್ಯಕರವಾದ ಚರ್ಚೆ ಮಾಡಬೇಕೆಂದು ನಾವು ನಿರ್ಧಾರ ಮಾಡಿರುವಾಗ ಸರ್ಕಾರ ಈ ವಿಚಾರದಲ್ಲಿ ಪಲಾಯನ ಸೂತ್ರ ಮಾಡಿದೆ. ಈ ವಿಚಾರವಾಗಿ ಅಜೆಂಡಾದಲ್ಲಿ ಹೇಳಿರುವಂತಹ ಸರ್ಕಾರ, ಸಭಾಪತಿಯವರ ಮೂಲಕ ವಚನ ಕೊಟ್ಟಂತಹ ಸರ್ಕಾರ ಪಲಾಯನ ಸೂತ್ರ ಮಾಡಿರುವಂತಹ ಪರಿಸ್ಥಿತಿಯಲ್ಲಿ ಯಾವುದೇ ಕಾರಣಕ್ಕೂ ಈ ರೀತಿ ಆಗಲಿಕ್ಕೆ ಬಿಡುವುದಿಲ್ಲ.

ಸರ್ಕಾರ ಈ ವಿಚಾರದಲ್ಲಿ ವಿರೋಧ ಪಕ್ಷಕ್ಕೆ, ರಾಜ್ಯಕ್ಕೆ ಅನ್ಯಾಯ ಮಾಡಿದೆ. ಇವತ್ತು ವಿರೋಧ ಪಕ್ಷದ ಕಡೆಯಿಂದ ಅಜೆಂಡಾ ಬಂದಿದೆ, ಅದರ ಬಗ್ಗೆ ವಿರೋಧ ಪಕ್ಷದವರು ಪ್ರಶ್ನೆ ಮಾಡುತ್ತಾರೆಂದು ಹೇಳಿ, ಈ ವಿಚಾರ ಏನಾಗುತ್ತದೆ ಎಂದು ರಾಜ್ಯದ ಜನರು ಆಲೋಚನೆ ಮಾಡಿದರೆ, ಸರ್ಕಾರ ಈ ವಿಚಾರವಾಗಿ ಒಂದು ರೀತಿಯಲ್ಲಿ ನಿರ್ಲಕ್ಷ್ಯ ತೋರಿದ್ದರಿಂದ, ಜನರ ಭಾವನೆಗಳಿಗೆ ಸರ್ಕಾರ ಒಂದು ರೀತಿಯಲ್ಲಿ ನಿರ್ಲಕ್ಷ್ಯದ ವಾತಾವರಣ ಉಂಟು ಮಾಡಿದ್ದರಿಂದ ನಾವು ನ್ಯಾಯ ಕೇಳಲಿಕ್ಕೋಸ್ಕರ ಬಾವಿಗಿಳಿದು ಧರಣಿಯನ್ನು ಮಾಡುತ್ತೇವೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಬಿ.ಜೆ.ಪಿಯ. ಸದಸ್ಯರುಗಳು ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ರವರು ಬಾವಿಯಿಂದ ಪುನಃ ತಮ್ಮ ಸ್ಥಾನಕ್ಕೆ ತೆರಳಿದರು)**

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರದಿಂದ ಆಚರಿಸುತ್ತಿರುವ ಟಿಪ್ಪು ಸುಲ್ತಾನ್ ಜಯಂತಿಯಿಂದಾಗಿ ಕೊಡವರ ಮನಸ್ಸಿಗೆ ನೋವುಂಟು ಮಾಡಿರುವುದರ ಜೊತೆಗೆ ಕೋಮು–ಸೌಹಾರ್ದವನ್ನು ಹಾಳು ಮಾಡಿರುವುದರ ಬಗ್ಗೆ ಕೇಳಲಾಗಿದೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಬ್ಬರು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ತಾವು ಯಾವುದಕ್ಕೆ ಸಮಯವನ್ನು ಕೇಳಿದ್ದೀರಿ ಎಂದು ವಿಚಾರಿಸಿಕೊಂಡು ಮಧ್ಯಾಹ್ನ ಬಂದು ಸಮಯವನ್ನು ಹೇಳುತ್ತಾರೋ ಅಥವಾ ಉತ್ತರವನ್ನು ಹೇಳಲಿಕ್ಕೆ ಸಮಯವನ್ನು ಹೇಳುತ್ತಾರೋ ಅಲ್ಲಿಯವರೆಗೆ ತಾವುಗಳು ಅವಕಾಶವನ್ನು ಕೊಡಿ. ಅವರುಗಳು ಬಂದು ಇಲ್ಲಿ ಹೇಳುತ್ತಾರೆ. ಆಮೇಲೆ ತಮಗೆ ಏನು ಬೇಕೋ ತೀರ್ಮಾನವನ್ನು ತೆಗೆದುಕೊಳ್ಳಿ. ಹೀಗಾಗಿ ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ ರವರು ತಮ್ಮ ಸ್ಥಾನಕ್ಕೆ ತೆರಳಿದರು)

**ಶ್ರೀ ಎಂ.ಪಿ.ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೊಡಗು ಶೂರರ ನಾಡು. ಅಲ್ಲಿ ಸುಮಾರು 310 ದೇವಸ್ಥಾನಗಳನ್ನು ಧ್ವಂಸ ಮಾಡಿದ್ದಾನೆ. ಇಂತಹವರ ಜಯಂತಿ ಮಾಡುವುದು ನಿಜಕ್ಕೂ ಒಪ್ಪುವುದಿಲ್ಲ. ಜೊತೆಗೆ ಸುಮಾರು ಚರ್ಚ್‌ಗಳನ್ನು ಧ್ವಂಸ ಮಾಡಿದ್ದಾನೆ. ಈ ರೀತಿ ಮಾಡಿದವನ ಜಯಂತಿ ಮಾಡುವುದು . . .

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಅನಾವಶ್ಯಕವಾಗಿ ಏತಕ್ಕೆ ಚರ್ಚೆ ಮಾಡುತ್ತೀರಿ?

**ಸಭಾಪತಿಯವರು:-** ಒಂದೇ ಬಾರಿ ಎರಡು ಕೆಲಸಗಳನ್ನು ಮಾಡಲಿಕ್ಕೆ ಆಗುವುದಿಲ್ಲ. ಒಂದು ಧರಣಿ ಮಾಡಬೇಕು, ಇಲ್ಲವೇ ಭಾಷಣ ಮಾಡಬೇಕು. ಎರಡನ್ನೂ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಈ ಸಂದರ್ಭದಲ್ಲಿ ನಿಮ್ಮ ಜೊತೆ ಮಾತನಾಡುವುದು ಮತ್ತು ಬೋರ್ಗಲ್ಲ ಮೇಲೆ ಶತಮಾನದವರೆಗೂ ಮಳೆ ಸುರಿಯುವುದು ಒಂದೇ ಆಗುತ್ತದೆ.

**ಶ್ರೀ ಅರುಣ ಶಹಾಪುರ:-** ಈ ರೀತಿಯಲ್ಲಿ ನಮಗೆ ಡಿಕ್ಟೇಟ್ ಮಾಡುವುದು ಸರಿಯಲ್ಲ.

**ಶ್ರೀ ಎಸ್.ಆರ್.ಪಾಟೀಲ್:-** ಇದು ಡಿಕ್ಟೇಟ್ ಅಲ್ಲ, ಮನವಿ. ನೀವು ಅಲ್ಲಿ ಕುಳಿತುಕೊಂಡು ಡಿಕ್ಟೇಟ್ ಮಾಡುತ್ತೀರಿ.

**ಶ್ರೀ ಕೃಷ್ಣ ಬೈರೇಗೌಡ(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯುತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಏಕೋ ಏನೋ ನನ್ನ ಮೇಲೆ ಬಹಳ ಸಿಟ್ಟು ಮಾಡಿಕೊಂಡು ಟವಲ್‌ನೊಳಗೆ ಕಲ್ಲು ಇಟ್ಟುಕೊಂಡು ಪದೇ ಪದೇ ನನ್ನ ಮೇಲೆ ಗಧಾಪ್ರಹಾರ ಮಾಡುತ್ತಿದ್ದಾರೆ. ಅದರೂ ಸಹ ಅದನ್ನು ನಾನು ಪ್ರೀತಿಯಿಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೆಗೆದುಕೊಳ್ಳುತ್ತೇನೆ. ಅವರು ನನಗೆ ಟವಲ್‌ನಲ್ಲಿ ಕಲ್ಲು ಇಟ್ಟುಕೊಂಡು ಹೊಡೆಯುತ್ತಿದ್ದಾರೆ. ಇರಲಿ, ತೊಂದರೆಯಿಲ್ಲ. ಅದರೂ ಸಹ ನಾನು ಅದನ್ನು ಪ್ರೀತಿಯಿಂದ ಸ್ವೀಕಾರ ಮಾಡುತ್ತಿದ್ದೇನೆ. ಈಗ ನಿಮ್ಮ ಪ್ರಶ್ನೆಗೆ ನಾನು ಉತ್ತರ ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮ್ಮಂತಹ ವಿಚಾರಶೀಲ ಮಂತ್ರಿಗಳು ಇರುವಂತಹ ಸಮಯದಲ್ಲಿ ಇದು ಉತ್ತರ ಕೊಡಲಿಕ್ಕೆ ಆಗದೇ ಇರುವಂತಹ ಅಜೆಂಡವೇ?

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಅದೇ ವಿಚಾರವನ್ನು ಹೇಳುತ್ತಿದ್ದೇನೆ. ವಿರೋಧ ಪಕ್ಷದವರಿಗೆ ನಾನು ಏನು ಮನವರಿಕೆ ಮಾಡುತ್ತಿದ್ದೇನೆಂದರೆ ಪರಿಹಾರ ಮಾಡಿಕೊಳ್ಳಲಿಕ್ಕೆ ಆಗದೇ ಇರುವಂತಹ ಸಮಸ್ಯೆಗಳು ಯಾವುದೂ ಇರುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ. ಪಲಾಯನವಾದ ಮಾಡಬೇಕೆಂದರೆ ಸಮಸ್ಯೆಗೆ ಪರಿಹಾರವೇ ಇಲ್ಲವೆಂದಾಗ ಮಾಡಬೇಕು. ಪರಿಹಾರ ಇಲ್ಲದೇ ಇರುವಂತಹ ಸಮಸ್ಯೆಗಳೇನೂ ಇಲ್ಲ. ಅದಕ್ಕಾಗಿ ನಾನು ಅವರಿಗೆ ಹೇಳುತ್ತಿದ್ದೇನೆ. ನಾನು ಮತ್ತು ಸಭಾನಾಯಕರು ಮಾನ್ಯ ಮುಖ್ಯಮಂತ್ರಿಗಳ ಜೊತೆ ಈ ವಿಚಾರವಾಗಿ ಸಮಾಲೋಚನೆ ಮಾಡಲಿಕ್ಕೆ ಆಗಿರುವುದಿಲ್ಲ. ಸಮಾಲೋಚನೆಗೆ ಅವಕಾಶ ಮಾಡಿಕೊಡಿ ಎಂದು ಕೇಳುತ್ತಿದ್ದೇನೆ ಅಷ್ಟೆ. ಸಮಾಲೋಚನೆ ಮಾಡಿ ಮಾನ್ಯ ಮುಖ್ಯಮಂತ್ರಿಗಳ ಸಲಹೆಯನ್ನು ತೆಗೆದುಕೊಂಡು ಉತ್ತರ ಕೊಡುವುದೋ, ಸಮಯ ಕೊಡುವುದೋ ಅದರ ಬಗ್ಗೆ ಮಧ್ಯಾಹ್ನ ಹೇಳುತ್ತೇವೆಂದು ಹೇಳುತ್ತಿದ್ದೇವೆ. ನಾನು ಬಹಳ ಸಮಯವನ್ನು ಏನು ಕೇಳುತ್ತಿಲ್ಲ, ಮುಂದಿನ ವಾರವೆಂದು ಕೇಳುತ್ತಿಲ್ಲ.

ಹಾಗಾಗಿ, ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಇದಕ್ಕೋಸ್ಕರ ಬಾವಿಗೆ ಬಂದು ಧರಣಿ ಮಾಡುವುದು ಅನಾವಶ್ಯಕ. ಸದನ ನಡೆಯುತ್ತಿರಲಿ, ಇವತ್ತು ಅಧಿವೇಶನದ ಕೊನೆಯ ದಿನವಲ್ಲ. ಕೊನೆಯ ದಿನವಾದರೆ ತಾವು ಧರಣಿ ಮಾಡಬಹುದು. ನಾಳೆ ಬಂದು ತಮ್ಮ ಮುಖವನ್ನು ನಾವು ನೋಡಲೇ ಬೇಕಲ್ಲವೇ, ನಾಳೆ ತಾವು ಇಲ್ಲಿ ಬಂದು ಕುಳಿತುಕೊಳ್ಳಬೇಕೋ ಇಲ್ಲವೋ, ನಾವು ಬಂದು ಇಲ್ಲಿ ಉತ್ತರ ಕೊಡಬೇಕೋ ಇಲ್ಲವೋ ಹೇಳಿ. ಇದರಿಂದ ತಪ್ಪಿಸಿಕೊಂಡು ಹೋಗಲಿಕ್ಕೆ ಆಗುವುದಿಲ್ಲ. ಹೀಗಾಗಿ, ಸದನ ನಡೆಯುತ್ತಿದೆ. ಈ ವಾರ ಪೂರ್ಣ ನಡೆದಿದೆ. ದುಡುಕುವುದು ಬೇಡ. ಒಳ್ಳೆಯ ರೀತಿಯಲ್ಲಿ ಉತ್ತರ ಕರ್ನಾಟಕದಲ್ಲಿ ಅಧಿವೇಶನ ನಡೆಯುತ್ತಿದೆ. ಜನರು ನಿರೀಕ್ಷೆಯನ್ನಿಟ್ಟುಕೊಂಡಿದ್ದಾರೆ. ಕಡ್ಡಿಯನ್ನು ನಾವು ಸಲೀಸಾಗಿ ಮುರಿಯಬಹುದು. ಆದರೆ, ಅದು ಮುರಿದ ಮೇಲೆ ಒಂದು ಮಾಡಲಿಕ್ಕೆ ಆಗುವುದಿಲ್ಲ. ಸದನ ನಡೆಯುವಾಗ ಅದನ್ನು ನಡೆಸೋಣ. ಅದಕ್ಕೆ ನಾನು ಸಹ ಅವರ ಸಹಕಾರವನ್ನು ಕೇಳುತ್ತಿದ್ದೇನೆ. ಸಮಾಲೋಚನೆ ಮಾಡಿ ಬಂದ ಮೇಲೆ ಸರ್ಕಾರದ ನಿಲುವು ಏನಿದೆ ಎನ್ನುವುದನ್ನು ಸ್ಪಷ್ಟವಾಗಿ ನಾವು ಹೇಳುತ್ತೇವೆ. ಅಲ್ಲಿಯವರೆಗೆ ನಮಗೆ ಏನೂ ಬೇಕಾಗಿಲ್ಲ, ರಾಜ್ಯದ ಸಮಸ್ಯೆಯ ಬಗ್ಗೆ ಚರ್ಚೆ ಬೇಕಾಗಿಲ್ಲ. ಬರಗಾಲದ ಬಗ್ಗೆ ಚರ್ಚೆ ಬೇಕಾಗಿಲ್ಲ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಬೇಕಾಗಿಲ್ಲ, ಇದು ಒಂದೇ ವಿಚಾರ, ಇದು ಒಂದರ ಮೇಲೆಯೇ ಎಲ್ಲಾ ನಿಂತಿದೆ ಎನ್ನುವಂತಹ ನಿಲುವನ್ನು ತಾವು ತೆಗೆದುಕೊಳ್ಳುವುದು ಬೇಡ ಎಂದು ಹೇಳಿ ವಿರೋಧ ಪಕ್ಷದವರಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಅಧಿವೇಶನದ ಪಾಡಿಗೆ ಅದು ನಡೆಯಲಿ, ಮತ್ತೆ ಬಂದು ಇದಕ್ಕೆ ಉತ್ತರವನ್ನು ಹೇಳುತ್ತೇವೆ. ಅದಕ್ಕೆ ಸಮಾಧಾನವಾಗಲಿಲ್ಲವೆಂದರೆ ಆಗ ಅವರು ಕ್ರಮ ತೆಗೆದುಕೊಳ್ಳಲಿ. ಈ ರೀತಿಯಲ್ಲಿ

ನಾನು ಅವರಿಗೆ ಮನವಿ ಮಾಡುತ್ತಿದ್ದೇನೆ. ಧರಣಿ ಅನಾವಶ್ಯಕ. ಇಲ್ಲ, ಇದೇ ನಮಗೆ ಮುಖ್ಯ, ಬೇರೆ ಯಾವುದೇ ವಿಚಾರ ಮುಖ್ಯವಲ್ಲ, ಉತ್ತರ ಕರ್ನಾಟಕದ ವಿಚಾರ ಮುಖ್ಯವಿಲ್ಲ, ಬರಗಾಲದ ವಿಚಾರ ಮುಖ್ಯವಲ್ಲ, ನಾವು ಇದರ ಮೇಲೆಯೇ ನಿಂತಿದ್ದೇವೆ, 3 ರಾಜ್ಯಗಳ ಫಲಿತಾಂಶ ಬಂದರೂ ಸಹ ನಮಗೆ ಇನ್ನು ಅದರ ಬಗ್ಗೆ ಅರಿವು ಮೂಡಿಲ್ಲ, ಇದರ ಮೇಲೆಯೇ ನಾವು ರಾಜಕೀಯ ಮಾಡುತ್ತೇವೆ ಎನ್ನುವ ಹಾಗಿದ್ದರೆ ಅದು ಅವರಿಗೇ ಬಿಟ್ಟ ವಿಚಾರ ಆಗುತ್ತದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಎಲ್ಲಾ ಅಜೆಂಡಾಗಳಿವೆ, ಇದು ಒಂದಕ್ಕೆ ಉತ್ತರ ಬೇಕೆಂದು ಏತಕ್ಕೆ ವಿರೋಧ ಪಕ್ಷ ಹಠ ಮಾಡುತ್ತಿದೆ ಎಂದು ಶ್ರೀಯುತ ಕೃಷ್ಣ ಬೈರೇಗೌಡರವರು ಕೇಳುತ್ತಾರೆ. ಎಲ್ಲಾ ಅಜೆಂಡಾಗಳಿವೆ ನಿಜ. ಆದರೆ, ಇದು ಒಂದಕ್ಕೆ ಮಾತ್ರ ಏತಕ್ಕೆ ಪಲಾಯನ ಸೂತ್ರವನ್ನು ಸರ್ಕಾರ ಮಾಡುತ್ತಿದೆ ಎಂದು ನಾವು ಕೇಳಬೇಕಾಗಿದೆ. ಎಲ್ಲಾ ಅಜೆಂಡಾಗಳಿಗೆ ಉತ್ತರಗಳನ್ನು ಕೊಡುತ್ತೀರಿ. ಇದು ಒಂದಕ್ಕೆ ಮಾತ್ರ ಏತಕ್ಕೆ ಸರ್ಕಾರ ಪಲಾಯನ ಮಾಡುತ್ತದೆ ಎಂದು ನಾವು ಕೇಳಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ . . .

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ಜನರ ಹೊಟ್ಟೆಪಾಡಿನ ವಿಚಾರ ನೋಡಿ. ಜನರ ಸಮಸ್ಯೆಗಳನ್ನು ಪರಿಹಾರ ಮಾಡುವಂತಹ ವಿಚಾರವಾಗಿ ಮಾತನಾಡಿ. ಸಮಾಜವನ್ನು ಒಡೆಯುವಂತಹ ವಿಚಾರಗಳನ್ನು ತೆಗೆದುಕೊಂಡು ಏತಕ್ಕೆ ಚರ್ಚೆ ಮಾಡುತ್ತೀರಿ? ಸಮಾಜವನ್ನು ಒಂದೂಗೂಡಿಸುವಂತಹ ಕೆಲಸವನ್ನು ಮಾಡಿ. ಬಡವರ ಹೊಟ್ಟೆಯ ಹಸಿವನ್ನು ನೀಗಿಸುವಂತಹ ಕೆಲಸವನ್ನು ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ಬರಗಾಲದ ಬಗ್ಗೆ ಮತ್ತು ರೈತರನ್ನು ಸಂಪೂರ್ಣವಾಗಿ ಕಡೆಗಣಿಸಿದಂತಹ ಸರ್ಕಾರ ಇದಾಗಿದೆ. ಈ ವಿಷಯವಾಗಿ ನಿಲುವಳಿ ಸೂಚನೆ ತರುವ ಮೂಲಕ ರೈತರ ಬಗ್ಗೆ ಜಾಗೃತಿ ಮೂಡಿಸುವವರು ನಾವುಗಳು. ಸರ್ಕಾರ ಆ ಕಡೆ ತಲೆ ಹಾಕಿಲ್ಲ. ಈಗ ನಾನು ಏನು ಹೇಳುತ್ತಿದ್ದೇನೆಂದರೆ ಅದಕ್ಕೆ ಬೇಕಾದಂತಹ ನಿಲುವಳಿಯನ್ನು ನಾವು ಮಂಡನೆ ಮಾಡಿದ್ದೇವೆ. ಸರ್ಕಾರಕ್ಕೆ ತಾಕತ್ತು, ಶಕ್ತಿ ಇದ್ದರೆ ಉತ್ತರ ಕೊಡುವಾಗ ಸರ್ಕಾರದವರು ಹೇಳಲಿ. ರೈತರ ಸಮಸ್ಯೆಗಳನ್ನೆಲ್ಲಾ ಪರಿಹಾರ ಮಾಡಿದ್ದೇವೆ ಎಂದು ಹೇಳುವಂತಹ ಅವಕಾಶಗಳು ಸರ್ಕಾರಕ್ಕೆ ಇವೆ. ಈ ಅಜೆಂಡಾದಿಂದ ಏತಕ್ಕೆ ಓಡಿ ಹೋಗಿದ್ದೀರಿ? ಸರ್ಕಾರ ಏತಕ್ಕೆ ಈ ರೀತಿ ಮಾಡುತ್ತಿದೆ? ಉತ್ತರ ಕೊಡಬೇಕಾಗಿರುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇದು ಪಲಾಯನ ಸೂತ್ರವಲ್ಲದೇ ಮತ್ತೇನು?

(ಗೊಂದಲ)

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಈ ಬಗ್ಗೆ ಉತ್ತರ ಕೊಡುವುದಿಲ್ಲವೆಂದು ಹೇಳಿಲ್ಲ.

**ಡಾ॥ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಈ ಬಗ್ಗೆ ಉತ್ತರ ಕೊಡುವುದಿಲ್ಲವೆಂದು ಹೇಳಿರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೃಷ್ಣ ಬೈರೇಗೌಡ:–** ಅನಾವಶ್ಯಕವಾಗಿ ಇದರಲ್ಲಿ ರಾಜಕೀಯ ಬೆರೆಸುತ್ತಿರುವುದು ಈ ಸದನಕ್ಕೆ ಅವಶ್ಯಕತೆ ಇಲ್ಲ. ಈ ಬಗ್ಗೆ ಅವರ ಸಹಕಾರವನ್ನು ಕೇಳುತ್ತಿದ್ದೇವೆ. ಮದ್ಯಾಹ್ನ ಇದರ ಬಗ್ಗೆ ಹೇಳುತ್ತೇವೆಂದರೂ ಸಹ ಈ ರೀತಿಯಲ್ಲಿ ಮಾತನಾಡುತ್ತಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ಅಜೆಂಡಾ ಬಂದಾಗ. .

(ಗೊಂದಲ)

**ಸಭಾಪತಿಯವರು:–** ಸದನವನ್ನು 3–00 ಗಂಟೆಯವರೆಗೆ ಮುಂದೂಡಲಾಗಿದೆ.

(430)13–12–2018(03–30)ಎಲ್ಎಲ್–ಬಿಎನ್ಎಸ್

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 1 ಗಂಟೆ 50 ನಿಮಿಷಕ್ಕೆ ಮುಂದೂಡಿದ ಸದನವು ಪುನಃ ಮಧ್ಯಾಹ್ನ 3 ಗಂಟೆ 33 ನಿಮಿಷಕ್ಕೆ ಪ್ರಾರಂಭವಾಯಿತು)**

**(ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದ್ದರು)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರೂ ಸೇರಿದಂತೆ, ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)**
**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ರೈತರು ಕಷ್ಟದಲ್ಲಿರುವಾಗ ವಿರೋಧ ಪಕ್ಷದವರು ಸದನದ ಬಾವಿಗೆ ಇಳಿದು ಧರಣಿ ಮಾಡಿದರೆ ಹೇಗೆ? **(ಗೊಂದಲ)** ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ವಿರೋಧ ಪಕ್ಷದವರು ವಿಷಯ ತಂದಿದ್ದಾರೆ. ಆ ವಿಷಯದ ಬಗ್ಗೆ ಚರ್ಚೆ ಮಾಡುವುದನ್ನು ಬಿಟ್ಟು ನೇರವಾಗಿ ಬಾವಿಗೆ ಬಂದು ಧರಣಿ ಮಾಡಿದರೆ ಹೇಗೆ?

**(ಗೊಂದಲ)**

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುವುದಕ್ಕೆ ಅವಕಾಶವಿರುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರು ರೈತರ ಬಗ್ಗೆ ಚರ್ಚೆ ಮಾಡುವುದಕ್ಕಾಗಿ ವಿಷಯ ತಂದಿದ್ದಾರೆ. ನಿಯಮ 68 ರಲ್ಲಿ ಚರ್ಚೆ ಬಾಕಿ ಇದೆ. ಜೊತೆಗೆ, ನಿಯಮ 330 ಇದೆ. ಅದೆಲ್ಲದವನ್ನೂ ಚರ್ಚೆ ಮಾಡದೇ, ಸದನದ ಸಮಯವನ್ನು ವ್ಯರ್ಥ ಮಾಡುವುದರಲ್ಲಿ ಅರ್ಥವಿರುವುದಿಲ್ಲ. ದಯಮಾಡಿ, ಅವರು ನಮಗೆ ಸಹಕಾರ ನೀಡಬೇಕು.

**ಶ್ರೀ ಕೆ. ಅಬ್ದುಲ್ ಜಬ್ಬಾರ್:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರಿಗೆ ರೈತರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆ ಇರುವುದಿಲ್ಲ. ಬದಲಾಗಿ, ಕೇವಲ ಗಲಾಟೆ ಹಚ್ಚಿ ಹೋಗುವುದಷ್ಟೇ ಅವರ ಕೆಲಸ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ಸಭಾಪತಿಯವರೇ, ಸದನ ನಡೆಸುವುದಕ್ಕೆ ಅವಕಾಶ ಕೊಡಿ, ಚರ್ಚೆ ಮಾಡೋಣ.

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸ್ಥಾನಕ್ಕೆ ತೆರಳಿದರು)**

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರ ನಮ್ಮ ಪ್ರಶ್ನೆಗೆ ಉತ್ತರ ಕೊಡುವುದನ್ನು ಬಿಟ್ಟು ಪಲಾಯನ ಸೂತ್ರ ಅನುಸರಿಸಿದಾಗ...

**(ಗೊಂದಲ)**

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ಸಭಾಪತಿಯವರೇ, ನಿಯಮ 72, ನಿಯಮ 330 ಇದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ರೈತರ ಪರವಾಗಿ ನಿಲುವಳಿ ಸೂಚನೆ ತಂದಿದ್ದು ನಾವೇ. ರೈತರು ಯಾರನ್ನಾದರೂ ದೂರಬೇಕಾದರೆ ಸರ್ಕಾರವನ್ನೇ ದೂರುತ್ತಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ಸಭಾಪತಿಯವರೇ, ಇನ್ನೂ ಬೇರೆ ಬೇರೆ ವಿಚಾರಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಆದರೆ, ಅವರು ನೇರವಾಗಿ ಸದನದ ಬಾವಿಗೆ ಬಂದು ತೊಂದರೆ ಕೊಟ್ಟರೆ ನಾವು ಏನು ಮಾಡುವುದಕ್ಕೆ ಸಾಧ್ಯವಿದೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಜೆಂಡಾ ಬದಲಾವಣೆ ಮಾಡಿದಂತಹ ಸರ್ಕಾರ, ಎಲ್ಲಿಯವರೆಗೆ ಪಲಾಯನ ಸೂತ್ರ ಅನುಸರಿಸುತ್ತದೆ..?

**(ಗೊಂದಲ)**

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ವಿರೋಧ ಪಕ್ಷದವರಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಸದನ ನಡೆಸುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಎಲ್ಲಿಯವರೆಗೆ ಈ ಸರ್ಕಾರ ಪಲಾಯನ ಸೂತ್ರ ಅನುಸರಿಸುತ್ತದೆಯೆಂದರೆ, ಅಜೆಂಡಾವನ್ನು ಸಹ ಬದಲಾವಣೆ ಮಾಡುತ್ತದೆ.

**ಶ್ರೀ ಐವನ್ ಡಿ’ ಸೋಜಾ:–** ಮಾನ್ಯ ಸಭಾಪತಿಯವರೇ, ನಾವು ಪಲಾಯನ ಮಾಡುವುದಿಲ್ಲ. ಈಗ ಉತ್ತರ ನೀಡುತ್ತೇವೆಂದು ಹೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ತಾಕತ್ತಿದ್ದರೆ ನಮ್ಮ ಪ್ರಶ್ನೆಗೆ ಉತ್ತರ ಕೊಡಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಗೊಂದಲ)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ಈಗ ಸಭಾ ನಾಯಕರು ಮತ್ತು ಸಂಸದೀಯ ಸಚಿವರುಗಳು ಬಂದು ಉತ್ತರ ನೀಡುತ್ತೇವೆಂದು ಹೇಳಿದ್ದಾರೆ. ಹಾಗಾಗಿ, ಈಗ ಬೇರೆ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಒಬ್ಬ ಮಂತ್ರಿಯೂ ಸಹ ಹಾಜರಿರುವುದಿಲ್ಲ. ಇದೊಂದು ಬೇಜವಾಬ್ದಾರಿ ಸರ್ಕಾರ.

**(ಗೊಂದಲ)**

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಸದನದ ಬಾವಿಯಲ್ಲಿ ನಿಂತು ಸದಸ್ಯರು ಮಾತನಾಡುವುದಕ್ಕೆ ಅಧಿಕಾರ ಇರುವುದಿಲ್ಲ. ಯಾರೂ ಕೂಡ ಮಾತನಾಡಬಾರದು.

**(ಗೊಂದಲ)**

**(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದ ಮಾನ್ಯ ಸದಸ್ಯರುಗಳು ಸರ್ಕಾರದ ವಿರುದ್ಧ XXX ದಿಕ್ಕು ಇಲ್ಲದ ಸರ್ಕಾರ, ದಿಕ್ಸೂಚಿ ಇಲ್ಲದ ಸರ್ಕಾರ ಎಂದು ಘೋಷಣೆಗಳನ್ನು ಕೂಗಿದರು)**

**ಶ್ರೀ ಐವನ್ ಡಿ' ಸೋಜಾ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸದನದ ಬಾವಿಯಲ್ಲಿ ನಿಂತು ಸದನ ನಡೆಸಿ ಎಂದು ಹೇಳಿದರೆ ಸದನ ನಡೆಸುವುದಕ್ಕೆ ಹೇಗೆ ಸಾಧ್ಯವಾಗುತ್ತದೆ?

**(ಗೊಂದಲ)**

**ಶ್ರೀ ಎಂ. ನಾರಾಯಣ ಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರ ಭಾರತದ ಐದು ರಾಜ್ಯಗಳಲ್ಲಿ ಬಿಜೆಪಿ ಪಕ್ಷವನ್ನು ಮನೆಗೆ ಕಳುಹಿಸಿದ್ದರೂ ಸಹ ಅವರಿಗೆ ಇನ್ನೂ ಬುದ್ಧಿ ಬಂದಿರುವುದಿಲ್ಲ.

**ಸಭಾಪತಿಯವರು:–** ಈಗ ಸದನವನ್ನು 3 ಗಂಟೆ 45 ನಿಮಿಷಗಳವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 3 ಗಂಟೆ 36 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಮಧ್ಯಾಹ್ನ 3 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು)**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

**431) 13-12-2018/SK-KS/ 3.50**

**(3 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 3 ಗಂಟೆ 55 ನಿಮಿಷಕ್ಕೆ ಸಮಾವೇಗೊಂಡಿತು.)**

**(ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದ್ದರು.)**

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ವಿರೋಧ ಪಕ್ಷದ ಎಲ್ಲ ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಧರಣಿ ನಡೆಸುತ್ತಿದ್ದರು.)**

**ಶ್ರೀ ಕೃಷ್ಣಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರ):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಪ್ರತಿ ಪಕ್ಷದ ನಾಯಕರಿಗೂ ಹಾಗೂ ಮಾನ್ಯ ಸದಸ್ಯರಿಗೆಲ್ಲರಿಗೂ ವಿನಂತಿ ಮಾಡುತ್ತೇನೆ. ತಾವು ಆತಂಕ ಇಟ್ಟುಕೊಂಡಿರುವ ಹಾಗೇ, ನಿನ್ನೆಯ ದಿನ ಈ ವಿಚಾರದ ಬಗ್ಗೆ ಚರ್ಚೆಯಾಗಬೇಕಾಗಿತ್ತು. ನೀವು ತಿಳಿದುಕೊಂಡಿರುವಷ್ಟು, ಅದು ನಮಗೇನೂ ಮುಜಗರದ ವಿಚಾರವೇನಲ್ಲ. ನಮ್ಮನ್ನು ಮತ್ತು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ವಿಚಾರವೂ ನನ್ನ ದೃಷ್ಟಿಯಲ್ಲಿ ಮತ್ತು ಸರ್ಕಾರದ ದೃಷ್ಟಿಯಲ್ಲಿ ಏನಿಲ್ಲ. ಅಂತಹ ಕಷ್ಟಕರವಾದ ಸಮಸ್ಯೆ ಇಲ್ಲದೇ ಇರುವಾಗ, ಅದರಿಂದ ನಾವು ನುಸುಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎನ್ನುವಂತಹದ್ದು, ಅವರ ಗ್ರಹಿಕೆ ಏನಿದೆ? ಅದು ವಾಸ್ತವ ಆಧಾರಿತವಲ್ಲ. ನಾವು ಎಲ್ಲೋ ಇದರಿಂದ ಹಿಂದೆ ಉಳಿಯುವಂತಹ ಪ್ರಯತ್ನ ಖಂಡಿತವಾಗಿಯೂ ಮಾಡುತ್ತಿಲ್ಲ. ನಾನು ಇದನ್ನು ಬಹಳ ಸ್ಪಷ್ಟವಾಗಿ ತಮಗೆ ಮತ್ತು ತಮ್ಮ ಮುಖಾಂತರ ಅವರಿಗೂ ಸಹ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಅಂದುಕೊಂಡಿರಬಹುದು, ಸರ್ಕಾರಕ್ಕೆ ಬಹಳ ಮುಜುಗರ ಉಂಟು ಮಾಡುವಂತಹ ಸಮಸ್ಯೆಯನ್ನು ನಾವು ತಂದಿದ್ದೇವೆ ಎಂದು ದಯವಿಟ್ಟು, ತಾವು ನಿರಾತಂಕದಿಂದಿರಿ. ನಮಗೆ ಯಾವುದೇ ಆ ರೀತಿಯಾದಂತಹ ಆತಂಕ ಅಥವಾ ಕಷ್ಟ ಆಗಿಲ್ಲ. ನಾನು ತಮ್ಮ ಮುಖಾಂತರ ಅವರಿಗೆ ಮನವಿ ಮಾಡಿದೆ. ಸದನ ಸೋಮವಾರದಿಂದ ನಡೆಯುತ್ತಿದೆ. ಪ್ರತಿಪಕ್ಷದವರು ನಾನಾ ಬೇಡಿಕೆಗಳನ್ನು ನಮ್ಮ ಮುಂದೆ ಸಲ್ಲಿಸಿದಾಗ ಎಲ್ಲದಕ್ಕೂ ನಾವು ಸಕಾರಾತ್ಮಕವಾಗಿ ಸ್ಪಂದಿಸಿದ್ದೇವೆ. ಬರಗಾಲದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕೆಂದು, ಅವರು ನಿಲುವಳಿ ಸೂಚನೆಯನ್ನು ಮಂಡಿಸಿದ ಮೇಲೆ, ಅದಕ್ಕೂ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಅದರ ಬಗ್ಗೆ ಅವರು ಮಾತನಾಡುತ್ತಿದ್ದಾರೆ. ಸರ್ಕಾರಕ್ಕೆ ತೀಕ್ಷ್ಣವಾದಂತಹ ಪದಗಳನ್ನು ಪ್ರಯೋಗ ಮಾಡುತ್ತಿದ್ದಾರೆ. ಅದಕ್ಕೂ ನಾವು ಅಡ್ಡಿ ಪಡಿಸಿಲ್ಲ. ಅದನ್ನು ತಾಳ್ಮೆಯಿಂದ ಕೇಳುತ್ತಿದ್ದೇವೆ. ಸರ್ಕಾರ ತನ್ನ ಪ್ರಯತ್ನಗಳನ್ನು ಮಾಡಿದೆ. ಕೆಲವು ಕಡೆ ನ್ಯೂನತೆಗಳು ಇರಬಹುದು. ಅವರು ನಮ್ಮನ್ನು ತಿದ್ದುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ, ಅದನ್ನು ನಾವು ಸಕಾರಾತ್ಮಕವಾಗಿ ಸ್ವೀಕಾರ ಮಾಡುತ್ತಿದ್ದೇವೆ, ಹಾಗಾಗಿ ಬರಗಾಲದ ವಿಚಾರ ಮತ್ತು ಉತ್ತರ ಕರ್ನಾಟಕದ ಬಗ್ಗೆ ವಿಚಾರ ಹಾಗೂ ರೈತರ ವಿಚಾರವೇ ಇರಬಹುದು. ಸಮಸ್ತ ಕನ್ನಡಿಗರ ವಿಚಾರ ಏನೇ ಇದ್ದರೂ ಸಹ ಸದನ ಚೆನ್ನಾಗಿ ನಡೆಯುತ್ತಿದೆ. ಸದನ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ನಡೆಯುತ್ತಿರುವಾಗ, ನಾನು ಅವರಿಗೆ ಮನವಿ ಮಾಡಿದೆ. ಧರಣಿ ಅವಶ್ಯಕತೆಯಿಲ್ಲ. ನನಗೆ ಮಧ್ಯಾಹ್ನ ಸಮಯ ಕೊಡಿ. ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಹಾಗೂ ಸಭಾ ನಾಯಕರ ಜೊತೆ ಸಮಾಲೋಚನೆ ಮಾಡಿ ತಮಗೆ ಸರ್ಕಾರದ ಸ್ಪಷ್ಟವಾದಂತಹ ನಿಲುವು ಏನು ಎಂಬುದನ್ನು ಇವತ್ತು ಸಂಜೆಯೊಳಗೆ ತಮಗೆ ಮನವರಿಕೆ ಮಾಡುತ್ತೇನೆ. ಅದಕ್ಕೆ ಸಮಧಾನವಾಗಲಿಲ್ಲವೆಂದರೆ, ತಾವು ತಮ್ಮ ಹತ್ತಿರ ಸದನದ ನಿಯಮಗಳಿಗೆ ಒಳಪಟ್ಟು, ತಮ್ಮ ಹತ್ತಿರ ಎಲ್ಲಾ ಅಸ್ತ್ರಗಳು ಅವರ ಕೈಯಲ್ಲಿಯೇ ಇದ್ದೇ ಇದೆ. ಸದನ ನಡೆಯುತ್ತಿರುವಾಗ, ಇದೊಂದು ವಿಷಯಕ್ಕೆ ನಾವು ಸದನಸ ಕಲಾಪವನ್ನು ಕುಂಠಿತಗೊಳಿಸುವುದು ಬೇಡ. ಸದನ ನಡೆಯಬೇಕೆಂದರೆ, ಆಡಳಿತ ಪಕ್ಷ ಮತ್ತು ಪ್ರತಿಪಕ್ಷ ಎರಡು ಒಂದೇ ಬಂಡಿಯ ಎರಡು ಚಕ್ರಗಳು ಇದ್ದಂತೆ. ಆ ಗಡಿಯ ಚಾಟಿ ಅಥವಾ ನೊಗ ಹಗ್ಗ ನಿಮ್ಮ ಕೈಯಲ್ಲಿ ಇರುತ್ತದೆ. ಆದರೆ ಎರಡು ಚಕ್ರ ಒಂದೇ ಸಮನಾಗಿ, ಚಲಿಸಿದರೆ ಮಾತ್ರ ಗಾಡಿ ಮುಂದೆ ಸಾಗುವುದು. ನಮ್ಮಿಬ್ಬರ ಹೊಂದಾಣಿಕೆಯ ಮೇಲೆ ಸದನ ನಡೆಯಲಿ. ನಾವು ಸದನವನ್ನು ನಡೆಸುವುದಕ್ಕೆ ತಯಾರಿದ್ದೇವೆ. ಸದನವನ್ನು ಈ ರೀತಿಯಾಗಿ ಮೊಟಕು ಮಾಡುವುದು ಬೇಡ ಎಂದು ಹೇಳಿ, ಆ ವಿರಾಮಕ್ಕೆ ಮೊದಲು ನಾನು ಮನವಿ ಮಾಡಿದ್ದೇನೆ. ನಾನು ಮನವಿಯನ್ನು ಪುನರುಚ್ಚಾರ ಮಾಡುತ್ತಿದ್ದೇನೆ. ನಾವೆಲ್ಲರೂ ಸೇರಿ ಸದನವನ್ನು ನಡೆಸೋಣ. ರೈತರ ಸಮಸ್ಯೆಗಳು ಈ ಭಾಗದ ಸಮಸ್ಯೆ ಬಗ್ಗೆ ಎಲ್ಲವೂ ಚರ್ಚೆಯಾಗಲಿ. ನಾನು ಅವರಲ್ಲಿ ಒಂದೆರಡು ತಾಸು ಅಷ್ಟೇ ಸಮಯವನ್ನು ಕೇಳಿದ್ದೆ. ನಾನು ಹೆಚ್ಚಿಗೆ ಸಮಯವನ್ನು ಕೇಳಿಲ್ಲ. ನನ್ನದು ಮತ್ತು ಮಾನ್ಯ ಸಭಾ ನಾಯಕರದ್ದು ಇಬ್ಬರದ್ದೂ ಜವಾಬ್ದಾರಿ. ಒಂದೆರಡು ತಾಸು ಅವರು ಸಮಯ ಕೊಟ್ಟರೆ, ವಾಪಸ್ಸು ಬಂದು ನಾವು ಏನೆಂಬುದರ ಬಗ್ಗೆ ವಿಚಾರ ಹೇಳುತ್ತೇನೆ. ಅಲ್ಲಿಯವರೆಗೆ ಸದನ ನಡೆಯಲಿ ಎಂದು ನಾನು ಮತ್ತೊಮ್ಮೆ ಅವರಲ್ಲಿ ವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ.

(ಮುಂದು..)

(432)13.12.2018 4.00 ಸಿಹೆಚ್/ಜಿಆರ್

**ಶ್ರೀ ಕೃಷ್ಣಭೈರೇಗೌಡ (ಮುಂದು):-** ಆದ್ದರಿಂದ ದಯವಿಟ್ಟು ಈ ವಿಚಾರದಲ್ಲಿ ಅವರು ಬಾವಿಗೆ ಬರುವಂತಹ ಅವಶ್ಯಕತೆ ಇಲ್ಲ, ಸದನ ನಡೆಸೋಣ. ಮತ್ತೆ ವಾಪಸ್ಸು ಬಂದು ನಿಮಗೆ ಹೇಳುತ್ತೇವೆ. ನಿಮಗೆ ಉತ್ತರ ಸಮಾಧಾನ ತರಲಿಲ್ಲವೆಂದರೆ ತಾವು ಆಗ ಏನು ಬೇಕಾದರೂ ಮಾಡಿ. ಅವರೇಕೆ ದುಡುಕಿ ಈ ರೀತಿ ಮಾಡುತ್ತಿದ್ದಾರೆ. ಇಲ್ಲಿಯವರೆಗೂ ಮಾನ್ಯ ವಿರೋಧ ಪಕ್ಷದವರಿಗೆ ಎಲ್ಲಾ ರೀತಿಯಲ್ಲೂ ಸ್ಪಂದನೆ ಮಾಡಿದ್ದೇವೆ. ಸದನವನ್ನು ಹಾಗೆಯೇ ಮುಂದುವರೆಸೋಣ ಎಂದು ನಾನು ಮತ್ತೊಮ್ಮೆ ಅವರಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚೆ ಮಾಡಬೇಕು ಎನ್ನುವುದಕ್ಕೋಸ್ಕರ ಎರಡೂ ಸದನಗಳಲ್ಲಿ ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ಕಾರ್ಯಸೂಚಿಯಂತೆ ವಿಷಯಗಳು ಚರ್ಚೆಗೆ ಬಂದಿರುತ್ತದೆ. ನಾನು ಟಿಪ್ಪು ಜಯಂತಿ ವಿಚಾರದಲ್ಲಿ ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳುವವನು, ಖಂಡಿತವಾಗಿಯೂ ನಿಮಗೆ ಕಷ್ಟ ಇಲ್ಲವೆನ್ನುವುದು ನಮಗೆ ಅರ್ಥವಾಗಿದೆ. ಆದರೆ ಇಷ್ಟ ಏಕಿಲ್ಲ ಎಂದು ನಮಗೆ ಈ ಕ್ಷಣದವರೆಗೆ ಅರ್ಥವಾಗಿಲ್ಲ. ನಿಮಗೆ ಕಷ್ಟ ಇಲ್ಲ ಎನ್ನುವುದನ್ನು

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನೀವು ಹೇಳುತ್ತಿದ್ದೀರಿ. ಅದು ನಮಗೂ ಕೂಡ ಗೊತ್ತಿದೆ. ಆದರೆ, ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಉತ್ತರ ಕೊಡುವುದಕ್ಕೆ ನಿಮಗೆ ಏಕೆ ಇಷ್ಟವಿಲ್ಲ ಎಂದು ಇಲ್ಲಿಯವರೆಗೆ ನಮಗೆ ಅರ್ಥ ಆಗಿಲ್ಲ ಎಂದು ಅನಿಸುತ್ತಿದೆ. ನಿನ್ನೆಯಷ್ಟೆ ಸರ್ಕಾರ ಏನನ್ನು ಹೇಳಿತ್ತು ಎಂದರೆ, 'ಇವತ್ತು ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬರುತ್ತಾರೆ, ಅವರಿಂದ ಉತ್ತರ ಕೊಡಿಸುತ್ತೇವೆ' ಎಂದು ಸರ್ಕಾರ ಹೇಳಿತ್ತು. ಆದರೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆಯೇ? ಬಂದಿದ್ದಾರೆ. ಉತ್ತರ ಕೊಟ್ಟಿದ್ದಾರೆಯೇ ಇಲ್ಲ. ಹಾಗಿದ್ದಲ್ಲಿ ವಿರೋಧ ಪಕ್ಷ ಕೇಳುವುದರಲ್ಲಿ ತಪ್ಪೇನಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಕ್ಕೆ ಎಷ್ಟು ಜವಾಬ್ದಾರಿ ಇದೆಯೋ, ಅಷ್ಟೇ ಜವಾಬ್ದಾರಿ ವಿರೋಧ ಪಕ್ಷಕ್ಕೂ ಇದೆ ಎಂದು ನಮಗೆ ಅರಿವಿದೆ. ಆದರೆ, ಸರ್ಕಾರವು ಸದನದ ಮುಂದೆ ಮತ್ತು ಮಾಧ್ಯಮದ ಮುಂದೆ ಆಡಿದ ಮಾತಿಗೆ ತಪ್ಪಿ, ಪ್ರಶ್ನೆಗಳನ್ನು ಕೇಳಿದಾಗ, ಅವರು ನಂತರ ಉತ್ತರ ಕೊಡುತ್ತೇವೆ ಎನ್ನುವುದನ್ನು ಬಹಳ ಸುಲಭವಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ, ಒಪ್ಪುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ನಾವು ಇವತ್ತು ಸದನದ ಬಾವಿಗೆ ಇಳಿದು ಪ್ರತಿಭಟನೆ ಮಾಡುತ್ತಿದ್ದೇವೆ. ತಾವು ಹೇಳಿದಂತಹ ಮಾತನ್ನು ಉಳಿಸಿಕೊಳ್ಳಿ. 'ನಾವು ಹೇಳಿದ ಮಾತನ್ನು ಉಳಿಸಿಕೊಳ್ಳಿ ಎನುವುದಲ್ಲ, ಸರ್ಕಾರ ಹೇಳಿದ ಮಾತನ್ನು ಉಳಿಸಿಕೊಳ್ಳಲಿ' ಎಂದು ಹೇಳುತ್ತಿದ್ದೇವೆ. ಆದರೆ, ಸರ್ಕಾರವು ನಾವು ಮಾನ್ಯ ಮುಖ್ಯಮಂತ್ರಿಯವರ ಬಳಿ ಹೋಗಿ ಮಾತನಾಡಿಕೊಂಡು ಬರುತ್ತೇವೆ, ಅಲ್ಲಿಂದ ಬಂದ ನಂತರ ಅವರೇನು ಹೇಳಿದ್ದಾರೆಂದು ನಾವು ನಿಮಗೆ ತಿಳಿಸುತ್ತೇವೆ ಎಂದು ಹೇಳಿತ್ತು. ನಾವು ತಿಳಿಸುವವರೆಗೂ ಸದನ ಸುಸೂತ್ರವಾಗಿ ನಡೆಯಲಿ ಎನ್ನುವಂತಹ ಭಾವನೆಗಳು ಇದೆಯೆಲ್ಲಾ, ಅದಕ್ಕೆ ಒಂದು ತಾರ್ಕಿಕವಾದ ಅರ್ಥಬೇಕಲ್ಲವೇ? ನೀವು ಆ ರೀತಿ ಹೇಳುವ ಬದಲು ಇವತ್ತು ಸಂಜೆ ಅಥವಾ ರಾತ್ರಿ 10.00 ಗಂಟೆಯಾಗಲಿ, ನಾನು ಕರ್ನಾಟಕ ರಾಜ್ಯಕ್ಕೆ ಸಂಸದೀಯ ಸಚಿವನಾಗಿದ್ದೇನೆ, ಸಭಾನಾಯಕರು ಮತ್ತು ನಾಲ್ಕು ಜನ ಸಚಿವರುಗಳು ಇದ್ದೇವೆ, ಮಾನ್ಯ ಮುಖ್ಯಮಂತ್ರಿಗಳ ಬಳಿ ಮಾತನಾಡಿ, ರಾತ್ರಿ 8.00 ಗಂಟೆಯಾದರೂ ಕೂಡ ನಿಮಗೆ ಉತ್ತರ ಕೊಡಿಸುತ್ತೇವೆ. ಆದುದರಿಂದ ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಳಕ್ಕೆ ತೆರಳಿ, ಸದನ ನಡೆಸಲು ಅವಕಾಶ ಮಾಡಿಕೊಡಬೇಕು ಎಂದು ಹೇಳಬೇಕಾಗಿತ್ತು. ನಾವು ರಾತ್ರಿ 8 ಗಂಟೆ ಅಥವಾ 9 ಗಂಟೆ ಅಥವಾ 10 ಗಂಟೆಯೊಳಗೆ ಸ್ವತಃ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬಂದು ಅವರಿಂದ ಉತ್ತರ ಕೊಡಿಸುತ್ತೇವೆ ಎಂದು ಹೇಳಿಬಿಡಿ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉನ್ನತ ಸ್ಥಾನದಲ್ಲಿ ಇರುವಂಥವರು ಆಗಿರುತ್ತಾರೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಇದು ಅತ್ಯಂತ ಗಂಭೀರ ವಿಷಯವಾದರೆ ಹೇಳಬಹುದು. ಆದರೆ, ಇದು ಅಷ್ಟು ದೊಡ್ಡ ವಿಷಯ ಅಲ್ಲವಲ್ಲಾ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಯು.ಟಿ.ಖಾದರ್‌ರವರು ನಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ. ನಾನು ಕಾನೂನು ಮತ್ತು ಸಂಸದೀಯ ವ್ಯಹಾರಗಳ ಸಚಿವರುಗಳನ್ನು ಕೇಳುತ್ತಿದ್ದೇನೆ. ನನಗೆ ಅರಿವಿರುವಂತೆ ಮಾನ್ಯ ಮುಖ್ಯಮಂತ್ರಿ ಸ್ಥಾನದ ನಂತರ ಎರಡನೇ ಸ್ಥಾನ ಹೊಂದಿರುವುದೆಂದರೆ, ಕಾನೂನು ಮತ್ತು ಸಂಸದೀಯ ವ್ಯಹಾರಗಳ ಸಚಿವರ ಸ್ಥಾನವೆಂದು ನಾವು ತಿಳಿದುಕೊಂಡಿದ್ದೇವೆ. ಇಂತಹ ಒಂದು ಉನ್ನತ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುದ್ದೆಯಲ್ಲಿದ್ದುಕೊಂಡು ಅವರ ಹತ್ತಿರ ಕೇಳಿಕೊಂಡು ತಿಳಿಸಬಹುದಾಗಿತ್ತು. ಇದು ಆದರೂ ತಮಗೆ ಬೇಸರವಿದ್ದಲ್ಲಿ ಬಾವಿಗೆ ಬನ್ನಿ ಎಂದು ಹೇಳಬಹುದಿತ್ತು ಅಲ್ಲವೇ? ಅಥವಾ ಈಗ ನಾನು ಹೇಳುತ್ತಿದ್ದೇನೆ, ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ರಾತ್ರಿ 10 ಗಂಟೆಯಾದರೂ ಕೂಡ ವಿರೋಧಪಕ್ಷವು ಸುಮ್ಮನಾಗುವಂತೆ ಉತ್ತರ ಕೊಡಿಸುತ್ತೇನೆ. ನಮಗೆ ಯಾವ ಕಷ್ಟವೂ ಇಲ್ಲವೆಂದು ಹೇಳಬಹುದಲ್ಲವೇ? ಆದ್ದರಿಂದ ದಯವಿಟ್ಟು ನಾವು ತಮ್ಮಲ್ಲಿ ಆಗ್ರಹಿಸಿ ವಿನಂತಿ ಮಾಡುವುದೇನೆಂದರೆ, ಸರ್ಕಾರ ಮಾತು ಕೊಟ್ಟಿದ್ದು ಹಿಂದಕ್ಕೆ ಸರಿಯಬಾರದು. ಸರ್ಕಾರದ ಬಗ್ಗೆ ನಮಗೆ ಅಪಾರವಾದ ಗೌರವ ಇದೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದವರಿಗೆ ಏನು ತುರ್ತು ಪರಿಸ್ಥಿತಿ ಇದೆಯೆಂದು ನಮಗೆ ಅರ್ಥವಾಗುತ್ತಿಲ್ಲ. ಈಗ ಏನು ದೇಶಕ್ಕೆ ಅನಾಹುತ ಉಂಟು ಮಾಡುವ ಪರಿಸ್ಥಿತಿ ಇದೆಯೇ? (ಗೊಂದಲ) ಮಾನ್ಯ ಮುಖ್ಯಮಂತ್ರಿಗಳು ಬಂದು ಈಗಲೇ ಉತ್ತರ ಕೊಡಬೇಕು, ಒಂದು ಗಂಟೆ ಅಥವಾ ಎರಡು ಗಂಟೆಯ ನಂತರವೇ ಬಂದು ಉತ್ತರ ಕೊಡಬೇಕು ಎಂದು ಹೇಳಿದ್ದರೆ ಹೇಗೆ?

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಳಿಗ್ಗೆಯಿಂದ ಏನನ್ನು ಹೇಳಿದ್ದಾರೆಂದು ದಾಖಲೆಗಳನ್ನು ತೆಗೆಸಿ ನೋಡಿ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್‌ನ ನಿಯಮ 72 ಮತ್ತು ನಿಯಮ 330 ಇದೆ. ಇದನ್ನು ನಿಯಮ 68ರಲ್ಲಿ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನೀವು ಮತ್ತು ನಿಮ್ಮ ಸಚಿವರು ಹೇಳಿದ್ದನ್ನು ನಾವೆಲ್ಲಾ ಅತ್ಯಂತ ತಾಳ್ಮೆಯಿಂದ ಕೇಳಿದ್ದೇವೆ. ಅದೇ ರೀತಿ ನಾವು ಹೇಳುವುದನ್ನೂ ಅವರು ಕೇಳಬೇಕಲ್ಲವೇ? ಇಷ್ಟೆಲ್ಲಾ ಹೇಳಿದ ನಂತರ, ಒಂದೇ ಬಾರಿಗೆ ವಾದ ಪ್ರಾರಂಭವಾಯಿತು. ವಾದದಲ್ಲಿ ಎರಡು ವಿಧಗಳಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರಿಯಾದ ವಾದವನ್ನು ಎಲ್ಲರೂ ಒಪ್ಪತಕ್ಕದ್ದು. ಧ್ವನಿಯ ಮೂಲಕ ಇನ್ನೊಬ್ಬರನ್ನು ಒಪ್ಪಿಸುವುದು ಒಂದು ವಾದ. ಇನ್ನೊಂದು ತೋಳ್ಬಲದ ವಾದ. ಎಲ್ಲರೂ ಒಟ್ಟಾಗಿ ಸೇರಿಕೊಂಡು ಗಲಾಟೆ ಮಾಡಿಬಿಡುವುದು. ಏನು ನೀವು ಕಡಿಮೆ ಇದ್ದೀರಿ ನಾವು ಹೇಳಿದಂತೆ ಕೇಳಬೇಕು ಎಂದು ಹೇಳುವುದು ತಪ್ಪು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅದು ಆಗುವುದಿಲ್ಲ. (ಗೊಂದಲ) ಮಾನ್ಯ ಸಭಾಪತಿಯವರೇ, ಅವರು ಏನನ್ನು ಹೇಳಿದರೂ ಒಪ್ಪುವುದಕ್ಕೆ ಆಗುವುದಿಲ್ಲ. ರೈತರ ಪರವಾಗಿ ನಿಲುವಳಿ ಸೂಚನೆಯನ್ನು ಮಂಡಿಸಿದವರು ನಾವು. (ಗೊಂದಲ) ಆದರೆ ಈಗ ಹಾಕಿರುವ ಅಜೆಂಡಾದ ರೀತ್ಯಾ ಉತ್ತರ ಕೊಡದೇ ಆಡಿದ ಮಾತಿನಿಂದ ತಪ್ಪಿಸಿಕೊಂಡರೆ ನಮಗೆ ಅವಮಾನ ಆಗುತ್ತದೆ. ನಾವು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ, ನೀವು ಏನು ಬೇಕಾದರೂ ಮಾಡಿ.

(ಗೊಂದಲ)

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಸದನ ನಡೆಯಬೇಕು ಎನ್ನುವಂತಹ ನಿಜವಾದ ಕಳಕಳಿ ಇದ್ದಲ್ಲಿ, 15 ನಿಮಿಷದಲ್ಲಿ ಈ ವಿಷಯದ ಬಗ್ಗೆ ಮಾತನಾಡಿ ಮುಗಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳನ್ನು ಕರೆಸಿ. ಇತಿಹಾಸದಲ್ಲಿ ಅನೇಕ ಉದಾಹರಣೆಗಳಿವೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮುಖ್ಯಮಂತಿಗಳ ಬಳಿ ಹೋಗಿ ನಾವು ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದೇವೆ. 10 ನಿಮಿಷಗಳ ಕಾಲ ಸದನದ ಚರ್ಚೆಯಲ್ಲಿ ಪಾಲ್ಗೊಳ್ಳಿ ಎಂದು ವಿನಂತಿ ಮಾಡಿದರೆ, ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು, ಕಾನೂನು ಸಚಿವರ ಮಾತನ್ನು ಮೀರುವುದಕ್ಕೆ ಸಾಧ್ಯವಿಲ್ಲ. ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಹೇಳುತ್ತಿದ್ದೇನೆ. ಏಕೆಂದರೆ, ಇದು ಅವರ ಜವಾಬ್ದಾರಿ. ಅವರು ತಪ್ಪು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ, ತಾವೇಕೆ ಈ ರೀತಿಯ ತಪ್ಪು ಮಾಡುತ್ತಿದ್ದೀರಿ ಎಂಬ ಬಗ್ಗೆ ನನಗೆ ಆತಂಕವಿದೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮನವಿ ಮಾಡುತ್ತಿದ್ದೇವೆ. ನಾವು ತಪ್ಪು ಮಾಡುವ ಯಾವುದೇ ಉದ್ದೇಶವಿಲ್ಲ. ನಾನು ವಿರಾಮಕ್ಕೆ ಮೊದಲೇ ಹೇಳಿದ್ದೇನೆ. ಸರ್ಕಾರ ತಪ್ಪಿಸಿಕೊಂಡು ಹೋಗುವ ಪ್ರಶ್ನೆ ಹೇಗೆ ಉದ್ಭವಿಸುತ್ತದೆ. ನಾಳೆ ಮತ್ತೆ ನಾವು ಮತ್ತು ಅವರು ಈ ಸದನದಲ್ಲಿ ಭೇಟಿ ಆಗಲೇಬೇಕು. ನಾವಿನ್ನೂ ನಾಲ್ಕನೇ ದಿನದಲ್ಲಿ ಇದ್ದೇವೆ. ಒಟ್ಟು ಹತ್ತು ದಿನಗಳ ಅಧಿವೇಶನವಾಗಿದೆ. ನಾವು ಹೇಗೆ ತಪ್ಪಿಸಿಕೊಳ್ಳಲು ಸಾಧ್ಯವಿದೆ? ನಾವು ಸಾರ್ವಜನಿಕರ ಜೀವನದಲ್ಲಿ ಇರುವವರು, ಮುಖ ಮರೆಮಾಚಿಕೊಂಡು ಇರುವುದಕ್ಕೆ ಆಗುತ್ತದೆಯೇ? ಹಾಗಾಗಿ, ನಿನ್ನೆ ದಿವಸ ಮಾನ್ಯ ಸಭಾನಾಯಕರು ಹೇಳಿದ್ದು ನಿಜ. ನಮ್ಮ ಸರ್ಕಾರ ಸಭಾ ನಾಯಕರ ಪರವಾಗಿದೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನಾನಾ ಕೆಲಸದ ಒತ್ತಡ ಇರುವುದರಿಂದ, ಇವತ್ತು ಮತ್ತು ನಿನ್ನೆ ಕೊಟ್ಟಂತಹ ಭರವಸೆಯನ್ನು ಈಡೇರಿಸಲು ಆಗಲಿಲ್ಲ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಹಾಗಾಗಿ, ಆ ಭರವಸೆಯನ್ನು ಈಡೇರಿಸದೇ ಹೋಗುವಂತಹ ವಿನಾಯಿತಿಯನ್ನು ನಾವು ಕೇಳುತ್ತಿಲ್ಲ. ಆ ರೀತಿ ಏನೂ ಇಲ್ಲ. ನಾವು ಕೇಳುತ್ತಿರುವುದು ಏನೆಂದರೆ, ಈಗ ನಾವಿಬ್ಬರೂ ಜೊತೆಗೆ ಚಲಿಸಬೇಕು. ಕೊಡುವುದು ಮತ್ತು ತೆಗೆದುಕೊಳ್ಳುವುದು ಇರಬೇಕು. ನಿಮಗೆ ಉತ್ತರವನ್ನು ಕೊಟ್ಟೇ ಕೊಡಿಸುತ್ತೇವೆ ಎಂತಲೂ ಸಹ ನಾನು ಮುಂದುವರೆದು ಹೇಳುತ್ತಿದ್ದೇನೆ. ಎಲ್ಲೋ ಒಂದು ಕಡೆ ಈ ವಿಚಾರದಲ್ಲಿ ನಾವು ಇಕ್ಕಟ್ಟಿನಲ್ಲಿದ್ದೇವೆ, ನಮಗೇನೋ ಕಷ್ಟ ಇರುವುದನ್ನು ನಾನು ಸಮಜಾಯಿಷಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ನಮಗೆ ಆ ರೀತಿಯಾದ ತೊಂದರೆ ಏನೂ ಇಲ್ಲ. ಅವರು ತಿಳಿದುಕೊಂಡಷ್ಟು ಸಂದಿಗ್ಧ ಪರಿಸ್ಥಿತಿಯಲ್ಲಿ ಇಲ್ಲ. ಇನ್ನು ನಾನೇನಾದರೂ ಹೆಚ್ಚಿಗೆ ಹೇಳಿದರೆ ಅವರು ಉದ್ರೇಕಕ್ಕೆ ಒಳಗಾಗುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಹೆಚ್ಚಿಗೆ ಹೇಳುವುದಕ್ಕೆ ಏನೂ ಇಲ್ಲ, ಮಾನ್ಯ ಸಚಿವರು ಹೆದರಿಕೊಳ್ಳುವುದು ಬೇಡ, ಹೇಳಲಿ. ಅವರು ಮಾನ್ಯ ಸಚಿವರಾಗಿ ಗೌರವಾರ್ಹವಾದಂತಹ ಯಾವ ಮಾತುಗಳನ್ನು ಆಡುತ್ತೀರೋ ಅದನ್ನು ನಾವು ಅತ್ಯಂತ ತಾಳ್ಮೆಯಿಂದ ಕೇಳುತ್ತೇವೆ. ಮಾನ್ಯ ಸಚಿವರ ಮೇಲೆ ಯಾವ ಭರವಸೆಯೂ ಇಲ್ಲ, ಅವರ ಮೇಲೆ ಯಾವುದೇ ಅನುಮಾನಗಳು ಇಲ್ಲ. ಅವರು ದುರ್ಬಲರು ಎಂದು ನಾವು ಹೇಳಿಲ್ಲ. ನಿನ್ನೆ ದಿವಸ ಆಡಿದ ಮಾತುಗಳನ್ನು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸರ್ಕಾರ ಉಳಿಸಿಕೊಳ್ಳಬೇಕಾಗಿತ್ತು. ಆದರೆ, ಏಕೆ ಉಳಿಸಿಕೊಂಡಿಲ್ಲ. ಉಳಿಸಿಕೊಳ್ಳಿ ಎನ್ನುವುದಷ್ಟೇ ನಮ್ಮ ಆಗ್ರಹವಾಗಿದೆ. ಮಾನ್ಯ ಸಭಾಪತಿಯರವರು ಕೊಟ್ಟಿರುವಂತಹ ಅಜೆಂಡಾವನ್ನು ಕೈಬಿಟ್ಟಿದ್ದು ಏಕೆ ಎನ್ನುವುದು ನಮ್ಮ ವಿನಂತಿ ಆಗಿದೆ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರ ಕೊಟ್ಟಿರುವಂತಹ ಮಾತನ್ನು ಉಳಿಸಿಕೊಳ್ಳುವುದಕ್ಕೆ ನಾವು ಬದ್ಧರಾಗಿದ್ದೇವೆ. ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ನಾನು ಬಹಳ ಸಷ್ಟವಾಗಿ ತಮ್ಮ ಮುಖಾಂತರ ಅವರಿಗೆ ಮನವರಿಕೆ ಮಾಡುತ್ತಿದ್ದೇನೆ. ಆ ಕಾರಣಕ್ಕಾಗಿ ಈ ರೀತಿಯಾಗಿ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗುವುದು ದೊಡ್ಡ ವಿಚಾರವೇನಲ್ಲ. ನಾನು ಅವರಿಗೆ ಒಂದು ತಾಸಿನೊಳಗೆ ಹೇಳುತ್ತೇನೆ ಎಂದು ತಿಳಿಸಿದ್ದೆನು ಅಷ್ಟೆ. ,,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅವರು ಆ ರೀತಿ ಹೇಳಿ ಒಂದು ತಾಸು ಮುಗಿಯಿತು.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾವು ಯಾವುದೇ ರೀತಿಯಾದ ವಿನಾಯಿತಿಯನ್ನು ಕೇಳುತ್ತಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಜವಾಗಲೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿ ಒಂದು ತಾಸು ಮುಗಿದಿದೆ. ಒಂದು ತಾಸಿನಲ್ಲಿ ಉತ್ತರ ಕೊಡಿಸುತ್ತೇವೆಂದು ಅವರೇ ಹೇಳಿರುತ್ತಾರೆ. ಎಲ್ಲದಕ್ಕಿಂತ ಹೆಚ್ಚಿನದಾಗಿ ಈ ವಿಚಾರಗಳು ಹೇಗೆ ಬಂತು ಎಂದು ಅವರಿಗೂ ಕೂಡ ಗೊತ್ತಿದೆ. ಸರ್ಕಾರ ಹೇಳಿದ್ದರಿಂದ ಅಜೆಂಡಾದಿಂದ ಕೈಬಿಡಲಾಯಿತು. ಸ್ವಾಭಾವಿಕವಾಗಿ ಮಾನ್ಯ ವಿರೋಧ ಪಕ್ಷಕ್ಕೆ ನ್ಯಾಯ ಕೊಡಿ ಎಂದು ಕೇಳುತ್ತಿದ್ದೇವೆ. ನ್ಯಾಯ ಕೊಡಿ ಎಂದು ಹೇಳುವುದು ನಮ್ಮ ತಪ್ಪೇನು? ಸರ್ಕಾರ ಇದಕ್ಕೆ ಸ್ಪಂದಿಸಿ, ಒಂದು ಗಂಟೆ, ಎರಡು ಗಂಟೆ, ರಾತ್ರಿ 8.00 ಗಂಟೆಗಾದರೂ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು ಉತ್ತರ ಕೊಡಿಸುತ್ತೇವೆ ಎಂದು ಹೇಳಬೇಕು. ನಾನು ನಿಮಗೆ ನಂತರ ಉತ್ತರ ಕೊಡಿಸುತ್ತೇನೆ, ನಾಳೆ ಹೇಳುತ್ತೇನೆ, ಸದನ ಮುಗಿಯುವುದರೊಳಗೆ ಉತ್ತರ ಕೊಡಿಸುತ್ತೇನೆ, ಸರ್ಕಾರ ಪಲಾಯನ ಮಾಡುವ ಪ್ರಮೇಯವೇ ಇಲ್ಲ. ಇದ್ಯಾವುದನ್ನೂ ನಾವು ಕೇಳಲಿಲ್ಲ. ಸರ್ಕಾರದ ಬಗ್ಗೆ ನಮಗೆ ಸಂಪೂರ್ಣ ವಿಶ್ವಾಸವಿದೆ. ಈಗ ರಾತ್ರಿ 8.00 ಗಂಟೆಗೆ ಉತ್ತರ ಕೊಡಿಸುತ್ತೀರಾ? ರಾತ್ರಿ 9.00 ಗಂಟೆಗೆ ಉತ್ತರ ಕೊಡಿಸುತ್ತೀರಾ? ರಾತ್ರಿ 10 ಗಂಟೆಗೆ ಉತ್ತರ ಕೊಡಿಸುತ್ತೀರಾ ಅವರು ತಿಳಿಸಬೇಕು.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಇವತ್ತು ಕೊಟ್ಟರೆ ಒಂದು ರೀತಿ, ನಾಳೆ ಉತ್ತರ ಕೊಟ್ಟರೆ ಮತ್ತೊಂದು ರೀತಿ ಇರುತ್ತದೆಯೇ? ನಾವು ಉತ್ತರ ಕೊಡಿಸುತ್ತೇವೆ ಎಂದು ಹೇಳಿದರೆ, ನೀವು ಈಗಲೇ ಉತ್ತರ ಕೊಡಬೇಕೆಂದು ಪಟ್ಟುಹಿಡಿದರೆ ಹೇಗೆ?

**(433)13-12-2018(4-10)mm-gr**

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಂದು):–**

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ತಮ್ಮ ಮುಖಾಂತರ ಸ್ಪಷ್ಟವಾಗಿ ಹೇಳುತ್ತೇನೆ, ಸರ್ಕಾರದಿಂದ ಉತ್ತರವನ್ನು ಕೊಡುತ್ತೇವೆ. ಅದರಲ್ಲಿ ಇನ್ನೊಂದು ಮಾತೇ ಇಲ್ಲ. ಉತ್ತರವನ್ನು ಕೊಟ್ಟೇ ಕೊಡುತ್ತೇವೆ. ಆದಾಗ್ಯೂ ಕೂಡ ನಾನು ಅವರಿಗೆ ಮನವಿ ಮಾಡುವುದೇನೆಂದರೆ, ಬರಗಾಲದ ಬಗ್ಗೆ ಚರ್ಚೆ ಮುಂದುವರಿಸಿ ರಾಜ್ಯದ ರೈತರ ಸಮಸ್ಯೆಗಳಿವೆ, ಸರ್ಕಾರಕ್ಕೆ ಎಚ್ಚರಿಸುವ ಕೆಲಸವನ್ನು ಮಾಡುವುದು ಬಿಟ್ಟು ಇಲ್ಲ ನಮಗೆ ಯಾವ ರೈತರ ಸಮಸ್ಯೆಯೂ ಮುಖ್ಯ ಇಲ್ಲ, ಯಾವ ಉತ್ತರ ಕರ್ನಾಟಕದ್ದೂ ನಮಗೆ ಬೇಕಾಗಿಲ್ಲ, ರಾಜಕೀಯವಾಗಿ ಮುಖ್ಯವಾಗಿರುವ ಇದೊಂದೇ ವಿಚಾರ ನಮಗೆ ಬೇಕು, ಜನಗಳ ವಿಚಾರ ಬೇಡ ಎಂದು ಹೇಳುವುದಾದರೆ ಅದು ಅವರ ಇಚ್ಛೆ. ಸರ್ಕಾರ ಜನಪರ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ . . .

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಕೇವಲ ರಾಜಕೀಯ ಲಾಭ ಮತ್ತು ನಷ್ಟದ ಲೆಕ್ಕಾಚಾರವನ್ನು ಅವರು ಹಾಕುವುದಾದರೆ ಅದು ಅವರ ಇಚ್ಛೆ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಬರೀ ರಾಜಕೀಯಕ್ಕೋಸ್ಕರ ಈ ಸದನವನ್ನು ಬಳಸಿಕೊಳ್ಳುವುದಾದರೆ ಅದು ಅವರ ಆಯ್ಕೆ ಅದಕ್ಕೆ ಅವರು ಜವಾಬ್ದಾರರಾಗುತ್ತಾರೆ. ಅವರಲ್ಲಿ ಮನವಿ ಮಾಡುತ್ತಿದ್ದೇನೆ, ದಯವಿಟ್ಟು ಈ ಸದನ ಸದುಪಯೋಗವಾಗಲಿ. ರಾಜಕೀಯ ಲೆಕ್ಕಾಚಾರಗಳಿಗೆ ಸೀಮಿತವಾಗುವುದು ಬೇಡ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಸ್ವಲ್ಪ ಎರಡು ಗಂಟೆ ನಿಮಗೆ ಕಾಯುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಈ ಸಭೆಯನ್ನು ನಡೆಸುವುದು ಹೇಗೆ? ಒಂದು ಪ್ರಶ್ನೆಗೆ ಉತ್ತರ ಬರದಿದ್ದರೆ ನಿಮಗೆ ಕಾಯುವುದಕ್ಕಾಗುವುದಿಲ್ಲವೇ? ಸಭೆಯನ್ನು ನಡೆಸುವುದು ಹೇಗೆ? ಯಾವ ಸಮಸ್ಯೆಗಳಿಗೂ ಉತ್ತರ ಸಿಗುವುದಿಲ್ಲ.

(ಗೊಂದಲ)

**ಶ್ರೀ ಅಬ್ದುಲ್ ಜಬ್ಬಾರ್:–** ಸದನ ನಡೆಯಬಾರದೆಂದು ಹೀಗೆ ಮಾಡುತ್ತಿದ್ದಾರೆ. ಅವರಿಗೆ ಯಾವುದೇ ಸಾರ್ವಜನಿಕ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ವಿಷಯವಿಲ್ಲ. ಆದುದರಿಂದ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ.

**ಡಾ: ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇದು ಸರಳವಾದ ಪ್ರಶ್ನೆ, ಉತ್ತರವನ್ನು ಯಾವಾಗ ಕೊಡುತ್ತೀರಿ ಎಂದು ಕೇಳಿದೆವು.

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಉದ್ವೇಗ ಮಾಡಿದರೆ, ನಾವು ಪ್ರತಿಪಕ್ಷದವರು. ಸಂಘರ್ಷಕ್ಕೆ ಇಳಿದರೆ ಪ್ರತಿಪಕ್ಷವಾದ ನಮಗೇನೂ ತೊಂದರೆ ಇಲ್ಲ. ಬರಗಾಲ ಬಂದಿರುವುದು ಏಕೆಂದು ಹೇಳಿ, ಅದಕ್ಕೆ ಮೊದಲು ಕ್ಷಮೆ ಕೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಬರಗಾಲವನ್ನು ನಿರ್ವಹಣೆ ಮಾಡದಿರುವುದಕ್ಕೋಸ್ಕರ, ಪಲಾಯನ ಮಾಡುವುದಕ್ಕೋಸ್ಕರ ಸರ್ಕಾರ ಈ ರೀತಿ ನಾಟಕ ಮಾಡುತ್ತಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸರ್ಕಾರ ಪಲಾಯನ ಸೂತ್ರ ಮಾಡುತ್ತಿದೆ, ಬೇಜವಾಬ್ದಾರಿ ಮಾಡುತ್ತಿದೆ. ಉತ್ತರವನ್ನು ಯಾವಾಗ ಕೊಡುತ್ತೇವೆಂದು ಹೇಳುವುದಕ್ಕೆ ಸರ್ಕಾರಕ್ಕೆ ತಾಕತ್ತಿಲ್ಲ. ಸರ್ಕಾರ ಎಷ್ಟು ದುರ್ಬಲವಾಗಿದೆಯೆಂದರೆ, ಉತ್ತರವನ್ನು ಯಾವಾಗ ಕೊಡುತ್ತೇವೆ ಎಂದು ಹೇಳುವ ತಾಕತ್ತಿಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧಪಕ್ಷದ ನಾಯಕರೇ, ಮಾನ್ಯ ಸಚಿವರು ಉತ್ತರವನ್ನು ಕೇಳಿ ಹೇಳುತ್ತೇವೆ ಎಂದು ಹೇಳಿದರು.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಅವರು ಸಮಯ ಹೇಳುತ್ತಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಹೇಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಯಾವಾಗ ಉತ್ತರ ಕೊಡುತ್ತೀರಿ ಎಂಬುದನ್ನು ತಿಳಿಸಿ.

**ಶ್ರೀ ಎಸ್.ಎಲ್. ಧರ್ಮೇಗೌಡ:–** ಮಾನ್ಯ ಸಭಾಪತಿಯವರೇ, ಹಳ್ಳಿಗಳಲ್ಲಿ ನಲ್ಲಿಯಲ್ಲಿ ನೀರು ಹಿಡಿಯುವ ಜನರ ರೀತಿ ಆಡುತ್ತಿದ್ದೀರಲ್ಲ, ನಾಚಿಕೆಯಾಗುತ್ತಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವೇನು ಹೈಫೈ ನವರಲ್ಲ, ಹಳ್ಳಿಯಿಂದ ಬಂದವರು.

**ಡಾ: ತೇಜಸ್ವಿನಿ ಗೌಡ:–** ಇನ್ನೊಮ್ಮೆ ವಿರೋಧಪಕ್ಷದ ನಾಯಕರ ಬಗ್ಗೆ ಮಾತನಾಡಿದರೆ ಇದು ಕಷ್ಟವಾಗುತ್ತದೆ. ವಿರೋಧಪಕ್ಷದ ನಾಯಕರ ಅಧಿಕಾರವನ್ನು ಕಸಿದುಕೊಳ್ಳುವುದಕ್ಕೆ ಇವರಾರಿಗೂ ಅಧಿಕಾರ ಕೊಟ್ಟಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ಹಳ್ಳಿಯಲ್ಲಿ ತಿರುಗಾಟ ಮಾಡಿ ಜನರ ವೋಟ್ ಕೇಳಿಕೊಂಡು ಬಂದವರು, ಇಲ್ಲಿಗೆ ಸುಮ್ಮನೆ ಬಂದಿಲ್ಲ.

**ಡಾ: ತೇಜಸ್ವಿನಿ ಗೌಡ:–** ನಲ್ಲಿಯಲ್ಲಿ ನೀರು ಏಕಿಲ್ಲ ಎಂದು ಅವರು ಹೇಳಬೇಕು.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಿಜವಾಗಿ ಅವರಿಗೆ ನಾನು. . .

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ವಿರೋಧಪಕ್ಷದ ಮುಖ್ಯ ಸಚೇತಕರು):–** ನಮ್ಮ ಉತ್ತರ ಕರ್ನಾಟಕದ ಬಗ್ಗೆ ನಿಮಗೇನು ಕಳಕಳಿ ಇದೆ?

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಒಂದು ನಿಮಿಷ ಮೇಡಂ,

**ಡಾ: ಜಯಮಾಲ ರಾಮಚಂದ್ರ(ಸಭಾನಾಯಕರು):–** ಬಾವಿಯಲ್ಲಿ ನಿಂತು ಮಾತನಾಡಬೇಡಿ.

**ಡಾ: ತೇಜಸ್ವಿನಿ ಗೌಡ:–** ಪ್ರಚೋದನೆ ಮಾಡಬೇಡಿ ಎಂದು ಅವರಿಗೆ ಹೇಳಿ. ಸದನ ಇರುವುದು ಪ್ರಚೋದನೆ ಮಾಡುವುದಕ್ಕಲ್ಲ.

(ಗೊಂದಲ)

**ಡಾ: ತೇಜಸ್ವಿನಿ ಗೌಡ:–** ಹದ್ದುಮೀರಿ ಮಾತನಾಡಿದರೆ ಅದು ಸರಿ ಇರುವುದಿಲ್ಲ, ಅದು ಒಳ್ಳೆಯದಲ್ಲ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ ...

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಮಂತ್ರಿಗಳಿಗೆ ಸಮಸ್ಯೆಯನ್ನು ಪರಿಹಾರ ಮಾಡುವ ಇಚ್ಛೆ ಇಲ್ಲ ಹೀಗೆಯೇ ಇರಬೇಕೆಂದು ಅವರಿಗೆ ಆಸೆ ಇದೆ. ಸರ್ಕಾರಕ್ಕೆ ರೈತರ ಸಮಸ್ಯೆಗಳಿಗೆ ಉತ್ತರ ನೀಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, . .

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಶರವಣರವರೇ, . . .

**ಶ್ರೀ ಟಿ.ಎ. ಶರವಣ:–** ಉತ್ತರ ಕನ್ನಡ ಭಾಗದ ಸಮಗ್ರ ಚರ್ಚೆ ಮಾಡುವ . . .

**ಡಾ: ತೇಜಸ್ವಿನಿಗೌಡ:–** ಅದು ಉತ್ತರ ಕರ್ನಾಟಕ ಉತ್ತರ ಕನ್ನಡ ಅಲ್ಲ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮತ್ತೊಮ್ಮೆ ಅವರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೇ,

**ಶ್ರೀ ಟಿ.ಎ. ಶರವಣ:–** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬರದ ಬಗ್ಗೆ ಚರ್ಚೆ ಮಾಡೋಣ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಉತ್ತರ ಕರ್ನಾಟಕದ 13 ಜಿಲ್ಲೆಯ ಹೆಸರು ಹೇಳಲಿ.

**ಶ್ರೀ ಕೃಷ್ಣ ಭೈರೇಗೌಡ:–** ನಮ್ಮ ಮೇಲೆ ವಿಶ್ವಾಸ, ನಂಬಿಕೆ ಇದ್ದರೆ ಸದನ ಆರಂಭ ಮಾಡಿ. ನಿಮಗೆ ಸಮಾಧಾನವಾಗುವ ರೀತಿ ಉತ್ತರವನ್ನು ನಾನು ಕೊಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆಗುವುದಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:–** ನಮ್ಮ ಮೇಲೆ ನಂಬಿಕೆ, ವಿಶ್ವಾಸ ತಮಗೆ ಇಲ್ಲವೆಂದರೆ ನಾನು ಏನನ್ನೂ ಹೇಳುವುದಕ್ಕಾಗುವುದಿಲ್ಲ. ನಮ್ಮ ಮೇಲೆ ನಂಬಿಕೆ ಇಟ್ಟು ನಮಗೆ ಸ್ವಲ್ಪ ಗೌರವ ಕೊಡಿ. ನಿಮ್ಮ ಗೌರವವನ್ನು ಉಳಿಸುವಂತಹ ಕೆಲಸ ನಾವು ಮಾಡುತ್ತೇವೆ. ಅದಕ್ಕಿಂತ ನಾನು ಹೆಚ್ಚಿಗೆ ಏನು ಹೇಳಬೇಕು? ವಿರೋಧಪಕ್ಷದ ಗೌರವವನ್ನು ಉಳಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ. ಅದಕ್ಕಿಂತ ನಾನು ಇನ್ನೇನು ಮನವಿ ಮಾಡುವುದಕ್ಕೆ ಸಾಧ್ಯ? ಅಷ್ಟಕ್ಕೂ ನಿಮಗೆ ನಮ್ಮ ಮೇಲೆ ವಿಶ್ವಾಸವಿಲ್ಲವೆಂದರೆ ರೈತರ ಯಾವುದೇ ಸಮಸ್ಯೆ ಬಗ್ಗೆ ಆಸಕ್ತಿ ಇಲ್ಲದಿದ್ದರೆ ಅದು

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ತಮ್ಮ ಇಷ್ಟ. ನಿಮಗೆ ನಮ್ಮ ಮೇಲೆ ಗೌರವ ಇಲ್ಲದಿದ್ದರೆ ನಾವೇನೂ ಹೇಳುವುದಕ್ಕಾಗುವುದಿಲ್ಲ. ನಮಗೆ ಗೌರವ ಕೊಡುವುದಾದರೆ ಹೋಗಿ ಕುಳಿತುಕೊಳ್ಳಿ. ನಾನು ನಿಮ್ಮ ಮಾತನ್ನು ಉಳಿಸಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಹಾಗೆ ಮಾತನಾಡಬೇಡಿ, ಇಲ್ಲಿ ಕೇಳಿ.

**ಶ್ರೀ ಕೃಷ್ಣ ಭೈರೇಗೌಡ:–** ನಿಮಗೆ ನಮ್ಮ ಮೇಲೆ ನಂಬಿಕೆ ಇಲ್ಲದಿದ್ದರೆ . . .

(ಗೊಂದಲ)

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರ ಸೂಚನೆಯಂತೆ ನಡೆವಳಿಯನ್ನು ದಾಖಲಿಸಿರುವುದಿಲ್ಲ)**

**ಶ್ರೀ ಕೃಷ್ಣ ಭೈರೇಗೌಡ:–** ನಾವು ನಿಮಗೆ ಗೌರವ ಕೊಡಬೇಕು. ನೀವು ಸಹ ಆಡಳಿತ ಪಕ್ಷಕ್ಕೆ ಗೌರವ ಕೊಡಬೇಕು. ನಾನು ಮಾತು ತಪ್ಪಿದರೆ ನೀವು ನನ್ನನ್ನು ಹಿಡಿಯಿರಿ. ಸದನ ಆರಂಭ ಮಾಡಿ ಎಂದು ಹೇಳುತ್ತಿದ್ದೇನೆ. ನೀವು ಪ್ರತಿಷ್ಠೆ ಮಾಡಬೇಕೆಂದರೆ,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾವು ನಿಮ್ಮನ್ನು ಏಕೆ ಹಿಡಿದುಕೊಂಡಿದ್ದೇವೆಂದರೆ, . . .

**ಶ್ರೀ ಕೃಷ್ಣ ಭೈರೇಗೌಡ:–** ಜನಗಳ ವಿಚಾರದಲ್ಲಿ ನಿಮಗೆ ಆಸಕ್ತಿ ಇಲ್ಲ, ಕೇವಲ ರಾಜಕೀಯ ಮಾಡಬೇಕು. ಟಿಪ್ಪು ಜಯಂತಿಯ ಎಲ್ಲಾ ಬಂಡವಾಳ ಖರ್ಚಾಗಿ ಹೋಗಿದೆ. ಅದರಲ್ಲಿ ಏನೂ ಬಂಡವಾಳ ಉಳಿದಿಲ್ಲ. ಅನಾವಶ್ಯಕವಾಗಿ ತಾವು ಲಾಭ ಇಲ್ಲದಿರುವ ವಿಚಾರಕ್ಕೆ ಕೈ ಹಾಕಿದ್ದೀರಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಟಿಪ್ಪು ಜಯಂತಿಯ ವಿಚಾರ ಹೊಸದಲ್ಲ. It is an old issue. Why they want to waste the time?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಕೃಷ್ಣ ಭೈರೇಗೌಡರನ್ನು ನಂಬುವುದು ಬೇರೆ ಪ್ರಶ್ನೆ. ಆದರೆ ಸಂಸದೀಯ ಮಂತ್ರಿಯಾಗಿ ನಿಮ್ಮನ್ನು ನಂಬುತ್ತೇವೆ. ನಿಮ್ಮನ್ನು ನಂಬುವುದು, ವ್ಯಕ್ತಿಗತವಾಗಿ ನಂಬುವುದು ಬೇರೆ ಪ್ರಶ್ನೆ. ಆದರೆ ನೀವು ಕೊಟ್ಟ ಮಾತನ್ನು ತಾವು ಉಳಿಸಿಕೊಳ್ಳಲಿಲ್ಲ.

**ಶ್ರೀ ಪ್ರಕಾಶ್ ರಾಥೋಡ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗೆ ಗೊತ್ತಿರುವ ಹಾಗೆ the opposition has its say and the Government will have its way. ಅವರು ಹೇಳುವುದನ್ನು ನಾವು ಕೇಳಿದ್ದೇವೆ. ಸರ್ಕಾರ ಏನು ಹೇಳಬೇಕೋ ಅದನ್ನು ಸ್ಪಷ್ಟವಾಗಿ ಹೇಳಿದೆ. ಈ ಬಗ್ಗೆ ಚರ್ಚೆಗೆ ನಾವು ಅವಕಾಶ ಮಾಡಿಕೊಡುತ್ತೇವೆ, ನಾವು ಹೆದರುವುದಿಲ್ಲ, ಇದರ ಬಗ್ಗೆ ಉತ್ತರ ಕೊಡುತ್ತೇವೆಂದು ಕಾನೂನು ಸಚಿವರು ಸದನದ ಮುಂದೆ ಈಗಾಗಲೇ ಹೇಳಿದ್ದಾರೆ. ವಿರೋಧಪಕ್ಷದವರಿಗೆ ನಾನು ಇಷ್ಟನ್ನೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರು ಹೇಳಿದ್ದನ್ನು they have a say, but the Government will have its way. We are not telling the opposition that we are not ready to discuss. We are not telling them that we are afraid of the debate. We are going to debate, we are going to answer and we are going

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

to live up to the traditional parliamentary democracy. ನಾನು ಹೇಳುವುದು ಇಷ್ಟೇ. ನೀವು ಹೇಳಿದ್ದನ್ನು ಕೇಳಿದ್ದೇವೆ, ಸರ್ಕಾರ ಉತ್ತರ ಕೊಡುತ್ತದೆ ಎಂದು ಹೇಳಿದ್ದೇವೆ.

(ಮುಂದು)

(434) 13–12–2018/04–20/ಕೆಹೆಚ್–ಎಂಡಿ

**ಶ್ರೀ ಪ್ರಕಾಶ್ ಕೆ. ರಾಥೋಡ್ (ಮುಂದು):–** ದಯವಿಟ್ಟು, ಸದನಕ್ಕೆ ನಾನೊಬ್ಬ ಹೊಸ ಸದಸ್ಯನಾಗಿರಬಹುದು. ಆದರೆ ಈಗ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಾನು ಉತ್ತರ ಕರ್ನಾಟಕದಿಂದ ಬಂದಂತಹ ವಿಧಾನ ಪರಿಷತ್ತಿನ ಸದಸ್ಯನಾಗಿದ್ದು, ಇನ್ನು ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆ ಮಾಡಬೇಕಾಗಿದೆ. ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಇಲ್ಲಿ ನನ್ನ ಕಡೆ ಆಡಳಿತ ಪಕ್ಷದ ಸದಸ್ಯರು ಜಾಸ್ತಿ ಇದ್ದಾರೆ. ಅವರು ಸಹ ಚರ್ಚೆ ಮಾಡಬೇಕಾಗಿದೆ. ತಾವು ಅವಕಾಶ ಮಾಡಿಕೊಡಿ. ವಿರೋಧ ಪಕ್ಷದ ಕಡೆಯಿಂದ ಏನಾದರೂ ಹೇಳಿದರೆ, ಅದನ್ನು ಸರ್ಕಾರ ಕೇಳುವುದಕ್ಕೆ ಸಿದ್ಧವಿದೆ. ಅದನ್ನು ಬಿಟ್ಟು ಇವತ್ತಿನ ದಿವಸವೇ ಉತ್ತರವನ್ನು ಕೊಡಬೇಕೆಂದರೆ, ವಿರೋಧ ಪಕ್ಷದವರು ಇಲ್ಲಿ blackmail ಮಾಡುವ ರೀತಿಯಲ್ಲಿಯೇ ಆಗುತ್ತಿದೆ. ಇದು ಸರಿಯಲ್ಲ. ಆದ್ದರಿಂದ ವಿರೋಧ ಪಕ್ಷದ ಎಲ್ಲಾ ಸದಸ್ಯರಿಗೆ ನಾನು ವಿನಂತಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕಾನೂನಿನ ಚೌಕಟ್ಟಿನಲ್ಲಿ ನಮಗೆ ಉತ್ತರ ಕೊಡಿ ಎಂಬುದಷ್ಟೆ ನಮ್ಮ ಮುಂದಿರುವ ಚರ್ಚೆ. ನಿನ್ನೆ ತಾವು ಉತ್ತರವನ್ನು ನಾಳೆ ಕೊಡುತ್ತೇವೆಂದು ಹೇಳಿದ್ದರಿಂದ, ಉತ್ತರವನ್ನು ಕೊಡಿ ಎಂದು ಹೇಳುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇವತ್ತು ತಮಗೆ ಉತ್ತರವನ್ನು ಕೊಡುವುದಕ್ಕೆ ಆಗಲಿಲ್ಲ ಎಂದರೆ, ಮತ್ತೆ ಯಾವಾಗ ಉತ್ತರವನ್ನು ಕೊಡುತ್ತಾರೆಂಬುದು ಹೇಳಬೇಕು. ಉತ್ತರವನ್ನು ಆದಷ್ಟು ಬೇಗ ಕೊಡಿಸಬೇಕು.

**ಶ್ರೀ ಸಾ.ರಾ. ಮಹೇಶ್ (ಮಾನ್ಯ ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು):–** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ಸಭಾನಾಯಕರು ನಾಳೆ ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದರು. ತಮಗೆ ಗೊತ್ತಿರುವ ಹಾಗೆ ನಿನ್ನೆ ಒಂದು ಹೋರಾಟ ಇಲ್ಲಿ ಪ್ರಾರಂಭವಾಯಿತು. ಇಲ್ಲಿ ಪ್ರತಿನಿತ್ಯ ಒಂದಲ್ಲಾ ಒಂದು ಸಮಸ್ಯೆಗಳು ಪ್ರಾರಂಭವಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೆಲವು ಸಚಿವರು ಅವರದೇ ಆದ್ದಂತಹ ಕೆಲವು ಸಾರ್ವಜನಿಕ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದಂತಹ ಸಂದರ್ಭದಲ್ಲಿ ಸ್ವಲ್ಪ ವಿಳಂಬವಾಗಿದೆ. ಇದೊಂದು ಮಹತ್ತರವಾದ ವಿಚಾರವಾಗಿದ್ದು, ಈ ರಾಜ್ಯದಲ್ಲಿ ಸಾರ್ವಜನಿಕರಿಗೆ ಅನಾನುಕೂಲವಾಗುತ್ತದೆ ಎನ್ನುವ ವಿಚಾರವಾಗಿದ್ದರೆ, ತಾವು ಹೇಳುತ್ತಿರುವಂತಹ ವಿಚಾರವನ್ನು ಈ ಕ್ಷಣದಲ್ಲಿಯೇ ಸರ್ಕಾರ ತೀರ್ಮಾನವನ್ನು ತೆಗೆದುಕೊಳ್ಳುತ್ತಿತ್ತು. ಈಗಾಗಲೇ ಟಿಪ್ಪು ಜಯಂತಿ ಮುಗಿದು ಹೋಗಿರುವ ವಿಚಾರವಾಗಿದ್ದು, ಮುಂದಿನ ವರ್ಷ ಈ ಟಿಪ್ಪು ಜಯಂತಿ ಬರುವುದು. ಇದಕ್ಕೆ ಇನ್ನು ಸಮಯ ಇದೆ. ದಯಮಾಡಿ, ನೀವೊಬ್ಬ ಹಿರಿಯ ನಾಯಕರಾಗಿದ್ದು, ಯಾವುದಕ್ಕೆ ಮಹತ್ವ ಕೊಡಬೇಕೆಂಬುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾವು ನಿಮಗೆ ಉತ್ತರವನ್ನು ಕೊಡುವುದಿಲ್ಲವೆಂದು ಹೇಳುತ್ತಿಲ್ಲ. ಸರ್ಕಾರದಲ್ಲಿ ಅದಕ್ಕಿಂತ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಹತ್ತರವಾದಂತಹ ವಿಚಾರದ ಬಗ್ಗೆ ನಮ್ಮ ಪಕ್ಷ ಮತ್ತು ನಿಮ್ಮ ಪಕ್ಷಗಳ ಮಧ್ಯೆ ಚರ್ಚೆಯಾಗಿ ತೀರ್ಮಾನವಾಗಬೇಕಾಗಿರುವುದು ತುಂಬಾ ಇದೆ. ಅದರ ಕಡೆಗೆ ಸಮಯವನ್ನು ಕೊಡಿ. ಆದರೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ಸದನದ ಅವಧಿ ಮುಗಿಯುವುದರೊಳಗೆ ತಮಗೆ ಉತ್ತರವನ್ನು ಖಂಡಿತವಾಗಿ ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಯಾವ ದಿನಾಂಕದಂದು ಕೊಡುತ್ತೀರೆಂಬುದನ್ನು ಸರ್ಕಾರದವರು ತಿಳಿಸಬೇಕು.

**ಶ್ರೀ ಸಾ.ರಾ.ಮಹೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರೇ ತಮ್ಮ ಒತ್ತಾಯವನ್ನು ತಾವು ಮಾಡಿ, ಸರ್ಕಾರದ ನಿರ್ಧಾರವನ್ನು ನಾವು ಸೂಚಿಸಿದ್ದೇವೆ. ಈ ಸದನದ ಅವಧಿ ಮುಗಿಯುವುದರೊಳಗೆ ತಮಗೆ ಉತ್ತರವನ್ನು ಕೊಡುತ್ತೇವೆ. ತಮ್ಮ ನಿರ್ಧಾರವನ್ನು ತಾವು ಮಾಡಿ.

**ಶ್ರೀ ಕೆ.ಅಬ್ದುಲ್ ಜಬ್ಬಾರ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಈಗಲೇ ಏನು ಹೇಳಬಾರದೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಹೇಳಿರುವುದನ್ನು ನಾವು ಕೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ವೆಂಕಟರಾವ್ ನಾಡಗೌಡ (ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ಯಾವ ದಿನ, ಎಷ್ಟು ಗಂಟೆಗೆ ಉತ್ತರವನ್ನು ಕೊಡುತ್ತಿರೆಂಬುದನ್ನು ಕೇಳುತ್ತಿದ್ದಾರೆ. ಆ ಉತ್ತರ ಅಷ್ಟು ತುರ್ತಾಗಿ ಬೇಕಾಗಿದೆಯೇ? ಉತ್ತರ ಅಷ್ಟು ತುರ್ತಾಗಿ ಬೇಕಾಗಿದ್ದರೆ ಈಗಲೇ ಉತ್ತರವನ್ನು ಕೊಡೋಣ. ದಯವಿಟ್ಟು, ಬೇರೆ ತುರ್ತು ವಿಷಯಗಳ ಬಗ್ಗೆ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಅಷ್ಟೊಂದು ನಿರ್ಲಕ್ಷ್ಯ ವಹಿಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದರಿಂದ, ಸರ್ಕಾರ commitment ಮಾಡಿಕೊಂಡಿದೆ. ಸರ್ಕಾರ ಈ ರೀತಿ ಹೇಳುವುದಕ್ಕೆ ಸಾಧ್ಯ ಇಲ್ಲ. ನಾನು ತಮ್ಮಲ್ಲಿ ಅಗ್ರಹಪಡಿಸುವುದೇನೆಂದರೆ, ಮಾನ್ಯ ಮಹೇಶ್‌ರವರೇ, ತಮಗೆ ಈ ಒಂದು ವಿಚಾರ ಸಣ್ಣದಾಗಿ ಇರಬಹುದು. ಆದರೆ ಇನ್ನೊಬ್ಬರಿಗೆ ದೊಡ್ಡದಾಗಿ ಇರುತ್ತದೆ. ಮತ್ತೊಂದು ವಿಚಾರಗಳು ನಮಗೆ ದೊಡ್ಡದಾಗಿ ಇರಬಹುದು, ಇನ್ನೊಬ್ಬರಿಗೆ ಸಣ್ಣದಾಗಿ ಇರುತ್ತದೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಈ ರಾಜ್ಯದ ರೈತರಿಗಿಂತ ದೊಡ್ಡ ವಿಚಾರವೇ ಇದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಟಿಪ್ಪು ಜಯಂತಿ ವಿಚಾರಗಳು ನಿಮಗೆ ಸಣ್ಣದಾಗಿರಬಹುದು.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ದೇಶ ಕಾಯುವುದಕ್ಕೆ ಕೊಡಗಿನ ವೀರ ಯೋಧರು ಬೇಕು. ಕೊಡಗಿನವರ ಹತ್ಯೆ ತಮಗೆ ಸಣ್ಣ ವಿಚಾರವಲ್ಲವೇ, ದೇಶಕ್ಕೆ ಪ್ರಾಣಾರ್ಪಣೆಯನ್ನು ಕೊಡುವುದಕ್ಕೆ ಬಡವರೇ ಬೇಕು. ಒಂದು ಜನಾಂಗವನ್ನೇ ಹತ್ಯೆ ಮಾಡಿರುವುದು ಸರ್ಕಾರಕ್ಕೆ ಸಣ್ಣ ವಿಚಾರವಾಗಿದೆ. ಇದೇ ನಮಗೂ ನಿಮಗೂ ಇರುವಂತಹ ವ್ಯತ್ಯಾಸ. ಇದು ನಮಗೆ ಪ್ರಮುಖವಾದ ವಿಚಾರ. ಮಾನ್ಯ ಸಚಿವರುಗಳಿಬ್ಬರೂ ಯಾವಾಗ ಉತ್ತರವನ್ನು ಕೊಡುತ್ತಾರೆಂಬುದನ್ನು ಹೇಳಬೇಕು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ವಿರೋಧ ಪಕ್ಷದ ನಾಯಕರನ್ನು ದಯಮಾಡಿ ಕೇಳಿಕೊಳ್ಳುತ್ತೇನೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಕೊಡಗಿನ ಯೋಧರ ಹತ್ಯೆ ಮತ್ತು ಕ್ರೈಸ್ತರ ಹತ್ಯೆ ನಮಗೆ ದೊಡ್ಡ ವಿಚಾರವಾಗಿದೆ. ಅದು ನಿಮಗೆ ಸಣ್ಣ ವಿಚಾರ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಬೇರೆ ವಿಷಯದಲ್ಲಿ ರಾಜಕೀಯ ಮಾಡಿ. ಹತ್ಯೆಯ ವಿಷಯವನ್ನು ತೆಗೆದುಕೊಂಡು ರಾಜಕೀಯ ಮಾಡಬೇಡಿ. ಕೊಡಗನ್ನು ಬಿ.ಜೆ.ಪಿ.ಯವರಿಗೆ ಬಿಟ್ಟು ಕೊಟ್ಟಿಲ್ಲ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೇ, ಕ್ರೈಸ್ತರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೇಳಿ. ಬೆಂಕಿ ಹಚ್ಚುವಂತಹ ಕೆಲಸವನ್ನು ಮಾಡಬೇಡಿ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರವು ಟಿಪ್ಪು ಜಯಂತಿ ಆಚರಣೆಯನ್ನು ಯಾವಾಗಲಿಂದ ಮಾಡುತ್ತಿದೆ? ಮೊದಲಿನಿಂದ ಟಿಪ್ಪು ಜಯಂತಿಯನ್ನು ಮಾಡುತ್ತಿರಲಿಲ್ಲ. ಇತ್ತೀಚೆಗೆ ಏಕೆ ಟಿಪ್ಪು ಜಯಂತಿಯನ್ನು ಪ್ರಾರಂಭ ಮಾಡಲಾಯಿತು?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಸಾರ್ವಜನಿಕ ಹಿತಾಸಕ್ತಿಯ ವಿಚಾರವೆಂದು ಕೇಳುತ್ತಿದ್ದೇವೆ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಇತ್ತೀಚೆಗೆ ಟಿಪ್ಪು ಜಯಂತಿಯನ್ನು ಏಕೆ ಆಚರಿಸಲಾಗುತ್ತಿದೆ?

**ಶ್ರೀ ವೆಂಕಟರಾವ್ ನಾಡಗೌಡ:–** ಮಾನ್ಯ ಸಭಾಪತಿಯವರೇ, ಈ ಸಾಲಿಗೆ ಇದು ಮುಗಿದ ಅಧ್ಯಾಯವಾಗಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು, ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಮಾನ್ಯ ಶೋಭ ಕರಂದ್ಲಾಜೆಯವರ ಹತ್ತಿರ ಟಿಪ್ಪು ಜಯಂತಿಯನ್ನು ಏಕೆ ಆಚರಿಸಲಾಗುತ್ತಿದೆ ಎಂದು ಕೇಳಿ. ಮಾನ್ಯ ವಿರೋಧ ಪಕ್ಷದಲ್ಲಿದ್ದಾಗ ಒಂದು ಮಾತು, ಈಗ ಆಡಳಿತ ಪಕ್ಷದಲ್ಲಿದ್ದಾಗ ಒಂದು ಮಾತನ್ನು ಆಡುತ್ತಿದ್ದಾರೆ. ತಮಗೆ ನಾಚಿಕೆಯಾಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಐವನ್ ಡಿ'ಸೋಜಾರವರೇ ಕ್ರೈಸ್ತರ ರಕ್ತದಿಂದ ತುಂಬಿದ ನೆತ್ತರು. ಮಂಗಳೂರಿನಲ್ಲಿ ನಡೆದಂತಹ ಹತ್ಯೆಯ ಬಗ್ಗೆ ತಾವು ನೆನಪು ಮಾಡಿಕೊಳ್ಳಿ. ತಾವು ಕೂಡ ಈ ರೀತಿ ಮಾತನಾಡುತ್ತೀರಾ. ಇತ್ತೀಚೆಗೆ ಟಿಪ್ಪು ಜಯಂತಿಯನ್ನು ಆಚರಿಸುತ್ತಿರುವುದು, ಮೊದಲು ಇದನ್ನು ಆಚರಿಸುತ್ತಿರಲಿಲ್ಲ. ಟಿಪ್ಪು ಸತ್ತು ತುಂಬಾ ಶತಮಾನಗಳ ಕಳೆದು ಹೋಗಿದೆ. ಶತಮಾನಗಳ ಹಿಂದೆ ಸತ್ತ ಟಿಪ್ಪು ನೆನೆಪಾಗಿದ್ದು ತಮಗೆ ಇತ್ತೀಚೆಗೆಗಷ್ಟೆ. ತಾವು ಇದರ ಬಗ್ಗೆ ರಾಜಕಾರಣ ಮಾಡುತ್ತಿರುವುದು. ಆ ಟಿಪ್ಪು ಯಂತಿ ಆಚರಿಸುವುದು ಬೇಡ ಎಂದು ನಾವು ಹೇಳುತ್ತಿರುವುದು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಯವರು ಇದು ಸಾರ್ವಜನಿಕ ವಿಷಯವಲ್ಲ ಎಂದು ಹೇಳಿದರು. ಹಾಗೆಯೇ ಮಾನ್ಯ ಮುಖ್ಯಮಂತ್ರಿಯವರ ಮನೆಯ ವಿಚಾರವೂ ಅಲ್ಲ. ಕುಟುಂಬದ ವಿಚಾರವೂ ಅಲ್ಲ. ಈ ಟಿಪ್ಪು ಜಯಂತಿಗೆ ಸಾವಿರಾರು ಜನ ಪೊಲೀಸ್‌ರನ್ನು ಹಾಕಿದ್ದೀರಿ. ಇದ್ದರಿಂದ ಹತ್ತಾರು ಜನ ಕೊಲೆಗಳು, ಸಾವುಗಳು ಸಂಭವಿಸಿದೆ. ಇದು ಸಾರ್ವಜನಿಕರ ವಿಷಯವಲ್ಲವೇ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಈ ಟಿಪ್ಪು ಜಯಂತಿ ವಿಚಾರದಲ್ಲಿ ಪೊಲೀಸ್‌ರು ಏಕೆ ಕಾವಲು ಕಾಯಬೇಕು. ಇದ್ದರಿಂದ ಪೊಲೀಸರು ಏಕೆ ಸಾಯಬೇಕು? ಪೊಲೀಸರು ಬಡವರ ಮಕ್ಕಳಾಗಿದ್ದಾರೆ.

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ನಾಮ ನಿರ್ದೇಶಿತರು):–** ಮಾನ್ಯ ತೇಜಸ್ವಿನಿಗೌಡರವರೇ, ಹೌದು, ತಮಗೆ ಬಡವರ ಬಗ್ಗೆ ಬಹಳ ಕಾಳಜಿ ಇದೆ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಟಿಪ್ಪು ಜಯಂತಿಯನ್ನು ಆಚರಿಸುವ ಅವಶ್ಯಕತೆ ಏನಿದೆ? ವಾಲ್ಮೀಕಿ ಜಯಂತಿ, ಕನಕದಾಸ ಜಯಂತಿಯನ್ನು ಆಚರಿಸುವ ರೀತಿಯಲ್ಲಿ ಪ್ರಕ್ಷುಬ್ಧತೆ ಇಲ್ಲ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಮುಂದೆ ಧರಣಿ ಮಾಡಿ ಇಲ್ಲದಿದ್ದರೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ತೇಜಸ್ವಿನಿ ಗೌಡರವರೇ, ತಾವು ಸಂಸದರಾಗಿದ್ದವರು. ಈ ರೀತಿ ಮಾತನಾಡಿದರೆ ಹೇಗಾಗುತ್ತದೆ? ತಾವು ನಮಗಿಂತ ದೊಡ್ಡ ರಾಜಕಾರಣಿಯಾಗಿದ್ದವರು.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಮಹೇಶ್‌ರವರೇ ಒಂದು ನಿಮಿಷ.

**(ಗೊಂದಲ)**

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ಸಭಾಪತಿಯವರೇ, ಮಾನ್ಯ ತೇಜಸ್ವಿನಿ ಗೌಡರವರೇ, ಈ ಟಿಪ್ಪು ಜಯಂತಿ ಆಚರಣೆ ಈ ಅಧಿವೇಶನದಲ್ಲಿ ಪ್ರಾರಂಭವಾಯಿತೇ? ಈ ಸರ್ಕಾರದಲ್ಲಿ ಪ್ರಾರಂಭವಾಯಿತೇ? ಇದರ ಬಗ್ಗೆ ಹೇಳುವುದಕ್ಕೆ ಸಮಯ ಬೇಕಲ್ಲವೇ?

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಸಮಾಜದಲ್ಲಿ ಯಾವುದೂ ಒಳ್ಳೆಯದು ಇದೆಯೋ, ಅದನ್ನು ತೆಗೆದುಕೊಳ್ಳಿ. ಪೊಲೀಸ್‌ರ ಕಣ್ಗಾವಲಿನಲ್ಲಿಯೂ ರಾಜ್ಯದಲ್ಲಿ ಈ ರೀತಿಯ ಘಟನೆ ನಡೆಯುತ್ತದೆ ಮತ್ತು ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನು ಉಂಟು ಮಾಡಿ . . .

**(ಗೊಂದಲ)**

**ಶ್ರೀ ಯು.ಟಿ. ಖಾದರ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):–** ಮಾನ್ಯ ತೇಜಸ್ವಿನಿ ಗೌಡರವರೇ, ಇದರ ಬಗ್ಗೆ ಸರ್ಕಾರ ನೋಡಿಕೊಳ್ಳುತ್ತದೆ. ತಾವೇಕೆ tension ತೆಗೆದುಕೊಳ್ಳುತ್ತೀರಿ?

**ಸಭಾಪತಿಯವರು:–** ಮಾನ್ಯ ಸಚಿವರು ಒಂದು ನಿಮಿಷ ಮಾತನಾಡುತ್ತಾರೆ.

**(ಗೊಂದಲ)**

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ಸಭಾಪತಿಯವರೇ, ನಮ್ಮ ಕಾನೂನು ಮಂತ್ರಿಗಳು ತಮ್ಮನ್ನು ಮನವಿ ಮಾಡಿದರು. ಅವರ ಮನವಿಗೆ . . .

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ಧರ್ಮಕ್ಕೆ ಸೀಮಿತವಾಗುವುದು ಬೇಡ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದು ಬೆಂಕಿ ಹಚ್ಚುವ ಕೆಲಸವಾಗಿದೆ.

**ಶ್ರೀ ಸಾ.ರಾ. ಮಹೇಶ್:–** ಮಾನ್ಯ ಸಭಾಪತಿಯವರೇ, ಇದು ಒಂದು ಪ್ರತಿಷ್ಠೆಯಾಗುತ್ತದೆ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಇದು ಅಂತಹ ದೊಡ್ಡ ವಿಚಾರವೇನಲ್ಲ, ಇದನ್ನು ನಾವೇ ಬಗೆಹರಿಸಿಕೊಳ್ಳೋಣ. ಸದನ ನಡೆಯಲಿ, ತಮಗೆ ಸಮಾಧಾನಕರವಾಗಿ ನಾವು ಉತ್ತರವನ್ನು ಕೊಡುತ್ತೇವೆ. ಪ್ರತಿಪಕ್ಷದ ಗೌರವವನ್ನು ಕಾಪಾಡುವುದು ನಮ್ಮ ಕೆಲಸವಾಗಿದೆ. ಸಂಸದೀಯ ವ್ಯವಹಾರಗಳ ಸಚಿವರು ಆಗಿದ್ದೇವೆ. ಸರ್ಕಾರದ ಜವಾಬ್ದಾರಿಯು ಸಹ ಇದೆ. ತಮ್ಮ ಗೌರವವನ್ನು ನಾವು ಕಾಪಾಡುತ್ತೇವೆ. ತಮ್ಮ ಯಾವುದೇ ಪ್ರಶ್ನೆಗೆ ಉತ್ತರ ಕೊಡದೇ ಹೋಗುವುದಿಲ್ಲ. ಸದನವನ್ನು ಮುಂದುವರೆಸಿ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ನಾನು ಎಲ್ಲರಲ್ಲೂ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈಗ ತಾವು ಮಾಡಬೇಕಾದುದು ಏನೆಂದರೆ, ಸರ್ಕಾರ ಕೊಟ್ಟಿರುವಂತಹ ವಚನದಂತೆ ಮಾಡಿ. ತಾವು ಎಲ್ಲಾ ವಿಚಾರಗಳ ಬಗ್ಗೆ ಹಠ ಏಕೆ ಮಾಡುತ್ತೀರಿ?

**ಶ್ರೀ ಕೃಷ್ಣ ಭೈರೇಗೌಡ:–** ತಮ್ಮ ಪ್ರತಿಷ್ಠೆಗೆ ಈ ಸದನವನ್ನು ಒತ್ತೆ ಹಾಳು ಮಾಡಬೇಡಿ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಕೃಷ್ಣಭೈರೇಗೌಡರವರೇ, ತಾವು ತಮ್ಮ ಪ್ರತಿಷ್ಠೆಗೋಸ್ಕರ ಸದನದಲ್ಲಿ ಮಾತನಾಡುತ್ತೀರಿ.

**ಶ್ರೀ ಕೃಷ್ಣ ಭೈರೇಗೌಡ:–** ಇದು ಪ್ರತಿಷ್ಠೆಯ ವಿಚಾರವಲ್ಲ.

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಪ್ರತಿ ಪಕ್ಷಗಳ ಧ್ವನಿಯನ್ನು ಕಟ್ಟಿ ಹಾಕುವಂತಹದ್ದು ಸರಿಯಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾವು ಸಂಸದೀಯ ವ್ಯವಹಾರಗಳ ಮಂತ್ರಿಗಳನ್ನು ಕೇಳಬೇಕು. ಇಡೀ ಸದನದಲ್ಲಿ ವೈಯಕ್ತಿಕವಾಗಿ ಕೇಳಿ. ಸ್ವತಃ ಮುಖ್ಯಮಂತ್ರಿಗಳು ಕೂಡ ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ಆದರೆ ಪ್ರತಿಷ್ಠೆಯ ಮೇಲೆ ವಾದ ಮಾಡುತ್ತಿದ್ದೀರಿ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಯಾವುದೇ ಉತ್ತರವನ್ನು ಗಂಟೆ, ನಿಮಿಷಗಳಲ್ಲಿ ನಿರೀಕ್ಷೆ ಮಾಡುವುದಕ್ಕೆ ಆಗುವುದಿಲ್ಲ. ಎರಡು ಗಂಟೆಗಳ ಕಾಲ ಸಮಯ ಕೊಡಿ. ಉತ್ತರವನ್ನು ಕೇಳಿಕೊಂಡು ಹೇಳುತ್ತೇವೆಂದು ಹೇಳಿದರು. ಅದಕ್ಕೂ ಸಹ ಅವಕಾಶ ಕೊಡದೇ ಧರಣಿ ಮಾಡುತ್ತೀದ್ದೀರಿ. ತಾವು ಇದೇ ರೀತಿ ಮಾಡುತ್ತಿದ್ದರೆ, ಸದನವನ್ನು ಹೇಗೆ ನಡೆಸುವುದು? ಈ ರೀತಿಯಾದರೆ ಕಲಾಪ ನಡೆಸುವುದಕ್ಕೆ ಆಗುತ್ತದೆಯೇ, ಇದರ ಬಗ್ಗೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕಲ್ಲವೇ? ಧರಣಿ ಮಾಡಿದ ಕೂಡಲೇ ಸಮಸ್ಯೆ ಬಗೆಹರಿಯುವುದಾದರೆ, ಈಗ ಅಂತಹ ಸಮಸ್ಯೆ ಇದೆ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತೇವೆಂದು ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವ ರೀತಿ ಪೀಠ ಹೇಳುತ್ತದೋ, ಅದಕ್ಕೆ ನಾವು ಯಾವತ್ತೂ ಕೂಡ ಗೌರವವನ್ನು ಕೊಡುತ್ತೇವೆ. ಆದರೆ ಇದರ ಬಗ್ಗೆ ಸರ್ಕಾರ ಕೂಡ ಗಮನಿಸಬೇಕು. ತಾವು ಎರಡು ಸದನದಲ್ಲಿ ಕೆಲಸವನ್ನು ಮಾಡಿದ್ದೀರಿ.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ಕಡೆ ತಾವು ಕೊಡುವಂತಹ ತೀರ್ಮಾನವನ್ನು ಒಪ್ಪಿಕೊಳ್ಳುತ್ತೇವೆಂದು ಹೇಳುತ್ತಾರೆ. ಮತ್ತೆ ಅದೇ ರಾಗ ಹಾಡುತ್ತಾರೆ. ಈಗ ತಾವು ಒಂದು ತೀರ್ಪನ್ನು ಕೊಟ್ಟಿದ್ದೀರಿ. ಈಗ ಸದನವನ್ನು ನಡೆಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ರಾಗ ಹಾಡಿಲ್ಲ. ವಾಸ್ತವಾಂಶವನ್ನು ಕೇಳಿದೆ. ಪೀಠವನ್ನು ಗೌರವಿಸುತ್ತೇವೆಂದು ಹೇಳಿದೆ. ನಾನು ಹೇಳುತ್ತಿರುವುದು ಇಷ್ಟೆ. ಈಗ ತಾವು ಪ್ರತಿಷ್ಠೆಯನ್ನು ಇಟ್ಟುಕೊಳ್ಳಬೇಡಿ. ಯಾವತ್ತೂ ಕೂಡ ಸರ್ಕಾರ ಪ್ರತಿಷ್ಠೆಯ ಹೆಸರಿನಲ್ಲಿ ನಡೆಯಬಾರದು. ಶಾಸನದ ಹೆಸರಿನ ಮೇಲೆ ಸರ್ಕಾರ ನಡೆಯಬೇಕು. ಶಾಸನದ ಆಧಾರದ ಮೇಲೆ ಸರ್ಕಾರ ನಡೆಯುತ್ತದೆಯೇ ಹೊರತು ವ್ಯಕ್ತಿಗಳ ಆಧಾರದ ಮೇಲೆ ಅಲ್ಲವೆಂಬುದು ಸಂಸದೀಯ ಮಂತ್ರಿಯವರಿಗೆ ನಮಗಿಂತ ಮೊದಲು ಅರ್ಥವಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(435) 13-12-2018 (4-30) ಎಸ್‌ಪಿಆರ್-ಎಂಡಿ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಮುಂದು):-**

ಸರ್ಕಾರಕ್ಕೆ ಉತ್ತರ ನೀಡುವ ಸಾಮರ್ಥ್ಯ ಇದೆ. ಅದನ್ನು ನಾವು ಗೌರವಿಸುತ್ತೇವೆ. ಆದರೆ ಯಾವ ದಿನ ಎಷ್ಟು ಹೊತ್ತಿಗೆ ಸರ್ಕಾರ ಉತ್ತರ ನೀಡುತ್ತದೆ? ಅಂದರೆ ಸರ್ಕಾರ ನಾಳೆ ಅಥವಾ ಸೋಮವಾರದಂದು ಉತ್ತರವನ್ನು ನೀಡುತ್ತದೆಯೇ ಎಂದು ವಿರೋಧ ಪಕ್ಷದ ಸ್ಥಾನದಲ್ಲಿ ನಿಂತು ನಾನು ಸರ್ಕಾರವನ್ನು ಕೇಳುತ್ತೇನೆ. ನಾನು ಮತ್ತೆ ಮತ್ತೆ ಸಭಾಪತಿಯವರ ಮೂಲಕ ದಯಮಾಡಿ ಆಳುವ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅವರು ಇದರಲ್ಲಿ ಪ್ರತಿಷ್ಠೆ ಮಾಡಬಾರದು. ರೈತರ ಪರವಾಗಿ ನಿಲುವಳಿ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಸರ್ಕಾರ ಉತ್ತರ ಕೊಡುತ್ತದೆ. ಸರ್ಕಾರ ಉತ್ತರವನ್ನು ಕೊಡಲೇಬೇಕು. **(ಗೊಂದಲ)** ಆದರೆ ಯಾವಾಗ ಕೊಡುತ್ತದೆ ಎಂದು ಹೇಳಲಿ. ಸರ್ಕಾರಕ್ಕೆ ಹಠಮಾರಿತನ ಏಕೆ? ಮಾನ್ಯ ಸಭಾಪತಿಯವರು ಆಡಳಿತ ಪಕ್ಷದ ಸದಸ್ಯರಿಗೆ ಅಂತಹ ಹಠಮಾರಿತನ ಸರಿಯಲ್ಲ ಎಂದು ದಯಮಾಡಿ ತಿಳಿಸಿ ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೃಷ್ಣಬೈರೇಗೌಡ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರಿಗೆ ನಮ್ಮ ಮೇಲೆ ನಂಬಿಕೆ ಇಲ್ಲ. ಆದರೆ ಧರಣಿಯ ಮೇಲೆ ಮಾತ್ರವೇ ನಂಬಿಕೆ ಇದ್ದರೆ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರ ನಂಬಿಕೆಯನ್ನು ಉಳಿಸಿಕೊಳ್ಳದೇ ಇರುವುದರಿಂದ ಧರಣಿ ಮಾಡಿದ್ದೇವೆ.

**(ಗೊಂದಲ)**

**ಶ್ರೀ ಕೃಷ್ಣಬೈರೇಗೌಡ:-** ಮಾನ್ಯ ಸಭಾಪತಿಯವರೇ, ಸರ್ಕಾರ ನಂಬಿಕೆ ಉಳಿಸಿಕೊಂಡಿಲ್ಲವೆಂದಾದರೆ ಸರ್ಕಾರದಿಂದ ಉತ್ತರವನ್ನು ಏಕೆ ಕೇಳುತ್ತಾರೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಕೇವಲ ಭರವಸೆಯನ್ನು ಮಾತ್ರವೇ ಕೊಡುತ್ತಾರೆ. ಸರ್ಕಾರ ಉತ್ತರವನ್ನು ಕೊಡಲೇಬೇಕು. ಆದರೆ ಅದು ಹಾಗೆ ಆಗುವುದಿಲ್ಲ. ಸರ್ಕಾರದ ಮೇಲೆ ನಂಬಿಕೆ ಇಲ್ಲ ಎಂಬ ಪ್ರಶ್ನೆ ಇಲ್ಲಿ ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ ಧರಣಿಯಿಂದ ಒಮ್ಮೆ ವಾಪಸ್ಸು ಬನ್ನಿ. ಸರ್ಕಾರವು ಉತ್ತರವನ್ನು ಕೊಡುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಅಂದರೆ ಇಲ್ಲಿಯವರೆಗೆ ಸದನ ನಡೆದದ್ದು ಕೇವಲ ಧರಣಿಯಿಂದ ವಾಪಸ್ಸು ಬಂದರೆ ಮಾತ್ರವೇ ಉತ್ತರವನ್ನು ಕೊಡಬೇಕು ಎನ್ನುವ ಅಂಶದ ಆಧಾರದ ಮೇಲೆಯೇ? ಪೀಠವು ಈ ವಿಚಾರದಲ್ಲಿ ಹೇಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಮಾನೆ ಶ್ರೀನಿವಾಸ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೊಸ ಹೊಸ ಕಥೆಯನ್ನು ತೆಗೆಯಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದಲ್ಲ ಒಂದು ಕಾಲಕ್ಕೆ ನಾವೆಲ್ಲರೂ ಪ್ರತಿಪಕ್ಷ ಸ್ಥಾನದಲ್ಲಿದ್ದೆವು.

(ಗೊಂದಲ)

**ಶ್ರೀ ಮಾನೆ ಶ್ರೀನಿವಾಸ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಹೊಸದಾಗಿ ಯಾವುದನ್ನೂ ಸಹ ಹೇಳಬಾರದು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ, ಶಾಸಕರು ಧರಣಿಯಲ್ಲಿ ನಿರತರಾದಾಗ, ಧರಣಿಯಿಂದ ವಾಪಸ್ಸು ಬಂದಾಗ ಮಾತ್ರವೇ ಸರ್ಕಾರ ಉತ್ತರವನ್ನು ಕೊಡುತ್ತದೆ ಎನ್ನುವಂತಹ ಷರತ್ತನ್ನು ವಿಧಿಸಿದ ಉದಾಹರಣೆ ಇದೆಯೇ?

(ಗೊಂದಲ)

**ಸಭಾಪತಿಯವರು:–** ಷರತ್ತು ಎಂಬುದು ಇಲ್ಲ.

(ಗೊಂದಲ)

**ಶ್ರೀ ವೆಂಕಟರಾವ್ ನಾಡಗೌಡ (ಪಶು ಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು):–** ಮಾನ್ಯ ಸಭಾಪತಿಯವರೇ, ದಯಮಾಡಿ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತುಕೊಳ್ಳಲಿ. ಸರ್ಕಾರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರ ಕೊಡಲು ಸಿದ್ಧವಿದೆ. ಸದನ ನಡೆಯಲು ದಯವಿಟ್ಟು ಅವರು ಅವಕಾಶ ಮಾಡಿ ಕೊಡಬೇಕೆಂದು ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

**(ಗೊಂದಲ)**

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರಾದ ಡಾ॥ ತೇಜಸ್ವಿನಿ ಗೌಡ ರವರು ಸದನದ ಬಾವಿಯೊಳಗೆ ಬಂದರು)**

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಪ್ರಸ್ತುತ ಸದನದಲ್ಲಿ ನಿರಾಣಿ ಹಣಮಂತ್ ರುದ್ರಪ್ಪ, ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರುಗಳು ಉಪಸ್ಥಿತರಿದ್ದಾರೆ. ಅವರುಗಳಿಗೆ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳು, ರೈತರ ಸಮಸ್ಯೆಗಳಂತಹ ವಿಚಾರಗಳು ಬೇಕಾಗಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಮ್ಮ ಪೀಠಕ್ಕೆ ಈ ರೀತಿಯ ಅಪಮಾನ ಸರಿಯಲ್ಲ. ಸರ್ಕಾರದ ಈ ರೀತಿಯ ಹಠಮಾರಿತನಕ್ಕೆ ಪೀಠದಿಂದ ಏನೆಂದು ಹೇಳುತ್ತೀರಿ?

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರುಗಳು ಹೀಗೆ ಧರಣಿ ಮಾಡಿಕೊಂಡೇ ಸರ್ಕಾರ ಉತ್ತರ ಹೇಳಬೇಕೆಂದರೆ ಹೇಗೆ? ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಹೇಗೆ?

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ತಾವು ಆಡಳಿತ ಪಕ್ಷದವರಿಗೆ ಪೀಠದಿಂದ ಹೇಳಬೇಕು.

**(ಗೊಂದಲ)**

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಈ ಹಿಂದೆ ಒಮ್ಮೆ ಆಡಳಿತವನ್ನು ನಡೆಸಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾವು ಸದನದ ಬಾವಿಯಿಂದ ಹೊರಗೆ ಬರುವುದಕ್ಕೆ ತಾವು ಸೂಚನೆಯನ್ನು ನೀಡುತ್ತೀರೋ? **(ಗೊಂದಲ)** ಒಂದು ವೇಳೆ ತಾವು ಸೂಚನೆಯನ್ನು ನೀಡಿದರೆ, ನಾವು ಸದನದ ಬಾವಿಯಿಂದ ಹೊರಗಡೆ ಬರುತ್ತೇವೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಗೊಂದಲ)**

**ಸಭಾಪತಿಯವರು:–** ಸದನವನ್ನು ಸುಸೂತ್ರವಾಗಿ ನಡೆಸಲು ಅನುಕೂಲವಾಗುವಂತಹ ವಾತಾವರಣವನ್ನು ತಾವು ನಿರ್ಮಾಣ ಮಾಡಿದರೆ ಸರ್ಕಾರವು ತನ್ನ ಅನಿಸಿಕೆಯನ್ನು ಹೇಳುತ್ತದೆ ಹಾಗೂ ಉತ್ತರವನ್ನು ಕೊಡುವುದಾಗಿ ತಿಳಿಸಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಯಿತು. ನಾನು ಪೀಠದ ವಿರುದ್ಧ ಹೋಗುವುದಿಲ್ಲ. ನಮ್ಮ ಪಕ್ಷದ ಸದಸ್ಯರೆಲ್ಲರೂ ಸದನದ ಬಾವಿಯಿಂದ ಹೊರಗಡೆ ಬರಬೇಕೆಂದು ನಾನು ವಿನಂತಿಸುತ್ತೇನೆ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳೆಲ್ಲರೂ ಸದನದ ಬಾವಿಯಿಂದ ಹೊರ ಬಂದು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು)**

**(ಗೊಂದಲ)**

**(ಈ ಹಂತದಲ್ಲಿ ಸದಸ್ಯರಾದ ಶ್ರೀ ಮಾನೆ ಶ್ರೀನಿವಾಸ್, ಶ್ರೀ ರಿಜ್ವಾನ್ ಅರ್ಷದ್ ಹಾಗೂ ಇನ್ನು ಕೆಲವು ಆಡಳಿತ ಪಕ್ಷದ ಸದಸ್ಯರುಗಳು XXX ಎಂದು ಕೂಗಿದರು)**

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರಿಗೆ ಯಾವುದೇ ರೀತಿಯ ಅವಮಾನ ಇಲ್ಲ.

**(ಗೊಂದಲ)**

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರು **XXX** ಎಂದು ನಮ್ಮನ್ನು ಪ್ರಚೋದನೆ ಮಾಡಿದರೆ... **(ಗೊಂದಲ)** ಪ್ರಚೋದನೆಗೆ ಉತ್ತರ ಕೊಡುವುದಕ್ಕೆ ನಮಗೆ ಬರುತ್ತದೆ. ಬರಗಾಲ ಇಟ್ಟುಕೊಂಡು ಇಲ್ಲಿಯವರೆಗೆ ಸದನದ ಸಮಯವನ್ನು ವ್ಯರ್ಥ ಮಾಡಿರುವುದಕ್ಕೆ ಆಡಳಿತ ಪಕ್ಷದ ಸದಸ್ಯರಿಗೆ ನಾಚಿಕೆಯಾಗಬೇಕು.

**(ಗೊಂದಲ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರ ಮಾತಿಗೆ ಬೆಲೆ ಕೊಟ್ಟು ನಾವುಗಳೆಲ್ಲರೂ ಬಾವಿಯಿಂದ ಹೊರಗಡೆ ಬಂದಿದ್ದೇವೆ.

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಸದಸ್ಯರುಗಳು ತಮ್ಮ ಮಾತಿನ ಮೇಲೆ ಹಿಡಿತವನ್ನಿಟ್ಟುಕೊಳ್ಳಬೇಕು.

(ಗೊಂದಲ)

**ಸಭಾಪತಿಯವರು:–** ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಪೀಠಕ್ಕೆ ಗೌರವ ಕೊಟ್ಟು ನಾವು ನಮ್ಮ ಸ್ಥಾನಗಳಿಗೆ ಬಂದಿದ್ದೇವೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಿಮ್ಮ ಮಾತಿಗೆ ಬೆಲೆ ಕೊಟ್ಟು ನಾವು ಬಾವಿಯಿಂದ ಹೊರಗಡೆ ಬಂದಿದ್ದೇವೆ.

(ಗೊಂದಲ)

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ನನ್ನ ಮಾತನ್ನು ಕೇಳಿ. ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಿದ್ದಾರೆ. ಹೀಗಾಗಿ ವಾತಾವರಣವನ್ನು ಸ್ವಲ್ಪ ತಿಳಿಗೊಳಿಸಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ದಯಮಾಡಿ ಕೇಳಿ. ತಾವು ಹೇಳಿದ ಹಾಗೆ ಮಾಡಿದ್ದೇವೆ. ಪೀಠಕ್ಕಿಂತ ಮೇಲೆ ಸದನದ ಯಾವುದೇ ವ್ಯವಸ್ಥೆಗಳಿಲ್ಲ ಎಂಬುದಾಗಿ ನಾವು ಕೊನೆಯದಾಗಿ ತೀರ್ಮಾನ ಮಾಡಿದ್ದೇವೆ. ಪೀಠವು ಪರಮೋಚ್ಛ ಎನ್ನುವ ಕಾರಣಕ್ಕಾಗಿ, ನನ್ನ ಮೂರು ಬಾರಿಯ ಶಾಸಕತ್ವದ ಅವಧಿಯಲ್ಲಿ ಧರಣಿ ನಿರತರಾಗಿರುವಂತಹ ಯಾವುದೇ ಶಾಸಕರು ಧರಣಿಯಲ್ಲಿರುವಾಗಲೇ ಸರ್ಕಾರದಿಂದ ಭರವಸೆ ಕೊಟ್ಟ ನಂತರ ಹೊರ ಬಂದಿದ್ದಾರೆ. ಶ್ರೀ ಯಂ.ಸಿ.ನಾಣಯ್ಯ, ಶ್ರೀ ವಿ.ಆರ್.ಸುದರ್ಶನ್, ಶ್ರೀ ಬಿ.ಎಲ್.ಶಂಕರ್ ಹಾಗೂ ಡಾ॥ ಎಂ.ಪಿ.ನಾಡಗೌಡ ರವರುಗಳಂತಹ ಸದಸ್ಯರುಗಳನ್ನು ನಾನು ನೋಡಿದ್ದೇನೆ. ಅವರೆಲ್ಲರೂ ಸಹ ಈ ಸದನದ ವಿರೋಧ ಪಕ್ಷದ ನ್ಯಾಯಕ್ಕಾಗಿ ಧರಣಿ ಕುಳಿತಾಗ ಸರ್ಕಾರದಿಂದ ಭರವಸೆ ದೊರೆತ ನಂತರವಷ್ಟೇ ವಿರೋಧ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ಹೊರಗಡೆ ಬಂದಿರುವಂತಹ ಉದಾಹರಣೆಗಳಿವೆ. ಆದರೆ ಪ್ರಥಮ ಬಾರಿಗೆ ಮಾನ್ಯ ಸಭಾಪತಿಯವರ ಸ್ಥಾನಕ್ಕೆ ಗೌರವ ನೀಡಿ, ಸಮಸ್ಯೆಗಳಿಗೆ ಪರಿಹಾರ ಸಿಗಬೇಕೆನ್ನುವ ಕಾರಣಕ್ಕಾಗಿ ನಾವು ತಮಗೆ ಕೈ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮುಗಿದು ನಮ್ಮ ಸ್ಥಾನಗಳಿಗೆ ವಾಪಸ್ಸು ಬಂದರೆ, ಆಡಳಿತ ಪಕ್ಷದ ಸದಸ್ಯರು **XXX** ಎಂಬುದಾಗಿ ಹೇಳುತ್ತಾ, ನಗುತ್ತೀರಲ್ಲಾ? ಇದನ್ನು ಪ್ರಜಾಪ್ರಭುತ್ವದ ಲಕ್ಷಣ ಎನ್ನಲಾಗುತ್ತದೆಯೇ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಇದು ಸಮಸ್ಯೆಯೇ ಅಲ್ಲ. ಆದರೆ ವಿರೋಧ ಪಕ್ಷದ ಸದಸ್ಯರುಗಳು ಸಮಸ್ಯೆಯನ್ನು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ರಿಜ್ವಾನ್ ಅರ್ಷದ್:–** ವಿರೋಧ ಪಕ್ಷದ ಸದಸ್ಯರಿಗೆ **XXX** ಆಗಬೇಕು.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವಕ್ಕೆ ಗೌರವ ಕೊಟ್ಟು ನಾವು ಧರಣಿಯಿಂದ ವಾಪಸ್ಸು ಬಂದಿದ್ದೇವೆ. ಸದನದಲ್ಲಿ ಪ್ರಸ್ತುತ ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮಂತ್ರಿಗಳು ಉಪಸ್ಥಿತರಿದ್ದಾರೆ. ನಾನು ಪೀಠಕ್ಕೆ ಗೌರವ ನೀಡಿ ಧರಣಿಯಿಂದ ವಾಪಸ್ಸು ಬಂದಾಗ, ಆಡಳಿತ ಪಕ್ಷದ ಸದಸ್ಯರು **XXX** ಎಂದು ಹೇಳುತ್ತಾ, ನಮ್ಮ ಮೇಲೆ ನಗುತ್ತೀರಲ್ಲಾ?

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸಮಸ್ಯೆಗೆ ಬೆಂಕಿ ಹಚ್ಚುವ ಕೆಲಸವನ್ನು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇನ್ನು ಯಾವ ವ್ಯವಸ್ಥೆಗೋಸ್ಕರ ನಮಗೆ ಸರ್ಕಾರ ಬೇಕು?

**(ಗೊಂದಲ)**

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಮದ ತೆಗೆಯಲಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎಂ.ನಾರಾಯಣಸ್ವಾಮಿ:–** ವಿರೋಧ ಪಕ್ಷದ ಸದಸ್ಯರುಗಳಿಗೆ ಇದೇ ಆಗಿದೆ. ಅವರುಗಳು ಮಾತ್ರ ಪ್ರಜಾಪ್ರಭುತ್ವದ ವ್ಯವಸ್ಥೆಯ ಬಗ್ಗೆ ಗೌರವ ಉಳ್ಳವರು ಎನ್ನುವಂತೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:–** ಏನು ಮಾತನಾಡುತ್ತಿದ್ದೀರಿ, ಬೇಡ ಸರ್, ಒಂದು ನಿಮಿಷ ಇರಿ.

**(ಗೊಂದಲ)**

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಎಲ್ಲಾ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಾ, ಸದನದ ಬಾವಿಗೆ ಬಂದು ಧರಣಿ ನಿರತರಾದರು)**

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಇಡೀ ರಾಜ್ಯದ ಜನರು ಇದನ್ನು ನೋಡಲಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಯಾವ ರೀತಿಯ ಸರ್ಕಾರ? ಪ್ರಭಾಪ್ರಭುತ್ವ ವ್ಯವಸ್ಥೆಯಲ್ಲಿರುವ ಸರ್ಕಾರ ನಡೆದುಕೊಳ್ಳುವ ರೀತಿ ಇದಲ್ಲ. ಸರ್ವಾಧಿಕಾರ ಇರುವ ಯಾವುದೇ ಸರ್ಕಾರ ಕೂಡ ಈ ರೀತಿಯ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಸಾಧ್ಯವಿಲ್ಲ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಧರಣಿಯಿಂದ ವಾಪಸ್ಸು ಹೋಗಿರುವುದಕ್ಕೆ ನಾವು ಆ ರೀತಿ ಹೇಳಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇದು ಸರ್ವಾಧಿಕಾರದ ಸಂಕೇತವಾಗಿದೆ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಧರಣಿಯಿಂದ ವಾಪಸ್ಸು ಹೋಗಿರುವುದಕ್ಕೆ ನಾವು ಹೇಳಿಲ್ಲ ಮಾರ್ರಾಯರೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು **XXX** ಎಂಬುದಾಗಿ ಹೇಳಿದ್ದಾರೆ. ಟಿಪ್ಪು ಸುಲ್ತಾನನಲ್ಲಿದ್ದಂತಹ ಕ್ರೌರ್ಯ, ಮಾನಸಿಕತೆ ಆಡಳಿತ ಪಕ್ಷದ ಸದಸ್ಯರಲ್ಲಿ ಇದೆ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಧರಣಿಯನ್ನು ಹಿಂಪಡೆದಿರುವುದಕ್ಕೆ ನಾವು ಹೇಳಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾಡಿ ನೋಡೋಣ, ನೀವು ತಮಾಷೆ ಮಾಡಿ ಹಾಗೂ ನಗಾಡಿ.

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ವಿಷಯದ ಬಗ್ಗೆ ಹೇಳಿದ್ದೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಯಾವುದಾದರೂ ಒಂದು ವಿಚಾರವನ್ನು ತೆಗೆದುಕೊಂಡು ಬಂದರೆ, ಅವರಿಗೆ ಸಮಾಧಾನ ಮಾಡಿ ಉತ್ತರ ಕೊಡುವುದನ್ನು ಬಿಟ್ಟು ....

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:–** ವಿಷಯದ ಬಗ್ಗೆ ಮಾತ್ರವೇ **XXX** ಹೇಳಿದ್ದೇವೆಯೇ ಹೊರತು, ವಿರೋಧ ಪಕ್ಷದ ಸದಸ್ಯರು ಧರಣಿಯನ್ನು ವಾಪಸ್ಸು ತೆಗೆದುಕೊಂಡಿರುವುದಕ್ಕೆ ಹೇಳಿಲ್ಲ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಪ್ರಭಾಪ್ರಭುತ್ವದಲ್ಲಿ ಈ ರೀತಿಯ ಉಡಾಫೆಯನ್ನು ಮಾಡಿ ...

**(ಗೊಂದಲ)**

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಮಾನೆ ಶ್ರೀನಿವಾಸ್:-** ಅವರುಗಳು ವಾಪಸ್ಸು ಹೋಗಿರುವುದಕ್ಕೆ ಹೇಳಿಲ್ಲ. ವಿಷಯದ ಬಗ್ಗೆ ಹೇಳಿದ್ದೇವೆ.

**(ಗೊಂದಲ)**

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಪ್ರತಿಯೊಂದು ಸಮಸ್ಯೆಗೆ ಕೇವಲ ಧರಣಿಯಿಂದ ಪರಿಹಾರ ಸಿಗುವುದಿಲ್ಲ.

**(ಗೊಂದಲ)**

**SRI MANE SRINIVAS:-** House is not in order.

**ಡಾ॥ ಜೈಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ....

**(ಗೊಂದಲ)**

**ಶ್ರೀ ಮಾನೆ ಶ್ರೀನಿವಾಸ್:-** ಅವರುಗಳು ವಾಪಸ್ಸು ಹೋಗಿರುವುದಕ್ಕೆ **XXX** ಎಂಬುದಾಗಿ ಹೇಳಿಲ್ಲ.

**(ಗೊಂದಲ)**

**ಡಾ॥ ಜೈಮಾಲ ರಾಮಚಂದ್ರ:-** ಈ ರೀತಿಯಾದಂತಹ ಮಾತುಗಳು . . .

**(ಗೊಂದಲ)**

**ಸಭಾಪತಿಯವರು:-** ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(436)13-12-2018 5.20 ಡಿವಿಸ್-ವಿಕೆ(ಎಂಡಿ)

**(ಸದನವು ಸಂಜೆ 4 ಗಂಟೆ 38 ನಿಮಿಷಕ್ಕೆ ಮುಂದೂಡಲ್ಪಟ್ಟಿದ್ದು ಪುನಃ ಸಂಜೆ 5 ಗಂಟೆ 22 ನಿಮಿಷಗಳಿಗೆ ಪ್ರಾರಂಭಗೊಂಡಿತು)**

**(ಪೀಠದಲ್ಲಿ ಸಭಾಪತಿಯವರು ಉಪಸ್ಥಿತರಾದರು)**

**(ಸದನ ಪ್ರಾರಂಭವಾಗುತ್ತಿದ್ದಂತೆ ಬಿಜೆಪಿ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಐವನ್ ಡಿ'ಸೋಜ಼ಾ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸದನವನ್ನು ನಡೆಸಲಿಕ್ಕೆ ಅವಕಾಶ

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕಲ್ಪಿಸಿಕೊಡಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಿನ್ನೆ, ಮೊನ್ನೆ ನಾವು ಅಜೆಂಡಾದಲ್ಲಿರುವ ವಿಷಯವನ್ನು ಪೂರ್ಣ ಮಾಡಿದ್ದೇವೆ. ಇವತ್ತು ಸಹ ಎಲ್ಲಾ ಮಾನ್ಯ ಸದಸ್ಯರು ಕಾಯುತ್ತಿದ್ದಾರೆ. ನಿಯಮ 330 ಹಾಗೂ ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ಹಲವಾರು ವಿಷಯಗಳಿವೆ. ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ,

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು ಸದನವನ್ನು ನಡೆಸುವುದಕ್ಕೆ ಸಹಕಾರ ಕೊಡಬೇಕು, ನಿಮ್ಮ ಸ್ಥಾನಕ್ಕೆ ನೀವು ತೆರಳಿ, ಸರ್ಕಾರ ತನ್ನ ನಿಲುವನ್ನು ಹೇಳುತ್ತದೆಂದು ತಾವು ಹೇಳಿದಿರಿ. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ನಿಲುವಳಿ ಸೂಚನೆಯನ್ನು ರೈತರ ಪರವಾಗಿ ಮಂಡಿಸಿದ್ದು ನಾವು. ಈ ಅಜೆಂಡಾಗೆ ಸಂಬಂಧಪಟ್ಟಂತೆ ನಾವು ಸದನದ ಬಾವಿಗೆ ಬಂದು ಧರಣಿ ಮಾಡಿದಾಗ ಸುದೀರ್ಘವಾದ ಸಮಯವಾಯಿತು, ತಾವು ಪೀಠದಿಂದ ಹೇಳಿದ ನಂತರ ಕೊನೆಗೆ ನಾನು ನಮ್ಮ ಪಕ್ಷದ ಪರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಂಡೆ. ಅತ್ಯಂತ ಶ್ರೇಷ್ಠವಾಗಿರುವಂಥ ಪೀಠದಿಂದ ತಾವು ಸದನದ ಬಾವಿಯಿಂದ ಹೊರ ಬಂದು ನಾವು ಧರಣಿಯನ್ನು ಕೈಬಿಡಬೇಕೆಂದು ಸೂಚನೆಯನ್ನು ಕೊಡುತ್ತೀರೆಂದರೆ, ನಾವದನ್ನು ಪಾಲಿಸುತ್ತೇವೆನ್ನುವಂಥ ವಿನಂತಿಯನ್ನು ತಮ್ಮ ಮೂಲಕ ಮಾಡಿಕೊಂಡೆ. ತಾವು ಪೀಠದಿಂದ ಎದ್ದು ನಿಂತು 'ಸದನದ ಕಲಾಪಗಳು ಸುಸೂತ್ರವಾಗಿ ನಡೆಯುವುದಕ್ಕೋಸ್ಕರ ಸರ್ಕಾರ ಈ ವಿಚಾರದಲ್ಲಿ ಮುಖ್ಯಮಂತ್ರಿಗಳಿಂದ ಉತ್ತರವನ್ನು ಕೊಡಿಸುವ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳುತ್ತಾರೆ. ಈ ವ್ಯವಸ್ಥೆಗೆ ಪೂರಕವಾಗಿ ನೀವು ಸದನದ ಬಾವಿಯಿಂದ ಹೊರ ಬನ್ನಿ' ಎನ್ನುವ ಮಾತುಗಳನ್ನು ತಾವು ಹೇಳಿದ ಮೇಲೆ ಅದನ್ನು ಅರ್ಥ ಮಾಡಿಕೊಂಡು ಹೊರ ಬಂದೆವು. ಇಲ್ಲಿಯವರೆವಿಗೂ ಇತಿಹಾಸದಲ್ಲಿ ಯಾವುದೇ ಸರ್ಕಾರ ಇರುವಾಗಲೂ ಸಹ ಧರಣಿನಿರತರಿಗೆ ಸರ್ಕಾರ ಉತ್ತರವನ್ನು ಕೊಟ್ಟ ನಂತರವೇ ಅವರುಗಳು ಸದನದ ಬಾವಿಯಿಂದ ತೃಪ್ತಿಯಾಗಿ ಹೊರ ಬರುವಂಥ ರೂಢಿ ಇದೆ ಎಂಬುದನ್ನು ತಮಗೆ ನೆನಪು ಮಾಡಿಕೊಟ್ಟೆ. ಆದರೂ ಸಹ ತಾವು ಪೀಠದಿಂದ ನೀಡಿದ ಆದೇಶವನ್ನು ಅನುಷ್ಠಾನ ಮಾಡಬೇಕೆಂದು ನಾವೆಲ್ಲರೂ ಧರಣಿಯನ್ನು ಕೈ ಬಿಟ್ಟು ಸದನದ ಬಾವಿಯಿಂದ ನಮ್ಮ ನಮ್ಮ ಸ್ಥಾನಕ್ಕೆ ತೆರಳಿದೆವು. ನಾನು ಮೂರನೇ ಅವಧಿಗೆ ಶಾಸಕನಾಗಿದ್ದೇನೆ. ಈ ಸದನದ ಇತಿಹಾಸದಲ್ಲಿ ಎಂದೂ ಕೂಡ ವಿರೋಧ ಪಕ್ಷಕ್ಕೆ ಆಡಳಿತ ಪಕ್ಷದವರು **XXX** ಎಂದು ವ್ಯಂಗ್ಯ ಮಾಡಿದ್ದನ್ನು ನಾನು ಕೇಳಿಲ್ಲ.

**ಶ್ರೀ ರಿಜ್ವಾನ್ ಅರ್ಷದ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವರು ತೆಗೆದುಕೊಂಡಿರುವ ವಿಷಯ ಆ ರೀತಿ ಇದೆ. ವಿರೋಧ ಪಕ್ಷದ ನಾಯಕರು ರೈತರ ವಿಚಾರ, ಉತ್ತರ ಕರ್ನಾಟಕದ ವಿಚಾರ ಬಿಟ್ಟು ಟಿಪ್ಪು

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

ಜಯಂತಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಅದಕ್ಕೆ ಅವರಿಗೆ ಶಹಬಾಷ್ ಎಂದು ಹೇಳಬೇಕೇ? ಅವರಿಗೆ ಏನು ಹೇಳಬೇಕು? ಅವರಿಗೆ ಸ್ವಂತ ಪ್ರತಿಷ್ಠೆ ಅಷ್ಟೇ ಬೇಕು.

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇವರು ವಿನಾಕಾರಣ ಕಾಲಹರಣ ಮಾಡುತ್ತಿದ್ದಾರೆ ಹಾಗೂ ಸದನದ ಹಾದಿ ತಪ್ಪಿಸುತ್ತಿದ್ದಾರೆ. ಗಂಭೀರವಾದಂಥ ವಿಷಯಗಳನ್ನು ಚರ್ಚೆ ಮಾಡಲಿಕ್ಕೆ ಇವರಿಗೆ ಆಸಕ್ತಿಯೇ ಇಲ್ಲ. ಎಲ್ಲದಕ್ಕೂ ರಾಜಕಾರಣ ಮಾಡಬೇಕೆನ್ನುತ್ತಾರೆ.

**ಶ್ರೀ ರಿಜ್ವಾನ್ ಅರ್ಷದ್:–** ಇವರು vote bank ಗೋಸ್ಕರ ಇವೆಲ್ಲಾ ಮಾಡುತ್ತಿದ್ದಾರೆ. ಸದನದ ಮೂರು ಗಂಟೆ ಸಮಯವನ್ನು ಹಾಳು ಮಾಡಿದ್ದಾರೆ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ತಾವು ಅವರಿಗೆ ತಮ್ಮ ತೀರ್ಮಾನವನ್ನು ಹೇಳಿ, ಸದನವನ್ನು ನಡೆಸಲಿಕ್ಕೆ ಆದೇಶವನ್ನು ಮಾಡಿ. ಕೇವಲ ವಿರೋಧ ಪಕ್ಷದವರು ಹೇಳಬಹುದು, ನಾವು ಹೇಳಬಾರದೆಂದರೆ ಏನರ್ಥ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ನಾನು ಈ ಸದನದ ಸತ್ಸಂಪ್ರದಾಯದ ಪ್ರಕಾರ ಸದಸ್ಯರು ಮಾತನಾಡುವಾಗ ಅದು ಆಡಳಿತ ಪಕ್ಷದ ಸಭಾನಾಯಕರು ಇರಲಿ, ಮಂತ್ರಿಗಳು ಇರಲಿ ಅಥವಾ ವಿರೋಧ ಪಕ್ಷದ ನಾಯಕರು ಇರಲಿ ಅಥವಾ ಯಾವುದೇ ಶಾಸಕರು ಇರಲಿ, ತಮ್ಮನ್ನು ಉಲ್ಲೇಖ ಮಾಡಿ ಮಾತನಾಡಬೇಕಾದುದು ನಮ್ಮ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಉಳಿದವರೆಲ್ಲರೂ ಮಾತನಾಡಿದ್ದಕ್ಕೆ ನಾನು ಪ್ರತಿಕ್ರಿಯೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಾನು ತಮ್ಮಲ್ಲಿ ಆಗ್ರಹ ಪಡಿಸುವುದೇನೆಂದರೆ, ಇತಿಹಾಸದಲ್ಲಿ ವಿರೋಧ ಪಕ್ಷವೊಂದು ಧರಣಿನಿರತರಾದಾಗ ಪೀಠಕ್ಕೆ ಗೌರವ ಕೊಟ್ಟು ನಾವು ಸ್ವಸ್ಥಾನಕ್ಕೆ ತೆರಳಿದಾಗ **XXX** ಎಂದು ಅಪಹಾಸ್ಯ ಮಾಡಿದ್ದನ್ನು ನಾನು ಹಿಂದೆಂದೂ ಕೇಳಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:–** ಮಾನ್ಯ ಸಭಾಪತಿಯವರೆ, ಆ ರೀತಿ ಹೇಳುವುದನ್ನು ನಾವು ಕೇಳಿದ್ದೇವೆ. ಕಡತವನ್ನು ತೆಗೆದು ನೋಡಿ. ಹಲವಾರು ಸಂದರ್ಭಗಳಲ್ಲಿ ಇಂತಹ ಪದಗಳನ್ನು ಉಪಯೋಗಿಸಿದ್ದಾರೆ.

**ಶ್ರೀ ರಿಜ್ವಾನ್ ಅರ್ಷದ್:–** ಮಾನ್ಯ ಸಭಾಪತಿಯವರೆ, ಮೂರು ಗಂಟೆಗಳ ಕಾಲ ಈ ಸದನದ ಸಮಯವನ್ನು ವ್ಯರ್ಥ ಮಾಡಿದ್ದಕ್ಕೆ **XXX** ಎಂದು ಹೇಳಿದ್ದೇವೆ. ರೈತರ ಸಮಸ್ಯೆಗಳ ವಿಚಾರ ಬಿಟ್ಟು ಇಂತಹ ಒಂದು ವಿಷಯದ ಬಗ್ಗೆ ಚರ್ಚೆ ಮಾಡಿದ್ದಕ್ಕೆ **XXX** ಎಂದು ಹೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷವನ್ನು ಮಣಿಸುವುದಕ್ಕೋಸ್ಕರ ಚಮತ್ಕಾರದ ಮಾತುಗಳನ್ನಾಡುವುದಾಗಲಿ ಅಥವಾ ಉಡಾಫೆಯ ಧ್ವನಿ ಎಂದು ಹೇಳುವುದಕ್ಕಾಗಲಿ ನಾನು ನನ್ನ

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪ್ರತಿಕ್ರಿಯೆಯನ್ನು ಕೊಡುವುದಿಲ್ಲ.

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೆ, ಯಾರೂ ಉಡಾಫೆಯ ಮಾತುಗಳನ್ನಾಡಿಲ್ಲ.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಈ ಸದನದ ಸಮಯವನ್ನು ವ್ಯರ್ಥ ಮಾಡಿದ್ದು ಬಿಜೆಪಿಯ ಸದಸ್ಯರು.

**ಶ್ರೀ ರಿಜ್ವಾನ್ ಅರ್ಷದ್:-** ಸುಮಾರು ಮೂರು ಗಂಟೆಗಳ ಕಾಲ ಕಾಲಹರಣ ಮಾಡಿದ್ದಾರೆ. ಅದಕ್ಕೋಸ್ಕರ ನಾವು ಕೇಳಿದ್ದು. ಉತ್ತರ ಕರ್ನಾಟಕದ ಬಗ್ಗೆ, ರೈತರ ಸಮಸ್ಯೆ ಬಗ್ಗೆ ಅಥವಾ ಬರಗಾಲದ ಬಗ್ಗೆ ಮಾತನಾಡದೇ ಟಿಪ್ಪುವಿನ ವಿಷಯ ತಂದಿದ್ದಾರೆ. ಇವರಿಗೆ ರಾಜಕೀಯ ಬೇಕು, ಸ್ವಂತ ಪ್ರತಿಷ್ಠೆ ಬೇಕು ಹೊರತು ಉತ್ತರ ಕರ್ನಾಟಕದ ಅಭಿವೃದ್ಧಿ ಬೇಕಾಗಿಲ್ಲ.

**ಡಾ:ಜಯಮಾಲಾ ರಾಮಚಂದ್ರ (ಸಭಾನಾಯಕರು):-** ರಿಜ್ವಾನ್ ಅರ್ಷದ್‌ರವರೆ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ.

**ಸಭಾಪತಿಯವರು:- ಪೀಠಕ್ಕೆ ಗೌರವವನ್ನು ಕೊಟ್ಟು ಧರಣಿಯನ್ನು ವಾಪಸ್ ತೆಗೆದುಕೊಂಡಾಗ XXX ಎಂದು ಹೇಳಿರತಕ್ಕಂಥಾದ್ದು ತಪ್ಪು. ಕಡತದಲ್ಲಿ ಅದು ದಾಖಲಾಗಿದೆಯೇ ಎಂಬುದನ್ನು ನೋಡುತ್ತೇವೆ. ಒಂದು ವೇಳೆ ಆ ರೀತಿ ದಾಖಲಾಗಿದ್ದರೆ ಅದನ್ನು ತೆಗೆಸುತ್ತೇವೆ. ಒಂದು ವೇಳೆ ಯಾರು ಆ ರೀತಿ ಹೇಳಿದ್ದಾರೆಂದು ಗೊತ್ತಾದರೆ, ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ.**

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದವರು 'ಉಡಾಫೆ' ಎನ್ನುವ ಶಬ್ಧವನ್ನು ಬಳಿಸಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಇದಕ್ಕೇ ಹೇಳುವುದು ಉಡಾಫೆ ಎಂದು.

**ಶ್ರೀ ಮಾನೆ ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಹಿಂದಿನ ಕಡತ ಎಲ್ಲಾ ತೆಗೆಸಿ ನೋಡಿ. ಧರಣಿಯಿಂದ ವಾಪಸ್ ಹೋದಾಗ ಎಷ್ಟು ಬಾರಿ **XXX** ಎಂದು ಹೇಳಿದ್ದಾರೆ. ಅಂತಹದ್ದರ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ರಿಜ್ವಾನ್ ಅರ್ಷದ್:-** ರೈತರ ಬಗ್ಗೆ ಮಾತನಾಡಿದ್ದರೆ ಅದು ಉಡಾಫೆಯೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಸರ್ಕಾರದ ಕಡೆಯಿಂದ ನಮಗೆ ಅಪಹಾಸ್ಯ ಮಾಡಿರುವ ಹಿನ್ನೆಲೆಯಲ್ಲಿ **XXX** ಎಂದು ಹೇಳಿದ್ದು, ಸ್ವಾಭಾವಿಕವಾಗಿ ನಮಗೆ ನೋವಾಗಿದೆ. ಸರ್ಕಾರ ಈ ಬಗ್ಗೆ ಕ್ಷಮೆ ಕೇಳಬೇಕೆನ್ನುವ ಆಗ್ರಹವನ್ನು ನಾನು ಮಾಡುತ್ತೇನೆ.

---

**XXX** ಮಾನ್ಯ ಸಭಾಪತಿಯವರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ರಿಜ್ವಾನ್ ಅರ್ಷದ್:-** ಅವರು 'ಉಡಾಫೆ' ಎಂದು ಹೇಳಿದ್ದಕ್ಕೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

**ಡಾ:ಜಯಮಾಲಾ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದೇನೆಂದರೆ, ಹಾಗೊಂದು ವೇಳೆ ಅವರ ಮನಸ್ಸಿಗೆ ಘಾಸಿಯಾಗಿದ್ದರೆ, ನಮಗೆ ಅವರ ಬಗ್ಗೆ ಗೌರವವಿದೆ, ಅದನ್ನು ನಾವುಗಳು ಯಾರು ಹೇಳಿಲ್ಲ. ಅಂತಹ ಮಾತುಗಳು ಬಂದಿದ್ದರೆ ನಿಜವಾಗಿ ಅವರ ಪರವಾಗಿ ನಾನು ಕ್ಷಮೆ ಕೇಳುತ್ತೇನೆ.

**(ಈ ಹಂತದಲ್ಲಿ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹಿಂತಿರುಗಿದರು)**

**ಶ್ರೀ ರಿಜ್ವಾನ್ ಅರ್ಷದ್:-** ಮಾನ್ಯ ಸಭಾಪತಿಯವರೆ, ಮೂರು ಗಂಟೆಗಳ ಕಾಲ ಈ ಸದನದ ಸಮಯವನ್ನು ವ್ಯರ್ಥ ಮಾಡಿರುವುದು ಅವರು. ಅವರಿಗೆ ಶಹಬಾಷ್ ಎಂದು ಹೇಳಬೇಕೇ?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ಆಡಳಿತ ಪಕ್ಷದವರು ಪೀಠಕ್ಕೆ ಅಗೌರವ ತೋರಿಸಿದ್ದಾರೆ. ಆದ್ದರಿಂದ ನೀವು ಅವರಿಗೆ ಆ ಬಗ್ಗೆ ಹೇಳಬೇಕಾಗುತ್ತದೆ.

**ಶ್ರೀ ರಿಜ್ವಾನ್ ಅರ್ಷದ್:-** ರೈತರ ಸಮಸ್ಯೆ ವಿಚಾರ ಬಿಟ್ಟು ಮೂರು ಗಂಟೆಗಳ ಕಾಲ ಸಮಯವನ್ನು ವ್ಯರ್ಥ ಮಾಡಿದ್ದಾರೆ.

(ಗೊಂದಲ)

(437)13-12-2018(5-30)ಬಿಕೆಪಿ-ವಿಕೆ(ಎಂಡಿ)

(ಗೊಂದಲ)

**ಡಾ॥ ತೇಜಸ್ವಿನಿಗೌಡ:-** ಮುಸಲ್ಮಾನರಿಗೆ ಏನಾದರೂ ಉದ್ಧಾರ ಮಾಡಿದ್ದರೆ, ಅದನ್ನು ಬಿಜೆಪಿ ಪಕ್ಷದ ಶ್ರೀಮಾನ್ ಬಿ.ಎಸ್.ಯಡಿಯೂರಪ್ಪನವರು ಮಾಡಿದ್ದಾರೆ. ನೀವುಗಳು ಏನು ಮಾಡಿರುವುದಿಲ್ಲ. ಮುಸಲ್ಮಾನರ ಹೆಸರಿನಲ್ಲಿ ಓಟ್ ಬ್ಯಾಂಕ್ ಮಾಡಿಕೊಂಡಿದ್ದೀರಿ ಹೊರತು ಅವರಿಗೆ ನೀವು ಏನೂ ಕೆಲಸ ಮಾಡಿರುವುದಿಲ್ಲ.

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ಸದಸ್ಯರುಗಳಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

ತಾವು ವಿರೋಧ ಪಕ್ಷದಲ್ಲಿದ್ದೀರಿ ಎಂದು ಈ ರೀತಿಯೆಲ್ಲಾ ಮಾತನಾಡಬಾರದು. ಒಂದು ನಿಮಿಷ ಶಾಂತವಾಗಿರಿ.

**ಶ್ರೀ ರಿಜ್ವಾನ್ ಅರ್ಷದ್:-** ನಿಮ್ಮ ವಿರೋಧ ಪಕ್ಷದ ನಾಯಕರು ಉಡಾಫೆ ಎಂದು ಹೇಳಿದರು. ಉಡಾಫೆ ಎಂದು ಹೇಳಬಹುದೇ? ಅವರಿಗೆ ನಾಚಿಕೆ ಆಗಬೇಕು.

**ಸಭಾಪತಿಯವರು:-** ಎಲ್ಲರೂ ಮೊದಲು ಕುಳಿತುಕೊಳ್ಳಿ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ತಮ್ಮ ಪೀಠದಲ್ಲಿ ಎಲ್ಲರೂ ಕುಳಿತುಕೊಳ್ಳುವಂತೆ ಎದ್ದು ನಿಂತು ಸೂಚಿಸಿದರು)**

**ಶ್ರೀ ಬಸವರಾಜ ಹೊರಟ್ಟಿಯವರು:-** ಮಾನ್ಯ ಸಭಾಪತಿಯವರು ಎದ್ದು ನಿಂತುಕೊಂಡು ತಮಗೆಲ್ಲರಿಗೂ ಕುಳಿತುಕೊಳ್ಳಲಿಕ್ಕೆ ಹೇಳುತ್ತಿದ್ದಾರೆ. ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ:-** ತಾವು ವಿರೋಧ ಪಕ್ಷದಲ್ಲಿದ್ದೀರಿ ಎಂದು ಈ ರೀತಿಯೆಲ್ಲಾ ಮಾತನಾಡಬಾರದು. ಒಂದು ನಿಮಿಷ ಶಾಂತವಾಗಿರಿ.

**ಶ್ರೀ ರಿಜ್ವಾನ್ ಅರ್ಷದ್:-** ನಿಮಗೆ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ ಇಂದು 3 ಗಂಟೆಗಳ ಸಮಯವನ್ನು ವ್ಯರ್ಥ ಮಾಡುತ್ತಿರಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ಈ ಬಗ್ಗೆ ಹೇಳಿದ್ದಾರೆ. ದಯವಿಟ್ಟು ಈ ಅಜೆಂಡಾದ ಬಗ್ಗೆ ಯಾವಾಗ ಉತ್ತರ ಕೊಡಿಸುತ್ತೀರಿ ಎನ್ನುವ ವಿಚಾರವನ್ನು ಹೇಳಬೇಕು. ನಾನು ಪೀಠಕ್ಕೆ ವಿನಂತಿ ಮಾಡುತ್ತೇನೆ.

(ಗೊಂದಲ)

ಮಾನ್ಯ ಸಚಿವರಾದ ಶ್ರೀ ಯು.ಟಿ.ಖಾದರ್‌ರವರು ಇಲ್ಲಿ ಗಮನಿಸಬೇಕು. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸದನಕ್ಕೆ ಕೊಟ್ಟಿರುವಂತಹ ಹೇಳಿಕೆಯ ಬಗ್ಗೆ ತಿಳಿಸಲಿಕ್ಕೆ ಬಯಸುತ್ತೇನೆ. ನಾವು ಪುನಃ ಸದನದ ಬಾವಿಗೆ ಇಳಿದಿದ್ದು ಏತಕ್ಕೆಂದು ತಮಗೆ ಗೊತ್ತಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ನಮಗೆ ಏನು ಹೇಳಿದರು ಎಂದರೆ ನೀವು ನಮ್ಮನ್ನು ನಂಬಿ, ನಿಮ್ಮ ಗೌರವವನ್ನು ಮತ್ತು ಸದನದ ಗೌರವವನ್ನು ನಾನು ಉಳಿಸುತ್ತೇನೆ, ನೀವು ಸ್ವಸ್ಥಾನಕ್ಕೆ ಹೋದಾಗ ಯಾವ ದಿನಾಂಕದಂದು ಉತ್ತರ ಕೊಡಲಾಗುವುದು ಎಂದು ನಾನು ಹೇಳುತ್ತೇನೆ ಎನ್ನುವಂತಹ ಭರವಸೆಯನ್ನು ನಮಗೆ ಕೊಟ್ಟಿದ್ದರು. ಆ ಹಿನ್ನೆಲೆಯಲ್ಲಿ ನಂತರ ನಡೆದಿರುವಂತಹ ವಿದ್ಯಮಾನಕ್ಕೆ ನಾವು ಪುನಃ ಸದನದ ಬಾವಿಗೆ ಹೋಗಬೇಕಾಯಿತು. ಮಾನ್ಯ ಸಭಾನಾಯಕರು ಕೊಟ್ಟಿರುವಂತಹ ಆಶ್ವಾಸನೆಯ ಹಿನ್ನೆಲೆಯಲ್ಲಿ ನಾವು ನಮ್ಮ ಸ್ವಸ್ಥಾನಗಳಿಗೆ ವಾಪಸ್ಸು ಬಂದಿದ್ದೇವೆ. ನಾವು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ ಏನು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಇದಕ್ಕೆ ಯಾವ ದಿವಸ ನಾನು ಉತ್ತರವನ್ನು ಕೊಡುತ್ತೇನೆಂದು ಹೇಳುತ್ತೇನೆಂದು ಏನು ಹೇಳಿದ್ದಾರೆ, ಅದಕ್ಕೆ ತಾವು ಉತ್ತರ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

**ಡಾ॥ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಯವರೇ, ಈಗ ತಾನೇ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಬಗ್ಗೆ ಮಾತನಾಡಿಕೊಂಡು ಬಂದು ಹೇಳುತ್ತೇನೆಂದು ಹೇಳಿದ್ದಾರೆ. ಅವರು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಖಂಡಿತವಾಗಿಯೂ ಸಹ ಬಂದು ಹೇಳುತ್ತಾರೆ. ಅಲ್ಲಿಯವರೆಗೆ ನಮ್ಮ ಕಾರ್ಯಕಲಾಪಗಳನ್ನು ಮುಂದುವರಿಸಿಕೊಂಡು ಹೋಗೋಣ.

**ಸಭಾಪತಿಯವರು:–** ಆಯಿತು, ಮುಂದಿನ ವಿಷಯವನ್ನು ತೆಗೆದುಕೊಳ್ಳೋಣ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಬಂದು ಈ ಬಗ್ಗೆ ಹೇಳುತ್ತಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಇಲ್ಲಿ ನಮಗೆ ಯಾವ ಹಠಮಾರಿತನವೂ ಇಲ್ಲ. ಆದರೆ ಸರ್ಕಾರ ತನ್ನ ಗೌರವವನ್ನು ಉಳಿಸಿಕೊಳ್ಳಬೇಕಾದಂತಹ ಅವಶ್ಯಕತೆ ಇದೆ.

**ಡಾ॥ ಜಯಮಾಲ ರಾಮಚಂದ್ರ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಉಳಿಸಿಕೊಳ್ಳುತ್ತೇವೆ. ಇದರಿಂದ ನಾವು ನುಣುಚಿಕೊಳ್ಳುವವರಲ್ಲ.

**ಡಾ॥ ವೈ.ಎ.ನಾರಾಯಣ ಸ್ವಾಮಿ:–** ಇವತ್ತು ಸದನ ಮುಗಿಯುವುದರೊಳಗೆ ಈ ಬಗ್ಗೆ ಹೇಳಬೇಕು.

**ಡಾ॥ ಜಯಮಾಲ ರಾಮಚಂದ್ರ:–** ಈ ಸದನ 21ನೇ ತಾರೀಖು ಮುಗಿಯಲಿದ್ದು, ಅಷ್ಟರೊಳಗೆ ಖಂಡಿತವಾಗಿಯೂ ಉತ್ತರ ಕೊಡುತ್ತೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆ ರೀತಿ ಆಗುವುದಿಲ್ಲ. ಮಾತಿನ ವರಸೆ ಎಲ್ಲೆಲ್ಲೋ ಹೋಗಬಾರದು. ಪೀಠದಿಂದ ಏನು ಹೇಳಿದರು ಎಂದರೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿಕೊಂಡು ಇಲ್ಲಿ ಬಂದು ಉತ್ತರ ಕೊಡುತ್ತಾರೆನ್ನುವ ಮಾತನ್ನು ಹೇಳಿದ್ದಾರೆ. ತಾವೂ ಸಹ ಅದನ್ನು ಪುನುರುಚ್ಚಾರ ಮಾಡಿದ್ದೀರಿ. ಇವತ್ತು ಸಂಜೆ ಒಳಗಡೆ, ಕಲಾಪ ಮುಗಿಯುವುದರೊಳಗಾಗಿ ಹೇಳಬೇಕು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ತಿಳಿಸುತ್ತೇವೆಂದು ಹೇಳಿದ್ದೇವೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಾವು ಈ ಬಗ್ಗೆ ತಿಳಿಸುತ್ತೇವೆಂದು ಹೇಳಿದ್ದೀರಿ.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಹೌದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಕಲಾಪ ಮುಗಿಯುವುದರೊಳಗೆ ತಿಳಿಸುತ್ತೇವೆಂದು ಹೇಳಿದಿರಿ.

(ಗೊಂದಲ)

**ಸಭಾಪತಿಯವರು:–** ಸಭಾನಾಯಕಿಯವರು ಮಾತನಾಡುತ್ತಿದ್ದಾರೆ. ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ತಪ್ಪು ಮಾಡಿಸಬೇಕೆಂದು ನಮಗೆ ಅನಿಸುವುದಿಲ್ಲ. ಸರ್ಕಾರದವರೇ ಹೇಳಿದ ಮಾತಿನ ಪ್ರಕಾರ ಸದನ ಮುಗಿಯುವುದರೊಳಗೆ ಇಂತಹ ದಿನಾಂಕ ಎಂದು ನಮಗೆ ನಿಶ್ಚಿತವಾಗಿ ನೀವಾಗಲಿ, ಸರ್ಕಾರವಾಗಲಿ ಹೇಳಬೇಕು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ನಾವು ತಿಳಿಸುತ್ತೇವೆಂದು ಹೇಳಿದ್ದೇವೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಆ ರೀತಿ ಆಗುವುದಿಲ್ಲ. ಇವತ್ತಿನ ಕಲಾಪ ಮುಗಿಯುವುದರೊಳಗಡೆ ಹೇಳಬೇಕು.

**ಡಾ॥ ಜಯಮಾಲ ರಾಮಚಂದ್ರ:–** ಮಾನ್ಯ ಸಭಾಪತಿಯವರೇ, ಯಾವಾಗ ಬಂದು ಉತ್ತರ ಕೊಡುತ್ತಾರೆಂದು ತಿಳಿಸುತ್ತೇವೆಂದು ಹೇಳಿದ್ದೇವೆ.

**ಸಭಾಪತಿಯವರು:–** ಆಯಿತು. ಈಗ ಗಮನಸೆಳೆಯುವ ಸೂಚನೆಯ ಬಗ್ಗೆ ಚರ್ಚೆ.

**ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ನಿಯಮ 175ರ ಅಡಿಯಲ್ಲಿ ಹಕ್ಕುಬಾಧ್ಯತೆಯ ಪ್ರಶ್ನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

**ಸಭಾಪತಿಯವರು:–** ಅದನ್ನು ತಾವು ಸಕಾಲದಲ್ಲಿ ಸಲ್ಲಿಸಿರುವುದಿಲ್ಲ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನನ್ನ ಹತ್ತಿರ ನಿಯಮದ ಪುಸ್ತಕ ಇದೆ, ಮತ್ತೆ ಎಷ್ಟು ಗಂಟೆಗೆ ನಾನು ಕೊಟ್ಟಿದ್ದೇನೆ ಎನ್ನುವ ಬಗ್ಗೆ ಸ್ವೀಕೃತಿ ಪತ್ರ ಇದೆ. ಅದರ ಬಗ್ಗೆ ತಾವು ಅವಕಾಶ ಕೊಟ್ಟರೆ ಹೇಳುತ್ತೇನೆ.

**ಸಭಾಪತಿಯವರು:–** ತಾವು ಅದನ್ನು 9 ಗಂಟೆ 55 ನಿಮಿಷಕ್ಕೆ ಕೊಟ್ಟಿದ್ದೀರಿ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಸದನ 11–00 ಗಂಟೆಗೆ ಆರಂಭವಾಗಿರುತ್ತದೆ.

**ಸಭಾಪತಿಯವರು:–** 10 ಗಂಟೆ 30 ನಿಮಿಷಕ್ಕೆ ಸದನ ನಿಗದಿಯಾಗಿದೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ತಾವು ಗಮನಿಸಿ, ನಾನು ನಿಯಮವನ್ನು ಓದಿ ಹೇಳುತ್ತೇನೆ. ಒಂದು ಗಂಟೆ ಮುಂಚಿತವಾಗಿ ಕೊಡಬೇಕೆಂದು ಹೇಳಿ ಈ ನಿಯಮದ ಪುಸ್ತಕದ ಪುಟ ಸಂಖ್ಯೆ 115 ರಲ್ಲಿ ಇದೆ. ಹಕ್ಕುಬಾಧ್ಯತೆಯ ಪ್ರಶ್ನೆಯ ಸಂಬಂಧದಲ್ಲಿ ಸೂಚನಾ ಪತ್ರ . . . ಒಂದು ನಿಮಿಷ ಹೇಳಲಿಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಆಯಿತು. ಈಗ ಮುಂದಿನ ವಿಷಯವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಅರುಣ ಶಹಾಪುರ:–** ಮಾನ್ಯ ಸಭಾಪತಿಯವರೇ, ಇದು ನನ್ನ ಹಕ್ಕಿನ ಪ್ರಶ್ನೆ. ಈ ಸದನದ ಹಕ್ಕಿನ ಪ್ರಶ್ನೆಯನ್ನು ನಾನು ಪ್ರಸ್ತಾಪ ಮಾಡಿದ್ದೇನೆ.

**ಸಭಾಪತಿಯವರು:–** ತಾವು ಕೊಟ್ಟಿದ್ದೀರಿ. ನಾನು ಅದರ ಬಗ್ಗೆ ಹೇಳುತ್ತೇನೆ. ಈಗಲೇ ಹೇಳಬೇಕೆಂದೇನೂ ಇಲ್ಲ. ತಮಗೆ ಅವಕಾಶವನ್ನು ಕೊಡುತ್ತೇನೆ. ಈಗ ಶ್ರೀ ವೈ.ಎ. ನಾರಾಯಣಸ್ವಾಮಿಯವರು ಮಾತನಾಡಬೇಕು.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

## 10. ಗಮನ ಸೆಳೆಯುವ ಸೂಚನೆಗಳು

ವಿಷಯ: ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ಹಂಚಿಕೆ ಫಲಾನುಭವಿಗಳು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಪೂರ್ಣವಾಗಿ ಹಣವನ್ನು ಪಾವತಿಸಿದ್ದರೂ ಸಹ ಮನೆಗಳ ಸ್ವಾಧೀನ ಹಾಗೂ ಹಕ್ಕು ಪತ್ರ ನೀಡದಿರುವ ಬಗ್ಗೆ.

– – –

**ಡಾ॥ ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಾಜಪೇಯಿ ನಗರ ವಸತಿ ಯೋಜನೆಯಡಿ ನಿರ್ಮಿಸಿರುವ 75 ಮನೆಗಳನ್ನು 2008ರಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರದ ನಿವಾಸಿಗಳಿಗೆ ಹಂಚಿಕೆ ಮಾಡಿದ್ದು, ಸದರಿ ಫಲಾನುಭವಿಗಳು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಪೂರ್ಣವಾಗಿ ಹಣವನ್ನು ಪಾವತಿಸಿದ್ದರೂ ಸಹ ಇದುವರೆವಿಗೂ ಮನೆಗಳ ಸ್ವಾಧೀನ ಹಾಗೂ ಹಕ್ಕುಪತ್ರ ನೀಡದಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರ ಗಮನ ಸೆಳೆಯುತ್ತಿದ್ದೇನೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಮತ್ತು ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ,

(ಸಚಿವರ ಉತ್ತರವನ್ನು ಲಗತ್ತಿಸಲಾಗಿದೆ)

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ನಾವು ಇಂದು ಸುಧೀರ್ಘವಾದ ಉತ್ತರವನ್ನು ಕೊಟ್ಟಿದ್ದೇವೆ. ವಿಧಾನ ಪರಿಷತ್ತಿನ ಮಾನ್ಯ ಶಾಸಕ ಮಿತ್ರರಿಗೆ ನಾನು ಹೇಳುವುದಿಷ್ಟೆ. ರಾಜೀವ್ ಗಾಂಧಿ ವಸತಿ ನಿಗಮ ಇವತ್ತು ಮನೆಗಳನ್ನು ಕೊಡುವುದಿಲ್ಲ. ಆದರೆ ಆ ಮನೆಗೆ ಬೇಕಾದಂತಹ ಅನುದಾನವನ್ನು ಮಾತ್ರ ನಾವು ಕೊಡುತ್ತೇವೆ. ಮನೆಯನ್ನು ಕೊಡುವವರು ಯಾರು ಎಂದರೆ ನೀವು ಶಾಸಕರುಗಳಿದ್ದೀರಿ, ನಿಮ್ಮ ನಗರ ಆಶ್ರಯ ಸಮಿತಿ ಅಧ್ಯಕ್ಷರು ಯಾರು ಅಂದರೆ ಸ್ಥಳೀಯ ಮಟ್ಟದ ಶಾಸಕರು ಇರುತ್ತಾರೆ. ನೀವು ಫಲಾನುಭವಿಗಳನ್ನು ಆಯ್ಕೆ ಮಾಡಿ ಫಲಾನುಭವಿಗಳ ಪಟ್ಟಿಯನ್ನು ನೀವು ಕಳುಹಿಸುತ್ತೀರಿ, ಆ ಪಟ್ಟಿಗೆ ಅನುಗುಣವಾಗಿ ನಾವು ಅನುದಾನವನ್ನು ಬಿಡುಗಡೆ ಮಾಡುತ್ತೇವೆ. ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಏನಿದೆ ಎಂದರೆ 2008 ರಲ್ಲಿ ಬಹುಶ: ಹೆಬ್ಬಾಳದ 75 ಜನರಿಗೆ ಮತ್ತು ಯಲಹಂಕ ಕ್ಷೇತ್ರದ ಗಂಟಿಗಾನಹಳ್ಳಿಯಲ್ಲಿ 138 ಮನೆಗಳನ್ನು ಕಟ್ಟಿದ್ದರ ಪೈಕಿ 75 ಜನರಿಗೆ ಹೆಬ್ಬಾಳ ಕ್ಷೇತ್ರದ ಶಾಸಕರು ಮತ್ತು ಯಲಹಂಕ ಕ್ಷೇತ್ರದ ಶಾಸಕರು ಜೊತೆಯಾಗಿ ಮಾತನಾಡಿಕೊಂಡು ಕೊಟ್ಟಿದ್ದಾರೆ. ಕೊಟ್ಟ ನಂತರ ಅದು ಜಿಲ್ಲಾಧಿಕಾರಿಗಳ ಮೂಲಕ ಬಂತು. ಸದರಿ 75 ಜನರಿಗೆ ಕೊಡುವ ಸಂಬಂಧ ಜಿಲ್ಲಾಧಿಕಾರಿಗಳಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದೇವೆ. ಆ ಸಂದರ್ಭದಲ್ಲಿ ಏನಾಯಿತು ಎಂದರೆ, ಈ ಗಂಟಿಗಾನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರೆಲ್ಲರೂ ಸೇರಿಕೊಂಡು ಈ 75 ಜನರು ಹೆಬ್ಬಾಳ ಕ್ಷೇತ್ರದವರು, ನಮ್ಮ ಗ್ರಾಮದವರಲ್ಲ, ನಮ್ಮ ಗ್ರಾಮದವರು ಆಗಬೇಕೆಂದು ಹೇಳಿ ಈ ಮನೆಯಲ್ಲಿ ಬಂದು ಒತ್ತುವರಿ ಮಾಡಿಕೊಂಡು ಕುಳಿತುಕೊಂಡರು. ಇದಕ್ಕೆ ಆಶ್ರಯ ಸಮಿತಿ ಅಧ್ಯಕ್ಷರು ಯಾರು, ಸ್ಥಳೀಯ ಮಟ್ಟದ ಶಾಸಕರು. ಆದರೆ, ಇದನ್ನು ಕೊಡಲಿಕ್ಕೆ ಅಲ್ಲಿನ ಶಾಸಕರ ಅಭಿಪ್ರಾಯವೂ ಸಹ ಇರುವುದಿಲ್ಲ. ಇಲ್ಲಿನ ವಿಚಾರ ಏನೆಂದರೆ ಇದು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸೇರಿದ ವಿಚಾರವಲ್ಲ. ಆದ್ದರಿಂದ, ನಾನು ಮಾನ್ಯ ಸದಸ್ಯ ಮಿತ್ರರಿಗೆ ಹೇಳುವುದೇನೆಂದರೆ, ವಸತಿ ನಿಗಮದಿಂದ ಅವರಿಗೆ 75 ಹಕ್ಕುಪತ್ರಗಳನ್ನು

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಕೊಟ್ಟಿದ್ದು, ಇದನ್ನು ಹೆಬ್ಬಾಳ ಶಾಸಕರು ಮತ್ತು ಯಲಹಂಕ ಶಾಸಕರುಗಳು ಕುಳಿತುಕೊಂಡು ವಿವರವಾಗಿ ಚರ್ಚೆ ಮಾಡಿಕೊಂಡು ಈ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕೆಂದು ಅವರ ಪರವಾಗಿ ನಾವು ತಮ್ಮ ಹತ್ತಿರ ಕೇಳುತ್ತಿದ್ದೇವೆ.

(438) 13.12.2018 05.40 SV-BNS

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗಂಟಿಗಾನಹಳ್ಳಿ ಸರ್ವೆ ನಂ.13, 16, 17, 18 ಹಾಗೂ 19ರಲ್ಲಿ ಒಟ್ಟು 38 ಎಕರೆ 33 ಗುಂಟೆಯಲ್ಲಿ ಆಶ್ರಯ ವಸತಿ ಯೋಜನೆಯನ್ನು ರೂಪಿಸಲಾಗಿದೆ. 2004ರಲ್ಲಿ ಇದರ ಆದೇಶವಾಯಿತು. ಆಶ್ರಯ ಸಮಿತಿಯ ಅಧ್ಯಕ್ಷರು ಹಾಗೂ ಹೆಬ್ಬಾಳ ಕ್ಷೇತ್ರದ ಶಾಸಕರು ಪಟ್ಟಿಯನ್ನು 2010ರಲ್ಲಿ ಅಂತಿಮಗೊಳಿಸಿದರು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಅಲ್ಲಿ ಒಂದು ತಿದ್ದುಪಡಿ. ಹೆಬ್ಬಾಳ ಹಾಗೂ ಯಲಹಂಕ ಕ್ಷೇತ್ರದ ಶಾಸಕರು ಆಶ್ರಯ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಉತ್ತರವನ್ನು ಸ್ವಲ್ಪ ಸರಿಯಾಗಿ ನೋಡಿ. ಅಲ್ಲಿ ಒಂದು ಅಲ್ಪವಿರಾಮ ಚಿಹ್ನೆಯಿದೆ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು, 'do not misguide me' ಎಂದು ಹೇಳಿದರು. ದಯವಿಟ್ಟು ಮಾನ್ಯ ಸಚಿವರು ಕೇಳಿಸಿಕೊಳ್ಳಬೇಕು. ಬುದ್ಧಿವಂತರಿರಬೇಕು. ನಾನು ಪ್ರಶ್ನೆಯನ್ನು ನನಗಾಗಿ ಕೇಳುತ್ತಿಲ್ಲ. ಇಲ್ಲಿ 75 ಜನ ಮನೆಗಾಗಿ ರೂ.75,000/-ಗಳನ್ನು ಕಟ್ಟಿದ್ದಾರೆ. ಅವರೆಲ್ಲಾ ಮಾನ್ಯ ಸಚಿವರ ರೀತಿಯ ಸಾಹುಕಾರರ ಮನೆಗಳಲ್ಲಿ ಕಸ ಗುಡಿಸುವವರು. 2010ರಲ್ಲಿ ಅಂದಿನ ಆ ಭಾಗದ ಶಾಸಕರು ಹಾಗೂ ಆಶ್ರಯ ಸಮಿತಿಯ ಅಧ್ಯಕ್ಷರು 75 ಜನ ಫಲಾನುಭವಿಗಳನ್ನು ಆಯ್ಕೆ ಮಾಡಿ ಅವರ ಕೈಯಿಂದ ರೂ.35,000 ದುಡ್ಡು ಕಟ್ಟಿಸಿಕೊಂಡು, ಇನ್ನು ರೂ.50,000 ಗಳನ್ನು ಸಾಲದ ರೂಪದಲ್ಲಿ ಕೊಡುತ್ತೇವೆಂದು ಹೇಳಿ ಹಂಚಿಕೆ ಮಾಡಲಾಯಿತು. ಅದಾದ ನಂತರ 2016ರಲ್ಲಿ ಈ ಹಕ್ಕುಪತ್ರಗಳನ್ನು ವಸತಿ ನಿಗಮದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ವರ್ಗಾವಣೆ ಮಾಡಲಾಯಿತು. ಹಕ್ಕುಪತ್ರಗಳ ಪಟ್ಟಿಯು ನನ್ನ ಬಳಿ ಇದೆ. ಆ ಭಾಗದ ಶಾಸಕನಾಗಿ ನಾನು 2016ರಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮೂರು ಸಭೆಗಳನ್ನು ನಡೆಸಿದ್ದೇನೆ. ನಾನು ವಿಧಾನಸಭಾ ಸದಸ್ಯನಾಗಿದ್ದಾಗ ಫೆಬ್ರವರಿ ಅಧಿವೇಶನದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಕ್ಕೆ ಏನು ಉತ್ತರವನ್ನು ಕೊಡಲಾಗಿತ್ತೋ, ಅದೇ ಉತ್ತರವನ್ನು ಏನೂ ಬದಲಾವಣೆ ಮಾಡದೇ ಪುನಃ ಇಲ್ಲಿ ನೀಡಲಾಗಿದೆ. ಮಾನ್ಯ ಖಾದರ್ ಅವರು ಈ ಖಾತೆಗೆ ಬಂದ ಮೇಲೆಯೂ ಏನೂ ಬದಲಾವಣೆಯಾಗಿಲ್ಲ. ಈ ಹಿಂದೆ 2004ರಲ್ಲಿ ಫಲಾನುಭವಿಗಳ ಪಟ್ಟಿಯ ಪ್ರಕಾರ 2010ರಲ್ಲಿ ಹಂಚಿಕೆ ಮಾಡಲಾಗಿತ್ತು. ಪುನಃ ಗಂಟಿಗಾನಹಳ್ಳಿ ಪಂಚಾಯ್ತಿ ವತಿಯಿಂದ ದಿನಾಂಕ 11.09.2017ರಂದು ಹೊಸ ನಿರ್ಣಯ ಮಾಡಿದ್ದರಿಂದ ಈ ಹಿಂದೆ ಮಾಡಿದ ಪಟ್ಟಿಯು ರದ್ದು ಮಾಡಿದಂತಾಗಿದೆ. 2017ರಲ್ಲಿ ಯಾರು ಯಾರನ್ನೋ ಕರೆದುಕೊಂಡು ಹೋಗಿ ಅಲ್ಲಿ ಮನೆ ತುಂಬಿಸಿ....

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಸ್ಥಳೀಯ ಶಾಸಕರೇ ಆಶ್ರಯ ಸಮಿತಿಯ ಅಧ್ಯಕ್ಷರಾಗಿದ್ದು, ಅವರು ತೀರ್ಮಾನವನ್ನು ತೆಗೆದುಕೊಂಡಿರುತ್ತಾರೆ. ಇದರಲ್ಲಿ ನಮ್ಮ ಪಾತ್ರವೇನೂ ಇರುವುದಿಲ್ಲ.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಶ್ರಯ ಸಮಿತಿಯ ಅಧ್ಯಕ್ಷರ ಪ್ರಶ್ನೆ ಈಗ ಉದ್ಭವಿಸುವುದಿಲ್ಲ. ತಾವೂ ಸಹ ವಿಧಾನ ಸಭಾ ಸದಸ್ಯರಾಗಿದ್ದಿರಿ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ಪ್ರಶ್ನೆ ಏಕೆ ಬರುವುದಿಲ್ಲ?

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಏಕೆ ಹೀಗೆ ಆಡುತ್ತಿದ್ದಾರೆ? Let the Hon'ble Minister not misguide me. I know it. Please, let him keep quite for some time for my sake. ನಾನು 'please' ಎನ್ನುವ ಪದವನ್ನು ಬಳಸಿದ್ದೇನೆ. **(ಗೊಂದಲ)** ಒಬ್ಬ ಮಂತ್ರಿಯಾಗಿ ಅವರು ಸದಸ್ಯರ ಮಾತುಗಳನ್ನು ಕೇಳಬೇಕಲ್ಲವೆ? ಮಾನ್ಯ ಸಚಿವರ ಬಗ್ಗೆ ನನಗೆ ಗೌರವವಿದೆ. ದಯವಿಟ್ಟು ಒಂದು ಐದು ನಿಮಿಷಗಳ ಕಾಲ ನಾನು ಹೇಳುವುದನ್ನು ಮಾನ್ಯ ಸಚಿವರು ಕೇಳಬೇಕು. ಇದು ನನಗಲ್ಲ ಮನೆ... ಬಡವರಿಗೆ 2004ನೇ ಇಸವಿಯಲ್ಲಿ ಹಂಚಿಕೆಯಾಗಿರುವುದು.

**Sri SHARANAPPA MATTUR**:- The Hon'ble Member must have control over his language.

**ಡಾ:ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಾನು ಆ ಪದವನ್ನು ಮಂತ್ರಿಗಳಿಗೆ ಅವಮಾನ ಮಾಡಬೇಕೆಂದು ಹೇಳಿರುವುದಿಲ್ಲ. ಆದರೆ ಮಂತ್ರಿಗಳು ಪದೇ ಪದೇ ನಿಂತುಕೊಂಡು ಒಬ್ಬ ಸದಸ್ಯನ ಮಾತನಾಡುವ ಹಕ್ಕನ್ನು ಮೊಟಕುಗೊಳಿಸುವ ಪ್ರಯತ್ನ ಮಾಡುವಾಗ... It is my right. The Hon'ble Minister has got the right to give answer.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, keep quite ಅನ್ನುವುದು ಅವರ ಹಕ್ಕೇ?

**ಡಾ:ಜಯಮಾಲ ರಾಮಚಂದ್ರ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, keep quite ಎಂದು ಹೇಳುವುದು ಅವರ ಹಕ್ಕಲ್ಲ. ಸೌಹಾರ್ದಯುತವಾಗಿ ಪ್ರಶ್ನೆಗೆ ಉತ್ತರವನ್ನು ಪಡೆಯಬೇಕು. ಹೀಗೆಲ್ಲಾ ಮಾತನಾಡಬಾರದು ಎಂದು ನಾನು ಸದಸ್ಯರಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೇ, ನಾಲಿಗೆ ಕುಲ ಹೇಳುತ್ತದಂತೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದೆಲ್ಲಾ ಅವರು ಕಲಿತಿರುವ ಸಂಸ್ಕಾರ. ಏನೂ ಮಾಡುವುದಕ್ಕಾಗುವುದಿಲ್ಲ.

**ಡಾ: ವೈ.ಎ.ನಾರಾಯಣ ಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ, ನನ್ನ ಮಾತನ್ನು ವಾಪಸ್ ಪಡೆದುಕೊಳ್ಳುತ್ತೇನೆ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರವನ್ನು ಕೊಡುವುದಕ್ಕೆ ಸಮರ್ಥರಿದ್ದಾರೆ. ಎಲ್ಲಾ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಯಾವ ಶಬ್ದದ ಬಗ್ಗೆ ಆಡಳಿತ ಪಕ್ಷದವರು ಆಕ್ಷೇಪ ಮಾಡಿದ್ದಾರೆಯೋ, ಆ ಶಬ್ದವನ್ನು ಮಾನ್ಯ ಸದಸ್ಯರು ವಾಪಸ್ ತೆಗೆದುಕೊಂಡಿದ್ದಾರೆ. ಈ ವಿಚಾರವನ್ನು ಇಲ್ಲಿಗೆ ಮುಕ್ತಾಯಗೊಳಿಸಬೇಕು.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಇಲ್ಲಿ ಏನನ್ನು ಉಲ್ಲೇಖ ಮಾಡಬೇಕೆಂದು ಕೊಂಡಿದ್ದೆನೆಂದರೆ ವಸತಿ ನಿಗಮದಿಂದ ಬಡವರಿಗೆ 2004ರಲ್ಲಿ ಕೊಟ್ಟ ಮನೆಗಳನ್ನು ಬದಲಾವಣೆ ಮಾಡುವುದಕ್ಕೆ ಆಶ್ರಯ ಸಮಿತಿಯ ಅಧ್ಯಕ್ಷರಿಗೆ ಹಕ್ಕಿದೆಯೇ? 2004ರಲ್ಲಿ ಆಯ್ಕೆಯಾದವರಿಗೆ 2010ರಲ್ಲಿ ಹಂಚಿಕೆಯಾಗಿದ್ದು, ದುಡ್ಡು ಕಟ್ಟಿದವರು ಎಲ್ಲರೂ ಬಡವರೇ. ಅವರೆಲ್ಲಾ ಕೂಲಿ ಕಾರ್ಮಿಕರಾಗಿದ್ದಾರೆ. 75 ಜನಕ್ಕೆ ಹೆಬ್ಬಾಳ ಭಾಗದಲ್ಲಿ ಮನೆಯನ್ನು ಕಟ್ಟುವುದಕ್ಕೆ ಯಾವುದೇ ಜಮೀನಿಲ್ಲವೆಂದು ಹೇಳಿ ದೂರದ ಗಂಟಿಗಾನಹಳ್ಳಿ, ಮೀಸಗಾನಹಳ್ಳಿ ಭಾಗದ ಜಾಗವನ್ನು ಆಯ್ಕೆ ಮಾಡಿ ಹಂಚಿಕೆ ಮಾಡಿದ್ದು ನಿಜ. ನಾನು ಮಾನ್ಯ ಸಚಿವರನ್ನು ದೂಷಿಸುತ್ತಿಲ್ಲ. ಸಮಸ್ಯೆಯೇನೆಂದರೆ 2014ರಲ್ಲಿ ದುಡ್ಡು ಕಟ್ಟಿ ಹಕ್ಕು ಪತ್ರವನ್ನು ಜಿಲ್ಲಾಧಿಕಾರಿಗಳ ಕಛೇರಿಗೆ ಕಳುಹಿಸಿದರೂ ಇದುವರೆವಿಗೂ ಹಕ್ಕು ಪತ್ರವನ್ನು ವಿತರಿಸಿರುವುದಿಲ್ಲ. ನಾನು ವಿಧಾನಸಭಾ ಸದಸ್ಯನಾಗಿದ್ದಾಗ ಮೂರು ಬಾರಿ ಸಭೆಯನ್ನು ಮಾಡಿದರೂ ಅಲ್ಲಿನ ವಾಸ್ತವ ಸ್ಥಿತಿಯ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದರು. ಹಕ್ಕುಪತ್ರದಲ್ಲಿ ಮನೆಯ ಸಂಖ್ಯೆಯನ್ನೂ ಸಹ ಕೊಡಲಾಗಿದೆ. ನಾನು ಅದನ್ನು ಓದಬಯಸುತ್ತೇನೆ....

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಆಯ್ಕೆಯಾಗಿ ಬಂದವನಾಗಿದ್ದು, ಆ ಗ್ರಾಮ ಪಂಚಾಯ್ತಿಯು ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಇದರ ನಿಜಾಂಶ ಏನೆಂದು ತಿಳಿಸಲು, ಈ ವಿಷಯದ ಬಗ್ಗೆ ನಾನೂ ಸ್ವಲ್ಪ ಮಾತನಾಡುತ್ತೇನೆ.

**ಡಾ:ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಕೊಡುತ್ತೇನೆ. ಶ್ರೀಮತಿ ರೂಪ ಎನ್ನುವವರಿಗೆ ಹಂಚಿಕೆ ಮಾಡಲಾದ ನಿವೇಶನ ಸಂಖ್ಯೆ 1. ಶ್ರೀಮತಿ ವಿಜಯಮ್ಮ ಎನ್ನುವವರಿಗೆ ಹಂಚಿಕೆ ಮಾಡಲಾದ ನಿವೇಶನ ಸಂಖ್ಯೆ 2. ಹೀಗೆ ಎಲ್ಲಾ ನಿವೇಶನ ಸಂಖ್ಯೆಗಳನ್ನು ಹಂಚಿಕೆ ಮಾಡಲಾಗಿದೆ. ಇಲಾಖೆಯಿಂದ ಹಕ್ಕುಪತ್ರವನ್ನು ಜಿಲ್ಲಾಧಿಕಾರಿಯವರ ಕಛೇರಿಗೆ ಕಳುಹಿಸಲಾಗಿದೆ. ಇಲಾಖೆಗೆ ಸಂಬಂಧಪಟ್ಟ ಮಾನ್ಯ ಸಚಿವರು ಸರ್ಕಾರವೆಂದು ಭಾವಿಸಿ ಅವರಿಂದ ನಾನು ಉತ್ತರವನ್ನು ಕೇಳುತ್ತಿದ್ದೇನೆ. ಸರ್ಕಾರದ ಉತ್ತರದಲ್ಲಿ 2017ರಲ್ಲಿ ಗಂಟಿಗಾನಹಳ್ಳಿ ಪಂಚಾಯ್ತಿಯಲ್ಲಿ resolution ಮಾಡಲಾಗಿದೆ. ದಿನಾಂಕ 11.09.2017ರಂದು ತೀರ್ಮಾನವಾಗಿದ್ದು, ಮನೆಯನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಲಾಗಿದೆ. ಏನು ತೀರ್ಮಾನವಾಗಿದೆ ಎಂಬುದನ್ನು ಹೇಳಿರುವುದಿಲ್ಲ. ಅಂದರೆ ಆ ಬಡವರ ಗತಿಯೇನು? ಆ ಕಾಲಕ್ಕೆ ಬ್ಯಾಂಕ್‌ನಿಂದ ಸಾಲ–ಸೋಲ ಮಾಡಿ ದುಡ್ಡು ಕಟ್ಟಿ ಬಿ.ಬಿ.ಎಂ.ಪಿ.ಗೆ ಕಳುಹಿಸಿ, ಅಲ್ಲಿನ A.R.O. (Assistant Revenue Officer) ಗಳು ಹೋಗಿ check ಮಾಡಿ ದುಡ್ಡು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಟ್ಟಿಸಿಕೊಂಡು ಹಕ್ಕುಪತ್ರವನ್ನು ಕೈಗೆ ಕೊಡುವ ಸಂದರ್ಭದಲ್ಲಿ ಗಂಟಿಗಾನಹಳ್ಳಿ ಪಂಚಾಯ್ತಿಯಲ್ಲಿ ಒಂದು resolution ಮಾಡಿ, ಮನೆಗಳಿಗೆ ಯಾರ್ಯಾರೋ ಹೋಗಿ ಸೇರಿಕೊಂಡಿರುತ್ತಾರೆ. ಅವರು ಆಯ್ಕೆಯಾಗಿರುವುದಿಲ್ಲ. ಅವರ ಬಳಿ ಹಕ್ಕುಪತ್ರ ಇರುವುದಿಲ್ಲ. ಕಾನೂನು ಬಾಹಿರವಾಗಿ ಏನೂ ಮಾಡದೆ ಸೇರಿಕೊಂಡಿರುವವರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವ ರೀತಿಯಲ್ಲಿ ಉತ್ತರವನ್ನು ನೀಡಿರುತ್ತಾರೆ. ಉತ್ತರವನ್ನು ಓದುತ್ತೇನೆ. ದಯವಿಟ್ಟು ಕೇಳಿ. “.....ಫಲಾನುಭವಿಗಳ ಪಟ್ಟಿಯನ್ನು ತಯಾರಿಸಲಾಗಿದ್ದು, ಮನೆಗಳನ್ನು ತೆರವುಗೊಳಿಸಲು ಸಾಧ್ಯವಿಲ್ಲವೆಂದು” ಎಂದು ತಿಳಿಸಲಾಗಿದೆ. Illegal ಆಗಿ ಹೋಗಿ ಸೇರಿಕೊಂಡಿರುವ ವ್ಯಕ್ತಿಯನ್ನು ತೆರವುಗೊಳಿಸಲು ಸಾಧ್ಯವಿಲ್ಲವೆಂದು ಸರ್ಕಾರವೇ ಹೇಳುತ್ತದೆ.

**(439) 13.12.2018 (5.50) ಕೆಜಿ.ಬಿಎನ್‌ಎಸ್**

**ಡಾ॥ವೈ.ಎ.ನಾರಾಯಣಸ್ವಾಮಿ (ಮುಂದು...):-**

ಮನೆಯ ಹಕ್ಕು ಪತ್ರ ಯಾರ ಹೆಸರಿಗೆ ರೆಡಿಯಾಗಿದೆಯೋ, ಯಾರು ಹಣ ಕೊಟ್ಟಿದ್ದಾರೋ, ಅವರಲ್ಲದೆ ಬೇರೆ ಯಾರೇ ಹೋಗಿ ಆ ಮನೆಗೆ ಸೇರಿಕೊಂಡರೂ ಸಹ it is illegal. ಅದು unauthorised occupation. ಶಾಸಕರು ಯಾರೇ ಅಧ್ಯಕ್ಷರು ಇರಬಹುದು. ಆದರೆ, ಸರ್ಕಾರಿ ವ್ಯವಸ್ಥೆಯಲ್ಲಿ ಇವೆಲ್ಲವನ್ನು follow ಮಾಡಬೇಕಲ್ಲವೇ, ಅಲ್ಲಿ ಅರ್ಹ ಫಲಾನುಭವಿಗಳಿದ್ದು, ಯಾರು ಹಣ ಕಟ್ಟಿದ್ದು ಯಾರ ಹೆಸರು select ಆಗಿದ್ದು, House Numbers ಅನ್ನು earmark ಮಾಡಿ ಹಕ್ಕು ಪತ್ರ ಸಿದ್ಧವಾಗಿದ್ದರೂ ಯಾರೋ illegal occupatns ಅಲ್ಲಿ ಹೋಗಿ ಸೇರಿಕೊಂಡಿರುತ್ತಾರೆ. ಅವರನ್ನು ಅಲ್ಲಿಂದ ಖಾಲಿ ಮಾಡಿಸುವುದಕ್ಕೆ ಹೋದರೆ ‘ಕಾನೂನು ಸುವ್ಯವಸ್ಥೆ ತೊಡಕು ಉಂಟಾಗಬಹುದು’ ಎಂದು ಉತ್ತರ ಕೊಟ್ಟಿದ್ದಾರೆ. ಈ ರೀತಿಯ ಉತ್ತರ ಕೊಟ್ಟರೆ ನಾವು ಆ ಬಡವರ ‘ಬಾಯಿಗೆ ಮಣ್ಣು ಹಾಕಿದಂತೆ’ ಅಲ್ಲವೇ, ಆ ಬಡವರಿಗೆ ಯಾರು ರಕ್ಷಣೆ ಕೊಡುತ್ತಾರೆ? ಅಲ್ಲಿ ಬೇರೆ ಬೇರೆ ಪಟ್ಟಭದ್ರ ಹಿತಾಸಕ್ತಿಗಳು, ಗಟ್ಟಿಯಾಗಿ ಇರುವವರು ಮತ್ತು ಹಣವಂತರು ಸೇರಿಕೊಂಡಿರುತ್ತಾರೆ. ಅಂದರೆ, ಇವರು ಕೂಲಿ ಮಾಡುವವರು, ಮನೆ ಕೆಲಸ ಮಾಡುವವರು, ಕಾರ್ಮಿಕರು ಕಷ್ಟಪಟ್ಟು ಈಗ ಅವರ ಮನೆಗಳಿಗೆ ಹಣವನ್ನು ಹೊಂದಿಸಿ ಮನೆಗಳನ್ನು ಕಾಯ್ದಿರಿಸಿಕೊಂಡಿದ್ದಾರೆ, ಅವರಿಗೆ ಈಗ ರಕ್ಷಣೆ ಕೊಡುವಂತಹ ಜವಾಬ್ದಾರಿ ಯಾರದ್ದು? ಇದರ ಜವಾಬ್ದಾರಿ ಸರ್ಕಾರದ್ದು ಅಲ್ಲವೇ?

ಮಾನ್ಯ ಸಭಾಪತಿಯವರೇ, ದಯವಿಟ್ಟು ತಾವು ಇದನ್ನು ಕೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಮನೆಗಳನ್ನು ತೆರವುಗೊಳಿಸಲು ಸಾಧ್ಯವಿಲ್ಲವೆಂದು ಹಾಗೂ ಸದರಿ ಮನೆಗಳಲ್ಲಿ ವಾಸವಾಗಿರುವಂತಹ ಗ್ರಾಮಸ್ಥರನ್ನು ಒತ್ತಾಯಪೂರ್ವಕವಾಗಿ ತೆರವುಗೊಳಿಸಿದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವಂತಹ ಸಂಭವ ಇರುತ್ತದೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವ ತಹಶೀಲ್ದಾರ್‌ರವರ ವರದಿಯನ್ನು ಆಧರಿಸಿ ತಾವು ಅವರಿಗೆ ಅನ್ಯಾಯ ಮಾಡುವುದು ಎಷ್ಟರ ಮಟ್ಟಿಗೆ ಸರಿ? ಸರ್ಕಾರ ಅವರಿಗಿಂತ ದೊಡ್ಡದ್ದು. ಆದ್ದರಿಂದ, ನನ್ನ ಮನವಿ ಏನೆಂದರೆ, ಶಾಸಕರು ಬರೆದುಕೊಟ್ಟು ಆಗಿದೆ. ಆಶ್ರಯ ಸಮಿತಿಯಲ್ಲಿ ಆಯ್ಕೆ ಮಾಡಿದ್ದಾರೆ. ಈಗಾಗಲೇ ಹಣವನ್ನು ಕಟ್ಟಿಸಿಕೊಂಡಿದ್ದಾರೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಅವರು ಹಣವನ್ನು ಯಾವಾಗ ಕಟ್ಟಿಸಿಕೊಂಡಿದ್ದಾರೆ?

**ಡಾ॥ವೈ.ಎ.ನಾರಾಯಣಸ್ವಾಮಿ :–** ಮಾನ್ಯ ಸಭಾಪತಿಯವರೇ, 2004 ರಲ್ಲಿ ಕಟ್ಟಿಸಿಕೊಂಡಿದ್ದಾರೆ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಆ ನಂತರ ಏನಾಯಿತು?

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಂತರ ಹಂಚಿಕೆಯಾಗಿಲ್ಲ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಅವರು ಈಗ ಏನು ಹೇಳುತ್ತಾರೆ?

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಬುದ್ಧಿವಂತರಿದ್ದಾರೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಆಗಲೇ ಮಾನ್ಯ ಸಚಿವರು ದಾರಿ ತಪ್ಪಿಸುತ್ತಾರೆಂದು ಬಹಳ ಚೆನ್ನಾಗಿ ಹೇಳಿದ್ದಾರೆ. ನಮ್ಮನ್ನು ದಯವಿಟ್ಟು ದಾರಿ ತಪ್ಪಿಸಬೇಡಿ. ಮಾನ್ಯ ಸಚಿವರು ಧ್ವನಿ ಇಲ್ಲದ, ಬಡವರ, ದೀನದಲಿತರ ಮತ್ತು ಶೋಷಿತರ ಪರವಾಗಿ ಯಾವಾಗಲೂ ಇದ್ದೇವೆಂದು ಹೇಳಿದ್ದಾರೆ. ಈಗ ಸರ್ಕಾರ ನಡೆಸುತ್ತಿರುವವರು ದಯವಿಟ್ಟು ಇವರ ರಕ್ಷಣೆಗೆ ಬರಬೇಕು. ಇವರು ಸಾಲ–ಸೋಲ ಮಾಡಿ ಜೀವನದಲ್ಲಿ ಒಂದು ಮನೆ ಸಿಗುತ್ತದೆ ಎಂದು ಆಸೆಪಟ್ಟುಕೊಂಡು ಇವತ್ತು ರಾಮನ ನಿರೀಕ್ಷೆಯಲ್ಲಿಯೇ ಇದ್ದಂತಹ 'ಶಬರಿ' ಯಂತೆ ಕಾಯುತ್ತಿದ್ದಾರೆ. ಈ ಸಂದರ್ಭದಲ್ಲಿ ಇದು ನನ್ನ ಇಲಾಖೆಗೆ ಬರುವುದಿಲ್ಲ. ಇದು ಶ್ರೀ ರಾಜೀವ್ ಗಾಂಧಿ ವಸತಿ ಯೋಜನೆಯಲ್ಲಿನ ಕೆಲಸ. ಇದು ಮುಗಿದು ಹೋಗಿದೆ ಎಂದು ಹೇಳಿ ಮಾನ್ಯ ಸಚಿವರು ಇದನ್ನು ಜಿಲ್ಲಾಧಿಕಾರಿಯವರು ಮಾಡಬೇಕೆಂದು ಹೇಳುವುದು; ಜಿಲ್ಲಾಧಿಕಾರಿಯವರು ತಹಶೀಲ್ದಾರ್‌ರವರು ಮಾಡಬೇಕೆಂದು ಹೇಳುವುದು; ತಹಶೀಲ್ದಾರ್‌ರವರು ಸ್ಥಳೀಯ ಶಾಸಕರು ಬಿಡುತ್ತಿಲ್ಲವೆಂದು ಹೇಳುವುದು ಅಥವಾ ಪಂಚಾಯಿತಿಯವರು ಇದನ್ನು refuse ಮಾಡಿದ್ದಾರೆಂದು ಹೇಳುವುದು. ಇವೆಲ್ಲವನ್ನು ಮಾಡುವುದಕ್ಕೆ ಹೋದರೆ ನಿಜವಾಗಿಯೂ ಅವರಿಗೆ ನ್ಯಾಯ ಕೊಡುವುದಕ್ಕೆ ಸಾಧ್ಯವಿದೆಯೇ? ಆದ್ದರಿಂದ, ಈ 75 ಮನೆಗಳಿಗೆ ಯಾರ ಹೆಸರಿನಲ್ಲಿ ಹಕ್ಕು ಪತ್ರ ಬಂದಿದೆ ಅವರಿಗೆ ಹಕ್ಕು ಪತ್ರ ಕೊಡಬೇಕೆಂದು ನಾನು ಕೈ ಮುಗಿದು ಕೇಳಿಕೊಳ್ಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾಧಿಕಾರಿಯವರ ಸಭೆ ಮಾಡಿದಾಗ ಹಕ್ಕು ಪತ್ರ ಕೊಡಿ ಎಂದು ಹೇಳಿದ್ದೆ. ಯಾರಾದರೂ illegal occupants ಇದ್ದರೆ, ಅವರನ್ನು ನ್ಯಾಯಾಲಯದ ಮುಖಾಂತರ vacate ಮಾಡಿಸಿ. ಅಗ ಅವರಿಗೆ ಹಕ್ಕು ಪತ್ರ ಪಡೆಯಲು right ಬರುತ್ತದೆ ಎಂದು ಹೇಳಿದೆ. ಅವರು ಪ್ರಕರಣದಲ್ಲಿ implead ಆಗಿ fight ಮಾಡುತ್ತಾರೆ ಎಂದು ಹೇಳಿದೆ. ಆದರೆ, ಅವರು ಇದುವರೆವಿಗೂ ಅವರಿಗೆ ಹಕ್ಕು ಪತ್ರ ಕೊಟ್ಟಿರುವುದಿಲ್ಲ. ಈಗ ಯಾರೋ ಬಂದು ಆ ಮನೆಗಳಲ್ಲಿ ಸೇರಿಕೊಂಡಿದ್ದಾರೆ, ಅವರನ್ನು ಖಾಲಿ ಮಾಡಿಸುವುದಕ್ಕೆ ಹೋದರೆ ದೊಡ್ಡ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ದೊಡ್ಡವರು ಆಚೆಗೆ ಬರುತ್ತಾರೆ ಆ ಮೇಲೆ ಗಲಾಟೆ ಆಗುತ್ತದೆ ಎಂದು ಹೇಳುತ್ತಾರೆ. ಈ ಪದವನ್ನು ಕೇಳಿದರೆ ಸದನದಲ್ಲಿ ಏನೋ firing ಆಗಿ ದೊಡ್ಡ ಗಲಾಟೆ ಆಗುವಂತೆ ಇದೆ. ದಯವಿಟ್ಟು ಆ ಮನೆಗಳಿಗೆ ಹಕ್ಕು ಪತ್ರ ವಿತರಣೆ ಮಾಡಬೇಕೆಂದು ಮತ್ತು ಆ illegal occupants ಅನ್ನು ಆಚೆಗೆ ಹಾಕಿ ಇವರಿಗೆ ನ್ಯಾಯ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮೊದಲನೆಯದಾಗಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಮ್ಮ ವ್ಯಾಪ್ತಿಯಲ್ಲಿ ಬರುವಂತಹ "ಯಲಹಂಕ ವಿಧಾನಸಭಾ ಕ್ಷೇತ್ರದ ಗಂಟಿಗಾನಹಳ್ಳಿಯಲ್ಲಿ ಗ್ರಾಮ ಪಂಚಾಯಿತಿಯ ವಿಷಯವಾಗಿರುವುದರಿಂದ ನಾನು ಸ್ಥಳೀಯ ಸಂಸ್ಥೆಯಿಂದ ಆ ಭಾಗವನ್ನು ಪ್ರತಿನಿಧಿಸುತ್ತಿರುವುದರಿಂದ ನಾನು ಇದರ ಬಗ್ಗೆ ಎರಡು ಮಾತುಗಳನ್ನು ಹೇಳಲೇಬೇಕಾಗಿದೆ. ಏಕೆಂದರೆ, ಮಾನ್ಯ ಸದಸ್ಯರು ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿರುವಂತಹ 75 ಜನರಿಗೆ ಮನೆಗಳನ್ನು ಕೊಡಬೇಕೆಂದು ಹೇಳಿದರು. ಆಶ್ರಯ ಸಮಿತಿಯಲ್ಲಿ ನಿರ್ಣಯವನ್ನು ಕೈಗೊಂಡು ಸರ್ಕಾರಕ್ಕೆ ಕೊಟ್ಟು ಅದು accept ಆಗಿ ಹಣವನ್ನು ಸಹ ಕಟ್ಟಿಸಿಕೊಂಡಿದ್ದಾರೆಂದು ಹೇಳಿದ್ದಾರೆ. ಆದರೆ, ಸ್ಥಳೀಯವಾಗಿ ಇರುವಂತಹ ಗಂಟಿಗಾನಹಳ್ಳಿ ಪಂಚಾಯಿತಿ ಸಭೆಯನ್ನು ಮಾಡಿ ಅಲ್ಲಿ resolution ಮಾಡಿ ಸ್ಥಳೀಯರಿಗೆ ಮನೆಗಳನ್ನು ಕೊಡಬೇಕೆಂದು ಫಲಾನುಭವಿಗಳನ್ನು ಗುರುತಿಸಿಕೊಟ್ಟಂತಹ ಒಂದು ಪಟ್ಟಿಯನ್ನು ಅಲ್ಲಿನ ಸ್ಥಳೀಯ ಶಾಸಕರು ಮತ್ತು ಇವರು ಸೇರಿಸಿಕೊಂಡು ಆ ಪಟ್ಟಿಯನ್ನು ದೂರಹಾಕಿ ಇವರೇ ಬೇಕಾದಂತಹ ಒಂದು ಪಟ್ಟಿಯನ್ನು ಸೃಷ್ಟಿ ಮಾಡಿಕೊಂಡು ಅಲ್ಲಿನ ಜನರಿಗೆ ಮನೆಗಳನ್ನು ಕೊಡಬೇಕು ಎನ್ನುವಂತಹ ಕಾರಣವನ್ನು ಮಾಡಿದ್ದಾರೆ. ನಾನು ಆ ಗ್ರಾಮಪಂಚಾಯಿತಿಯ ಸಭೆಗೆ ಹೋದಾಗ ಅಲ್ಲಿನ ಸ್ಥಳೀಯರು ಈ ಊರಿನಲ್ಲಿಯೇ ಬೇಕಾದಷ್ಟು ಜನ ಬಡವರು ಇದ್ದೇವೆ. ನಮಗೆ ಮನೆಗಳು ಬೇಕೆಂದು ಅರ್ಜಿಗಳನ್ನು ಹಾಕಿ ಹಲವಾರು ವರ್ಷಗಳಿಂದ ಕಾಯುತ್ತಿದ್ದೇವೆ. ನಮ್ಮ ತಂದೆ, ತಾತ, ಮುತ್ತಾತನ ಕಾಲದಿಂದ ಈ ಊರಿನಲ್ಲಿ ವಾಸ ಇದ್ದೇವೆ, ನಮಗೆ ಇಲ್ಲಿ ಮನೆ ಇಲ್ಲ. ಬೇರೆ ಹೊರಗಡೆಯಿಂದ ಜನರನ್ನು ಕರೆದುಕೊಂಡು ಬಂದು ಮನೆಗಳನ್ನು ಕೊಡುವುದಕ್ಕೆ ಬಂದಿದ್ದೀರಾ ಎಂದು ಕೇಳುತ್ತಾರೆ. ಅಲ್ಲಿ ಅವರು ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿ 50% ಕಟ್ಟಿದ್ದಾರೆ. ಯಾರು ಅಲ್ಲಿ ಹೋಗಿ ಅನಧಿಕೃತವಾಗಿ ಸೇರಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಅವರು ಬೇರೆ ಯಾರು ಸಹ ಅಲ್ಲ. ಅಲ್ಲಿ ಸ್ಥಳೀಯವಾಗಿ ವಾಸಮಾಡಿಕೊಂಡು ಬಂದಂತಹ ಫಲಾನುಭವಿಗಳು ಎಂದು ಪಂಚಾಯಿತಿಯವರು ಅವರನ್ನು ಗುರುತಿಸಿದ್ದರೂ ಸಹ, ಅವರ ಪಟ್ಟಿಯನ್ನು ದೂರ ಹಾಕಿ ಅಲ್ಲಿನ ಸ್ಥಳೀಯ ಶಾಸಕರು ಮತ್ತು ಹೆಬ್ಬಾಳ ಶಾಸಕರು ಕೈ ಕೈ ಮಿಲಾಸಿಕೊಂಡು ಹೊಸ ಪಟ್ಟಿಯನ್ನು ರಚನೆ ಮಾಡಿ, ಆ ಜನರಿಗೆ ಕೊಡಬೇಕೆಂದು ಇದ್ದರು. ಇದನ್ನೆಲ್ಲವನ್ನು ನೋಡಿ ಬೇಸತ್ತ ಅಲ್ಲಿನ ಸ್ಥಳೀಯ ಜನರೆ ಆ ಮನೆಗಳಿಗೆ ಹೋಗಿ ಸೇರಿಕೊಂಡಿದ್ದಾರೆ. ಆ ಮನೆಗಳಲ್ಲಿ ವಾಸ ಮಾಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ, ಆ ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ, ನೀರು ಇಲ್ಲ, ಇನ್ನೂ ಮನೆಗಳಿಗೆ plasting ಆಗಿಲ್ಲ, flooring ಆಗಿಲ್ಲ. ಆದರೂ ಸಹ ನಾಳೆ ಬೇರೆಯವರಿಗೆ ಈ ಮನೆಗಳು ವಿತರಣೆ ಆಗುತ್ತವೆ ಎಂದು ಸ್ಥಳೀಯರು ಆ ಮನೆಗಳಲ್ಲಿ ವಾಸ ಇದ್ದಾರೆ. ಅದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ದಯಮಾಡಿ ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಸ್ಥಳೀಯವಾಗಿ ಪಂಚಾಯಿತಿಯಲ್ಲಿ ಯಾರು resolution ಮಾಡಿದ್ದಾರೋ ಅಲ್ಲಿನ ಸ್ಥಳೀಯರಿಗೆ ಮನೆಗಳನ್ನು ಕೊಡಬೇಕು. ಗ್ರಾಮಸಭೆಯಲ್ಲಿ ತೀರ್ಮಾನವಾಗಿದೆಯೋ ಯಾರಿಗೆ ತೀರ್ಮಾನ ಆಗಿದೆಯೋ ಅವರಿಗೆ ಮನೆಗಳನ್ನು ಕೊಡಬೇಕು. ನಾವು ಹೊರಗಡೆಯವರಿಗೆ ಮನೆಗಳನ್ನು ಕೊಡಬಾರದು ಎಂದು ಹೇಳುವುದಿಲ್ಲ. ಅವರಿಗೆ ಕೊಡಬೇಕೆಂದರೆ, ಸರ್ಕಾರ ಒಂದು ಅನುಪಾತವನ್ನು ಮಾಡಿಕೊಡಲಿ. ಸ್ಥಳೀಯರಿಗೆ 50% ಮತ್ತು ಹೊರಗಡೆಯವರಿಗೆ 50% ಕೊಡುವಂತಹ ತೀರ್ಮಾನವನ್ನು ಮಾಡಬೇಕೆಂದು ತಮ್ಮ ಮೂಲಕ ಈ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇನೆ.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ನಾನು ಸಹ 75 ಜನ ಬಡವರಿಗೆ ಅನ್ಯಾಯವಾಗಿರುವುದನ್ನು ಒಪ್ಪುತ್ತೇನೆ. ಅದನ್ನು ಯಾರು ಮಾಡಿದ್ದು? ಶ್ರೀ ರಾಜೀವ್ ಗಾಂಧಿ ವಸತಿ ನಿಗಮದವರು ಮಾಡಿಲ್ಲ. ಯಾರು ಜವಾಬ್ದಾರಿ ಸ್ಥಾನದಲ್ಲಿ ಇದ್ದರೋ, ಯಾರು ಮನೆ ಆಯ್ಕೆ ಮಾಡುವಾಗ, ಸತ್ಯಾಂಶ ಏನಿದೆ ಕಾನೂನಿನ ಪ್ರಕಾರ, ಹೆಬ್ಬಾಳದಲ್ಲಿ ಆಗುತ್ತದೆಯೇ ಅಥವಾ ಇಲ್ಲವೋ ಎಂಬ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಒಪ್ಪಿಗೆಯನ್ನು ಪಡೆದುಕೊಳ್ಳದೇ ಇವರೇ ಕುಳಿತುಕೊಂಡು ಆ ಮುಗ್ಧ ಜೀವಿಗಳಿಗೆ ಮನೆ ಕೊಡುತ್ತೇವೆಂದು ಆಯ್ಕೆ ಸಮಿತಿಯ ಮುಖಾಂತರ ಮಾಡಿದ್ದಾರೆ. ಅದು ನಮಗೆ ಬಂದಾಗ ಅದನ್ನು ನಾವು ತಪ್ಪು ಎಂದು ಹೇಳಲಿಲ್ಲ. ಏಕೆಂದರೆ, ಶಾಸಕರು ನಗರ ಸಮಿತಿಯ ಅಧ್ಯಕ್ಷರು ಆಗಿರುತ್ತಾರೆ. ಅವರ ಪಟ್ಟಿಯನ್ನು ಸ್ವೀಕಾರ ಮಾಡಿದ್ದೇವೆ. ನಾವು ಎಲ್ಲಾ ಹಕ್ಕುಪತ್ರಗಳನ್ನು ಜಿಲ್ಲಾಧಿಕಾರಿಯವರ ಬಳಿ ಕೊಟ್ಟಿದ್ದೇವೆ. ಅಲ್ಲಿ ನಿರ್ಮಿತಿ ಕೇಂದ್ರದ ಮೂಲಕ ಮನೆಗಳನ್ನು ಮುಕ್ಕಾಲು ಭಾಗ ಕಟ್ಟಿದ್ದಾಗ, ಗ್ರಾಮಪಂಚಾಯಿತಿಯವರು ಆ ಪಟ್ಟಿಯಲ್ಲಿ ಅವರ ಹೆಸರುಗಳನ್ನು ಕೈ ಬಿಟ್ಟಿದ್ದಾರೆಂದು ಗ್ರಾಮಪಂಚಾಯಿತಿಯವರು ಹಾಗೂ ಅಲ್ಲಿನ ಸ್ಥಳೀಯರನ್ನು ಸೇರಿಸಿ ಮಾತುಕತೆಗೆ ಕುಳ್ಳಿರಿಸಿದ್ದಾರೆ. ಈಗ ಯಲಹಂಕ ಶಾಸಕರು, ಅಲ್ಲಿನ ಗ್ರಾಮ ಪಂಚಾಯಿತಿಯವರು, ಹೆಬ್ಬಾಳ ಶಾಸಕರು ಮತ್ತು ಈ ಇಬ್ಬರು ವಿಧಾನಪರಿಷತ್ತಿನ ಸದಸ್ಯರು ಕುಳಿತುಕೊಂಡು ಜಿಲ್ಲಾಧಿಕಾರಿಯವರ ಬಳಿ ಇದನ್ನು ಬಗೆಹರಿಸಿಕೊಳ್ಳಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ನಮ್ಮ ಉದ್ದೇಶವೂ ಸಹ ಬಡವರಿಗೆ ನ್ಯಾಯವನ್ನೊದಗಿಸಬೇಕೆಂದಿದೆ. ಏಕೆ ಬಡವರಿಗೆ ಅನ್ಯಾಯ ಮಾಡಿದ್ದೀರಿ? ಅವರ ತಪ್ಪು ನಿರ್ಣಯದಿಂದಾಗಿ ಇವತ್ತು ಇಷ್ಟೊಂದು ಸಮಸ್ಯೆಗಳು ಬಡವರಿಗೆ ಉಂಟಾಗಿದೆ.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು, ಶಾಸಕರು ಮತ್ತು ಇವರು ಕುಳಿತುಕೊಂಡು ಬಗೆಹರಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ದಯವಿಟ್ಟು ನಮ್ಮನ್ನು ಸಹ ಅದರಲ್ಲಿ ಸೇರಿಸಬೇಕು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ನಾನು ಇಬ್ಬರು ಸದಸ್ಯರು ಎಂದು ಹೇಳಿದ್ದೇನೆ. ಇದು ಇಲ್ಲಿ ಬರುವಂತಹ ವಿಚಾರವೇ ಅಲ್ಲ. ಅಲ್ಲಿಯೇ ಜಿಲ್ಲಾಧಿಕಾರಿಗಳ ಮುಂದೆ ಇಬ್ಬರು ವಿಧಾನ ಪರಿಷತ್ತಿನ ಸದಸ್ಯರು ಮತ್ತು ಇಬ್ಬರು ಶಾಸಕರು ಆ ಗ್ರಾಮ ಪಂಚಾಯಿತಿಯವರೊಂದಿಗೆ ಕುಳಿತುಕೊಂಡು ಇದನ್ನು ಬಗೆಹರಿಸಿಕೊಳ್ಳಿ. ಇನ್ನೂ ಹೊಸ ಮನೆಗಳನ್ನು ಕಟ್ಟಬೇಕಾದರೆ, ಆ ಗ್ರಾಮ ಪಂಚಾತಿಯಿಂದ ಒಂದು resolution ಮುಖಾಂತರ ಮಾಡಿ. ಅಲ್ಲಿ 38

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಎಕರೆ ಜಾಗದ ಪೈಕಿ ಈಗ ಕೇವಲ 4 ಎಕರೆ ಜಮೀನಿನಲ್ಲಿ ಮಾತ್ರ ಕಟ್ಟಲಾಗಿದೆ. ಬೇರೆ ಜಾಗದಲ್ಲಿ ಬೇಕಾದರೆ ಆ ಗ್ರಾಮಪಂಚಾಯಿತಿಯಲ್ಲಿ ಒಂದು resolution ಮಾಡಿಕೊಂಡು ಅಲ್ಲಿ ಅವರಿಗೆ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಗಳನ್ನು ಮಾಡಿಸಿ ಕೊಟ್ಟು, ಕಳಿಸಿ ಕೊಟ್ಟರೆ ನಾವು ತಕ್ಷಣ ಮಂಜೂರು ಮಾಡುತ್ತೇವೆ. ಈಗ ಬೇರೆ ಹೊಸ ಮನೆಗಳನ್ನು ಕಟ್ಟಬಾರದೆಂದು ಇದೆಯೇ? ನನಗೆ ಈಗ ಎಲ್ಲಾ ಅರ್ಥವಾಗಿದೆ. ಅವರಿಗೆ ಚರ್ಚೆ ಬೇಕೇ ಅಥವಾ ಪರಿಹಾರ ಬೇಕೇ?

**ಡಾ||ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಮಗೆ ಪರಿಹಾರ ಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂತಹ ಚರ್ಚೆ. ಏಕೆಂದರೆ, ಗ್ರಾಮಸಭೆಯಲ್ಲಿ ಆಯ್ಕೆ ಆಗುವುದು, ಪಂಚಾಯಿತಿಯ ಅನುಮೋದನೆ ತೆಗೆದುಕೊಳ್ಳುವುದು, ಶಾಸಕರು ಅವುಗಳನ್ನು ಆಧರಿಸಿ ಪಟ್ಟಿಯನ್ನು ಮಾಡುವುದು, ಇದು ಪಂಚಾಯತ್ ರಾಜ್ ಕಾಯಿದೆಯಲ್ಲಿರುವಂತಹ ನಿಯಮ. ಈಗ ಶಾಸಕರು ಅವರ ವಿವೇಚನೆಯ ಮೇರೆಗೆ ಪಟ್ಟಿ ಮಾಡಿದ್ದಾರೆ. ಇವರು ಅಕ್ರಮವಾಗಿ ಸೇರಿಕೊಂಡವರ ಬಗ್ಗೆ ಹೇಳಿದ್ದಾರೆ. ಅವರು ಸ್ಥಳೀಯರು ಅಲ್ಲವೆಂದು ಹೇಳಿದ್ದಾರೆ. ಇದಕ್ಕೆ ಒಂದು ಪರಿಹಾರ ಮಾಡಬಹುದು. ಈ ವಿಷಯ ಸದನದಲ್ಲಿ ಪ್ರಸ್ತಾಪ ಆಗಿದ್ದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಸೂಚನೆ ಕೊಟ್ಟು, ಈ ನಾಲ್ಕು ಜನ ಮೇಲ್ಮನೆ ಶಾಸಕರನ್ನು ಮತ್ತು ಕೆಳಮನೆ ಶಾಸಕರನ್ನು ಕರೆದು ಒಂದು ಸಭೆ ಮಾಡಿ ಅಂತಿಮ ತೀರ್ಮಾನವನ್ನು ಜಿಲ್ಲಾಧಿಕಾರಿಯವರ ಮಟ್ಟದಲ್ಲಿ ಮಾಡುವಂತೆ ಒಂದು ಸೂಚನೆಯನ್ನು ಕೊಟ್ಟರೆ ಈ ಸಮಸ್ಯೆ ಪರಿಹಾರ ಆಗುತ್ತದೆ.

(440)13-12-2018(6-00)ಎಂವಿ-ಕೆಎಸ್

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು...):-**

ಇದು ಸದನದಲ್ಲಿ ಪ್ರಸ್ತಾಪವಾಗಿರುವುದರಿಂದ, ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಯವರಿಗೆ ಸೂಚನೆಯನ್ನು ಕೊಟ್ಟು, ನಾಲ್ಕು ಜನ ಮೇಲ್ಮನೆ ಮತ್ತು ಕೆಳಮನೆಯ ಶಾಸಕರನ್ನು ಕರೆದು ಒಂದು ಸಭೆ ಮಾಡಿ, ಅಂತಿಮ ತೀರ್ಮಾನವನ್ನು ಜಿಲ್ಲಾಧಿಕಾರಿಯವರ ಮಟ್ಟದಲ್ಲಿ ಮಾಡುವುದಕ್ಕೆ ಒಂದು ಸೂಚನೆಯನ್ನು ಕೊಟ್ಟರೆ, ಈ ಸಮಸ್ಯೆ ಪರಿಹಾರವಾಗುತ್ತದೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಆಗುತ್ತದೆ. ಏಕೆಂದರೆ, ಇಷ್ಟು ಮಾಡುವುದನ್ನು ನಾನೇ ಮಾಡಬೇಕೆಂದು ಇಲ್ಲ, ಅದನ್ನು ಅವರು ಸಹ ಮಾಡಬಹುದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಇದು ಸದನದಲ್ಲಿ ಪ್ರಸ್ತಾಪವಾಗಿರುವುದರಿಂದ ಮಾನ್ಯ ಸಚಿವರ ಕಡೆಯಿಂದ ಒಂದು ಸೂಚನೆ ಹೋಗಲಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು):–** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ನಾನು ಸೂಚನೆಯನ್ನು ಕಳುಹಿಸುತ್ತೇನೆ ಮತ್ತು ತಮ್ಮ ಎಲ್ಲಾ ಹಕ್ಕು ಪತ್ರಗಳನ್ನು ಜಿಲ್ಲಾಧಿಕಾರಿಯವರಿಗೆ ಕಳುಹಿಸಿದ್ದೇನೆ. ನನ್ನದು ಒಂದು ಕಳಕಳಿಯ ವಿನಂತಿ, ನಾಲ್ಕನೆ ಬಾರಿ ಈ ಪ್ರಶ್ನೆ ಕೇಳುತ್ತಿರುವುದು, ದಯವಿಟ್ಟು ಇದನ್ನು ಇಲ್ಲಿಗೆ ಮುಗಿಸಿ, ಐದನೇ ಬಾರಿ ಮತ್ತೆ ಕೇಳಬೇಡಿ. ನೀವು ಬೇರೆ ಹೊಸ ಪ್ರಶ್ನೆಯನ್ನು ತೆಗೆದುಕೊಳ್ಳಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೆ ಮನೆ ಸಿಗುವವರೆಗೂ ಮಾನ್ಯ ಸಚಿವರನ್ನು ಬಿಡುವುದಿಲ್ಲ.

**ಸಭಾಪತಿಯವರು:–** ಮಾನ್ಯ ನಾರಾಯಣಸ್ವಾಮಿಯವರೆ, ಇದು ಚರ್ಚೆಯೇ? ಆಯಿತು, ಇದು ಮುಗಿಯಿತು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ, ಸದಸ್ಯರಾದ ಮಾನ್ಯ ಎಂ.ನಾರಾಯಣಸ್ವಾಮಿಯವರಿಗೆ ಒಂದು ವಿಚಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಪ್ಪೊತ್ತು ಆಶ್ರಯ ಸಮಿತಿಯಲ್ಲಿ 818 ಫಲಾನುಭವಿಗಳನ್ನು ಆಯ್ಕೆ ಮಾಡಿದ್ದು. ಹೆಬ್ಬಾಳ ಭಾಗದಲ್ಲಿ ಯಾವುದೇ ಸರ್ಕಾರಿ ಜಮೀನು ಇಲ್ಲದೇ ಇರುವುದರಿಂದ, ಹೆಬ್ಬಾಳದಲ್ಲಿ ವಾಸ ಮಾಡುತ್ತಿರುವ 75 ಜನರಿಗೆ ಮಾತ್ರ ಕೊಡಬೇಕೆಂದು 2010ರಲ್ಲಿ ನಿರ್ಣಯವಾಗಿದೆ. 818ರ ಪೈಕಿ ಮಿಕ್ಕಿದವರೆಲ್ಲರೂ ಅವರ ಕಡೆಯವರು. ಅಲ್ಲಿ ಇನ್ನೂ ಜಾಸ್ತಿ ಮನೆಗಳನ್ನು ಕಟ್ಟಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಎಷ್ಟು ಮನೆಗಳಿವೆ?

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅಲ್ಲಿರುವುದು 126 ಮನೆಗಳು ಮಾತ್ರ 880 ಮನೆಗಳು ಅಲ್ಲ. ಆ 126ರಲ್ಲಿ 75 ಅನ್ನು ತೆಗೆದುಕೊಳ್ಳಬೇಕೆಂದು ಇರುವುದು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನಿಜವಾಗಿಯೂ ಆಯಾಯ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮಸಭೆ ನಡೆದು, ಅಲ್ಲಿ ಕೊಡಬೇಕು ಎಂಬುದು ಸತ್ಯ. ಅದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸಹ ಒಪ್ಪಿಕೊಂಡಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ, consideration ಇರಲಿ, ಬೆಂಗಳೂರು ಸಿಟಿಯಲ್ಲಿ ಜಾಗವಿಲ್ಲವೆಂದು ಬೇಕಾದರೆ ಕಡಿಮೆ ಕೊಡಲಿ. ಅದನ್ನು ಮಾನ್ಯ ನಾರಾಯಣಸ್ವಾಮಿಯವರು ಒಪ್ಪುತ್ತಿದ್ದಾರೆ. ಆದರೆ, ಸ್ಥಳೀಯವಾಗಿ ವಾಸ ಮಾಡುವಂತಹ ಜನರನ್ನು ನೀವು ಹೊರಗಡೆಯಿಂದ ಬಂದು ಸೇರಿಕೊಂಡು ಬಿಟ್ಟಿದ್ದಾರೆ ಎನ್ನುತ್ತಾರೆ. ಆದರೆ, ಅವರು ಗ್ರಾಮಸಭೆಯಲ್ಲಿ ಆಯ್ಕೆಯಾಗಿ ಪಟ್ಟಿಯಲ್ಲಿ ಇದ್ದಾರೆ. ಹಾಗಾದರೆ ಅವರಿಗೆ ನ್ಯಾಯ ಕೊಡುವವರು ಯಾರು?

**ಸಭಾಪತಿಯವರು:–** ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಿ. ಈಗ ಮುಂದಿನ ವಿಷಯ.

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿರುವುದು 126 ಮನೆಗಳು ಮಾತ್ರ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, basically ಆ ಪ್ರಶ್ನೆಯೇ ಸರಿಯಿಲ್ಲ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಯವರ ಜೊತೆ ಒಂಭತ್ತನೆ ತಿಂಗಳಿನಲ್ಲಿ ಸಭೆ ಮಾಡಿ, ಅಲ್ಲಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಆಗದೆ. ಅದನ್ನು ನಿಮಗೆ ಹೊತ್ತು ಹಾಕಿದ್ದಾರೆ. ನಾನು ಇವತ್ತು ಮನವಿ ಮಾಡುತ್ತಿದ್ದೇನೆ. ಮಾನ್ಯ ಹೆಚ್.ಎಂ.ರೇವಣ್ಣನವರೆ, ಈ 75 ಮನೆಗಳನ್ನು ಕಟ್ಟಬೇಕಾದರೆ, ಮೊದಲು ಹಣವನ್ನು ಕಟ್ಟಿಸಿಕೊಂಡು, ಯಾರು ಫಲಾನುಭವಿಗಳು ಹಣವನ್ನು ಕಟ್ಟಿದರು ಅವರಿಗೆ ಕೊಟ್ಟಿರುವುದು. 880ರಲ್ಲಿ ಯಾರೂ ಸಹ ಹಣವನ್ನು ಕಟ್ಟಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅಲ್ಲಿ ಇರುವುದೇ 125 ಮನೆಗಳು. ನಾನು ಜಿಲ್ಲಾಧ್ಯಕ್ಷನಾಗಿ ನೋಡಿಕೊಂಡು ಬಂದಿದ್ದೇನೆ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹೌದು 125 ಜನ ಹಣವನ್ನು ಕಟ್ಟಿದ್ದರು, ಅದಕ್ಕೋಸ್ಕರ ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ 880 ಜನರು ಹಣವನ್ನು ಕಟ್ಟಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಲೆಕ್ಕದಲ್ಲಿ ಎಷ್ಟಾಗಿದೆ? ಈಗ ಹೆಬ್ಬಾಳದವರಿಗೆ 75 ಮನೆಗಳು, ಅಲ್ಲಿಗೆ 50 ಮನೆಗಳು.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ಹಣವನ್ನು ಕಟ್ಟಿದ್ದರೆ, ಮನೆಗಳನ್ನು ಕಟ್ಟುತ್ತಿದ್ದರು. ಆದರೆ, ಅವರು ಹಣವನ್ನು ಕಟ್ಟಿಲ್ಲ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ನೀವು ಹತ್ತು ಬಾರಿ ಪ್ರಶ್ನೆಯನ್ನು ಹಾಕಿದರು ಇಷ್ಟೆ.

**(ಗೊಂದಲ)**

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಸಮಸ್ಯೆ ಪರಿಹಾರ ಆಗಬೇಕೆ ಬೇಡವೇ?

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಅಲ್ಲಿ ಇರುವವರನ್ನು ಖಾಲಿ ಮಾಡಿಸಿ, ನಾವು ಮನೆ ಕಟ್ಟಿಸುತ್ತೇವೆ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಇವರು ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮತ್ತೊಂದು ಸಮಸ್ಯೆಯನ್ನು ಹುಟ್ಟುಹಾಕುವಂತಹ ಸಂದರ್ಭ ಆಗುತ್ತಿದೆ. ಇದರ ವಿಚಾರ ಏನಿದೆ ಎಂದರೆ, ಅಲ್ಲಿ ಇಬ್ಬರು ಶಾಸಕರು ಮತ್ತು ವಿಧಾನ ಪರಿಷತ್ತಿನ ಸದಸ್ಯರು ಮತ್ತು ಜಿಲ್ಲಾಧಿಕಾರಿಯವರನ್ನು ಗ್ರಾಮಸಭೆಯಲ್ಲಿ ಕುಳ್ಳಿರಿಸಿಕೊಂಡು ಚರ್ಚಿಸಿದರೆ ಆ ಸಮಸ್ಯೆ ಬಗೆಹರಿಯುತ್ತದೆ. ಇದು ದೊಡ್ಡ ವಿಚಾರವೇ ಅಲ್ಲ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಏನಾದರೂ ಅಲ್ಲಿನ ಮನೆಗಳನ್ನು ಖಾಲಿ ಮಾಡಿಸುವುದಕ್ಕೆ ಹೋದರೆ ಗಲಾಟೆ ಆಗುವುದು ಸತ್ಯ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲದೇ ಇರುವುದರಿಂದ ಇದನ್ನು ಮುಂದಕ್ಕೆ ತೆಗೆದುಕೊಳ್ಳುತ್ತೇನೆ. ಈಗ ಸದಸ್ಯರಾದ ಮಾನ್ಯ ಐವನ್ ಡಿ'ಸೋಜಾರವರ ವಿಷಯ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಉತ್ತರ ಯಾವಾಗ ಬರುತ್ತದೆ ಮತ್ತು ಅದನ್ನು ಯಾವಾಗ ತೆಗೆದುಕೊಳ್ಳುತ್ತಾರೆಂದು ಹೇಳಿ.

**ಸಭಾಪತಿಯವರು:–** ಮಾನ್ಯ ಸಚಿವರು ನಾಳೆ ಬರಬಹುದು, ಅದನ್ನು ಆಗ ನೋಡೋಣ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಮಂಡೂರು ತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟಂತೆ ಉತ್ತರ ರೆಡಿ ಇದೆ ಅದನ್ನು ಮಂಡಿಸುತ್ತೇನೆ.

**ಸಭಾಪತಿಯವರು:–** ಆಯಿತು, ಮಾನ್ಯ ಸಚಿವರು ಉತ್ತರವನ್ನು ಒದಗಿಸಿ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸಭಾಪತಿಯವರೇ, ಮಂಡೂರು ತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟಂತೆ ಉತ್ತರವನ್ನು ಮಂಡಿಸಲಾಗಿದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ನಾನು ಇನ್ನೂ ಪ್ರಶ್ನೆಯನ್ನೇ ಕೇಳಿಲ್ಲ, ಆದರೂ ಪರವಾಗಿಲ್ಲ.

**ಶ್ರೀ ಯು.ಟಿ.ಖಾದರ್:–** ಮಾನ್ಯ ಸದಸ್ಯರೆ, ಇದು ಪ್ರಶ್ನೆಯಲ್ಲ. ಇದು ಗಮನ ಸೆಳೆಯುವ ಸೂಚನೆ.

**ಶ್ರೀ ಟಿ.ಎ.ಶರವಣ:–** ಹೌದು ಇದು ತಮ್ಮ ಗಮನ ಸೆಳೆಯುವುದು ಅಷ್ಟೆ.

**ಆ) ವಿಷಯ:–** ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವ್ಯಾಪ್ತಿಯಲ್ಲಿನ
ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಯೋಜನೆಯು
ಸಮರ್ಪಕವಾಗಿ ಫಲಕಾರಿಯಾಗದಿರುವ ಬಗ್ಗೆ.

---

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವ್ಯಾಪ್ತಿಯಲ್ಲಿನ ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಯೋಜನೆಯು ಸಮರ್ಪಕವಾಗಿ ಫಲಕಾರಿಯಾಗದಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.

**ಶ್ರೀ ಯು.ಟಿ.ಖಾದರ್ (ನಗರಾಭಿವೃದ್ಧಿ ಹಾಗೂ ವಸತಿ ಸಚಿವರು) (ಉಪ ಮುಖ್ಯಮಂತ್ರಿಯವರ ಪರವಾಗಿ):–** ಮಾನ್ಯ ಸಭಾಪತಿಯವರೇ,

**(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)**

**ಶ್ರೀ ಯು.ಟಿ.ಖಾದರ್:–** ಬೆಂಗಳೂರು ಉಸ್ತುವಾರಿ ಸಚಿವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು ಮಂಡೂರು ತ್ಯಾಜ್ಯ ವಿಲೇವಾರಿಗೆ ಸಂಬಂಧಪಟ್ಟಂತೆ ಇವತ್ತು ಬೆಳಿಗ್ಗೆ ಕಾನೂನು ಸಚಿವರನ್ನು ಮತ್ತು ಜಲಮಂಡಳಿ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲಾಖೆಯ ಎಲ್ಲಾ ಅಧಿಕಾರಿಗಳ ಸಭೆ ಕರೆದು ಸಂಪೂರ್ಣವಾಗಿ ಚರ್ಚೆ ಮಾಡಿದ್ದಾರೆ. ಆದಷ್ಟು ಶೀಘ್ರವಾಗಿ ಇದಕ್ಕೆ ಸೂಕ್ತವಾದ ಪರಿಹಾರವನ್ನು ಮಾಡುವುದಕ್ಕೆ ಸೂಚನೆಯನ್ನು ನೀಡಿದ್ದಾರೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಬೆಂಗಳೂರು ನಗರದಲ್ಲಿ ಕಸದ ವಿಲೇವಾರಿಯ ಬಗ್ಗೆ ಮತ್ತು ಅಲ್ಲಿನ ಜನ ಯಾವ ಯಾವ ತರಹ ಕಷ್ಟಗಳನ್ನು ಅನುಭವಿಸುತ್ತಿದ್ದಾರೆಂದು ತಮಗೆ ಬಹಳ ಚೆನ್ನಾಗಿ ಗೊತ್ತಿದೆ. ಬಹುಶಃ ಈ *'Waste to Energy' (WTE)* ಎಂದು ಹೇಳಿ. SGRRL (Srinivas Gayathri Resources Recovery Ltd.) ಕಂಪನಿಗೆ 2010ರಲ್ಲಿ termination order ಅನ್ನು ಕೊಟ್ಟಿದ್ದಾರೆ. ಪ್ರತಿದಿನ 600 ಟನ್ ತ್ಯಾಜ್ಯವನ್ನು ಕಳುಹಿಸಿಕೊಡುವುದಾಗಿ ಬಿಬಿಎಂಪಿ ಅಧಿಕಾರಿಗಳು ಒಂದು ಒಪ್ಪಂದವನ್ನು ಮಾಡುತ್ತಾರೆ. ಆದರೆ, ಆ ಕಂಪನಿಯವರಿಗೆ ಸುಮಾರು ಮೂರು ಸಾವಿರದವರೆಗೆ municipal waste ಅನ್ನು ಕಳುಹಿಸಿಕೊಟ್ಟು, ಅವರು ಅಲ್ಲಿ ಯಾವುದೇ ತರಹದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಕಂಪನಿಯವರು ಸತತವಾಗಿ ಎಂಟು ತಿಂಗಳು ಕೆಲಸ ಮಾಡಿದ್ದಾರೆ. ಅವರಿಗೆ ಬಿ.ಬಿ.ಎಂ.ಪಿ. ಅಧಿಕಾರಿಗಳು ಇಲ್ಲ ಸಲ್ಲದ ಕಿರುಕುಳವನ್ನು ಕೊಟ್ಟಿದ್ದಾರೆ. ನಮ್ಮ ಮಾನ್ಯ ಅಬ್ದುಲ್ ಕಲಾಂರವರು ಈ ಕಾರ್ಯಕ್ರಮಕ್ಕೆ ಶಹಬ್ಬಾಷ್‌ಗಿರಿಯನ್ನು ಕೊಟ್ಟಿದ್ದರು. ಈ ಘಟಕವನ್ನು ತೆಗೆದುಕೊಂಡಿರುವಂತಹವರು ಒಬ್ಬ ಮಿಲ್ಟ್ರಿಮ್ಯಾನ್. ಅವರು ಬೆಂಗಳೂರು ಅಭಿವೃದ್ಧಿ ಆಗಬೇಕೆಂದು ಮತ್ತು ಒಳ್ಳೆಯ ಕೆಲಸ ಮಾಡಬೇಕೆಂಬ ಕಳಕಳಿಯನ್ನು ಇಟ್ಟುಕೊಂಡು, ಈ ಕಾರ್ಯಕ್ರಮಕ್ಕೆ ಅವರದೇ ಆದಂತಹ ನೂರು ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿ, ಆ ಘಟಕವನ್ನು ಪ್ರಾರಂಭ ಮಾಡಿ, machineries ಅಳವಡಿಸಿಕೊಂಡ ನಂತರ ಅಲ್ಲಿ ಎಂಟರಿಂದ ಒಂಬತ್ತು ತಿಂಗಳು ಕೆಲಸ ನಡೆದಿದೆ. ಅದು ಆದಮೇಲೆ ಬಿ.ಬಿ.ಎಂ.ಪಿ.ಯವರು ಏನು ಜಾಸ್ತಿ ಹೊರೆಯನ್ನು ಕೊಟ್ಟರು. ಬಿ.ಬಿ.ಎಂ.ಪಿ.ಯವರು ಮೂನ್ನೂರು ಟನ್‌ಗೆ ಮೂರು ಸಾವಿರ ಟನ್ ಅನ್ನು ಕಳುಹಿಸಿಕೊಟ್ಟಿದ್ದರಿಂದ ಅದು ಅವರಿಗೆ overload ಆಗಿ, ಆ ಒಂದು ಪ್ರಾಜೆಕ್ಟ್ ಅನ್ನು ಅವರ ಕೈಯಲ್ಲಿ ಮಾಡುವುದಕ್ಕೆ ಆಗದೆ, ಅಲ್ಲಿನ ಸ್ಥಳೀಯ ಜನರೆಲ್ಲಾ ಬೀದಿಗೆ ಬಂದು ಹೋರಾಟ ಮಾಡಿದ ನಂತರ ಅದು ಕೊನೆಗೆ ಸ್ಥಗಿತಗೊಂಡಿದೆ. ಅವರು ಕೆಲಸ ಮಾಡಿರುವುದಕ್ಕೆ ಬಿ.ಬಿ.ಎಂ.ಪಿ.ಯವರು ಇಲ್ಲಿಯವರೆಗೂ ಸಹ ಹಣವನ್ನು ಬಿಡುಗಡೆ ಮಾಡಿಲ್ಲ. ಎರಡನೆಯದಾಗಿ ಈ ಪ್ರಾಜೆಕ್ಟ್ ಅನ್ನು take-up ಮಾಡಬಾರದೆಂದು ನೋಟಿಸ್ ಕೊಟ್ಟು, ಅವರಿಗೆ ಕಿರುಕುಳ ನೀಡಿ, ಬಹಳಷ್ಟು ತೊಂದರೆ ಕೊಟ್ಟಿದ್ದಾರೆ. ಭರವಸೆ ಸಮಿತಿಯ ಅಧ್ಯಕ್ಷರಾಗಿದ್ದ ಮಾನ್ಯ ಬಸವರಾಜ ಹೊರಟ್ಟಿಯವರ ನೇತೃತ್ವದಲ್ಲಿ, ಮಾನ್ಯ ಶರಣಪ್ಪ ಮಟ್ಟೂರರವರು, ಮಾನ್ಯ ಕೆ.ಸಿ.ಕೊಂಡಯ್ಯ ಸಾಹೇಬರು, ಮಾನ್ಯ ರಘುನಾಥರಾವ್ ಮಲ್ಕಾಪೂರೆಯವರು, ನಾವೆಲ್ಲರೂ ಕೂಡ ಅಲ್ಲಿಗೆ ಹೋಗಿ ತಪಾಸಣೆ ಮಾಡಿ, ಅಲ್ಲಿ ಏನು ತೊಂದರೆಯಾಗಿದೆ ಎಂದು ಪರಿಶೀಲಿಸಿ ಅದರ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದೇವೆ. ಆದರೆ, ಇಲ್ಲಿಯವರೆಗೂ ಯಾವುದೇ ಕ್ರಮ ಜರುಗಿಸಿಲ್ಲ. ಬಿ.ಬಿ.ಎಂ.ಪಿ.ಯಲ್ಲಿ ಒಂದು ಗಾದೆ ಇದೆ; ಬಿ.ಬಿ.ಎಂ.ಪಿ.ಗೆ ಬರುವವರೆಲ್ಲರೂ ಸಹ ದುಡ್ಡು ಮಾಡಿಕೊಂಡು ಹೋಗುತ್ತಾರೆ ಎನ್ನುವಂತಹ ಗಾದೆಯನ್ನು ನಾನು ಕೇಳಿದ್ದೇನೆ, ಸಂಪಾದನೆ ಮಾಡಿಕೊಂಡು ಹೋಗುತ್ತಾರೆ ಮತ್ತು ಕೆಲಸ ಮಾಡುತ್ತಾರೆಂದು ಕೇಳಿದ್ದೇನೆ. ಆದರೆ, ಸ್ವತಃ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೂರು ಕೋಟಿ ರೂಪಾಯಿ ಹಣವನ್ನು ವ್ಯಯ ಮಾಡಿ, ಅಲ್ಲಿಗೆ ಸರ್ಕಾರ ಆರು ಎಕರೆ ಜಮೀನನ್ನು ಕೊಟ್ಟಿದೆ. ಅವರು ಅದನ್ನು ಅಡಮಾನವಿಟ್ಟು ಸಾಲ ತೆಗೆದುಕೊಂಡಿದ್ದಾರೆ. ಇದರಿಂದ ಯಾವುದೇ ತರಹದ ಉಪಯೋಗವಾಗಿಲ್ಲ. ಈ ಒಂದು ಪ್ರಾಜೆಕ್ಟ್‌ಗೆ ಸರಿಯಾದ ರೀತಿಯಲ್ಲಿ ನ್ಯಾಯ ದೊರಕಿಸಿಕೊಡಬೇಕು. ಅವರು ಇಲ್ಲಿಂದ ಏನು wastage ಅನ್ನು ತೆಗೆದುಕೊಂಡು ಹೋಗಬೇಕೆಂದಿಲ್ಲ. ಅಲ್ಲಿ ನೂರು ಟನ್ ಅಷ್ಟು wastage ಇದೆ. ಅದರಿಂದ ನಾಲ್ಕು ವರ್ಷ power generate ಮಾಡುವಂತಹ ಅವಕಾಶಗಳಿದೆ, ಎಲ್ಲವೂ ಸಹ ರೆಡಿ ಇದೆ. ಆದರೆ, ಇದರ ಬಗ್ಗೆ ಸರ್ಕಾರಕ್ಕೆ ಏಕೆ ಕಳಕಳಿ ಇಲ್ಲ? ದಯಮಾಡಿ ಇದನ್ನು take-up ಮಾಡಬೇಕು. ಒಪ್ಪಂದದ ಪ್ರಕಾರ ಅವರಿಗೆ ಏನು legal ಆಗಿ ಬಿ.ಬಿ.ಎಂ.ಪಿ.ಯಿಂದ ಹಣ ಹೋಗಬೇಕಾಗಿದೆ ಅದನ್ನು ಕೊಡಿಸುವಂತಹ ಕೆಲಸವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡುವುದು.

**ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಸ್ವಲ್ಪ ಬೆಳಕು ಚೆಲ್ಲುತ್ತೇನೆ. ಈ ಒಂದು ಪ್ರಾಜೆಕ್ಟ್ ಇದ್ದಾಗ ನಾನು ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಆಗಿದ್ದೆ. ಇದರ ಬಗ್ಗೆ ಈ ಸಭೆಗೆ ಸ್ವಲ್ಪ ಮಟ್ಟಿಗೆ ನಿಜಾಂಶ ಹೇಳಬೇಕೆಂದು ಅನಿಸಿದೆ. ಈ ಯೋಜನೆ 2001–02ರಲ್ಲಿ ಅಂದಿನ ಸರ್ಕಾರ ಪಾಲಿಕೆಗೆ ಸುಮಾರು ನೂರಾರು ಎಕರೆಗಳನ್ನು ಈ ಒಂದು ಕಸ ವಿಲೇವಾರಿ ಮಾಡುವಂಥದ್ದಕ್ಕೆ ಅಥವಾ 'Processing Units' establish ಮಾಡುವುದಕ್ಕೆ ಕೊಟ್ಟಂತಹ ಜಾಗಗಳು ಇವು. ಅವುಗಳಲ್ಲಿ ಮಂಡೂರು, ಮಾವಳ್ಳಿಪುರ, ಬಿಗಿಪುರ ಮತ್ತು ಲಕ್ಷ್ಮಿಪುರ ಎಂದು ಇನ್ನು ಹಲವಾರು ಕಡೆ ಕೊಟ್ಟಿದೆ. ಈ ಮಂಡೂರಿನಲ್ಲಿ ಕೊಟ್ಟಿರುವುದು ಒಟ್ಟು ನೂರು ಎಕರೆ ಬರುತ್ತದೆ. ಈ ನೂರು ಎಕರೆಗೆ buffer zone ಎಂದು ಮಾಡಿರುತ್ತಾರೆ. ಏನೆಂದರೆ, ಒಂದು ನೋಟಿಫಿಕೇಶನ್ ಮಾಡುವಾಗಲೆ, ಒಂದು ಸಾವಿರ ಮೀಟರ್ ಅಂದರೆ ಒಂದು ಕಿಲೋಮೀಟರ್ buffer zone ಎಂದು ಮಾಡಿಕೊಟ್ಟಿದ್ದರು. ಈಗ ಮಾನ್ಯ ಶರವಣರವರು ಹೇಳಿದ ರೀತಿಯಲ್ಲಿ ಈ ಒಂದು ಸಂಸ್ಥೆಗೆ 'Waste to Energy' plant ಅನ್ನು ಹಾಕಬೇಕೆಂದು, ನಾನು ಮೇಯರ್ ಆಗಿದ್ದಾಗ ಅವರಿಗೆ ವರ್ಕ್ ಆರ್ಡರ್ ಕೊಟ್ಟಿದ್ದು.

(441)13–12–2018(06–10)ಎಲ್‌ಎಲ್–ಕೆಎಸ್

**ಶ್ರೀ ಪಿ.ಆರ್. ರಮೇಶ್(ಮುಂದುವರೆದಿದೆ...):–**

ಇದು 2004–05 ರಲ್ಲಿ ಕೊಟ್ಟಂತಹ ವರ್ಕ್ ಆರ್ಡರ್. ತದನಂತರ ಏನಾಯಿತೆಂದರೆ, ಅವರು machineries ತಂದು ಹಾಕಿದರು, ಅದು ಬಹಳ ಚೆನ್ನಾಗಿ ನಡೆಯಿತು. ಅಲ್ಲಿರತಕ್ಕಂತಹ ಜನ ಸಹ ಅವರಿಗೆ ಕೋ–ಆಪರೇಟ್ ಮಾಡಿದರು. ಆದರೆ, ಕಾಲಕ್ರಮೇಣ 2009 ರಲ್ಲಿ ಅಂದಿನ ಸರ್ಕಾರ, ಈ buffer zone ಅನ್ನು relax ಮಾಡಿ,

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

1000 ಮೀಟರ್ಸ್‌ನಿಂದ 50 ಮೀಟರ್ಸ್‌ಗೆ ಇಳಿಸಿದರು. This is very important point. ಈ 50 ಮೀಟರ್ಸ್‌ಗೆ ಇಳಿಸಿದ ಉದ್ದೇಶವೇನೆಂದರೆ, ಅಲ್ಲಿನ ಜನ ಸೈಟುಗಳು ಮತ್ತು ಇತರ ಚಟುವಟಿಕೆಗಳು ಮಾಡತಕ್ಕಂಥದ್ದಕ್ಕೆ ಸಾಕಷ್ಟು ಒತ್ತಡ ತಂದು, ಅದನ್ನು ಸ್ಥಗಿತ ಮಾಡತಕ್ಕಂಥದ್ದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ಅಲ್ಲಿನ ಜನ ತೆಗೆದುಕೊಂಡರು. ತದನಂತರ, ಏನಾಯಿತೆಂದರೆ, ಅಲ್ಲಿನ ಕಸ ಹೋಗಿ accumulate ಆಯಿತು. ಅಂದರೆ, accumulate ಆಗಿ ಸಂಪೂರ್ಣವಾಗಿ 100 ಎಕರೆ ಪ್ರದೇಶವೂ ಒಂದು ದೊಡ್ಡ ಬೆಟ್ಟದ ರೀತಿಯಲ್ಲಿ ಕಸ ಶೇಖರಣೆಯಾಯಿತು. ಕಸ ಬಂದ ನಂತರ ಅದನ್ನು ನಿರ್ವಹಣೆ ಮತ್ತು ಪ್ರೋಸೆಸಿಂಗ್ ಮಾಡಬೇಕು. ಅದರ ಪ್ರಯೋಜನವನ್ನು ಯಾವ ರೀತಿ ಪಡೆಯಬೇಕು ಎನ್ನುವುದಕ್ಕೆ ಟೆಕ್ನಾಲಜೀಸ್ ಇದೆ. ಆದರೆ, ಇದ್ಯಾವುದನ್ನು ಮಾಡದೇ ಇರುವ ಸಂಸ್ಥೆ ಮತ್ತು ಆಗಿನ ಸರ್ಕಾರದಲ್ಲಿದ್ದಂತಹ ಕೆಲವು ಪ್ರಮುಖರು ಸೇರಿಕೊಂಡು ಅದನ್ನು ಸಂಪೂರ್ಣವಾಗಿ ನಾಶ ಮಾಡುವಂತಾಯಿತು. ಇವತ್ತು ಮಂಡೂರು ಸಂಪೂರ್ಣವಾಗಿ ನಿಂತಿದೆ. ಅವೊತ್ತಿನ ದಿವಸ ಬಿ.ಎಂ.ಪಿ. ಇತ್ತು. It was not B.B.M.P. (Bruhat Bengaluru Mahanagara Palike). ಬಿ.ಎಂ.ಪಿ.ಯ ಭಾಗದ ವಿಸ್ತೀರ್ಣ ಇದ್ದದ್ದು ಕೇವಲ 225 ಚದರ ಕಿಲೋ ಮೀಟರ್‌ಗಳು ಮಾತ್ರ. ಆ ಪಾಲಿಕೆಗೆ ಸಂಬಂಧ ಇದ್ದಷ್ಟು ಮಾತ್ರ ಈ ಯುನಿಟ್‌ಗಳನ್ನು establish ಮಾಡಿದ್ದರು. ಆದರೆ, ಇವೊತ್ತಿನ ದಿವಸ 800 ಚದರ ಕಿಲೋ ಮೀಟರ್‌ಗಳಿಗಿಂತಲೂ ಹೆಚ್ಚಿಗೆ ವಿಸ್ತೀರ್ಣವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹೊಂದಿದೆ. ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡದೇ ಇರುವಂಥದ್ದು, ಇವೊತ್ತಿನ ದಿವಸದ ಕಸದ ಸಮಸ್ಯೆಗೆ ಕಾರಣವಾಗಿದೆ. ಇದು ಬಹಳ ಗಂಭೀರವಾದಂತಹ ವಿಚಾರ, ಇದನ್ನು long-term ನಲ್ಲಿ ಯೋಚನೆ ಮಾಡಿ, 'Waste to Energy' Plants ಇರಬಹುದು, ಅಥವಾ Processing units, Landfill site, Pallets and Vermicompost ಮುಂತಾದ ಹೊಸ ರೀತಿಯಲ್ಲಿ ಕಸವನ್ನು ಉಪಯೋಗಿಸತಕ್ಕಂತಹ ರೀತಿಯಲ್ಲಿ ಸಮಗ್ರವಾದಂತಹ ಚಿಂತನೆಯನ್ನು ಮಾಡತಕ್ಕಂಥದ್ದು ಬಹಳ ಮುಖ್ಯ. ಆದರೆ, ಈ ಸರ್ಕಾರ ಆ ಕೆಲಸವನ್ನು ಮಾಡುತ್ತಿಲ್ಲ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ...

**ಶ್ರೀ ಯು.ಟಿ. ಖಾದರ್:-** ಮಾನ್ಯ ಸಭಾಪತಿಯವರೇ...

**ಸಭಾಪತಿಯವರು:-** ಇಲ್ಲ ತಮಗೆ ಮಾತನಾಡುವುದಕ್ಕೆ ಅವಕಾಶ ನೀಡುವುದಕ್ಕಾಗುವುದಿಲ್ಲ. ಸಚಿವರು ತಮ್ಮ ಪ್ರಶ್ನೆಗೆ ಉತ್ತರ ಕೊಡುತ್ತಾರೆ. ಇಲ್ಲದೇ ಹೋದರೆ, ಮುಂದಿನ ಪ್ರಶ್ನೆಗೆ ಹೋಗುತ್ತೇನೆ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಷಯವನ್ನು ಹೇಳುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೊರದೇಶಕ್ಕೆ ಹೋಗಿ ಎಲ್ಲಾ ನೋಡಿಕೊಂಡು ಬಂದರು. ಆದರೆ, ಇಲ್ಲಿನ on-going projects ಬಗ್ಗೆ ಏತಕ್ಕೆ ಅವರಿಗೆ ಕಳಕಳಿ ಇಲ್ಲ. ಆದುದರಿಂದ, ಈ ಪ್ರಾಜೆಕ್ಟ್ ಬಗ್ಗೆ ಸರ್ಕಾರ ಸ್ವಲ್ಪ ಆಸಕ್ತಿವಹಿಸಿ ಇದಕ್ಕೆ ಚಾಲನೆ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಯು.ಟಿ. ಖಾದರ್:–** ಮಾನ್ಯ ಸಭಾಪತಿಯವರೇ, ಈ ಎಲ್ಲಾ ಗಂಭೀರವಾದ ವಿಷಯಗಳ ಬಗ್ಗೆ ಈ ದಿನ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸಭೆ ನಡೆಸಿದ್ದಾರೆ. ಮಾನ್ಯ ಸದಸ್ಯರೆಲ್ಲರು ವ್ಯಕ್ತಪಡಿಸಿದ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಮುಂದಿನ ದಿನಗಳಲ್ಲಿ ಅವುಗಳಿಗೆ ದೀರ್ಘವಾದ ಸ್ಪಷ್ಟೀಕರಣ ಕೊಡಿಸುತ್ತೇವೆ.

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

## 11. ನಿಯಮ 330ರ ಮೇರೆಗೆ ಸಾರ್ವಜನಿಕ ಮಹತ್ವವುಳ್ಳ ಜರೂರು ವಿಷಯದ ಮೇಲಿನ ಚರ್ಚೆ

**ವಿಷಯ:-** ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಶ್ರಯದಲ್ಲಿ ಕೈಗೊಂಡ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ

- - -

**ಶ್ರೀ ಹೆಚ್.ಎಂ. ರೇವಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಹಿಂದುಳಿದ್ದ ವರ್ಗಗಳ ಆಯೋಗ ಪ್ರಾರಂಭವಾಗಿ ಅನೇಕ ಚಟುವಟಿಕೆಗಳನ್ನು ಕೈಗೊಂಡು ಸಿದ್ಧಗೊಳಿಸಿರುವ ವರದಿಯನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಆಗಿರತಕ್ಕಂತಹ ತೊಂದರೆ ಬಗ್ಗೆ ಮಾನ್ಯ ಸಚಿವರು ಉತ್ತರ ನೀಡಿದ ನಂತರ ನಾನು ಮಾತನಾಡುತ್ತೇನೆ.

**ಶ್ರೀ ಕೆ.ಸಿ. ಕೊಂಡಯ್ಯ:-** ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಶ್ರೀ ಕೆ.ಬಿ. ನಂಜುಂಡಿಯವರು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದರು. ಆ ಸಂದರ್ಭದಲ್ಲಿ ಇದೇ ಮಂತ್ರಿಗಳು ಮುಂದಿನ ಅಧಿವೇಶನದಲ್ಲಿ ಶ್ರೀ ಕಾಂತರಾಜು ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇವೆಂದು ಹೇಳಿದ್ದರು. ಆದರೆ, ಇದುವರೆವಿಗೂ ಅದನ್ನು ಒಪ್ಪಿಸಿರುವುದಿಲ್ಲ. ಪುನಃ ಅದೇ ಉತ್ತರವನ್ನು ಹೇಳದೇ, ನಾಳೆ ಒಪ್ಪಿಸುತ್ತೇವೆಂದು ಉತ್ತರ ನೀಡಬೇಕು. ಏಕೆಂದರೆ, ನಮ್ಮ ಸದಸ್ಯರುಗಳು ಈ ವಿಷಯದಲ್ಲಿ ಬಹಳ ಗಂಭೀರವಾಗಿದ್ದಾರೆ. ಶ್ರೀ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಈ ವರದಿ ತಯಾರು ಮಾಡುವುದಕ್ಕಾಗಿ ಸುಮಾರು 270 ರಿಂದ 280 ಕೋಟಿ ರೂಪಾಯಿಗಳಷ್ಟು ಸಾರ್ವಜನಿಕ ಹಣವನ್ನು ಖರ್ಚು ಮಾಡಲಾಗಿದೆ. ಆದಕಾರಣ, ಮಾನ್ಯ ಮಂತ್ರಿಗಳು ಈ ಬಗ್ಗೆ ತಯಾರಾಗಿ ನಾಳೆ ಅಥವಾ ನಾಡಿದ್ದು ವರದಿಯನ್ನು ಸಲ್ಲಿಸುತ್ತೇವೆಂದು ಉತ್ತರ ನೀಡಿದರೆ ಮಾತ್ರ ನಾವು ಸಮಾಧಾನಪಡುತ್ತೇವೆ. ಇಲ್ಲದೇ ಹೋದರೆ, ಒಂದು ರೀತಿಯಾಗಿ ಉಗ್ರ ಹೋರಾಟವಾಗುತ್ತದೆ.

**(ಗೊಂದಲ)**

**ಸಭಾಪತಿಯವರು:-** ನಿಯಮ 330ಕ್ಕೆ ಲಿಖಿತ ಮೂಲಕ ಉತ್ತರಿಸಲು ಮಾನ್ಯ ಸಚಿವರು ಸ್ವಲ್ಪ ಸಮಯ ಕೇಳಿದ್ದಾರೆ. ಆದುದರಿಂದ, ನಿಯಮ 68 ರಲ್ಲಿ ಪ್ರಸ್ತಾಪಿಸಲಾದ ವಿಷಯದ ಬಗ್ಗೆ ಚರ್ಚೆ ಮಾಡೋಣ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):-** ಈಗ ಯಾವ ಪಕ್ಷದ ಸರ್ಕಾರ ಇರಲಿ. ಹಿಂದುಳಿದ ವರ್ಗದ ಜಾತಿವಾರು ಜನಗಣತಿ ಮಾಡಬೇಕೆನ್ನುವುದು ಸರ್ಕಾರದ ನಿಲುವಾಗಿದೆ. ಶ್ರೀ ಕಾಂತರಾಜುರವರು ಈ ಆಯೋಗದ ಅಧ್ಯಕ್ಷರಾಗಿದ್ದಾಗ ಸರ್ಕಾರ ಈ ಪ್ರಸ್ತಾಪ ಮಾಡಿತ್ತು. ನನ್ನನ್ನು ಸೇರಿದಂತೆ ಅನೇಕರನ್ನು ಕರೆದು ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಲಾಗಿತ್ತು. ಶ್ರೀ ಕಾಂತರಾಜುರವರು 'ಯಾವುದೇ ತೊಂದರೆ ಇಲ್ಲದೇ ಇದನ್ನು ವ್ಯವಸ್ಥಿತವಾಗಿ ಮಾಡುತ್ತೇವೆ' ಎಂದು ಹೇಳಿದ್ದರು. ಇದಕ್ಕಾಗಿ ಖರ್ಚಾದ ಮೊತ್ತ ಎಷ್ಟು ಎಂದು ಕೇಳಿದರೆ, ನನಗೆ ಗೊತ್ತಿರುವಂತೆ 200 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿತ್ತು. 186 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನನಗೆ ಈ ಬಗ್ಗೆ ಮಾಹಿತಿ ಸಿಕ್ಕಿದೆ. ನಾನು ಹೇಳುತ್ತಿರುವುದೇನೆಂದರೆ, ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಹಿಂದುಳಿದ ವರ್ಗಗಳವರು, ಎಲ್ಲಾ ರಾಜಕೀಯ ಪಕ್ಷದವರು ಮತ್ತು ಹಿಂದುಳಿದ ವರ್ಗಗಳ ಕಾಳಜಿ ಇದ್ದವರು ಆ ಜನಗಣತಿಯಲ್ಲಿ ಏನಿದೆ ಎಂದು ನೋಡಲಿಕ್ಕೆ ಅಪೇಕ್ಷೆ ಪಟ್ಟಿರುತ್ತಾರೆ. ನಾನು ಒಂದು ವಿಷಯವನ್ನು ತಮಗೆ ತಿಳಿಯಪಡಿಸುತ್ತೇನೆ, ಅದು ಹೌದೋ ಅಲ್ಲವೋ ತಿಳಿಸಿ. ಜಾತಿ ಜನಗಣತಿ ವರದಿ ಬಿಡುಗಡೆ ಆಗಿಲ್ಲ. ಅಂಕಿ-ಅಂಶಗಳು ಸಿಗುತ್ತಿಲ್ಲ. ಚುನಾವಣಾ ಸಂದರ್ಭದಲ್ಲಿ ಅದು ಕೈಗೆ ಸಿಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಈ ವಿಷಯಕ್ಕೆ ಸಂಬಂಧಿಸಿದಂತೆ ತಾವು ಈಗ ಉತ್ತರ ನೀಡುತ್ತೀರಿಯೇ? ಉತ್ತರ ನೀಡುವುದಿಲ್ಲವೆಂದರೆ, ಮುಂದಿನ ವಿಷಯಕ್ಕೆ ಹೋಗೋಣವೋ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಚಿವರೇ, ಹಾಗಾದರೆ ತಾವು ಈ ಬಗ್ಗೆ ಉತ್ತರ ನೀಡುವುದಿಲ್ಲವೇ? ದಯವಿಟ್ಟು ಕೇಳಿ. ಇದರಲ್ಲಿ ಯಾವುದೇ ರಾಜಕೀಯ ಒತ್ತಡ ಅಲ್ಲ. ಇಡೀ ರಾಜ್ಯದ ಹಿಂದುಳಿದ ವರ್ಗದವರ ಬೇಡಿಕೆ. ದಲಿತರ ಬಗ್ಗೆ, ಹಿಂದುಳಿದವರ ಬಗ್ಗೆ ಕಾಳಜಿ ಇರುವಂತಹ ಈ ಸರ್ಕಾರದ ಮಂತ್ರಿಗಳು ಉತ್ತರ ಕೊಡದೇ ಇದ್ದರೆ ಮತ್ಯಾರು ಉತ್ತರ ಕೊಡುತ್ತಾರೆ? ಆದುದರಿಂದ, ದಯಮಾಡಿ ಈ ವಿಷಯದಲ್ಲಿ ತಾವು ಮುಚ್ಚು ಮರೆಮಾಡುವಂತಹ ಅಗತ್ಯಗಳು ಇರುವುದಿಲ್ಲ. ಇದು ಸರ್ಕಾರದ ವ್ಯವಸ್ಥೆಗಳಲ್ಲ. ಹಿಂದುಳಿದ ವರ್ಗಗಳ ಮಂತ್ರಿಗಳಲ್ಲಿ ನಾನು ಆಗ್ರಹಪಡಿಸುವುದೇನೆಂದರೆ, ತಮ್ಮ custodyಯಲ್ಲಿರಬಹುದಾದಂತಹ ಎಲ್ಲಾ ವ್ಯವಸ್ಥೆಗಳು. ಕಡತ ಅಲ್ಲ. ತಾವು ಸದನ ಮುಗಿಯುವುದರೊಳಗೆ ವರದಿಯನ್ನು ನಾನು ಮಂಡಿಸುತ್ತೇನೆ ಅಥವಾ ಬಿಡುಗಡೆ ಮಾಡುತ್ತೇನೆ ಎಂದು ಹೇಳುವಂತಹ ಜವಾಬ್ದಾರಿ ಈ ಕರ್ನಾಟಕ ರಾಜ್ಯದ ಮಾನ್ಯ ಸಚಿವರಿಗೆ ಮಾತ್ರ. ತಾವು ಏತಕ್ಕೆ ಈ ವಿಷಯವನ್ನು ಮುಚ್ಚಿಡುತ್ತಿದ್ದೀರಿ?

**ಸಭಾಪತಿಯವರು:-** ಈ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಶ್ರೀ ಕಾಂತರಾಜು ಸಮಿತಿಯು ಇನ್ನೂ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುವುದಿಲ್ಲ. 192.70 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಬಿಡುಗಡೆಯಾಗಿತ್ತು. ಅದರಲ್ಲಿ 158.47 ಕೋಟಿ ರೂಪಾಯಿಗಳು ಖರ್ಚಾಗಿವೆ. ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 2015 ರಿಂದ ಅಂತಿಮ ವರದಿ ಸಲ್ಲಿಸಬೇಕಾಗಿದೆ. ಸದರಿ ವರದಿಯನ್ನು ಸಲ್ಲಿಸಿದ ನಂತರ ಮುಂದಿನ ಕ್ರಮ ಜರುಗಿಸುತ್ತೇವೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಾಗಾದರೆ ವರದಿ ಸಲ್ಲಿಸುವುದು ಯಾವಾಗ?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:-** ಮಾನ್ಯ ಸಭಾಪತಿಯವರೇ, ಈ ಬಗ್ಗೆ ಕಳೆದ ಅಧಿವೇಶನದಲ್ಲಿ ಶ್ರೀ ಕೆ.ಪಿ. ನಂಜುಂಡಿಯವರು ಕೇಳಿದಂತಹ ಸಂದರ್ಭದಲ್ಲಿ ನಾವೆಲ್ಲರೂ ಕೂಡ ಅದಕ್ಕೆ ಧ್ವನಿಗೂಡಿಸಿದ್ದೆವು. ಸದನದಲ್ಲಿ ನಾನು ವರದಿ ಮಂಡಿಸುತ್ತೇನೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನಮಗೆ ಗೊತ್ತಿರುವ ಪ್ರಕಾರ, ಶ್ರೀ ವಿ.ಎಸ್. ಉಗ್ರಪ್ಪ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮತ್ತು ನಾವೆಲ್ಲರೂ ಕೂಡ ಸದನದಲ್ಲಿ ಮಾತನಾಡಿದಂತಹ ಸಂದರ್ಭದಲ್ಲಿ ವರದಿ ತಯಾರಿದೆ, ವರದಿ ಕೊಡುವ ಹಂತದಲ್ಲಿ ಚರ್ಚೆಯಾಗಿದೆ ಎನ್ನುವಂಥದ್ದು ಗೊತ್ತಿದೆ. ಅಲ್ಲಿ ಕೊಡಬಾರದು ಎನ್ನುವುದು ಏನಾದರೂ ಇದ್ದರೆ ಅದನ್ನು ಈಗಲೇ ತಿಳಿಸಿ. ಈ ರೀತಿ ಏತಕ್ಕೆ ಮಾಡಬೇಕು? ಏಕೆಂದರೆ, ಇದಕ್ಕೆ ಒಂದು ಇತಿಹಾಸವಿದೆ. ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗದ ಹೋರಾಟಗಳು ನಡೆದುಕೊಂಡು ಬಂದಿವೆ. ಇದಕ್ಕೆ ತನ್ನದೇ ಆದಂತಹ ಇತಿಹಾಸವಿದೆ. ಭಾರತದಲ್ಲಿ 1951 ರಲ್ಲಿ ಮೊದಲನೇ ಬಾರಿಗೆ ಸಂವಿಧಾನ ತಿದ್ದುಪಡಿ ಆಗಿದೆ. ಅದು ಕೂಡ ಹಿಂದುಳಿದ ವರ್ಗದ ಬಗ್ಗೆ Article 15(4) and Article 16(4)ಕ್ಕೆ ಸೇರ್ಪಡೆಯಾಗುವಂಥದ್ದನ್ನು ತಂದಿರತಕ್ಕಂಥದ್ದಾಗಿದೆ. ಅಲ್ಲಿಂದ ಮೊದಲನೇ ತಿದ್ದುಪಡಿಯಾಗಿರುವಂಥದ್ದು ಹಿಂದುಳಿದ ವರ್ಗಗಳ ಬಗ್ಗೆ. ಆದರೆ, ಇವೊತ್ತಿನ ದಿವಸ ಇಡೀ ಭಾರತ ದೇಶದಲ್ಲಿ ಬಾಂಬೆ ಪ್ರಾಂತ್ಯದ ಸಾಹು ಮಹಾರಾಜರು ಈ ಹಿಂದೆ 1902 ರಲ್ಲಿ ಬ್ರಿಟಿಷರ ಕಾಲದಲ್ಲಿಯೇ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ತಂದಿರುತ್ತಾರೆ. ಅದನ್ನು ಕರ್ನಾಟಕ ರಾಜ್ಯದ ನಮ್ಮ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1918 ರಲ್ಲಿ ಮಿಲ್ಲರ್ ಆಯೋಗವನ್ನು ತರುತ್ತಾರೆ. ಆ ಮೀಸಲಾತಿಯನ್ನು ತಂದಂತಹ ಸಂದರ್ಭದಲ್ಲಿ ಇಂಗ್ಲೀಷ್ ಕಲಿತವರು, ಇಂಗ್ಲೀಷ್ ಕಲಿಯದೇ ಇರುವವರು ಎಂದು ಮಾಡಿದಂತಹ ಸಂದರ್ಭದಲ್ಲಿ ಅನೇಕ ಬದಲಾವಣೆಗಳು ಆಗುತ್ತವೆ. ತದನಂತರದಲ್ಲಿ ವರದಿ ಮಂಡನೆಯಾಗಿ, ಜಾರಿಯಾದಂತಹ ಸಂದರ್ಭದಲ್ಲಿ ಅದು ಒಂದು Brahmins and other Castes ಎಂದು create ಆಗುತ್ತದೆ. ಇಷ್ಟು ನಡೆದುಕೊಂಡ ಬಂದಂತಹ ಸಂದರ್ಭದಲ್ಲಿ ಮೊದಲು ಶ್ರೀ ನಾಗನಗೌಡ ಸಮಿತಿ ರಚನೆಯಾಗುತ್ತದೆ. ಆ ಸಮಿತಿ 1961ರಲ್ಲಿ ನೇಮಕವಾಗಿ, 1962ಕ್ಕೆ ಮಂಡನೆಯಾದರೂ ಕೂಡ 1963ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ರದ್ದಾಗುತ್ತದೆ. ತದನಂತರ, ಮತ್ತೆ 1972ರಲ್ಲಿ ನಮಗೆಲ್ಲರಿಗೂ ಸಂತೋಷವಾಗುವಂಥದ್ದು, ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಧ್ವನಿ ಏನಾದರೂ ಸಿಕ್ಕಿದ್ದರೆ, ಅದಕ್ಕೆ ಶ್ರೀ ದೇವರಾಜು ಅರಸುರವರನ್ನು ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಅವರು 1972ರಲ್ಲಿ ಶ್ರೀ ಹಾವನೂರು ಆಯೋಗವನ್ನು ನೇಮಕ ಮಾಡುತ್ತಾರೆ. ಸಮಿತಿ ಬೇರೆ, ಆಯೋಗ ಬೇರೆ. ಆಯೋಗ ರಚನೆ ಮಾಡಿದಂತಹ ಸಂದರ್ಭದಲ್ಲಿ 1975ರಲ್ಲಿ ವರದಿ ಮಂಡನೆಯಾಗುತ್ತದೆ, 1977ರಲ್ಲಿ ಶ್ರೀ ದೇವರಾಜು ಅರಸುರವರು ವರದಿಯನ್ನು ಯಥಾವತ್ತಾಗಿ ಜಾರಿ ಮಾಡುತ್ತಾರೆ. ಅದರಿಂದಾಗಿ, ಇವೊತ್ತಿನ ದಿವಸ ರಾಜ್ಯದಲ್ಲಿ ಅನೇಕ ಜನ ನಾಯಕರುಗಳು ತಯಾರಾಗಿರುವಂಥದ್ದು. ಅದು ವಿದ್ಯಾಭ್ಯಾಸಕ್ಕೆ ಮತ್ತು ನೌಕರಿಗೆ. ಇದನ್ನು ಸಂವಿಧಾನದ Article 15(4) and Article 16(4) ರಡಿಯಲ್ಲಿ ಎರಡನ್ನು ಒಳಗೊಂಡಂತೆ ಆದಂತಹ ಒಂದು ಮಹಾನ್ ಗ್ರಂಥ ನಮ್ಮ ಹಾವನೂರು ವರದಿ. ಆದಾದ ಮೇಲೆ 10 ಆಯೋಗಗಳು ಬರುತ್ತವೆ. ಅದರಲ್ಲಿ ಒಂದು ಶ್ರೀ ವೆಂಕಟಸ್ವಾಮಿ ಆಯೋಗ ಸ್ವಲ್ಪ ಹತ್ತಿರ ಹತ್ತಿರ ಅಂಕಿ–ಅಂಶಗಳನ್ನು ಕೊಡುತ್ತಾರೆ. ಆದರೆ, ಇವೊತ್ತಿನ ದಿವಸ ಶ್ರೀ ಕಾಂತರಾಜುರವರ ಆಯೋಗ ಏನಿದೆ ಅದು ನಿಜವಾಗಿಯೂ 1931ರಲ್ಲಿ ಜಾತಿ ಜನಗಣತಿ ಆದ ನಂತರ ಇಡೀ ಭಾರತ ದೇಶದಲ್ಲಿ ಬೇರೆ ಎಲ್ಲಿಯೂ ಆಗಿರುವುದಿಲ್ಲ. ಅದಕ್ಕೆ ಮಾನ್ಯ ಸಿದ್ದರಾಮಯ್ಯನವರು ಹೆಚ್ಚು ಒತ್ತು ಕೊಟ್ಟಿರುತ್ತಾರೆ. ಅವರು ಶ್ರೀ ಕಾಂತರಾಜುರವರ ಆಯೋಗ ನೇಮಕ ಮಾಡಿದ ನಂತರ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಮತ್ತು ಶ್ರೀ ಕೆ.ಪಿ. ನಂಜುಂಡಿಯವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳಿದ ಹಾಗೆ 186 ಕೋಟಿ ರೂಪಾಯಿ ಹಣ ಖರ್ಚಾಗಿರುವುದು ಸರಿ. ಇದಲ್ಲದೇ ಮನೆ ಮನೆಗೆ ಹೋಗಿ enumeration ಮಾಡಿರತಕ್ಕಂಥದ್ದು ಇದೇ ಪ್ರಥಮ ಜಾತಿ ಜನಗಣತಿ. ಈ ಹಿಂದೆ ಎಲ್ಲರೂ random ಆಗಿ ಕೊಟ್ಟಿರುತ್ತಾರೆ. ಆದರೆ, ಇದು ಎಲ್ಲಾ ಒಳಗೊಂಡಂತೆ 56 questionnaire ಇದ್ದಂತಹ ವರದಿ ತಯಾರು ಮಾಡಿ ವರದಿ ಸಲ್ಲಿಸುವ ಹಂತಕ್ಕೆ ಇದೆ. ಆದರೆ ಸರ್ಕಾರದವರು ಅದನ್ನು ತೆಗೆದುಕೊಳ್ಳುವುದಕ್ಕೆ ಏನೋ ಸಮಸ್ಯೆ ಇದೆ. ಅದನ್ನು ಮಾನ್ಯ ಸಚಿವರು ನಿಜವಾಗಿಯೂ ಹೇಳಲೇಬೇಕು ಎನ್ನುವುದು ನನ್ನ ಬೇಡಿಕೆ.

(442) 13-12-2018 (6.20) ವೈಎಲ್-ಜಿಆರ್

ಶ್ರೀ ಹೆಚ್.ಎಂ.ರೇವಣ್ಣ(ಮುಂದು):-

ಈಗಾಗಲೇ ಮುದ್ರಣವಾಗಿದೆ. ಆದರೆ, ಮಾನ್ಯ ಸಚಿವರು ಹಾರಿಕ್ಕೆ ಉತ್ತರವನ್ನು ನೀಡುತ್ತಿದ್ದಾರೆ. ಇದು ನಿಜವಾಗಿಯೂ ಸಮಂಜಸವಾಗಿಲ್ಲ. ಯಾವಾಗ ವರದಿಯನ್ನು ತೆಗೆದುಕೊಂಡು ಉತ್ತರವನ್ನು ನೀಡುತ್ತಾರೆ ಎಂಬುದನ್ನು ಹೇಳಲೇಬೇಕು.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮರವರು.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತ ಹೊಂದಿದವರು):-** ಮಾನ್ಯ ಸಭಾಪತಿಯವರೇ, ನಾವು ನಿಯಮ 330ರ ಚರ್ಚೆಯನ್ನು ತಂದಿದ್ದೇವೆ. ಹಾಗಾಗಿ ಮೊದಲು ನಮಗೆ ಮಾತನಾಡಲು ಅವಕಾಶ ಕಲ್ಪಿಸಿ, ನಂತರ ಬೇರೆಯವರಿಗೆ ಅವಕಾಶ ನೀಡಿ.

**ಸಭಾಪತಿಯವರು:-** ಆಯಿತು. ಅವಕಾಶ ನೀಡುತ್ತೇನೆ.

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಲ್ಲಾ ಸದಸ್ಯರೂ ಸಹ ಈ ಜಾತಿ ಜನಗಣತಿಯ ವರದಿ ಬಿಡುಗಡೆ ಮಾಡಬೇಕೆಂದು ಹೇಳುತ್ತಿದ್ದೇವೆ. ನಾವೆಲ್ಲರೂ 103 ಜಾತಿಯಲ್ಲಿ ಬರತಕ್ಕಂತಹ ಎಲ್ಲಾ ಹಿಂದುಳಿದ ವರ್ಗದವರಿಗೂ ಸಹ ಅವರ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಶಕ್ತಿ, ಅಧಿಕಾರ, ಶಿಕ್ಷಣ ಹಾಗೂ ಎಲ್ಲಾ ಸರ್ಕಾರದ ಸವಲತ್ತು ಸಿಗಬೇಕೆಂದು ಮಾನ್ಯ ಸಚಿವರಿಗೆ ಒತ್ತಾಯ ಪಡಿಸಿದ್ದೇವು. ಆ ಸಂದರ್ಭದಲ್ಲಿ ಮಾನ್ಯ ಸಚಿವರು ಆದಷ್ಟು ಬೇಗ ಇದನ್ನು ಪ್ರಕಟಣೆ ಮಾಡುತ್ತೇನೆ ಎನ್ನುವ ಮಾತನ್ನು ಹೇಳಿದರು. ಆದರೆ, ಇದುವರೆಗೂ ನಮ್ಮ ಕೈ ಸೇರಿರುವುದಿಲ್ಲ. ಇನ್ನೂ ಸ್ವಲ್ಪ ಸಮಯಬೇಕೆಂದು ಅದೇ ಶ್ಲೋಕವನ್ನು ಶುರುಮಾಡಿದ್ದಾರೆ. ಮಾನ್ಯ ಸಚಿವರು ಸಹ ಹಿಂದುಳಿದ ವರ್ಗಗಳ ಉಪ್ಪಾರ ಸಮಾಜಕ್ಕೆ ಸೇರಿದವರು ಇದನ್ನು ಅರ್ಥಮಾಡಿಕೊಳ್ಳಬೇಕು. 30 ಲಕ್ಷ ಜನಸಂಖ್ಯೆ ಇದ್ದಾರೆ ಎಂದು ಹೇಳುತ್ತಾರೆ. ಎಲ್ಲರೂ ಬಾಯಿಗೆ ಬಂದ ಹಾಗೆ ನಮ್ಮ ಜನಸಂಖ್ಯೆ ಇಷ್ಟು ಇದೆ ಎಂದು ಹೇಳಿ ಇವತ್ತಿನ ದಿನ ಯಾರು ತೆಗೆದುಕೊಂಡು ತಿನ್ನುತ್ತಿದ್ದಾರೆ ಅವರು ಮಾತ್ರ ಬದುಕುತ್ತಿದ್ದಾರೆ. 50 ಸಾವಿರದಿಂದ ಹಿಡಿದು 3 ಲಕ್ಷದವರೆಗೂ ಜನಸಂಖ್ಯೆಯನ್ನು ಹೊಂದಿರುವ ಸಮಾಜದವರಿಗೂ ಸಹ ಮೂಲ ಸವಲತ್ತುಗಳು ಸಿಗಬೇಕು. ಅದಕ್ಕಾಗಿ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು 159.00 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಸಹ ಅದನ್ನು ಬಿಡುಗಡೆ ಮಾಡಿಲ್ಲವೆಂದರೆ, ಇದರ ಹಿಂದೆ ಏನು ಕುತಂತ್ರ ನಡೆಯುತ್ತಿದೆ? ಒಂದು ವೇಳೆ ಜಾತಿ–ಜನಗಣತಿಯನ್ನು ಪ್ರಕಟಣೆ ಮಾಡಿದರೆ ಬೇರೆ ಬೇರೆ ಸಮಾಜದಲ್ಲಿರುವ ಜನಸಂಖ್ಯೆ ಒಡೆದು ಹೋಗುತ್ತದೆ ಎನ್ನುವ ಭಯವೇ? ಬಡವರು ಸಹಾ ಎಲ್ಲಾ ಅಧಿಕಾರವನ್ನು ತೆಗೆದುಕೊಳ್ಳುವುದಕ್ಕೆ ಬಿಡಿ. ಇದನ್ನೇ ಮುಂದುವರೆಸಿಕೊಂಡು ಹೋದರೆ, ಕರ್ನಾಟಕದಲ್ಲಿರುವ ಎಲ್ಲಾ ಹಿಂದುಳಿದ ವರ್ಗದವರು ಸಹ ಒಗ್ಗಟಾಗಿ ಹೋರಾಟ ಮಾಡಬೇಕಾಗುತ್ತದೆ. ಈ ಮಾತನ್ನು ಮಾನ್ಯ ಸಚಿವರು ಮರೆಯಬಾರದು.

**ಶ್ರೀ ಪಿ.ಆರ್.ರಮೇಶ್(ನಾಮನಿರ್ದೇಶಿತ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಇದು ಬಹಳ ಗಂಭೀರವಾದಂಥ ವಿಚಾರ. ಇದು ಹಿಂದುಳಿದ ವರ್ಗದ ಜನರಿಗೆ ಮಾತ್ರ ಸಂಬಂಧಪಟ್ಟ ವಿಚಾರವಾಗಿಲ್ಲ. ಈ ಒಂದು ಕೆಲಸ ಹಿಂದುಳಿದ ವರ್ಗದ ಆಯೋಗಕ್ಕೆ ನೇಮಿಸಿರತಕ್ಕಂಥ ಸರ್ಕಾರ ಅವರಿಗೆ ಒಂದು ಸಮಗ್ರವಾದಂಥ ವರದಿಯನ್ನು ತಯಾರಿಸಿ ಕೊಡಬೇಕೆಂದು ಕೊಟ್ಟಿದ್ದಾರೆ. ಆದರೆ, ಇಲ್ಲಿ ಇಡೀ ನಮ್ಮ ಕರ್ನಾಟಕದಲ್ಲಿರುವ ಎಲ್ಲಾ ಜನಾಂಗದವರು, ಮೇಲು–ಕೀಳು ಎನ್ನುವುದು ಇಲ್ಲದೇ ಪ್ರತಿಯೊಬ್ಬರೂ ಈ ಒಂದು ಸರ್ವೇಕ್ಷಣಕ್ಕೆ ಒಳಪಡುತ್ತಾರೆ. ಹಾಗಾಗಿ ಬ್ರಾಹ್ಮಣ, ಕ್ಷತ್ರಿಯ, ಶೂದ್ರ ಯಾರೇ ಆದರೂ ಯಾವುದೋ ಒಂದಕ್ಕೆ ಸೀಮಿತವಾಗಿರುವ ವಿಚಾರವಾಗಿಲ್ಲ. ಇಲ್ಲಿ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡುವ ಹಾಗೆ ಸರ್ವೇಕ್ಷಣ ಮಾಡುವುದಾಗಿದೆ. ಈ ವಿಚಾರ ಬಹಳ ಗಂಭೀರವಾದದು. ಇಡೀ ನಮ್ಮ ದೇಶದಲ್ಲಿಯೇ 1930ರಲ್ಲಿ 'ಮಿಲ್ಲರ್ ಆಯೋಗ' ಏನು ಹೇಳಿದ್ದೆ ಆ ರೀತಿ ಮಾಡಿದ ಮೇಲೆ ಇವತ್ತಿನವರೆಗೂ ಈ ರೀತಿಯ ಒಂದು ಸರ್ವೇಕ್ಷಣ ಆಗಿಲ್ಲ. ಇವತ್ತು ಏನಾದರೂ ಅದು ಕರ್ನಾಟಕದಲ್ಲಿ ಆಗಿದೆ ಎಂದರೆ, ಅದು ಪ್ರಪ್ರಥಮವಾಗಿ ನಿಮಗೆ ಸಲ್ಲಬೇಕಾದ ಒಂದು ಶ್ರೇಯಸ್ಸು ಆಗುತ್ತದೆ. ಆ ಒಂದು ಕೆಲಸವನ್ನು ನಮ್ಮ ಕರ್ನಾಟಕದಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರ ಸರ್ಕಾರ ಮಾಡಿದ್ದೆ. ಇದನ್ನು ತಡ ಮಾಡದೇ ಸಂಪೂರ್ಣವಾಗಿ ಕರ್ನಾಟಕದ 6 ಕೋಟಿ ಜನರಿಗೆ ತಲುಪಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಭಾವಿಸುತ್ತೇನೆ. ದಯವಿಟ್ಟು ಮಾನ್ಯ ಸಚಿವರಲ್ಲಿ ವಿನಂತಿಸುವುದೇನೆಂದರೆ, ಈ ಕೂಡಲೇ ಆ ಆಯೋಗದಲ್ಲಿ ಏನು ವರದಿ ಇದೆ ಅದನ್ನು ತರಿಸಿ, ಒಂದು ವಾರದಲ್ಲಿ ಕಾರ್ಯರೂಪಕ್ಕೆ ತರುವ ಕೆಲಸವನ್ನು ಮಾಡಬೇಕು.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಮಾನ್ಯ ಸದಸ್ಯರುಗಳಾದ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ, ರಘುನಾಥರಾವ್ ಮಲ್ಕಾಪೂರೆರವರು ಮಾತನಾಡಲು ಎದ್ದು ನಿಂತರು)

**ಸಭಾಪತಿಯವರು:–** ನಿಯಮ 68ರ ಚರ್ಚೆ ನಡೆಯಲೇಬೇಕು. ಏಕೆಂದರೆ, ನಿನ್ನೆಯೂ ನಿಯಮ 68ಕ್ಕೆ ಉತ್ತರ ಸಿಕ್ಕಿರುವುದಿಲ್ಲ. ಹಾಗಾಗಿ ಮಾನ್ಯ ಸಚಿವರು ಉತ್ತರವನ್ನು ನೀಡಲಿ.

**ಶ್ರೀ ಸಿ.ಪುಟ್ಟರಂಗಶೆಟ್ಟಿ(ಹಿಂದುಳಿತ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಎಲ್ಲಾ ವಿಷಯಗಳು ಅಂಕಿ–ಅಂಶಗಳಲ್ಲಿ ಇದೆ. ನಮಗೆ ಇನ್ನೂ ವರದಿ ಬಂದಿಲ್ಲ. ಈಗಾಗಲೇ ಹೇಳಿದ ಹಾಗೆ ವರದಿ ಬಂದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಕ್ಷಣ ಮಂಡಿಸುವಂಥ ಕೆಲಸ ಮಾಡುತ್ತೇನೆ. ಎಲ್ಲಾ ಶೈಕ್ಷಣಿಕ ಸಮೀಕ್ಷೆಯ ಅಂತಿಮ ವರದಿಯನ್ನು ಸಲ್ಲಿಸಬೇಕೆಂದು ಹೇಳಿರುವುದರಿಂದ ನಮ್ಮ ಹತ್ತಿರ ಇನ್ನೂ ವರದಿ ಬಂದಿರುವುದಿಲ್ಲ. ವರದಿ ಬಂದ ಮೇಲೆ ಮಂಡಿಸುತ್ತೇವೆ.

ಸಭಾಪತಿಯವರು:– ನಿಯಮ 68ರ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ.

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ದಯವಿಟ್ಟು ಇದು ಮಹತ್ವವಾದ ವಿಚಾರವಾಗಿದೆ. ಮಾತನಾಡಲು ಸಮಯವನ್ನು ಕಲ್ಪಿಸಬೇಕು.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಉತ್ತರವನ್ನು ನೀಡಿ, ಮಾನ್ಯ ಸಚಿವರು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ:–** ಮಾನ್ಯ ಸಭಾಪತಿಯವರೇ, ಇದು ಬೇಜವಾಬ್ದಾರಿ ಉತ್ತರ. ಈ ರೀತಿಯ ಬೇಜವಾಬ್ದಾರಿ ಉತ್ತರ ನಡೆಯುವುದಿಲ್ಲ.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ,...

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಮಾತನಾಡಲಿ.

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಆಯೋಗದಿಂದ ವರದಿ ಬಂದಮೇಲೆ ನಾವು ಮಂಡಿಸಬೇಕು. ಆಯೋಗದಿಂದ ವರದಿ ಬಂದಿಲ್ಲವೆಂದರೆ, ನಾನು ಹೇಗೆ ಮಂಡಿಸಲಿ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಯಾವ ದಿನಾಂಕದಂದು ವರದಿಯನ್ನು ಮಂಡಿಸುತ್ತಾರೆ ಎಂಬುದನ್ನು ಹೇಳಲಿ. ಈ ರೀತಿ ಉತ್ತರವನ್ನು ನೀಡಿದರೆ ಆಗುವುದಿಲ್ಲ.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಸರ್ಕಾರದ ವತಿಯಿಂದ ಆಯೋಗಕ್ಕೆ ಪತ್ರವನ್ನು ಬರೆಯುತ್ತೇವೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಆಯಿತು ಪತ್ರವನ್ನು ಬರೆಯಿರಿ.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಪತ್ರವನ್ನು ಬರೆದು ತೆಗೆದುಕೊಳ್ಳಿ ಎಂದು ಹೇಳಲಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಮಾನ್ಯ ಸಭಾಪತಿಯವರೇ, ಮುದ್ರಣವಾದ ಮೇಲೆ ಮತ್ತೊಮ್ಮೆ ವಿಶ್ಲೇಷಣೆ ಮಾಡುತ್ತಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಲಿ. ಈ ರೀತಿ ಉತ್ತರವನ್ನು ನೀಡಿದರೆ ಆಗುವುದಿಲ್ಲ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ರೀತಿ ಸರ್ಕಾರ ಉತ್ತರ ನೀಡಿದರೆ ಆಗುವುದಿಲ್ಲ. ಒಂದು ಲಕ್ಷದಷ್ಟು ಸರ್ಕಾರಿ ನೌಕರರು ಸರ್ವೇ ಮಾಡುವುದಕೋಸ್ಕರ 6 ತಿಂಗಳುಗಳ ಕಾಲ ಪ್ರಯತ್ನ ಪಟ್ಟಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಇಲ್ಲಿಯವರೆಗೆ ರೂ.192.79 ಕೋಟಿಗಳು ಸರ್ಕಾರದಿಂದ ಬಿಡುಗಡೆಯಾಗಿದ್ದು, ಇದುವರೆವಿಗೂ ಒಟ್ಟು ರೂ.158.47 ಕೋಟಿ ಅನುದಾನವನ್ನು ವೆಚ್ಚ ಮಾಡಲಾಗಿದೆ ಎಂದು ನಮಗೆ ಹೇಳುತ್ತಿದ್ದಾರೆ. ಪ್ರತಿ ಸಲವೂ ಚಲ್ಲೆ ಹಣ್ಣು ತಿನ್ನಿಸುವ ಕೆಲಸವನ್ನು ಮಾಡುತ್ತಿದ್ದಾರೆ.

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸಮಸ್ಯೆ ಇವತ್ತಿನ ವಿಚಾರವಾಗಿಲ್ಲ. 2015–16ನೇ ಸಾಲಿನಿಂದಲೂ ಈ ಸಮಸ್ಯೆ ಇದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಮಾತನಾಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವ ಹಾಗಿದ್ದರೆ ಮಾನ್ಯ ಸಚಿವರು ಏಕೆ ಇರಬೇಕಿತ್ತು?

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ನೀಡಿದ್ದರೂ ಅದು ಸಮರ್ಪಕವಾಗಿಲ್ಲ ಎಂದಾದರೆ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬಂದಾಗ ಮಾತನಾಡಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಒಂದು ಲಕ್ಷದಷ್ಟು ಸರ್ಕಾರಿ ನೌಕರರು ಅದಕೋಸ್ಕರ 6 ತಿಂಗಳುಗಳ ಕಾಲ ಪ್ರಯತ್ನ ಪಟ್ಟಿದ್ದಾರೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಇಲ್ಲಿಯವರೆಗೆ ರೂ.192.79 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಎಲ್ಲಾ ಪಕ್ಷದವರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಉತ್ತರವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಹೇಳಿ. ಏಕೆಂದರೆ, ಇದು ಎಲ್ಲಾ ಹಿಂದುಳಿದ ಬಡವರ ಹಕ್ಕು.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮಧ್ಯೆ ಶಕ್ತಿ ಬೆಳೆಯಬೇಕೆಂದು ಇದನ್ನು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಮಾಡಿರುವಂಥ ವಿಚಾರವಾಗಿದೆ. ನಾವು ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರ ಸರ್ಕಾರವನ್ನು ಒಪ್ಪದೇ ಇರಬಹುದು.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾಪತಿಯವರೇ, ಇದು ನಿನ್ನೆ–ಮೊನ್ನೆಯ ವಿಚಾರವಾಗಿರುವುದಿಲ್ಲ. 2015ನೇ ಸಾಲಿನಿಂದ ನಡೆದುಕೊಂಡು ಬಂದಿರುವ ವಿಚಾರವಾಗಿದೆ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹೌದು, ಅದನ್ನೇ ನಾವು ಈಗಾಗಲೇ 3 ವರ್ಷಗಳಾಗಿದೆ ಎಂದು ಹೇಳುತ್ತಿರುವುದು.

(ಗೊಂದಲ)

**ಶ್ರೀ ಎನ್.ರವಿಕುಮಾರ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸದನ ಮುಗಿಯುವುದರೊಳಗೆ ವರದಿಯನ್ನು ಬಿಡುಗಡೆ ಮಾಡುತ್ತೇವೆಂದು ಸರ್ಕಾರದವರು ಹೇಳಲಿ.

(ಗೊಂದಲ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗದವರಿಗೆ ನ್ಯಾಯ ಒದಗಿಸಬೇಕೆಂದು ಪ್ರತ್ಯೇಕವಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ತೆರೆದು, ಒಬ್ಬರು ಸಚಿವರನಾಗಿ ನೇಮಿಸಲಾಗಿದೆ. ಹಿಂದುಳಿದ ವರ್ಗದ ಜನರ ಹಿತರಕ್ಷಣೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಹಿಂದುಳಿದ ವರ್ಗದ ಇಲಾಖೆಯನ್ನು ತೆರೆಯಲಾಗಿದೆ.

(ಗೊಂದಲ)

**ಶ್ರೀ ಸಿ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ವರದಿಯನ್ನು ತರಿಸಿ ಇಟ್ಟುಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸುಳ್ಳು ಹೇಳುತ್ತಿಲ್ಲ. ನನ್ನ ಹತ್ತಿರ ಇನ್ನೂ ವರದಿ ಬಂದಿಲ್ಲ.

(ಗೊಂದಲ)

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವರದಿಯನ್ನು ತೆಗೆದುಕೊಳ್ಳುವುದಾದರೆ ಹೇಳಲಿ, online ನಲ್ಲಿ ಬೇಕಾದರೆ ನಾವೇ ಉತ್ತರವನ್ನು ಕೊಡಿಸುತ್ತೇವೆ ತೆಗೆದುಕೊಂಡು ಸದನದಲ್ಲಿ ಹೇಳಲಿ.

(ಗೊಂದಲ)

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದೇವರಂಥವರು. ಅವರು ಸರ್ಕಾರದ ಉತ್ತರದಲ್ಲಿ ದಿನಾಂಕ: 11.04.2015 ರಂದು ಸಮೀಕ್ಷೆಯನ್ನು ಪ್ರಾರಂಭಿಸಿ, ದಿನಾಂಕ: 30.05.2015ರಂದು ಸಮೀಕ್ಷೆ ಮುಗಿದಿದೆ ಎಂದು ತಿಳಿಸಿದ್ದಾರೆ. ಸಮೀಕ್ಷೆಯು ಮುಗಿದ ಮೇಲೆ ಬುಕ್‌ಲೆಟ್ ಮಾಡುವುದಕ್ಕೆ ಎಷ್ಟು ದಿವಸ ಸಮಯಾವಕಾಶಬೇಕು? ಇವತ್ತು ಮಾನ್ಯ ಸಚಿವರು ಸದನದಲ್ಲಿ ಕುಳಿತಿದ್ದಾರೆ ಎಂದರೆ ಅದಕ್ಕೆ ಅವರಿಗೆ ಧನ್ಯವಾದಗಳನ್ನರ್ಪಿಸಬೇಕು. ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಎಂಬ ಬೇರೆ ಇಲಾಖೆ ಇರಲಿಲ್ಲ. ಈ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಪ್ರಾರಂಭ ಮಾಡಿದ ಉದ್ದೇಶ ಏನು? ಇವತ್ತು ಅದರ ವಸ್ತುಸ್ಥಿತಿ ಏನಾಗಿದೆ ಎಂದರೆ, ಹೇಳಿದರೆ ಒಂದು, ಹೇಳದಿದ್ದರೆ ಇನೊಂದು ಎನ್ನುವ ಪರಿಸ್ಥಿತಿಗೆ ಬಂದು ಕುಳಿತಿದೆ. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಈ ನಮ್ಮ ರಾಜ್ಯದಲ್ಲಿ 15+3 ರಂತೆ ಶೇ.18 ರಷ್ಟು ಮೀಸಲಾತಿಯನ್ನು ನೀಡಲಾಗುತ್ತಿದೆ. ಆದರೆ, ಇವತ್ತಿನ ದಿವಸ ಅವರ ಜನಸಂಖ್ಯೆ 27.24 ಕ್ಕೆ ಬಂದು ನಿಂತಿದ್ದೆ. ಯಾವುದೇ ಕಾರಣಕ್ಕೂ ಒಟ್ಟು ಮೀಸಲಾತಿಯನ್ನು 50% ಮೀರಬಾರದೆಂದು ಸುಪ್ರೀಂ ಕೋರ್ಟ್‌ನಿಂದ ಆದೇಶ ಹೊರಡಿಸಲಾಗಿದೆ.

**(443) 13-12-2018/SK-GR/ 6.30**

**ಶ್ರೀ ರಘುನಾಥ್ ರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ) (ಮುಂದು):–**

ಮಾನ್ಯ ಸಭಾಪತಿಯವರೇ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ಹೋದರೆ, ಒಂದೊಂದು ಕಡೆ 27 ಕ್ಕಿಂತ ಜಾಸ್ತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೇಕಡಾವಾರು ಪ್ರಮಾಣ ಬರುತ್ತದೆ. ಆದರೆ ಶೇಕಡಾ 20 ಕ್ಕಿಂತ ಮೇಲೆ ಹೋಗುವ ಇಲ್ಲಿ ಹಿಂದುಳಿದವರು ಚಪ್ಪಡಿಯಾಗಿ ಹೋಗುತ್ತಿದ್ದಾರೆ. ಈ ಎಲ್ಲಾ ಸದುದ್ದೇಶವನ್ನು ಇಟ್ಟುಕೊಂಡು ಸನ್ಮಾನ್ಯ ಸಿದ್ದರಾಮಯ್ಯನವರು ಈ ದೇಶದಲ್ಲಿ ಯಾವುದೇ ಸ್ವಾತಂತ್ರ್ಯದ ಇತಿಹಾಸದಲ್ಲಿ ಯಾವುದೇ ರಾಜ್ಯದಲ್ಲಿ ಈ ತರಹ ಸಮೀಕ್ಷೆ ಆಗಿಲ್ಲವೆಂದೂ, ಅದನ್ನು ತಾವು ಮಾಡಿರುವುದಾಗಿ ಹೇಳಿದ್ದರು. ಅದನ್ನು ನಾವೆಲ್ಲರೂ ಪಕ್ಷಾತೀತವಾಗಿ ಸ್ವಾಗತ ಮಾಡಿದೆವು. ಈಗಾಗಲೇ ಸಮೀಕ್ಷೆ ಮುಗಿದಿದೆ. ಆ ದಿನ ಸಮೀಕ್ಷೆಯನ್ನು ಪ್ರಾರಂಭ ಮಾಡುವಾಗಲೇ, ಸಾಂಕೇತಿಕವಾಗಿ ಬಜೆಟ್ ಇಟ್ಟಿದ್ದರು. ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಪೂರಕವಾದಂತಹ ಹಣ ಬಿಡುಗಡೆಯೂ ಆಗಿತ್ತು. ಆ ಸಮೀಕ್ಷೆ ನೀಡಿರುವ ವರದಿಯನ್ನು ಸರ್ಕಾರ ಯಾವ ಕಾರಣಕ್ಕೋಸ್ಕರ ಇವತ್ತು ಒಪ್ಪಿಕೊಳ್ಳುತ್ತಿಲ್ಲ ಮತ್ತು ಅದನ್ನು ತರಿಸುತ್ತಿಲ್ಲ. ಇದರಲ್ಲಿ ಎಲ್ಲೋ ಒಂದು ರಾಜಕೀಯ ಇಚ್ಛಾಶಕ್ತಿಯ ಕೊರತೆಯಾಗುತ್ತಿದೆ. ಇವತ್ತು ನಾನು ನೇರವಾಗಿ ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ. ಯಾವ ಉದ್ದೇಶದಿಂದ ಹಿಂದುಳಿದ ವರ್ಗಗಳಿಗೆ ಒಳ್ಳೆಯದಾಗಬೇಕೆಂದು ಈ ಸಮೀಕ್ಷೆಯನ್ನು ಅಂದಿನ ಮುಖ್ಯಮಂತ್ರಿಗಳು ಪ್ರಾರಂಭ ಮಾಡಿದರೋ, ಆ ಉದ್ದೇಶ ಈಡೇರಬೇಕು. ಆದರೆ ಯಾವುದೋ ಕಾರಣಕ್ಕೆ ಸರ್ಕಾರದವರು ಹೆದರುತ್ತಿದ್ದಾರೆ. ಈ ವರದಿಯನ್ನು ಹಿಂದುಳಿದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರ್ಗಗಳ ಆಯೋಗದಿಂದ ಸರ್ಕಾರ ಏಕೆ ಸಚಿವಾಲಯಕ್ಕೆ ತರಿಸಿಕೊಳ್ಳುತ್ತಿಲ್ಲ? ಈ ವರದಿಯನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗುತ್ತಿದೆ ಎಂದು ನಾನು ನೇರವಾಗಿ ಸರ್ಕಾರದ ಮೇಲೆ ಆರೋಪ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಈ ವರದಿಯನ್ನು ಉದ್ದೇಶಪೂರ್ವಕವಾಗಿ ಮಂಡನೆ ಮಾಡದಿರಲು ಕಾರಣವೇನೆಂದರೆ, ನಾಳೆ ಹಿಂದುಳಿದ ವರ್ಗದವರಿಗೆ ಏನಾದರೂ ಒಳ್ಳೆಯದು ಮಾಡಬೇಕೆಂದರೆ, ಅದಕ್ಕೆ scientific sanctity ಬೇಕು. ಇವತ್ತು ಈ ವರದಿ ಏನಾದರೂ ಹೊರಗಡೆ ಬಂದರೆ, ಹಿಂದುಳಿದ ವರ್ಗಗಳ ಸ್ಥಿತಿ–ಗತಿ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಜೀವನ ಹೇಗೆ ನಡೆದಿದೆ ಎಂಬುದು ಸಮೀಕ್ಷೆಯಿಂದ ಹೊರಗೆ ಬರುತ್ತದೆ. ಆ ಸಮೀಕ್ಷೆ ಹೊರಗೆ ಬಂದರೆ, ಹಿಂದುಳಿದ ವರ್ಗದವರಿಗೆ ಸರ್ಕಾರ ಅನಿವಾರ್ಯವಾಗಿ ಈ ಎಲ್ಲ ವ್ಯವಸ್ಥೆಯನ್ನು ಕಲ್ಪಿಸಬೇಕಾಗುತ್ತದೆ. ಅದರಿಂದ ಸರ್ಕಾರಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿ, ಉದ್ದೇಶಪೂರ್ವಕವಾಗಿ ಸರ್ಕಾರ ಈ ಕೆಲಸವನ್ನು ಮಾಡುತ್ತಿಲ್ಲ. ಆದ್ದರಿಂದ ಸರ್ಕಾರ ಅದರ ವರದಿಯನ್ನು, ಇಷ್ಟು ದಿವಸದೊಳಗೆ ಕೊಡಿ ಎಂದು ಬೇಗನೆ ಒಂದು ಆದೇಶ ಮಾಡಿ, ಆ ಆಯೋಗದಿಂದ ವರದಿಯನ್ನು ತರಿಸಿಕೊಂಡು, ಈ ಸದನ ಮುಗಿಯುವುದರೊಳಗೆ, ಸದನದಲ್ಲಿ ಮಂಡನೆ ಮಾಡಬೇಕೆಂದು ನಾನು ತಮಗೆ ವಿನಂತಿ ಮಾಡುತ್ತೇನೆ.

**ಶ್ರೀ ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ ದಿನಾಂಕ: 30–05–2005ರಲ್ಲಿ ಈ ವರದಿ ಪೂರ್ಣಗೊಂಡಿದ್ದರೂ ಸಹ ಇದರ ಮೇಲೆ ಕಮಿಟಿ ರಚನೆ ಮಾಡಿ, ಇದರಲ್ಲಿ ವಿಶೇಷ ತಜ್ಞರನ್ನು ನೇಮಕ ಮಾಡಿದ್ದು, ಆ ಸಮಿತಿ ಇದುವರೆಗೆ ಹದಿನಾರು ಬಾರಿ ಸಭೆ ಸೇರಿ ಚರ್ಚೆ ನಡೆಸಿದ್ದು, ಆ ವರದಿ ಅಂತಿಮ ಹಂತಕ್ಕೆ ಬಂದಿದೆ. ಆದ್ದರಿಂದ ಆದಷ್ಟು ಬೇಗನೆ ವರದಿಯನ್ನು ತರಿಸಿಕೊಡುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ ಶಾಶ್ವತ ಆಯೋಗದ ಕಮಿಟಿಯೇ ಇದೆ. .....

**(ಗೊಂದಲ)**

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ ಏಳು ವಿಶೇಷ ತಜ್ಞರನ್ನು ಆ ಕಮಿಟಿಗೆ ನೇಮಕ ಮಾಡಲಾಗಿದೆ. ....

**ಶ್ರೀ ಹೆಚ್.ಎಂ. ರೇವಣ್ಣ:–** ಈ ಆಯೋಗವೇ ಇರಬೇಕಾದರೆ, ಅದು ಏತಕ್ಕೆ ಬೇಕು?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ ಮೊದಲು ಮಾನ್ಯ ಸಚಿವರಿಗೆ ಇದರ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ....

**(ಗೊಂದಲ)**

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಗೊಂದಲ)

**ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ ಇದಕ್ಕೊಂದು ಇತಿಹಾಸವಿದೆ.

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ರಮೇಶ್‌ರವರು ಹೇಳಿದ ಹಾಗೇ, ಈ ಒಂದು ಆಯೋಗಕ್ಕೆ ಏಕೆ ಕೊಟ್ಟಿದ್ದಾರೆಂದು ಹೇಳಿದರೆ, ಇದು ಈ ಹಿಂದೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಆದೇಶವಾಗಿ, ಶಾಶ್ವತ ಹಿಂದುಳಿದ ಆಯೋಗ ಇರುವುದರಿಂದ ಅದರ ಮುಖಾಂತರ ಕೊಟ್ಟಿರುವಂತಹ ಕೆಲಸ. ಇದಕ್ಕೆ ಇನ್ನೊಂದು ಆಯೋಗವನ್ನು ಮಾಡುವ ಅವಶ್ಯಕತೆ ಇಲ್ಲ. ಇದು ಹಿಂದೆಯೇ ನಡೆದುಕೊಂಡು ಬಂದಿರುವಂತಹದ್ದು. ಇಲ್ಲಿಯವರೆಗೆ ಹತ್ತು ಆಯೋಗಗಳು ರಚನೆ ಆಗಿವೆ. ವೆಂಕಟಸ್ವಾಮಿ ಆಯೋಗ, ಚಿನ್ನಪ್ಪ ರೆಡ್ಡಿ ಆಯೋಗ ಇವೆಲ್ಲವನ್ನೂ ಲೆಕ್ಕ ಹಾಕಿಕೊಂಡು ಬಂದರೂ ಯಾವುದರಲ್ಲಿಯೂ Additional Committee ಆಗಿಲ್ಲ. ಆದರೆ, ಅವೆಲ್ಲವೂ ಕೂಡ sample survey ಮಾಡಿವೆ ಆದರೆ, ಈಗ ಮಾಡಿರುವಂತದ್ದು regular survey. ಮನೆ ಮನೆಗೆ ಹೋಗಿ ಜನಗಣತಿ ಮಾಡಿರುವಂತಹದ್ದು. ನೂರ ಐವತ್ತಾರು ಕಾಲಂ ಅಥವಾ ಪ್ರಶ್ನಾವಳಿಗಳಿದ್ದು ಅವರ ಪ್ರಶ್ನೆಗಳು ಕೂಡ ಅದೇ ಇತ್ತು. ಇದರಲ್ಲಿ ನಾವು ಸಹ ಭಾಗಿಯಾಗಿ, ಅದನ್ನೆಲ್ಲಾ ಕೂಡ ನಾವು ಕಣ್ಣಾರೆ ನೋಡಿದ್ದೇವೆ ಹಾಗೂ ಆ ವರದಿ ತಯಾರಾಗಿದೆ. ಇವರು ಹೇಳುವ ರೀತಿ ನೋಡಿದರೆ, ಇವತ್ತು ಶೇಕಡಾ 50 ಎಂದು ಏನು ಹೇಳಿದರು, ಅದರ ಬಗ್ಗೆ ಕೂಡ ನಾವು ಪ್ರಶ್ನೆಯನ್ನು ಕೇಳುತ್ತಿದ್ದೇವೆ. ಹಿಂದಿನ ಆಯೋಗದ ಅಧ್ಯಕ್ಷರ ಪ್ರಕಾರ, ವರ್ಗ–1 ಕ್ಕೆ ಶೇಕಡಾ 4, ವರ್ಗ–2A ಗೆ ಶೇಕಡಾ 15, ವರ್ಗ–2B ಗೆ ಶೇಕಡಾ 4, ವರ್ಗ–3A ಗೆ ಶೇಕಡಾ 4, ವರ್ಗ–3Bಗೆ ಶೇಕಡಾ 5 ರ ಅನುಪಾತದಲ್ಲಿ ಒಟ್ಟು ಶೇಕಡಾ 32 ರಷ್ಟು ಹಿಂದುಳಿದ ವರ್ಗಕ್ಕೆ ಸಿಗಬೇಕು. ಅದರ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇಕಡಾ 15 ಹಾಗೂ ಶೇಕಡಾ 3 ಅನುಪಾತದಂತೆ ಶೇಕಡಾ 18, ಈ ರೀತಿ ಒಟ್ಟಾರೆಯಾಗಿ ಶೇಕಡಾ 50ರಷ್ಟು ಮೀಸಲಾತಿ ದೊರಕಬೇಕು. ಅದೇ ತಮಿಳುನಾಡು ರಾಜ್ಯಲ್ಲಿ ಶೇಕಡಾ 60 ರಷ್ಟು ಮೀಸಲಾತಿ ದೊರಕುತ್ತಿದೆ.

**ಸಭಾಪತಿಯವರು:–** ಮಾನ್ಯ ಸದಸ್ಯರೇ ಅದನ್ನು ಬಿಡಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೋ ಇಲ್ಲವೋ ಎಂಬುದನ್ನು ಕೇಳೋಣ. ಅವರು ಉತ್ತರ ಕೊಡದೇ, ನೀವು ....

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ವರದಿ ಸಲ್ಲಿಕೆಗೆ ಸಂಬಂಧಿಸಿದಂತೆ ನಿರ್ದಿಷ್ಟವಾಗಿ ಉತ್ತರ ಕೊಡುವುದಿಲ್ಲ. ನಾವು ಎಲ್ಲಿಯವರೆಗೆ ಕೇಳೋಣ.

**ಸಭಾಪತಿಯವರು:–** ಮಾನ್ಯ ಸಚಿವರೇ ಇದಕ್ಕೆ ತಾವು ಏನು ಹೇಳುತ್ತೀರಿ?

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೇ, ಅವರು ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾಗಿರುವುದರಿಂದ ದಯಮಾಡಿ, ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ.

**ಶ್ರೀ ಎಂ.ಸಿ. ವೇಣುಗೋಪಾಲ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ಸಮೀಕ್ಷೆಗಳು ಮತ್ತೊಂದು ಮಗದೊಂದಕ್ಕೆ ಒಂದು accountability ಮತ್ತು time bound programme ಇರಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Accountability and time bound programme ಇಲ್ಲದೇ ಹೋದರೆ, ತಾವು ಸಮೀಕ್ಷೆಗಳನ್ನು ಮಾಡಿ, ಆ ಜನರಿಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಯಾವ ಸೌಲಭ್ಯಗಳು ಸಿಗಬೇಕೋ, ಅದರಿಂದ ಅವರು ವಂಚಿತರಾಗುತ್ತಾರೆ. ಇದರಲ್ಲಿ ಹಣದ ಕೊರತೆ ಇದೆ ಎನ್ನುವಂತಿಲ್ಲ. ಏಕೆಂದರೆ ಇನ್ನೂ ಸಹ ಸುಮಾರು ಮೂವತ್ನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಇದೆ. ಈ ಹಿಂದೆ ಸಮಾಜ ಕಲ್ಯಾಣ ಇಲಾಖೆಗೆ ಇಬ್ಬರು ಸಚಿವರು ಇದ್ದರು. ಈಗ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಇಬ್ಬರು ಸಚಿವರನ್ನು ಪ್ರತ್ಯೇಕವಾಗಿ ಮಾಡಿದ್ದಾರೆ. ಕೆಲಸದ ಒತ್ತಡವಿದೆ ಎಂದು ಹೇಳುವುದಕ್ಕೆ ಇದು ಸಂದರ್ಭವಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಗಮನ ಹರಿಸುತ್ತಿಲ್ಲ ಅಷ್ಟೆ.

**ಸಭಾಪತಿಯವರು:–** ಸಚಿವರೇ, ತಾವು ಹೇಳಿ. ಇದು ರೆಕಾರ್ಡ್‌ಗೆ ಹೋಗುತ್ತದೆ.

**ಶ್ರೀ ಎಂ.ಸಿ. ವೇಣುಗೋಪಾಲ್:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ. ಈ ಹಿಂದೆ ನಡೆದಂತಹ ಅಧಿವೇಶನದಲ್ಲಿ ಸಹ ವರದಿಯನ್ನು ಮಂಡಿಸಲು ಸಮಯವನ್ನು ತೆಗೆದುಕೊಂಡು ಮುಂದಿನ ಅಧಿವೇಶನದಲ್ಲಿ ನಮಗೆ ವರದಿ ಕೊಡುತ್ತೇವೆಂದು ಅವರು ಹೇಳಿದ್ದರು. ಈಗಲೂ ಸಹ ಅವರು ಇಂತಹ ದಿನ ವರದಿ ಮಂಡಿಸುತ್ತೇವೆಂದು ಹೇಳುತ್ತಿಲ್ಲ ಅಥವಾ ವರದಿ ಮಂಡನೆಯ ವಿಚಾರದಲ್ಲಿ ಸಮಸ್ಯೆ ಏನಾಗಿದೆ ಎನ್ನುವುದರ ಬಗ್ಗೆಯೂ ಚರ್ಚೆಯೇ ಇಲ್ಲದಂತಾಗಿದೆ. ಸುಮಾರು ಶೇಕಡಾ 50 ಕ್ಕೂ ಹೆಚ್ಚಿಗೆ ಇರುವಂತಹ ಹಿಂದುಳಿದ ವರ್ಗಕ್ಕೆ ಇದೊಂದು ಬಹಳ ನೋವಿನ ಸಂಗತಿಯಾಗುತ್ತದೆ. ಅವರು ಸಹ ಹಿಂದುಳಿದ ವರ್ಗಕ್ಕೆ ಸೇರಿದಂತಹವರು. ಹಿಂದಿನ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಸಾಮಾಜಿಕವಾಗಿ ಹಿಂದುಳಿದ ವರ್ಗದವರಾಗಿ, ಈ ಸಮಾಜಕ್ಕೆ ಒಂದು ಕೊಡುಗೆಯನ್ನು ಕೊಟ್ಟರು. ಆ ಕೆಲಸ ಇದುವರೆವಿಗೂ ಇತಿಹಾಸದಲ್ಲಿ ಆಗಿರಲಿಲ್ಲ. ಇದರಿಂದ ಹಿಂದುಳಿದ ವರ್ಗದವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕಾದರೆ, ಈ ವರದಿಯ ಪ್ರಾಮುಖ್ಯತೆ ಬಹಳ ಇದೆ. ಇದನ್ನು ಸಮಾಜ ಕಲ್ಯಾಣ ಸಚಿವರು ಅರ್ಥ ಮಾಡಿಕೊಳ್ಳಬೇಕು. ಇದು ಬಹಳ ಮುಖ್ಯವಾದದ್ದು. ಅದನ್ನು ಒಂದು time bound programme ಮತ್ತು accountability ಇಟ್ಟುಕೊಂಡು ಮಾಡದೇ ಇದ್ದರೆ, ಖಂಡಿತವಾಗಿಯೂ ಹಿಂದುಳಿದ ವರ್ಗದವರಿಗೆ ದ್ರೋಹ ಮಾಡಿದಂತಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ತಮಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆನ್ನುವಂತಹ ಸಮಸ್ಯೆ ಇದೆಯೇ?

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ಇದಕ್ಕೆ ಏನೂ ಸಮಸ್ಯೆಯಿಲ್ಲ. ಆದಷ್ಟು ಬೇಗನೆ, ಆ ವರದಿಯನ್ನು ಪಡೆದುಕೊಂಡು ಸದನಕ್ಕೆ ಒಪ್ಪಿಸುತ್ತೇನೆ.

**ಸಭಾಪತಿಯವರು:–** ಸಚಿವರೇ ನೀವು ಆ ರೀತಿ ಹೇಳುವುದಕ್ಕೆ ಆಗುವುದಿಲ್ಲ. ನಿರ್ದಿಷ್ಟವಾಗಿ ಇಂತಹ ದಿವಸ ಮಂಡಿಸುತ್ತೇವೆ ಎಂದು ಸ್ಪಷ್ಟವಾಗಿ ತಿಳಿಸಿ

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವು ಈ ವಿಚಾರದಲ್ಲಿ ಒಂದೇ ಸಮನೆ ಒತ್ತಡವನ್ನು ತಂದಿದ್ದೇವೆ. ಇದರಲ್ಲಿ ಯಾವುದೇ ಪೂರ್ವಾಗ್ರಹವಿಲ್ಲ. ನಾನು ಈ ವಿಚಾರದಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ಯಾವುದೇ ಸಂಕೋಚವಿಲ್ಲದೇ ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಇದೊಂದು ಬಹು ದೊಡ್ಡ ವ್ಯವಸ್ಥೆ. ಅಷ್ಟೆಲ್ಲಾ ಹಣವನ್ನು ಖರ್ಚು ಮಾಡಿ, ಒಂದು ಲಕ್ಷ ಸಿಬ್ಬಂದಿಗಳನ್ನು ಬಳಸಿಕೊಂಡು, ರಾಜ್ಯದಲ್ಲಿರುವ ಇಡೀ ಹಿಂದುಳಿದ ಎಲ್ಲಾ ವರ್ಗಗಳು ಈ ಅಂಕಿ–ಅಂಶಗಳ ವ್ಯಾಪ್ತಿಯಲ್ಲಿ ಬರುತ್ತದೆಂದು ಕಾಯುತ್ತಿರುವಾಗ, ತಾವು ಪ್ರತಿ ಸಲವೂ ಬರುವ ಅಧಿವೇಶನದಲ್ಲಿ ವರದಿಯನ್ನು ಮಂಡಿಸುತ್ತೇವೆ, ಮುಂದಿನ ಸಲ ಕೊಡುತ್ತೇನೆ. ನಾಳೆ–ನಾಡಿದ್ದು ಕೊಡುತ್ತೇವೆ ಎಂದು ಹೇಳುತ್ತಾ ಹೋಗುವುದಕ್ಕಾಗುವುದಿಲ್ಲ. ಏಕೆಂದರೆ, ಇದು ಸದನ.

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಈ ಇಲಾಖೆಗೆ ಹಿಂದುಳಿದ ವರ್ಗದವರೇ ಮಂತ್ರಿಯಾಗಿದ್ದಾರೆ. ಅವರು ಹಿಂದುಳಿದ ವರ್ಗಕ್ಕೆ ಒಂದು ಶಕ್ತಿಯನ್ನು ಕೊಡಬೇಕು. ಆದರೆ ಅವರು ಈ ಹಿಂದೆ ಹಿಂದುಳಿದ ವರ್ಗದ ಆಯೋಗದವರು ಮಾಡಿರುವಂತಹ ಜಾತಿ ಜನಗಣತಿ ವರದಿಯನ್ನು ಬಿಡುಗಡೆ ಮಾಡಲಾಗದಷ್ಟು ದುರ್ಬಲರಾಗಿದ್ದಾರೆ.

**ಶ್ರೀ ಪುಟ್ಟರಂಗಶೆಟ್ಟಿ:–** ಇದು ನಿನ್ನೆ ಮೊನ್ನೆಯದಲ್ಲ. ಇದು ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗದವರೇ ಈ ಇಲಾಖೆಯ ಸಚಿವರಾಗಿ ಬಂದಿದ್ದಾರೆ. ಈ ವಿಚಾರದಲ್ಲಿ ಏನಾಗಿದೆ, ಏಕೆ ವರದಿಯನ್ನು ಮಂಡಿಸಲು ವಿಳಂಬವಾಗುತ್ತಿದೆ ಎಂಬುದನ್ನು ಮಾನ್ಯ ಸಚಿವರು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ.

**(ಗೊಂದಲ)**

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಅದಷ್ಟು ಬೇಗನೇ ಆ ವರದಿಯನ್ನು ಪಡೆದುಕೊಂಡು ಸದನಕ್ಕೆ ಒಪ್ಪಿಸುತ್ತೇನೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೇ, ದಯವಿಟ್ಟು ಕೇಳಿ. ಮಾನ್ಯ ಸಚಿವರು ಪ್ರತಿ ಅಧಿವೇಶನದಲ್ಲಿಯೂ ಆದಷ್ಟು ಬೇಗ ವರದಿಯನ್ನು ಮಂಡಿಸುತ್ತೇವೆ ಎಂದು ಹೇಳುತ್ತಾ ಹೋಗುವುದಕ್ಕಾಗುವುದಿಲ್ಲ. ನಮಗೂ ಕೂಡ ಬದ್ಧತೆ ಇದೆ. ಆದ್ದರಿಂದ, ಸಾಧ್ಯವಾದರೆ ಈ ದಿನವೇ ವರದಿಯನ್ನು ಮಂಡಿಸಬೇಕು ಅಥವಾ ಈ ಅಧಿವೇಶನ ಮುಗಿಯುವದರೊಳಗೆ ಅಂದರೆ, 19 ನೇ ತಾರೀಖಿನೊಳಗೆ ಅವರು ಆ ವರದಿಯನ್ನು ಮಂಡಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ಈ ದಿನವೇ ನನ್ನ ಬಳಿ ಇದ್ದಿದ್ದರೆ ಅದನ್ನು ಕೊಟ್ಟು ಬಿಡುತ್ತಿದ್ದೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಸನ್ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಆ ರೀತಿ ಮಾತನಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಪುಟ್ಟರಂಗಶೆಟ್ಟಿ:–** ವರದಿ ಆಯೋಗದ ಬಳಿ ಇದೆ, ಇದನ್ನು ನಾನು ಪಡೆದುಕೊಂಡು ನಂತರ ಸದನಕ್ಕೆ ಒಪ್ಪಿಸಬೇಕಾಗುತ್ತದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಇದು ಸರ್ಕಾರದ ಜವಾಬ್ದಾರಿಯುತವಾದ ಮಾತಲ್ಲ. ತಾವೊಬ್ಬರು ಸರ್ಕಾರದ ಸಚಿವರಾಗಿದ್ದು, ಇದರಲ್ಲಿ ತಾವು ವಿಫಲರಾಗುತ್ತೀರಿ.

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ನಾನೇನು ಆಯೋಗದಿಂದ ವರದಿಯನ್ನು ತೆಗೆದುಕೊಂಡು ಇಟ್ಟುಕೊಂಡಿಲ್ಲ.. ....

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ತಮಗೆ ಶಕ್ತಿ–ಸಾಮರ್ಥ್ಯವಿದ್ದರೆ, ಈ ಅಧಿವೇಶನ ಮುಗಿಯವುದರೊಳಗೆ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸದನದಲ್ಲಿ ಮಂಡನೆ ಮಾಡಿ.

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೆ, ಆ ವರದಿಯನ್ನು ಆಯೋಗದಿಂದ ಪಡೆದುಕೊಂಡು ಅದನ್ನು ಒಪ್ಪಿಸುವಂತಹ ಪ್ರಯತ್ನವನ್ನು ನಾನು ಮಾಡುತ್ತೇನೆ.

**ಶ್ರೀ ಪಿ.ಆರ್. ರಮೇಶ್:–** ಮಾನ್ಯ ಸಭಾಪತಿಯವರೆ, ಈ ಸಮೀಕ್ಷೆಗಾಗಿ ಈಗಾಗಲೇ ಸುಮಾರು 160 ಕೋಟಿ ರೂಪಾಯಿಗಳಷ್ಟು ಹಣ ಖರ್ಚಾಗಿದೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಸರ್ಕಾರಕ್ಕೆ ಹಿಂದುಳಿದ ವರ್ಗಗಳ ಬಗ್ಗೆ ಅತ್ಯಂತ ಕಾಳಜಿ ಇರಬೇಕು. ಇದರ ಬಗ್ಗೆ ಸಚಿವರು ಬೇಜವಾಬ್ದಾರಿಯಾಗಿ ಉತ್ತರ ಕೊಡುವುದು ಸರಿಯಲ್ಲ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರೇ ಹೇಳಿ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ್ ಪೂಜಾರಿ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ನಿರ್ದಿಷ್ಟವಾಗಿ ಏನಾದರೂ ಹೇಳುವುದಾದರೆ, ಹೇಳಬೇಕು.

**(ಗೊಂದಲ)**

**ಶ್ರೀ ಪುಟ್ಟರಂಗಶೆಟ್ಟಿ:–** ಮಾನ್ಯ ವಿರೋಧ ಪಕ್ಷದ ನಾಯಕರೇ, ಅದನ್ನು ಎಲ್ಲಿ....

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ, ಒಂದು ಸರ್ಕಾರಕ್ಕೆ ಇಷ್ಟು ಜವಾಬ್ದಾರಿ ಇಲ್ಲವೆಂದರೆ ಹೇಗೆ? ಮಾನ್ಯ ಸಚಿವರ ಈ ಹೇಳಿಕೆಯನ್ನು ವಿರೋಧಿಸಿ ನಾವು walk out ಮಾಡುತ್ತೇವೆ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೆ, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಮೊದಲು ವರದಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ ಅದನ್ನು ಸದನದಲ್ಲಿ ಮಂಡಿಸಬೇಕು.

**(ಈ ಹಂತದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಬಿಜೆಪಿ ಪಕ್ಷದವರು ಸಭಾತ್ಯಾಗ ಮಾಡಿದರು)**

**(ಗೊಂದಲ)**

(444)13.12.2018,6.40,ಟಿಸಿಹೆಚ್/ಎಂಡಿ

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ವರದಿ ಬಹಳ ಹಿಂದೆಯೇ ಬರಬೇಕಾಗಿತ್ತು, ಬಿಜೆಪಿಯವರಿಂದ ಇದು ಹಾಳಾಯಿತು.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಆ ವರದಿಯನ್ನು ಒಪ್ಪಿಕೊಳ್ಳಬೇಕು. ಮಾನ್ಯ ಸಚಿವರು ಹೇಳುತ್ತಿರುವ ಉತ್ತರ ನಮಗೆ ಬೇಕಾಗಿಲ್ಲ. ದಯವಿಟ್ಟು ಈ ಪ್ರಶ್ನೆಯನ್ನು ತಡೆಹಿಡಿಯಿರಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ನಾಳೆಯೇ ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೇ ಅವರಿಂದಲೇ ಉತ್ತರ ಪಡೆಯಿರಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಾಳೆ ಅವರಿಂದ ಉತ್ತರ ಕೊಡಿಸುತ್ತೀರಾ? ಇವತ್ತು ಈ ಪ್ರಶ್ನೆಯನ್ನು ತಡೆಹಿಡಿಯೋಣ.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಬಂದಾಗಲೇ ಕೇಳಿ.

**ಶ್ರೀ ಹೆಚ್.ಎಂ.ರೇವಣ್ಣ:–** ಅವರು ನಮಗೆ ಹೇಳಬೇಕು. ಈ ವಿಚಾರ ರೆಕಾರ್ಡ್‌ಗೆ ಹೋಗಬೇಕು. ಮಾನ್ಯ ಸಚಿವರೇ, ನಾನು ನಿಮಗೆ ಕೈ ಮುಗಿಯುತ್ತೇನೆ.

**ಶ್ರೀ ಕೆ.ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಬಂದು ಉತ್ತರವನ್ನು ಕೊಡುತ್ತಾರೆಂದು ಹೇಳುವುದಕ್ಕೆ ಬರುವುದಿಲ್ಲ. ಆಯೋಗದಿಂದ ಈ ವಿಷಯ ನನಗೆ ಇನ್ನೂ ಬಂದು ತಲುಪಿಲ್ಲ. ಏನು ಉತ್ತರ ಬಂದಿದೆ ಅದನ್ನು ಮಾತ್ರ ಹೇಳುತ್ತಿದ್ದೇನೆ. ಅದು ಬಂದು ನನಗೆ ತಲುಪಿದ ಮೇಲೆ ನಾನೇ ತಂದು ಒಪ್ಪಿಸುತ್ತೇನೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಹಿಂದುಳಿದ ವರ್ಗಗಳ ಆಯೋಗವು ವರದಿ ಒಪ್ಪಿಸುವುದಕ್ಕೆ ತಯಾರಾಗಿದೆ.

**ಶ್ರೀ ಕೆ.ಪುಟ್ಟರಂಗಶೆಟ್ಟಿ (ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ ಹೇಳುವುದು ತಪ್ಪು. ಹಿಂದುಳಿದ ವರ್ಗಗಳ ಆಯೋಗದಲ್ಲಿಯೇ ವರದಿ ಇರುವುದರಿಂದ, ಅದು ಬಂದ ನಂತರ ಒಪ್ಪಿಸುತ್ತೇನೆ.

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ನಮಗೂ ಉತ್ತರ ಕೊಡಿಸಿ.

**ಶ್ರೀ ಎಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ವರದಿಯನ್ನು ಬಿಡುಗಡೆ ಮಾಡುತ್ತಾರೋ ಅಥವಾ ತಿರಸ್ಕಾರ ಮಾಡುತ್ತಾರೋ ಅದು ಬೇರೆ ವಿಚಾರ. ಆದರೆ, ಆ ವರದಿಯನ್ನು ತೆಗೆದುಕೊಳ್ಳುವುದಕ್ಕೇನು ಕಷ್ಟ. ನಾವು ಇಂತಹ ದಿನದಂದು ತೆಗೆದುಕೊಳ್ಳುತ್ತೇವೆ ಎಂದು ಹೇಳಿ.

**ಶ್ರೀ ಕೆ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಯಾರು ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಆಯೋಗದವರು ಮಾನ್ಯ ಸಚಿವರ ಮನೆಗೂ ಕೂಡ ವರದಿ ಕೊಡಲು ಹೋಗಿರುತ್ತಾರೆ.

**ಶ್ರೀ ಕೆ.ಪುಟ್ಟರಂಗಶೆಟ್ಟಿ:–** ಮಾನ್ಯ ಸದಸ್ಯರೇ, ಯಾರು ಬಂದಿದ್ದರು?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸತ್ಯವನ್ನು ಹೇಳಬೇಕು.

**ಶ್ರೀ ಕೆ.ಪುಟ್ಟರಂಗಶೆಟ್ಟಿ:–** ಮಾನ್ಯ ಸಭಾಪತಿಯವರೇ, ಇಲ್ಲಿಯವರೆಗೆ ಅವರು ಈ ವರದಿಯನ್ನು ಒಪ್ಪಿಸಿಲ್ಲ.

## 12. ಪ್ರಕಟಣೆಗಳು

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 104ರ ಮೇರೆಗೆ ವಿಧಾನಸಭೆ ದಿನಾಂಕ 13.07.2018ರಂದು 2018ನೇ ಸಾಲಿನ ರೈ ತಾಂತ್ರಿಕ ವಿಶ್ವವಿದ್ಯಾಲಯ, ಬೆಂಗಳೂರು (ತಿದ್ದುಪಡಿ) ವಿಧೇಯಕವನ್ನಾಗಿ ಅಂಗೀಕರಿಸಿದೆ ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಅವರು ಇನ್ನೂ ಇತ್ಯರ್ಥಪಡಿಸಿಲ್ಲ. ನಮಗೆ ನ್ಯಾಯ ಕೊಡಿಸಬೇಕು. ನಾವು ಮಾರ್ಚ್‌ವರೆಗೆ ಕಾಯಬೇಕೆ?

**ಸಭಾಪತಿಯವರು:–** ನೇರವಾಗಿ ಅವರ ಹತ್ತಿರವೇ ಕುಳಿತುಕೊಂಡು ಮಾತನಾಡಿ.

**ಡಾ॥ ಜಯಮಾಲ ರಾಮಚಂದ್ರ(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳು ಈ ಸದನ ಮುಗಿಯುವುದರೊಳಗೆ ಉತ್ತರ ಕೊಡಬೇಕೆಂದು ಹೇಳಿದ್ದಕ್ಕೆ, ನಾವು ಒಪ್ಪಿದ್ದೆವು. ಅದರ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಯವರ ಬಳಿ ಕೇಳಲಾಗಿ, ಸೋಮವಾರದ ದಿವಸ ಉತ್ತರ ಕೊಡುತ್ತೇನೆಂದು ಅವರೇ ಖುದ್ದಾಗಿ ಹೇಳಿದ್ದಾರೆ.

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಭಾಪತಿಯವರೇ, ಅದನ್ನು ಅವರು ನಮಗೂ ಕೂಡ ಹೇಳಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ವಿರೋಧ ಪಕ್ಷದ ನಾಯಕರು):–** ಧನ್ಯವಾದಗಳು.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಮೇಡಂ ನಮ್ಮದು ಏನು ಮಾಡುತ್ತೀರಿ? ಅದಕ್ಕೆ 160 ಕೋಟಿ ರೂಪಾಯಿ ಖರ್ಚಾಗಿದೆ.

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಈಗ ಆ ವಿಷಯ ಮುಗಿದಿದೆ. ಬರದ ಮೇಲೆ ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ ನಡೆಯುತ್ತಿದೆ. ಈಗ ಏನು ಮಾಡುವುದು ಹೇಳಿ, ಮಾನ್ಯ ಸಚಿವರು ಈಗ ಉತ್ತರ ಹೇಳಿದರಲ್ಲವೇ?

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಎಲ್ಲಿದೆ ಉತ್ತರ?

**ಸಭಾಪತಿಯವರು:–** ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಕೇಳಿ.

**ಶ್ರೀ ಪಿ.ಆರ್.ರಮೇಶ್:–** ಮಾನ್ಯ ಸಭಾಪತಿಯವರೇ, ಆಯೋಗದವರು ಕೊಡುತ್ತಾರೆ. ಆದರೆ ಸರ್ಕಾರ ತೆಗೆದುಕೊಳ್ಳುವುದಿಲ್ಲವೆಂದರೆ ಅರ್ಥವೇನು?

**ಶ್ರೀ ಹೆಚ್.ಎಂ.ರೇವಣ್ಣ:–** ಮಾನ್ಯ ಸಚಿವರು ಆ ವರದಿಯನ್ನು ನಾವು ತೆಗೆದುಕೊಳ್ಳುತ್ತೇವೆಂದು ಹೇಳಬೇಕು.

(ಗೊಂದಲ)

**ಶ್ರೀ ಕೆ.ಪುಟ್ಟರಂಗ ಶೆಟ್ಟಿ:–** ಮಾನ್ಯ ಸಭಾಪತಿಯವರೇ, ನಾಳೆ ಅವರನ್ನು ಕರೆದು ಈ ಕುರಿತು ಚರ್ಚೆ ಮಾಡುತ್ತೇವೆ.

**ಡಾ|| ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಯವರೇ, ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಬರಗಾಲದ ಬಗ್ಗೆ ಚರ್ಚೆ ಮಾಡಬೇಕು. ಸದನದಲ್ಲಿ ಕೇಳಿಸಿಕೊಳ್ಳುವವರು ಇದ್ದಲ್ಲಿ ಮಾತನಾಡುತ್ತೇವೆ.

**ಸಭಾಪತಿಯವರು:–** ಡಾ|| ಜಯಮಾಲ ರಾಮಚಂದ್ರರವರೇ, ತಾವು ಬರದ ಮೇಲಿನ ಚರ್ಚೆ ಬಗ್ಗೆ ಮಾತನಾಡಿ.

## 13. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ

**ವಿಷಯ:–** ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.

– – –

**ಡಾ|| ತೇಜಸ್ವಿನಿ ಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯದಲ್ಲಿ ನೈಸರ್ಗಿಕ ವಿಕೋಪ ಮತ್ತು ಕಡಿಮೆ ಮಳೆ ಹವಾಮಾನದ ವೈಪರೀತ್ಯ, ಹೀಗೆ ಹಲವಾರು ಕಾರಣಗಳಿಂದ ಉಂಟಾಗಿರತಕ್ಕಂಥ ಬೀಕರ ಬರಗಾಲದ ಬಗ್ಗೆ ತಾವು ನಿಯಮ 68ರ ಮೇರೆಗೆ, ಚರ್ಚೆ ಮಾಡುವುದಕ್ಕಾಗಿ ಮಾನ್ಯ ವಿರೋಧಪಕ್ಷದ ನಾಯಕರಾದಂತಹ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೀರಿ. ಅದೇ ರೀತಿ ನಮ್ಮ ವಿರೋಧಪಕ್ಷದ ಮುಖ್ಯ ಸಚೇತಕರು ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ಮತ್ತೊಬ್ಬ ಸದಸ್ಯರಾದ ಶ್ರೀ ರವಿಕುಮಾರ್‌ರವರು ಕೂಡ ಮಾತನಾಡಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರುಗಳು ಬೆಳಕು ಚೆಲ್ಲಿರುವಂತಹ ವಿಷಯಗಳನ್ನು ನಾನು ಪುನರಾವರ್ತನೆ ಮಾಡುವುದಿಲ್ಲ. ಬರಗಾಲವನ್ನು ಯಾವ ರೀತಿ ನಿರ್ವಹಣೆ ಮಾಡಬೇಕು, ಬರಗಾಲಕ್ಕೆ ಮುಖ್ಯವಾದಂತಹ ಕಾರಣಗಳು ಯಾವುವು? ಇಂತಹ ವಿಚಾರಗಳ ಬಗ್ಗೆ ಕೂಡ ನಮ್ಮ ಒಂದಷ್ಟು ಸಲಹೆಗಳು ಹಾಗೂ ಕೆಲವು ಅಂಶಗಳನ್ನು ಸರ್ಕಾರದ ಜೊತೆ ಹಂಚಿಕೊಳ್ಳುವುದಕ್ಕೆ ನಾನು ಇಷ್ಟ ಪಡುತ್ತೇನೆ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕರ್ನಾಟಕದಲ್ಲಿ ಅಧಿಕೃತ ವಿರೋಧ ಪಕ್ಷವಾಗಿರುವಂತಹ ಭಾರತೀಯ ಜನತಾ ಪಕ್ಷ ರಾಷ್ಟ್ರೀಯ ಪಕ್ಷ ಆಗಿರುತ್ತದೆ. ಕೆಳಮನೆಯ ವಿರೋಧಪಕ್ಷದ ನಾಯಕರು ಆಗಿರುವಂತಹ ಸನ್ಮಾನ್ಯ ಶ್ರೀ ಯಡಿಯೂರಪ್ಪನವರ ಆದೇಶದ ಮೇರೆಗೆ, ಐದು ತಂಡಗಳನ್ನು ರಚನೆ ಮಾಡಲಾಗಿದೆ. ಬೆಳಗಾವಿ ಅಧಿವೇಶನದಲ್ಲಿ ಈ ಬರಗಾಲದ ವಿಚಾರವನ್ನು ಸರ್ಕಾರ ಎತ್ತಿಕೊಂಡಾಗ, ನಾವು ಕೂಡ ರಾಜ್ಯದ ಎಲ್ಲಾ ಕ್ಷೇತ್ರಗಳಿಗೆ, ಅನೇಕ ತಾಲ್ಲೂಕುಗಳಿಗೆ ಹೋಗಿ, ಇನ್ನೂ ಬೇರೆ ಯಾವ್ಯಾವ ಭಾಗಗಳಲ್ಲಿ ಜನರು ಕಷ್ಟಕ್ಕೆ ಒಳಗಾಗಿದ್ದಾರೆ, ರೈತಾಪಿ ಜನತೆ, ಮೂಕ ಗೋವುಗಳು, ಪಶು ಪಕ್ಷಿಗಳು ಮತ್ತು ಕುಡಿಯುವ ನೀರಿನ ಸಮಸ್ಯೆ ಇಂತಹದ್ದನ್ನೆಲ್ಲಾ ಖುದ್ದು ನೋಡಿ ಬಂದು ವರದಿ ಸಲ್ಲಿಸಬೇಕೆಂದು ಆದೇಶವನ್ನು ಮಾಡಿದ್ದರು. ಹಾಗೆಯೇ, ಅಂತಹ ಐದು ತಂಡಗಳಲ್ಲಿ ಕೇಂದ್ರದ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣದ ಸಚಿವರಾದಂತಹ ಸನ್ಮಾನ್ಯ ಶ್ರೀ ರಮೇಶ್ ಜಿಗಜಿಣಗಿಯವರ ನೇತೃತ್ವದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ದೊಡ್ಡಬಳ್ಳಾಪುರ ತಾಲ್ಲೂಕು, ತುಮಕೂರು ಜಿಲ್ಲೆ, ಚಿತ್ರದುರ್ಗ ಜಿಲ್ಲೆ ಹೀಗೆ ಅನೇಕ ಗ್ರಾಮಗಳಿಗೆ ಕೆರೆಕಟ್ಟೆಗಳಿಗೆ ಒಂದು ತಂಡ ಭೇಟಿಯನ್ನು ಕೊಟ್ಟು, ವೀಕ್ಷಣೆಯನ್ನು ನಾವು ನಡೆಸಿದ್ದೇವೆ. ವಿಶೇಷವಾಗಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಹೋದಂತಹ ಸಂದರ್ಭದಲ್ಲಿ ಅಲ್ಲಿ ಮೂಲತಃ ಬರಗಾಲವಿದೆ. ಈ ಬರಗಾಲದಲ್ಲಿ ಎರಡು ರೀತಿ ಇದೆ. ಸಾಂಪ್ರದಾಯಿಕವಾಗಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಚಿಕ್ಕಬಳ್ಳಾಪುರ ಭಾಗವೂ ಕೂಡ ಸೇರುತ್ತದೆ. ಸಾಧಾರಣವಾಗಿ ಆ ಭಾಗ ಕೆರೆಕಟ್ಟೆಗಳ ಆಶ್ರಯದಿಂದ ಹಾಗೂ ಮಳೆ ನೀರಿನ ಮೇಲೆ ಅವಲಂಬಿತವಾಗಿರುತ್ತದೆ. ದೇವನಹಳ್ಳಿ ಸೇರಿದಂತೆ ಅಂತರ್ಜಲ ಮಟ್ಟ 1500–1700 ಅಡಿಗಳಷ್ಟು ಆಳಕ್ಕೆ ಕೊಳವೆ ಬಾವಿಯನ್ನು ಕೊರೆಯಬೇಕಾಗಿರುತ್ತದೆ. ಒಂದು ಕೊಳವೆ ಬಾವಿಯನ್ನು ಕೊರೆಯಬೇಕಾದರೆ, ಕನಿಷ್ಠ ಸುಮಾರು 8 ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತದೆ. ಇದು ತಮಗೂ ಕೂಡ ಗೊತ್ತಿದೆ. 300–400 ಅಡಿಗಳ ಆಳಕ್ಕೆ ಕೊರೆದಂತೆಲ್ಲಾ ತುಂಬಾ ಖರ್ಚು ಬರುತ್ತದೆ. ಆ ಬೋರ್‌ವೆಲ್‌ಗೆ ಪಂಪ್‌ಸೆಟ್‌ನ್ನು ಅಳವಡಿಸಿದಲ್ಲಿ ಕನಿಷ್ಠ ಸುಮಾರು 10 ಲಕ್ಷ ರೂಪಾಯಿಗಳ ಖರ್ಚು ಬರುತ್ತದೆ. ಆ ಕೊಳವೆ ಬಾವಿಯ ಕೆಳಗಡೆ ಒಂದು ಬಾರಿ ಪಂಪ್‌ಸೆಟ್‌ನ ಮೋಟರ್ ಕೆಟ್ಟಲ್ಲಿ, ಒಂದು ಬಾರಿಗೆ ಒಬ್ಬ ರೈತರು ಕೊಳವೆಬಾವಿಯಿಂದ ಮೋಟರ್‌ನ್ನು ಹೊರಕ್ಕೆ ತೆಗೆದು ಮತ್ತೆ ಅಳವಡಿಸಲು ಹೆಚ್ಚಿನ ಖರ್ಚು ಬರುತ್ತದೆ. ನಾವು ಕೂಡ ಒಬ್ಬರು ರೈತರಾಗಿ ದ್ರಾಕ್ಷಿ ಬೆಳೆಯನ್ನು ಬೆಳೆಯುತ್ತೇವೆ. ನಾನು ಕೂಡ ನನ್ನ ಜಮೀನಿನಲ್ಲಿ 1200 ಅಡಿಗಳ ಆಳಕ್ಕೆ ಬೋರ್‌ವೆಲ್‌ನ್ನು ಕೊರೆಸಿದ್ದೆನು. ಅದರ ಆಚೆಗೆ ಕೊರೆಸುವಾಗ ಭೂಮಿಯನ್ನು ಇನ್ನೂ ಎಷ್ಟು ಕೊರೆಯಲು ಸಾಧ್ಯವೆಂದು ನನಗೆ ತುಂಬಾ ದುಃಖ ಆಯಿತು. ಅದನ್ನು ಬಿಟ್ಟರೆ ನಮಗೆ ಬೇರೆ ಇನ್ನು ಯಾವುದೇ ನೀರಿನ ಆಶ್ರಯ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಒಂದು ಕಡೆ ಕೊಳವೆ ಬಾವಿಯಲ್ಲಿ ನೀರು ಬರದಿರುವುದಕ್ಕೆ ಏನು ಕಾರಣ. ಬರಗಾಲವನ್ನು ನಾವು ಶಾಶ್ವತವಾಗಿ ಪರಿಹಾರ ಮಾಡಬೇಕಾದರೆ, ಮಳೆ ಕಡಿಮೆ ಇರುವಂತಹ ಕಡೆಗಳಲ್ಲಿ ಕೆರೆಗಳ ಒತ್ತುವರಿಯನ್ನು ತೆರವು ಮಾಡಬೇಕಾಗುತ್ತದೆ. ಹಾಗೆಯೇ, ಕೆರೆಗಳಿಗೆ ಹೂಳನ್ನು ತೆಗೆಯತಕ್ಕಂಥ ಕೆಲಸ ಸಮರೋಪಾದಿಯಲ್ಲಿ ಆಗಬೇಕಾಗಿತ್ತು. ಆದರೆ ಅದು ಆಗಲಿಲ್ಲ. ಇದಕ್ಕೆ ನಾನು ಒಂದು ನಿದರ್ಶವನ್ನು ಕೊಡುತ್ತೇನೆ. ಮಂಚನಬೆಲೆ ಕೆರೆ ಚಿಕ್ಕಬಳ್ಳಾಪುರಕ್ಕೆ ಅಂಟಿಕೊಂಡಿರುವಂತಹ ಕೆರೆ ಆಗಿದ್ದು, ಸುಮಾರು 300 ಎಕರೆ ವಿಸ್ತಾರವಾಗಿರುವಂತಹ ಈ ಕೆರೆಯಲ್ಲಿ ಬೊಗಸೆಯಷ್ಟು ನೀರು ಇದೆ. ನಾನು ಅದರ ಫೋಟೋಗಳು ಮತ್ತು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವಿಡಿಯೋ ಅನ್ನು ತಂದಿದ್ದೇನೆ. ಸರ್ಕಾರ ನಮ್ಮ ದಾಖಲೆಗೆ ಕೊಡಬೇಕೆಂದು ಕೇಳಿದರೆ ಅದನ್ನು ನಾವು ಕೊಡಬೇಕಾಗುತ್ತದೆ. ಅಲ್ಲಿ ಕೆರೆ ಹೂಳು ಎತ್ತುವ ಮಾತು ಬಿಡಿ. ನಗರದ ತ್ಯಾಜ್ಯವನ್ನು ತಂದು ಆ ಕೆರೆಗೆ ತಂದು ಸುರಿಯುತ್ತಿದ್ದಾರೆ. ಒಂದು ಕಡೆ ತೆರಿಗೆ ಹಣದಲ್ಲಿ ಹೂಳನ್ನು ಎತ್ತುವಂತಹ ಪರಿಸ್ಥಿತಿ ಇರುತ್ತದೆ. ಮತ್ತೊಂದು ಕಡೆ ಕೆರೆಗಳ ಸಂರಕ್ಷಣೆ ಮಾಡದೇ, ತ್ಯಾಜ್ಯವನ್ನು ತಂದು ಅಲ್ಲಿಗೆ ಸುರಿಯುತ್ತಿದ್ದಾರೆ. ಕೆರೆಗಳ ಸುರಕ್ಷತೆಯನ್ನು ನೋಡಿಕೊಳ್ಳುತ್ತಿಲ್ಲ. ಕೆರೆಗಳ ಸುತ್ತ ಮರಗಿಡಗಳನ್ನು ನೆಡಬೇಕು. ಜಲ ಸಂವರ್ಧನೆ ಯೋಜನೆಯಲ್ಲಿ ಅಂತರ್ಜಲವನ್ನು ವೃದ್ಧಿಸುವ ರೀತಿಯಲ್ಲಿ ಕೆಲಸ ಮಾಡಬೇಕು. ಆದರೆ ಈ ಕಾರ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕೆರೆಗಳ ಹೂಳೆತ್ತುವ ವಿಚಾರದಲ್ಲಿ ಸರ್ಕಾರವು ಸಣ್ಣ ನೀರಾವರಿ ಇಲಾಖೆಯ ಮೂಲಕ ಮತ್ತು ಜಿಲ್ಲಾ ಪಂಚಾಯ್ತಿಗಳ ಮೂಲಕ ಏನು ಕೆಲಸ ಕಾರ್ಯಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕೇವಲ ಒಂದು ಗಂಟೆಯ ಕಾಲ ಪ್ರಯಾಣ ಮಾಡಬಹುದಾದ ಚಿಕ್ಕಬಳ್ಳಾಪುರ ಜಿಲ್ಲೆಗೆ ಭೇಟಿ ತಾವು ಕೊಟ್ಟರೆ, ಇದರ ಬಗ್ಗೆ ತಮಗೂ ಕೂಡ ಅರ್ಥವಾಗುತ್ತದೆ. ನಾನು ಈ ವಿಚಾರವನ್ನು ತುಂಬಾ ನೋವಿನಿಂದ ಈ ಸದನದ ಗಮನಕ್ಕೆ ತರುತ್ತಿದ್ದೇನೆ. ಸದನದಲ್ಲಿ ಪ್ರಮುಖವಾದಂತಹ ಮಾನ್ಯ ಸಚಿವರುಗಳು ಇರಬೇಕಾಗಿತ್ತು. ಬರಗಾಲದ ವಿಚಾರವಾಗಿ ಚರ್ಚೆ ಮಾಡುವುದಕ್ಕೆ ನಾವು ಇಲ್ಲಿ ಸೇರಿದ್ದೇವೆ. ಸರ್ಕಾರವು ಅಲ್ಲಿನ ಬರಪೀಡಿತ ಪ್ರದೇಶಗಳಲ್ಲಿನ ಗೋವುಗಳಿಗೆ ಕುಡಿಯುವ ನೀರಿನ ಪರ್ಯಾಯ ವ್ಯವಸ್ಥೆಯನ್ನು ಮಾಡಿದೆಯೇ? ಈ ರಾಜ್ಯದಲ್ಲಿರತಕ್ಕಂಥ ದನ–ಕರು, ಪಶು–ಪಕ್ಷಿ, ನಾವು domestic animals ಎಂದು ಏನು ನಾವು ಕರೆಯುತ್ತೇವಲ್ಲಾ, ಅವುಗಳ ಸಂಖ್ಯೆ ಎಷ್ಟು? ಈಗಾಗಲೇ ಗ್ರಾಮಗಳಲ್ಲಿ ಬರಗಾಲದಿಂದ ಉದ್ಭವಿಸಿರತಕ್ಕಂಥ ಒಂದು ವಿಷಮಪರಿಸ್ಥಿತಿಯಿಂದಾಗಿ, ಆ ಭಾಗದ ಜನರು ವಲಸೆ ಹೋಗುತ್ತಿದ್ದಾರೆ. ಗುಳೆ ಹೋಗುತ್ತಿದ್ದಾರೆ.

**(445)13-12-2018(6-50)mm-md**

**ಡಾ: ತೇಜಸ್ವಿನಿಗೌಡ (ಮುಂದು):–**

ವೃದ್ಧರನ್ನು ನೋಡಿಕೊಳ್ಳುವವರಿಲ್ಲದೇ ಬಿಕೋ ಎನ್ನುವ ಪರಿಸ್ಥಿತಿಯನ್ನು ಹಳ್ಳಿಗಳಲ್ಲಿ ನೋಡಿದೆವು. ಗಾಯದ ಮೇಲಿನ ಬರೆಯಂತೆ 'ಆಶಾ' ಕಾರ್ಯಕರ್ತೆಯರಿಗೆ ಇನ್ನೂ ಸಂಬಳ ಬಂದಿರುವುದಿಲ್ಲ. ಸರ್ಕಾರ ರೈತರಿಗೆ ಜೂನ್ ತಿಂಗಳಿನಿಂದ ಹಾಲಿಗೆ ಬೆಂಬಲ ಬೆಲೆ ನೀಡುತ್ತೇವೆ ಎಂದು ಹೇಳಿತ್ತು. ಆದರೆ ಜೂನ್ ತಿಂಗಳಿನಿಂದ ಬೆಂಬಲ ಬೆಲೆ ನೀಡಿರುವುದಿಲ್ಲ. ಹಳ್ಳಿಗಾಡುಗಳಲ್ಲಿ ಯಾವರೀತಿ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲಾಗುತ್ತದೆ ಎಂದರೆ ವಿಶೇಷವಾಗಿ ಕೇಂದ್ರಸರ್ಕಾರ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತಂದಿದೆ. ಕೆಲಸ ಇಲ್ಲದ ಕಾರ್ಮಿಕರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಬೇಕು, ಯಾವುದೇ ಒಬ್ಬ ಬಡವ ಹಸಿವಿನಿಂದ ತೊಂದರೆಗೊಳಗಾಗಬಾರದು ಎನ್ನುವ ಸದುದ್ದೇಶದಿಂದ *MGNREGA* (The Mahatma Gandhi National Rural Employment Guarantee Scheme) ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಇಲ್ಲಿ ಯಂತ್ರಗಳ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂಲಕ ಕೆಲಸಗಳನ್ನು ಮಾಡಲಾಗುತ್ತದೆ, ಅತ್ಯಂತ ಹೆಚ್ಚು ಉದ್ಯೋಗವನ್ನು ಒದಗಿಸಬಹುದಾದಂತಹ ಒಂದು clause ಅದರಲ್ಲಿದೆ, ಅಂದರೆ ನರೇಗಾ ಕಾರ್ಯಕ್ರಮದಲ್ಲಿ state asset ನ್ನು create ಮಾಡಬೇಕು, ಏನೂ ಕೆಲಸಗಳನ್ನು ಮಾಡಿಸುವಂತಿಲ್ಲ. ಇಲ್ಲಿ ಆ ರೀತಿಯ ಯಾವುದೇ ಪ್ರಯತ್ನಗಳನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ.

ಶಾಶ್ವತ ಬರಗಾಲದ ವಿಚಾರಗಳನ್ನು ನಾನು ಹೇಳಿದೆ. ಹೂಳೆತ್ತುವ ವಿಚಾರ ಬಂದಾಗ ಅತಿವೃಷ್ಟಿಯಿಂದ ಬರ ಯಾವ ರೀತಿ ಬಂದಿದೆ. ಅತಿವೃಷ್ಟಿಯಿಂದ ಎಂದರೆ, ಹೆಚ್ಚು ಮಳೆ ಬೀಳುವುದರಿಂದಲೂ ಬೆಳೆ ನಾಶವಾಗಿದೆ. ಕಡಿಮೆ ಮಳೆಯಾಗಿರುವ ಕಡೆ ಅಂದರೆ ನೀರಾವರಿ ವ್ಯವಸ್ಥೆಗಳಿಲ್ಲದಿರುವಂತಹ ಭಾಗಗಳಲ್ಲಿ ರಾಗಿ, ಜೋಳ, ತುಮಕೂರು ಮತ್ತು ಚಿತ್ರದುರ್ಗದ ಮಧುಗಿರಿ ಭಾಗಗಳಿಗೆ ಹೋಗಿದ್ದೆವು. ಅಲ್ಲಿ ಕಡಲೆ ನೆಟ್ಟಿದ್ದರು. ಅಲ್ಲಿ ಕೂಡ ಬೆಳೆ ಬರುವುದಕ್ಕಿಂತ ಮುಂಚೆಯೇ ಫಸಲು ನಾಶವಾಗಿದೆ. ನಮಗೆ ತುಂಬಾ ದುಃಖವೆನಿಸಿದ್ದೇನೆಂದರೆ, ಮುಗ್ಧ ರೈತರನ್ನು ಕೇಳಿದಾಗ ಅವರಿಗೆ ಕೇಂದ್ರ ಸರ್ಕಾರದ 'ಫಸಲ್ ಭೀಮಾ ಯೋಜನೆಯ' ಬಗ್ಗೆ ಆ ವಿಮೆಯನ್ನು ಕೊಟ್ಟಿದ್ದರೆ ಆ ಯೋಜನೆಯಡಿ ಅವರು ಖರ್ಚು ಮಾಡಿರುವ ಹಣ ಒಂದೂವರೆ ಪಟ್ಟು ಸಿಗುವಂತಹ ಸಾಧ್ಯತೆ ಇತ್ತು. ಅದರ ಬಗ್ಗೆ ಯಾವುದೇ ಮಾಹಿತಿ ಕೊಡುವಲ್ಲಿ ಜಿಲ್ಲಾಡಳಿತ ವಿಫಲವಾಗಿದೆ. ಕೇಂದ್ರ ಸಚಿವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಯವರ ಜೊತೆ ಸಭೆಯನ್ನು ಕೂಡ ಮಾಡಿದ್ದೆವು.

ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಬೋರ್‌ವೆಲ್‌ಗಳು ಫೇಲ್ ಆಗಿವೆ. ನಗರ ಪ್ರದೇಶದಲ್ಲಿ ಸಂಪೂರ್ಣ ನೀರು ಸರಬರಾಜು ವ್ಯವಸ್ಥೆ ನಿಂತು ಹೋಗಿದೆ. ದನಕರುಗಳಿಗೆ ಯಾವ ರೀತಿ ಮೇವನ್ನು ಒದಗಿಸುತ್ತೀರಿ? ಎಷ್ಟು ಮೇವು ಬ್ಯಾಂಕುಗಳನ್ನು ಸ್ಥಾಪನೆ ಮಾಡಿದ್ದೀರಿ? ಮೇವುಗಳನ್ನು ಬೆಳೆಯುವುದಕ್ಕೆ ಏನಾದರೂ ಬೋರ್‌ವೆಲ್‌ಗಳನ್ನು ಹಾಕಿದ್ದೀರಾ? ಮೇವನ್ನು ಕೊಂಡುಕೊಳ್ಳಬೇಕಾದರೂ ಎಲ್ಲೋ ಒಂದು ಕಡೆ ಮೇವನ್ನು ಬೆಳೆದಿರಬೇಕಾಗುತ್ತದೆ. ಯಾವುದೇ ರೀತಿಯ ಪ್ರಯತ್ನಗಳು ಅಲ್ಲಿ ಕಂಡು ಬರಲಿಲ್ಲ. ಇನ್ನೂ ನಾವು ಡಿಸೆಂಬರ್ ತಿಂಗಳಿನಲ್ಲಿ ಇದ್ದೇವೆ. ಸಾಧಾರಣವಾಗಿ ನಾವು ಮೇ ತಿಂಗಳಿನ ತನಕ ಬಿಸಿಲಿನ ತಾಪವನ್ನು ಎದುರಿಸಬೇಕಾಗುತ್ತದೆ. ಅಂದರೆ ಸುದೀರ್ಘವಾದ 6 ತಿಂಗಳ ಕಾಲದ ಬರದ ಭೀಕರತೆಯನ್ನು ಕಲ್ಪಿಸಿಕೊಳ್ಳಬಹುದು. ಮೂಕ ದನಕರುಗಳು ಯಾರನ್ನೂ ಕೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಬಿಜಾಪುರದ ಒಬ್ಬ ರೈತ ಅತ್ಯಂತ ಕರುಣೆ, ಪ್ರೀತಿಯಿಂದ ಸಾಕಿದಂತಹ ದನಕರುಗಳನ್ನು ಕಟುಕರಿಗೆ ಕೊಡಬೇಕಾದರೆ ಅವರ ಮನಸ್ಥಿತಿ ಹೇಗಿರುತ್ತದೆ ಎನ್ನುವುದನ್ನು ಕಣ್ಣಿಗೆ ಕಟ್ಟುವ ರೀತಿ ಹೇಳಿದರು.

ಪಂಚನದಿಗಳ ಬೀಡು ಬಿಜಾಪುರದ ಬಗ್ಗೆ ಹೇಳುವುದಾದರೆ, ಬಾಗಲಕೋಟೆ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟುವುದಕ್ಕೆ ಅಖಂಡ ಅವಿಭಜಿತ ಜಿಲ್ಲೆಗಳಾದ ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಾವಿರಾರು ಎಕರೆ ಭೂಮಿಯನ್ನು ಲೋಕಕಲ್ಯಾಣಕ್ಕಾಗಿ ರೈತರು ಕಳೆದುಕೊಂಡರು. ಬರಗಾಲದಿಂದಾಗಿ ಅವರು ಹೆತ್ತವರನ್ನು ಮತ್ತು ಅವರು ನಂಬಿದ ನೆಲವನ್ನು ಬಿಟ್ಟು ಬೇರೆ ಕಡೆಗೆ ಕೂಲಿ ಕೆಲಸ ಮಾಡಲು ಹೋಗಬೇಕಾದ ಪರಿಸ್ಥಿತಿ ಬಂದಿದೆ. ಅಂದರೆ ಸಮಾಜ ವಿಘಟನೆಯಾಗುವುದಕ್ಕೆ ಕಾರಣವಾಗುತ್ತದೆ. ಒಂದು ಸರ್ಕಾರ, ನಾಡು ಎಂದರೆ ನಮ್ಮ ಜೀವನಕ್ಕೆ ಕನಿಷ್ಠ ಭದ್ರತೆಯನ್ನು ಕೊಡದಿದ್ದರೆ ಆ ಜವಾಬ್ದಾರಿಯನ್ನು ಯಾರು ಹೊರಬೇಕಾಗುತ್ತದೆ ಎಂದು ಚಿಂತನೆ ಮಾಡಬೇಕಾಗಿದೆ.

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಹೂಳೆತ್ತುವ ವಿಚಾರ ಬಂದಾಗ ಹಿಂದೆ ಹಲವಾರು ಸಮಿತಿಗಳ ಸಭೆಗಳಲ್ಲಿ ಭಾಗವಹಿಸಿದ್ದಾಗ ನೀರಾವರಿ, ಜಲಸಂವರ್ಧನದ ಉನ್ನತಾಧಿಕಾರಿಗಳು ಬಂದಿದ್ದರು. ಇಲ್ಲಿ ಅವರ ಹೆಸರುಗಳನ್ನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ತುಂಗಭದ್ರ ಡ್ಯಾಂ ಬಗ್ಗೆ ಬಂದರೆ ಮೂರನೇ ಒಂದು ಭಾಗದಷ್ಟು ದೊಡ್ಡ ದೊಡ್ಡ ಜಲಾಶಯಗಳಲ್ಲಿ ಕೂಡ ಹೂಳು ತುಂಬಿದೆ ಎಂದರೆ ಇವತ್ತು ದೊಡ್ಡ ತಂತ್ರಜ್ಞಾನ ಯುಗದ, ಬೃಹತ್ ಯಂತ್ರಗಳನ್ನು ಕಂಡು ಹಿಡಿದಿರುವ ಯುಗದಲ್ಲಿದ್ದೇವೆ. ಯಾವ ಕೆಲಸವೂ ಮನುಷ್ಯನಿಗೆ ಅಸಾಧ್ಯ ಎನ್ನುವ ಪರಿಸ್ಥಿತಿ ಇಲ್ಲ. ಅದೇ ರೀತಿ ಆದ್ಯತೆಯನ್ನೂ ಕೊಟ್ಟಿದ್ದೇವೆ. ನೀರಾವರಿ ಇಲಾಖೆಗಿರಬಹುದು ಅಥವಾ ಲೋಕೋಪಯೋಗಿ ಇಲಾಖೆಗಳಿರಬಹುದು, ಒಂದಷ್ಟು ಪ್ರಮುಖ ಇಲಾಖೆಗಳಿಗೆ ಯಾವುದೇ ಸರ್ಕಾರವಿದ್ದರೂ ಹಣವನ್ನು ನಿಗದಿ ಮಾಡಿದ್ದೇವೆ. ಆದರೆ ತೆಗೆದ ಹೂಳನ್ನು ಬೇರೆ ಕಡೆ ಹಾಕುವುದಕ್ಕೆ ಪರ್ಯಾಯ ಮಾರ್ಗಗಳಿಲ್ಲ, ಹಾಗಾಗಿ ಹೂಳೆತ್ತುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಮತ್ತೇನು ಆಲೋಚನೆ ಮಾಡಿದ್ದೀರಿ ಎಂದು ಕೇಳಿದರೆ ನೀರನ್ನು ತುಂಬಿಕೊಳ್ಳುವುದಕ್ಕೆ ಪರ್ಯಾಯವಾದ ಒಂದು ಜಾಗ ಇದೆ ಎಂದರು. ಜಲಾಶಯವನ್ನು ನಿರ್ಮಾಣ ಮಾಡಬೇಕಾದರೆ ಎಷ್ಟೋ ಅಮೂಲ್ಯವಾದ ಭೂಮಿಯನ್ನು ರೈತರು ಕಳೆದುಕೊಂಡಿದ್ದಾರೆ. ಇರುವಂತಹ ಜಲಾಶಯದಲ್ಲಿ ಹೂಳು ತುಂಬಿದ್ದು, ಕಾಲಕಾಲಕ್ಕೆ ಹೂಳೆತ್ತದೇ ಹೂಳನ್ನು ಹಾಕುವುದಕ್ಕೆ ಜಾಗವಿಲ್ಲದಿರುವುದರಿಂದ ಇನ್ನೊಂದು ಜಾಗದಲ್ಲಿ ನೀರನ್ನು ತುಂಬುತ್ತೇವೆಂದರೆ, ಅಲ್ಲಿ ಕೂಡ ರೈತರ ಅಮೂಲ್ಯವಾದ ಜಾಗ ಹೋಗುತ್ತದೆ ಮತ್ತು ಸರ್ಕಾರದ ಬೊಕ್ಕಸದಿಂದ ಎಷ್ಟೊಂದು ಹಣ ಖರ್ಚಾಗುತ್ತದೆ. ಇದರಿಂದ ಸರಿಯಾದ ಪಾಲಿಸಿಯ ಮತ್ತು ಇಚ್ಛಾಶಕ್ತಿಯ ಕೊರತೆಯಿದೆ ಎಂದು ನಮಗನಿಸುತ್ತದೆ. ಸಾಮಾನ್ಯ ರೈತರಿಗೆ ಹೊಳೆಯುವಂತಹ ವಿಚಾರ ಫಲವತ್ತಾದ ಹೂಳು ಮತ್ತು ಮಣ್ಣನ್ನು ತೆಗೆದು ರೈತರಿಗೆ ಸಾಗಾಣಿಕೆಗೆ ಯಾವುದಾದರೂ ವಾಹನಗಳನ್ನು ಕೊಟ್ಟು, ಬರಗಾಲದಲ್ಲಿ ಎರಡು ರೀತಿ ಇದೆ. ಅತಿವೃಷ್ಟಿಯಿಂದ ಬರುವಂತಹ ಬರಗಾಲದಲ್ಲಿ ಫಲವತ್ತಾದ ಮಣ್ಣು ಸವಕಳಿಯಾಗಿರುತ್ತದೆ, ಗಿಡಗಂಟಿಗಳು ಹೋಗುತ್ತದೆ, ಬದು ಕೊಚ್ಚಿಕೊಂಡು ಹೋಗುತ್ತದೆ, ಅಂತಹ ಮಣ್ಣನ್ನು ಫಲವತ್ತತೆ ಮಾಡುವುದಕ್ಕೂ ಕೃಷಿ ಇಲಾಖೆಯಲ್ಲಿ ತುಂಬಾ ಹಣವನ್ನು ವಿನಿಯೋಗ ಮಾಡಲಾಗುತ್ತದೆ. ಒಡ್ಡುಗಳನ್ನು ಕಟ್ಟುವ ಮೂಲಕ, ಅಂತರ್ಜಲವನ್ನು ವೃದ್ಧಿ ಮಾಡುವಂತಹ ಬೇಕಾದಷ್ಟು ಯೋಜನೆಗಳಿವೆ. ಈ ಯೋಜನೆಗಳು ಏಕೆ ಸಕಾಲದಲ್ಲಿ ಜಾರಿಯಾಗಲಿಲ್ಲ ಎಂಬುದನ್ನು ಚೆಕ್ ಮಾಡುವಂತಹ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ ಎಂಬುದು ನಮಗೆ ಕಂಡು ಬಂದಿದೆ.

ಕೇಂದ್ರದ ಯಾವುದೇ ಯೋಜನೆಗಳ ಬಗ್ಗೆ ತಿಳುವಳಿಕೆ ಕೊಡಬೇಕಾಗುತ್ತದೆ. ಏಕೆಂದರೆ, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಯಾವುದೇ ಯೋಜನೆಗಳನ್ನು ನೇರವಾಗಿ ಮಾಡುವುದಕ್ಕೆ ಬರುವುದಿಲ್ಲ. ರಾಜ್ಯದ ಮೂಲಕ ಮಾಡಬೇಕಾದಾಗ ಸಾಮಾನ್ಯ ರೈತರಿಗೆ, ಬಡವರಿಗೆ ಅದು ತಲುಪುವ ರೀತಿಯಲ್ಲಿ ಮಾಡುವಲ್ಲಿ ರಾಜ್ಯಸರ್ಕಾರ ಸಂಪೂರ್ಣ ವಿಫಲವಾಗಿರುವುದನ್ನು ಸಾಕ್ಷಿ ಸಮೇತ ಕೇಂದ್ರ ಸಚಿವರ ಸಮ್ಮುಖದಲ್ಲಿ ನಾವು ಇವತ್ತು ನಿಮಗೆ ಒದಗಿಸುವುದಕ್ಕೆ ಸಿದ್ಧವಾಗಿದ್ದೇವೆ. ಈ ಸದನದಲ್ಲಿ ಎಲ್ಲವನ್ನೂ ಉಲ್ಲೇಖ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಇದನ್ನು ಅತ್ಯಂತ ನೋವಿನಿಂದ ಹೇಳುತ್ತೇನೆ. ನಾವು ಚಿಕ್ಕಬಳ್ಳಾಪುರ ಜಿಲ್ಲೆಗೆ ಹೋಗಿದ್ದಾಗ ಜಿಲ್ಲಾಧಿಕಾರಿಯವರು ಯಾವುದೋ

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಪೂರ್ವನಿಯೋಜಿತ ಕಾರ್ಯಕ್ರಮಕ್ಕೆ ಹೋಗಿದ್ದರು. ನಾವು ಅದನ್ನು ದೂಷಿಸುವುದಿಲ್ಲ. ಕೇಂದ್ರ ಸಚಿವರು ಹಾಗೆ ಬರಬಹುದಾಗಿತ್ತು, ಆದರೆ ಜಿಲ್ಲಾಧಿಕಾರಿಯವರ ಕಛೇರಿಗೆ ಭೇಟಿ ಕೊಟ್ಟು ಅಲ್ಲಿದ್ದ ಶ್ರೀಮತಿ ಆರತಿ ಎಂಬ ಅಪರ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡಿ ಮಾಹಿತಿಯನ್ನು ಕೋರಿದೆವು. ಆಗ ಮಾಧ್ಯಮದವರು ಬಂದು ಕೇಂದ್ರ ಸಚಿವರಿಗೆ ನೀವು ಬಿ.ಜೆ.ಪಿ. ಯವರು ರಾಜಕಾರಣ ಮಾಡುವುದಕ್ಕೆ ಬಂದಿದ್ದೀರಾ ಎಂದು ಕೇಳಿದರು. ಸದನ ಪ್ರಾರಂಭವಾಗಿದೆ, ಸನ್ಮಾನ್ಯ ಸದಸ್ಯರುಗಳು ಇಲ್ಲಿ ಮಾತನಾಡಬೇಕಾಗಿದೆ, ಸರ್ಕಾರದ ಗಮನ ಸೆಳೆಯಬೇಕಾಗಿದೆ. ಅನೇಕ ಸಲ ಸರ್ಕಾರ ಹೇಳುವುದಕ್ಕೂ field ನಲ್ಲಿ ಹೋಗಿ ನೋಡುವುದಕ್ಕೂ ತುಂಬಾ ವ್ಯತ್ಯಾಸಗಳಿರುತ್ತದೆ. ಒಂದು ನಿದರ್ಶನವನ್ನು ಕೊಡುವುದಕ್ಕೆ ಹೋದಾಗ ಅಲ್ಲಿ ರಾಜಕೀಯದ ಬಗ್ಗೆ ಮಾತನಾಡಿದರು. ನಾನು ಸತ್ಯ ಹೇಳುತ್ತಿದ್ದೇನೆ. ನನಗೆ ಇನ್ನೂ ಮಾನ್ಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರೇ ಕೃಷಿ ಸಚಿವರು ಎಂಬುದು ನನ್ನ ತಲೆಯಲ್ಲಿ ಕುಳಿತಿತ್ತು. ತುಂಬಾ ವರ್ಷಗಳಿಂದ ಅವರು ಕೃಷಿ ಸಚಿವರಾಗಿದ್ದರಿಂದ, ಅವರು ಹಾಗೆ ಮಾತನಾಡಲು ಸಾಧ್ಯವಿಲ್ಲವಲ್ಲ ಎಂದು ನನಗೆ ಅನ್ನಿಸಿತು. ನಮ್ಮ ರಾಜ್ಯಕ್ಕೆ ಕುಡಿಯುವ ನೀರಿನ ಬಗ್ಗೆ ಬೇಡಿಕೆಗಳ ಬಗ್ಗೆ ಮಾಹಿತಿಗಳನ್ನು ನೀಡಿದ್ದೇ ಆದರೆ ಕೇಂದ್ರಕ್ಕೆ ರವಾನಿಸುತ್ತೇವೆ ಮತ್ತು ಕೆಳಮನೆಯಲ್ಲಿಯೂ ನಮ್ಮ ಪಕ್ಷದವರು ಪ್ರಸ್ತಾಪ ಮಾಡಿದ್ದರು. ಆದರೆ ಸರ್ಕಾರದವರು ಇದನ್ನು ಹಗುರವಾಗಿ ತೆಗೆದುಕೊಂಡರು.

ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಮಾತನಾಡುವಾಗ ಕೊಡಗು ಜಿಲ್ಲೆಯ ಬಗ್ಗೆ ಮೊನ್ನೆ ಕೊಡಗಿನ ಗೌರವಾನ್ವಿತ ಸದಸ್ಯರಾದ ಶ್ರೀಮತಿ ವೀಣಾ ಅಚ್ಚಯ್ಯನವರು ಒಂದು ಪ್ರಶ್ನೆಯನ್ನು ಎತ್ತಿದ್ದರು. ನಾವು ಟೀಕೆ ಮಾಡಬಾರದೆಂದರೆ, ಟೀಕೆ ಮಾಡಿಸಿಕೊಳ್ಳದ ರೀತಿ ಇರಬೇಕಾಗುತ್ತದೆ. ಸಮ್ಮಿಶ್ರ ಸರ್ಕಾರಕ್ಕೆ ಸಮಸ್ಯೆ ಬಂದರೆ ತುಂಬಾ ಜನ Trouble Shooter ಗಳಿದ್ದೀರಿ. ರಾಜ್ಯಕ್ಕೆ ಬರಗಾಲದ ಸಮಸ್ಯೆ ಬಂದರೆ ಯಾರು Trouble Shooter? ಜಲಸಂವರ್ಧನೆಗೆ, ನೀರಾವರಿಗೆ ಇಷ್ಟು ನಿಧಿಯನ್ನು ಕೊಟ್ಟಿದ್ದಾರೆ, ಕೊಡಗಿನಲ್ಲಿ ನದಿ ಹರಿಯುವ ಪಾತ್ರವನ್ನು ಬದಲಾಯಿಸಿಕೊಂಡಿದೆ, ನದಿಯ ಪಾತ್ರ ರೈತರ ಜಮೀನಿನ ಮೇಲೆ ಹರಿದು ಹೋಗಿದೆ, ದಾರಿ ಮಾಡಿಕೊಂಡಿದೆ, ಭೂಮಿ ಹಾಳಾಗಿದೆ ಹಾಗೂ ಹೂಳು ತುಂಬಿದೆ, ನದಿಗಳು ಹರಿಯುವ ಮಾರ್ಗ ಬದಲಾಗಿದೆ ಅದು ತಮ್ಮ ಗಮನಕ್ಕೆ ಬಂದಿದೆಯೇ ಎಂದರೆ 'ಇಲ್ಲ' ಎನ್ನುವ ಉತ್ತರ ಕೊಟ್ಟಿದ್ದಾರೆ, ಹೆಚ್ಚು ವಿವರಣೆಗಳೂ ಇಲ್ಲ. ಎರಡನೇ ಪ್ರಶ್ನೆ ಕೇಳಿದರೆ ನದಿಗಳಲ್ಲಿ ತುಂಬಿರುವ ಹೂಳನ್ನು ತೆಗೆದು ನದಿಯನ್ನು ಮೂಲ ಮಾರ್ಗಕ್ಕೆ ಕಳುಹಿಸಿ ಮತ್ತೆ ಆ ಭೂಮಿಯನ್ನು ರೈತರಿಗೆ ಕೊಡುತ್ತೀರಾ ಎಂಬ ಪ್ರಶ್ನೆಗೆ 'ಉದ್ಭವಿಸುವುದಿಲ್ಲ' ಎಂದು ಹೇಳಿದ್ದಾರೆ. ನಾನು ಈ ಸದನದ, ಪೀಠದ ಮೂಲಕ ಕೇಳುವುದಕ್ಕೆ ಬಯಸುತ್ತೇನೆ. ಕಾರ್ಯಾಂಗ ಇರಬಹುದು ಶಾಸಕಾಂಗ ಇರಬಹುದು ರಾಜ್ಯದ ಜನತೆಗೆ ಕೊಡಗು ಇಡೀ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ನೈಸರ್ಗಿಕ ವಿಕೋಪದ ಬಗ್ಗೆ ಇಡೀ ಮಾಧ್ಯಮಗಳು ಕೂಡ funds raise ಮಾಡಿದ್ದರ ಬಗ್ಗೆ ನಮ್ಮ ಸದಸ್ಯರಾದ ಸುನಿಲ್ ಸುಬ್ರಹ್ಮಣಿಯವರು ಕೂಡ ಪ್ರಶ್ನೆಗಳನ್ನು ಕೇಳಿದ್ದಾರೆ. ಮುಖ್ಯಮಂತ್ರಿಗಳ ನಿಧಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟೋ ಹಣ ಸಂಗ್ರಹವಾಗಿದೆ. ಎಲ್ಲರೂ ಕೂಡ ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಸ್ಪಂದಿಸುವ ವೇಳೆಯಲ್ಲಿ ಇದು ಭೂಮಿಯ;....

**ಡಾ: ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ವಿಚಾರವಾಗಿ ಹೇಳುವುದಾದರೆ, disaster management ಗೆ ಸಂಬಂಧಪಟ್ಟಂತೆ ಜಿಲ್ಲಾಡಳಿತ ಇದರ ಬಗ್ಗೆ ನೋಡಿಕೊಳ್ಳುತ್ತದೆ. ಆ ಕಾರಣದಿಂದ ಅವರು ಹಾಗೆ ಹೇಳಿರಬಹುದು.

**ಡಾ: ತೇಜಸ್ವಿನಿಗೌಡ:–** ಮಾನ್ಯ ಸಭಾಪತಿಯವರೇ, ನಾನು ಮೊದಲೇ ಹೇಳಿದೆ, ಅದೇನೆಂದರೆ, ಆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟವಿಲ್ಲ, ಪ್ರಜಾಪ್ರಭುತ್ವದಲ್ಲಿ ಚರ್ಚೆ ಮಾಡೋಣ. ಕೇಂದ್ರದಿಂದ ನಿಧಿ ತರಬೇಕಾದರೆ ರಾಜ್ಯದಲ್ಲಿ ಅಧಿಕೃತ ವಿರೋಧಪಕ್ಷವಾದ ಬಿ.ಜೆ.ಪಿ. ಕಡೆಯಿಂದ ಯಾರ ಸಹಕಾರ ಬೇಕಾಗುತ್ತದೆ?

(446) 13–12–2018/07–00/ಕೆಹೆಚ್–ಎಕೆ

**ಡಾ॥ ತೇಜಸ್ವಿನಿ ಗೌಡ (ಮುಂದು):–** ರಾಜ್ಯದಲ್ಲಿ ಬಿ.ಜೆ.ಪಿ.,ಯವರ ಕಡೆಯಿಂದ ಮತ್ತು ಅಧಿಕೃತ ವಿರೋಧ ಪಕ್ಷದ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರ ಸಹಕಾರ ಬೇಕಾಗುತ್ತದೆ. ಮೇಲ್ಮನೆಯಲ್ಲಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಕೋಟ ಶ್ರೀನಿವಾಸ ಪೂಜಾರಿಯವರ ಸಹಕಾರ ಬೇಕಾಗುತ್ತದೆ. ಇದಕ್ಕೆ ನಾವು ಸಹಕಾರ ಕೊಡಲೇಬೇಕು. ನಮ್ಮ ರಾಜ್ಯದ ಜನ ಕಷ್ಟಕ್ಕೆ ಒಳಗಾಗಿದ್ದಾರೆ. ಅಭಿವೃದ್ಧಿಯ ವಿಚಾರ ಬಂದಾಗ ಸನ್ಮಾನ್ಯ ಡಿ.ಕೆ.ಶಿವಕುಮಾರ್‌ರವರ ಮನೆಗೆ ಹೋಗಿ ಅಭಿವೃದ್ಧಿ ಕೆಲಸದ ಬಗ್ಗೆ ಚರ್ಚೆ ಮಾಡುವಂತಹ ದೊಡ್ಡತನವನ್ನು ಮತ್ತು ಸಲುಗೆಯನ್ನು ಸನ್ಮಾನ್ಯ ಯಡಿಯೂರಪ್ಪನವರು ರೂಢಿಸಿಕೊಂಡಿದ್ದಾರೆ. ಕೇಂದ್ರ ಸರ್ಕಾರದಿಂದ ಅನುದಾನವನ್ನು ತರಬೇಕಾಗಿದೆ. ಇದರ ಬಗ್ಗೆ ಅಂಕಿ–ಅಂಶಗಳನ್ನು ಕೊಡದೇ ಇದ್ದರೆ ಅನುದಾನ ಬರುವುದಿಲ್ಲ. ಕೊಡಗಿನಲ್ಲಿ ನೈಸರ್ಗಿಕ ವಿಕೋಪ ಉಂಟಾಗಿ ತುಂಬಾ ದಿನಗಳಾಗಿವೆ. ಹಾಗಾಗಿ ಎಲ್ಲೋ ಒಂದು ಕಡೆ ಹಿನ್ನಡೆಯಾಗುತ್ತದೆ. ನಾನು ಯಾವುದೇ ವ್ಯಕ್ತಿಯ ಬಗ್ಗೆ ಮಾತನಾಡುತ್ತಾ ಇಲ್ಲ. ಅತ್ಯಂತ ಸಮರ್ಥರಾದ ನಾಯಕರುಗಳೇ ಇದನ್ನು ಕೈಗೆತ್ತಿಕೊಳ್ಳದೇ ಇದ್ದರೆ ಮತ್ತು ಮಾನ್ಯ ಮುಖ್ಯಮಂತ್ರಿಯವರ ಬಳಿ ಕೆಲಸ ಮಾಡುವುದಕ್ಕೆ ಶಕ್ತಿಯಿರುವಂತಹವರು ಹೇಳಿದರೆ ಕೆಲಸವಾಗುತ್ತದೆ. ಇದರ ಬಗ್ಗೆ ಗಮನ ಕೊಡಬೇಕಾದಷ್ಟು ಗಮನ ಕೊಟ್ಟಿಲ್ಲ ಎಂದು ನನಗನಿಸುತ್ತದೆ. ಕೊಡಗಿನವರು ವೀರ ಯೋಧರನ್ನು ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ನಾವು ಅನೇಕ ವಿಚಾರಗಳನ್ನು ಮಾತನಾಡುವಾಗ ರಾಜಕಾರಣವನ್ನು ಬೆರೆಸುವುದಿಲ್ಲ. ಇವತ್ತಿನ ದಿವಸ ಅವರುಗಳಿಗೆ ಏನು ಗೊತ್ತಿಲ್ಲ. ಕೊಡಗು ಜಿಲ್ಲೆಯಲ್ಲಿ ಕಾವೇರಿ ತಾಯಿಯನ್ನು ಮಂಡ್ಯದ ಜನ ಪೂಜಿಸುತ್ತಾರೆ. ನಾನು ಮಂಡ್ಯದ ಸೊಸೆಯಾಗಿದ್ದೇನೆ. ನಮಗೆ ಕಾವೇರಿ ಎಂದರೆ ಪೂಜ್ಯನೀಯವಾದಂತಹ ವಿಚಾರ. ಅಣೆಕಟ್ಟನ್ನು ಕಟ್ಟಿ ಕಬ್ಬು, ಭತ್ತವನ್ನು ಬೆಳೆದು, ಈ ನಾಡಿಗೆ ಅನ್ನವನ್ನು ಕೊಡುತ್ತೇವೆ. ನಮ್ಮ ಜಿಲ್ಲೆಯಲ್ಲಿ ಅತಿ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೊಡಗಿನ ಜನರಿಗೆ ಕುಡಿಯುವುದಕ್ಕೆ ನೀರಿನ ಸೌಲಭ್ಯವಿಲ್ಲವೆಂಬುದು ತಮಗೆ ಗೊತ್ತಿದೆಯೇ, ಕೊಡಗಿನಲ್ಲಿ ಗದ್ದೆಗಳಲ್ಲಿ ನೀರು ನಿಂತರೆ ಅಂತರ್ಜಲ ವೃದ್ಧಿಯಾಗುತ್ತದೆ. ಒಂದು ನೈಸರ್ಗಿಕವಾದ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಮತೋಲನವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಪ್ರತಿ ಸಂದರ್ಭದಲ್ಲಿ ಕೊಡಗಿನಲ್ಲಿ ಈ ಸಮಸ್ಯೆ ಇದೆ. ಅರಣ್ಯಗಳ ನಾಶವಾಗುತ್ತಿದೆ. ಇದೆಲ್ಲವೂ ಕೂಡ ಬರಕ್ಕೆ ಕಾರಣವಾಗುತ್ತದೆ. ಈ ವಿಚಾರದ ಬಗ್ಗೆ ಹೌದು ಅಥವಾ ಇಲ್ಲ ಎಂದು ಹೇಳಿದರೆ ನಾವು ಮಾತನಾಡಬಹುದಲ್ಲವೇ.

**ಡಾ॥ ಜಯಮಾಲ ರಾಮಚಂದ್ರ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಹೌದು ಅಥವಾ ಇಲ್ಲ ಎನ್ನುವಂತಹ ಪ್ರಶ್ನೆಯಲ್ಲ.

**ಶ್ರೀ ಎಸ್. ವೀಣಾ ಅಚ್ಚಯ್ಯ:–** ಮಾನ್ಯ ಸಭಾಪತಿಯವರೇ, . . .

**ಡಾ॥ ತೇಜಸ್ವಿನಿ ಗೌಡ:–** ಮಾನ್ಯ ಸಭಾನಾಯಕರೇ ಮತ್ತು ಮಾನ್ಯ ವೀಣಾ ಅಚ್ಚಯ್ಯನವರೇ, ಒಂದು ನಿಮಿಷ ನಾನು ಇದರ ಬಗ್ಗೆ ಮಾತನಾಡುತ್ತೇನೆ.

**ಶ್ರೀ ಎಸ್. ವೀಣಾ ಅಚ್ಚಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಬಹುಶಃ ನಮ್ಮ ಸಹೋದರಿಯವರು ತುಂಬಾ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಮೊನ್ನೆ ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಉತ್ತರವನ್ನು ಕೊಡುವುದಕ್ಕೆ ಆಗಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ನನ್ನ ಜೊತೆ ಪುನಃ ಬಂದು ಮಾತನಾಡಿ ಮಾಹಿತಿಯನ್ನು ತಿಳಿದುಕೊಳ್ಳಿ ಎಂದು ಹೇಳಿದ್ದಾರೆ. ಆದರೆ ಅಲ್ಲಿನ ವಿಫಲತೆಗೆ ನಮ್ಮ ಕೊಡಗು ಜಿಲ್ಲಾಧಿಕಾರಿಯವರ ಕಡೆಯಿಂದ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಕೊಡಗು ಜಿಲ್ಲೆಗೆ ಇಡೀ ಸರ್ಕಾರವೇ ಬಂದು ಕೊಡಗಿನ ಜನರ ಕಣ್ಣೀರನ್ನು ಒರೆಸಿರುವುದರ ಬಗ್ಗೆ ನಾನು ಮೊನ್ನೆಯೇ ಹೇಳಿದ್ದೇನೆ. ನಿಜಕ್ಕೂ ಕೊಡಗು ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳು ಸರಾಗವಾಗಿ ಆಗುತ್ತಿದೆ. ಮೊನ್ನೆಯ ದಿವಸ ಲೋಪದೋಷಗಳು ಆಗಿರುವುದಂತಹದ್ದು ನಿಜ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ಅದರ ವಿವರವನ್ನು ತರಿಸಿಕೊಂಡು ಮುಂದಿನ ಹೆಜ್ಜೆಯನ್ನು ಇಡುತ್ತೇನೆ ಎಂದು ಕೊಡಗಿನ ಜನತೆಗೆ ಭರವಸೆಯನ್ನು ಕೂಡ ಕೊಟ್ಟಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಏನು ಅನಾಹುತವಾಗಿದೆ, ಇದಕ್ಕೆ ಪರಿಹಾರದ ಕೆಲಸವನ್ನು ಖಂಡಿತವಾಗಿ ನಮ್ಮ ಸರ್ಕಾರ ಮಾಡುತ್ತದೆಂದು ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಡಾ॥ ತೇಜಸ್ವಿನಿ ಗೌಡ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನೀರಾವರಿ ವಿಚಾರಕ್ಕೆ ಬಂದಾಗ ಮಂಡ್ಯ ಜಿಲ್ಲೆಯಲ್ಲಿ ಕಾವೇರಿ ನೀರು ಹರಿದರೂ ಕೂಡ, ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಎಂದರೆ ಈ ನಾಡಿಗೆ ಒಂದು ಕಲಶಪ್ರಾಯವಾಗಿದೆ. ಮುಸದ್ದಿಗಳಾದಂತಹ ರಾಷ್ಟ್ರ ಮಟ್ಟದಲ್ಲೂ ನಾಯಕರಾಗಿರುವಂತಹ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣಾಜಿಯವರ ತವರೂರು ಮದ್ದೂರು. ಮದ್ದೂರು ಭಾಗದ tail end ಗೆ ನೀರು ಬರುತ್ತಿಲ್ಲ. ಮೊನ್ನೆ ಆಡಳಿತ ಪಕ್ಷದ ಮುಖ್ಯಮಂತ್ರಿಗಳು ಇರುವ ಪಕ್ಷದ ನಮ್ಮ ಸಹೋದರರಾದ ಶ್ರೀಕಂಠೇಗೌಡರವರು ಕೇಳಿದಾಗ ಮದ್ದೂರಿಗೆ ಇನ್ನೂ ನೀರು ಬರಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ನಾಗಮಂಗಲ ಕಡೆಗೆ ಯಾವಾಗ ನೀರಾವರಿ ಯೋಜನೆಗಳು ಬರುತ್ತದೋ, ಗೊತ್ತಿಲ್ಲ. ಇವತ್ತಿನ ದಿವಸ ಆಂಧ್ರ ಪ್ರದೇಶ ಮತ್ತು ನಮಗೆ ಇರುವಂತಹ ವ್ಯತ್ಯಾಸವೇನೆಂದರೆ ಶಾಶ್ವತವಾದ ನೀರಾವರಿ ಯೋಜನೆಗಳನ್ನು ಮಾಡದೇ ಇದ್ದರೆ ಕಷ್ಟವಾಗುತ್ತದೆ. ಎತ್ತಿನ ಹೊಳೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೋಜನೆಯನ್ನು ಮಾಡಲಾಗುತ್ತಿದೆ. ಅದನ್ನು ಕಾಲಮಿತಿಯಲ್ಲಿ ಮಾಡದೇ ಹೋದರೆ ಒಂದು ಕಡೆ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಮತ್ತೊಂದು ಕಡೆ ಅಂತರ್ಜಲ ಪೂರೈಕೆ ಮಾಡದೇ ಹೋದರೆ ಆಶ್ವಾಸನೆ ಏಕೆ ಕೊಡುತ್ತೀರಿ? ಕೋಲಾರ ಜಿಲ್ಲೆಯ ಜನರು ಫ್ಲೋರೈಡ್ ನೀರು ಕುಡಿಯುತ್ತಿದ್ದಾರೆ. ಮತ್ತೊಂದು ಯೋಜನೆ ಇದೆ. ಇದನ್ನು ಸಭಾನಾಯಕರ ಮೂಲಕ ತಮ್ಮ ಗಮನಕ್ಕೆ ತರುತ್ತೇನೆ. ತಾವು ನೀರನ್ನು ಕೊಡದೇ ಇದ್ದರೂ ಪರವಾಗಿಲ್ಲ. ನಾಗರೀಕರಾಗಿ ಪರಿಶುದ್ಧವಾದಂತಹ ಕುಡಿಯುವ ನೀರನ್ನು ಪ್ರತಿಯೊಬ್ಬರಿಗೆ ಒದಗಿಸುವುದು ನಮ್ಮ ಕರ್ತವ್ಯ ಮತ್ತು ನಮ್ಮ ಹಕ್ಕು ಕೂಡ. ಚಿಕ್ಕಬಳ್ಳಾಪುರ ಜಿಲ್ಲೆಗೆ ಕಲುಷಿತ ನೀರನ್ನು ಪೂರೈಕೆ ಮಾಡಿದ ಯೋಜನೆಗಳ ಬಗ್ಗೆ ಅಲ್ಲಿನ ಜನ ತೀವ್ರವಾದ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಸ್ವಾತಂತ್ರ್ಯ ಬಂದು ದಶಕಗಳು ಅಲ್ಲ. ಶತಮಾನಗಳಿಂದ ಕಾಯ್ದಿದ್ದೇವೆ. ಇದರ ಬಗ್ಗೆ ಇಚ್ಚಾಶಕ್ತಿ ಮತ್ತು ಬದ್ಧತೆ ಇದ್ದರೆ ಒಳ್ಳೆಯ ನೀರಾವರಿ ಯೋಜನೆಗಳನ್ನು ಕೊಡಿ. ಇಲ್ಲದಿದ್ದರೆ ಬಿಟ್ಟುಬಿಡಿ. ಇದನ್ನು ಭಗವಂತ ನೋಡಿಕೊಳ್ಳುತ್ತಾನೆ. ಕೆರೆಗಳ ಹೂಳೆತ್ತಿಸಿ, ಹುತಾತ್ಮರಾದಂತಹ ಶ್ರೀ ಡಿ.ಕೆ. ರವಿ ಎಂದು ಒಬ್ಬ ಜಿಲ್ಲಾಧಿಕಾರಿ ಇದ್ದರು. ಅವರನ್ನು ದೇವರು ತರಹ ಪೂಜಿಸುತ್ತಾರೆ. ಆ ಪುಣ್ಯಾತ್ಮ ಕೆರೆಗಳ ಒತ್ತುವರಿಯನ್ನು ತೆರವು ಮಾಡುವುದಕ್ಕೆ ಯಾವುದೇ ಶಕ್ತಿಗಳಿಗೆ yield ಆಗಲಿಲ್ಲ. ಅದೇ ರೀತಿ ಕೆರೆಗಳ ಹೂಳೆತ್ತುವ ವಿಚಾರದಲ್ಲಿ ಬಹಳ ಸಮರೋಪಾದಿಯಲ್ಲಿ ಕೆಲಸವನ್ನು ಮಾಡಿ, ಇವತ್ತಿನ ದಿವಸ ಅವರನ್ನು ನಿತ್ಯ ಸ್ಮರಿಸುವಂತಹ ಒಂದು ಆದರಣೀಯ ವ್ಯಕ್ತಿಯಾಗಿದ್ದಾರೆ ಮತ್ತು ಅವರು ದಿವಂಗತರಾಗಿದ್ದಾರೆ. ಬಯಲುಸೀಮೆಯ ಬರಗಾಲವನ್ನು ನಿಗ್ರಹ ಮಾಡುವುದಕ್ಕೆ ಬೇಕಾದಂತಹ ಮಾನದಂಡಗಳೇ ಬೇರೆ. ನಾವು ಅಕೇಶಿಯಾ ಗಿಡಗಳನ್ನು ನೆಡುತ್ತೇವೆ. ಅದಕ್ಕೆ ಏನು ಪಾಲಿಸಿ ಇದೆ. ಬರವನ್ನು ಹೊಗಲಾಡಿಸುವುದು ಒಂದು ಡಿಪಾರ್ಟ್‌ಮೆಂಟ್‌ನಿಂದ ಆಗುವುದಿಲ್ಲ. ಕೇವಲ ಕೆರೆಗಳಿಗೆ ನೀರು ತುಂಬಿದರೆ ಆಗುವುದಿಲ್ಲ. ನೀರು ಭೂಮಿಯಲ್ಲಿ ಇಂಗದಂತೆ ಮಾಡಬೇಕಾದರೆ ಕೆರೆ-ಕಟ್ಟೆಗಳ ಮೇಲೆ ಒಂದು ಹಸಿರು ಗಿಡವನ್ನು ಬೆಳೆಸಬೇಕಾಗುತ್ತದೆ. ನಾವು ಚಿಕ್ಕ ಮಕ್ಕಳು ಇರುವಾಗ ಬೇಕಾದಷ್ಟು ಗಿಡ-ಗಂಟೆಗಳು, ಪೊದೆಗಳು ಬೆಳೆಯುತ್ತಿತ್ತು. ಇದರಿಂದ ದನ-ಕರುಗಳಿಗೆ ನಿರಂತರವಾಗಿ ನೀರು ಇರುವ ಹಾಗೆ ನೋಡಿಕೊಳ್ಳುತ್ತಿತ್ತು. ಆ ಮೂಖ ಪ್ರಾಣಿಗಳಿಗೆ ನೀರನ್ನು ಎಲ್ಲಿ ಕೇಳಬೇಕೆಂದು ಭೂಮಿಯು ನೀರಿನ ಅಂಶವನ್ನು ಹಿಡಿದಿಟ್ಟುಕೊಳ್ಳುತ್ತಿತ್ತು. ದೊಡ್ಡ ಸವಾಲಿನ ರೀತಿಯಲ್ಲಿ ಭೀಕರ ಬರಗಾಲದ ಪರಿಸ್ಥಿತಿಯನ್ನು ಡಿಸೆಂಬರ್ ತಿಂಗಳ ಆರಂಭದಲ್ಲಿ ನೋಡಿದ್ದೇವೆ. ಇದಕ್ಕೆ ಸರ್ಕಾರವು ಗಮನವನ್ನು ಹರಿಸಬೇಕು. ಚಿತ್ರದುರ್ಗ ಭಾಗಕ್ಕೆ ಹೋದಾಗ ಜಲಾಶಯಗಳಿಗೆ ನೀರು ಪೂರೈಕೆ ಮಾಡುವಂತಹದ್ದು, ಹೇಮಾವತಿ ಕಡೆಯಲ್ಲೂ ಕೂಡ ಇದಕ್ಕೆ ನಾನು ರಾಜಕಾರಣ ಎಂಬ ಶಬ್ದವನ್ನು ಬಳಸುವುದಿಲ್ಲ. ಆದರೆ ಆ ಜಲಾಶಯಕ್ಕೆ ನೀರು ಬಂದಿಲ್ಲ. ತುಮಕೂರು ಮತ್ತು ಚಿತ್ರದುರ್ಗದ ಭಾಗಕ್ಕೆ ನೀರು ಬರುತ್ತಿಲ್ಲವೆಂದರೆ ಅದಕ್ಕೆ ನಾನು ಕಾರಣವನ್ನು ಹೇಳುವುದಿಲ್ಲ. ಈ ಪೀಠದ ಮೂಲಕ ಇದರ ಬಗ್ಗೆ ಅರ್ಥ ಮಾಡಿಕೊಳ್ಳುವಂತಹ ಶಕ್ತಿ ಇದೆ. ಸರ್ಕಾರಕ್ಕೆ ಜಡ್ಡು ಹಿಡಿದುಕೊಂಡಿರುವುದರಿಂದ, ಈಟಿಯಿಂದ ತೀವಿಯುವುದಕ್ಕೆ ನಾವು ಇಲ್ಲಿ ಕುಳಿತಿರುವಂತಹದ್ದು, ಆ ತೀವಿಯುವಂತಹ ಅವಕಾಶವನ್ನು ತಾವು ಮಾಡಿಕೊಟ್ಟಿದ್ದೀರಿ. ಇದರ ಬಗ್ಗೆ ಸರ್ಕಾರ ಮೈಮರೆತಿದೆ, ಅದಕ್ಕೆ ಸರ್ಕಾರವು ಸಮರೋಪಾದಿಯಲ್ಲಿ ಎಚ್ಚೆತ್ತುಕೊಳ್ಳಬೇಕೆಂಬುದು ನನ್ನ ಉದ್ದೇಶವಾಗಿದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

" ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

ಇನ್ನು ನಮ್ಮ ರಾಜ್ಯದ ನೀರಿನ ಹಕ್ಕನ್ನು ಪ್ರತಿಪಾದನೆ ಮಾಡುವುದಕ್ಕೋಸ್ಕರ ನ್ಯಾಯಾಧಿಕರಣದಲ್ಲಿ ನೂರಾರು ಕೋಟಿ fees ಅನ್ನು ಕೊಟ್ಟು, ಬಂದ ಎಲ್ಲಾ ಸರ್ಕಾರ ಇದರ ಬಗ್ಗೆ ಪ್ರಯತ್ನ ಮಾಡಿದೆ. ಅನೇಕ ಸಂದರ್ಭದಲ್ಲಿ ನೆರೆ ರಾಜ್ಯಗಳ ಜೊತೆಗೆ ನಮ್ಮ ನೀರಿನ ಹಕ್ಕಿನ ಹಕ್ಕೊತ್ತಾಯ ಮಾಡುವಾಗ, ಮುಖ್ಯಮಂತ್ರಿಯಾಗಿದ್ದಂತಹವರು ಸೆರೆಮನೆ ವಾಸಕ್ಕೆ ಹೋಗಬೇಕಾದಂತಹ ಸನ್ನಿವೇಶ ಸೃಷ್ಟಿಯಾಗಿದೆ. ಏಕೆಂದರೆ, ನೀರು ನಮಗೆ ಜೀವ ಜಲ. ಇದು ನಮಗೆ ಬಹಳ ಅನಿವಾರ್ಯವಾಗಿರುತ್ತದೆ. 2010 ಡಿಸೆಂಬರ್‌ನಲ್ಲಿ ನ್ಯಾಯಾಧಿಕರಣ ಆಲಮಟ್ಟಿ ಜಲಾಶಯವನ್ನು 519 ಮೀಟರ್‌ನಿಂದ 526 ಮೀಟರ್‌ಗೆ ಹೆಚ್ಚಿಸಲು ನಿರ್ಣಯವನ್ನು ಕೊಟ್ಟಿದೆ. 526 ಮೀಟರ್‌ಗೆ ಎತ್ತರಿಸಿದರೆ 130 ಟಿ.ಎಂ.ಸಿ. ಹೆಚ್ಚುವರಿ ನೀರು ನಮ್ಮ ರಾಜ್ಯಕ್ಕೆ ಲಭಿಸುತ್ತದೆ. ಇದರ ಬಗ್ಗೆ ಸರ್ಕಾರದವರು ಏನು ಆದ್ಯತೆಯನ್ನು ಮಾಡಿದ್ದಾರೆ. ಮೊನ್ನೆಯ ಬಜೆಟ್‌ನಲ್ಲಿ ನಮ್ಮ ಜಲಸಂಪನ್ಮೂಲ ಇಲಾಖೆಗೆ ಸ್ವಲ್ಪ ಹೆಚ್ಚು ನಿಧಿ ಸಿಕ್ಕಿದೆ. ಸನ್ಮಾನ್ಯ ಡಿ.ಕೆ.ಶಿವಕುಮಾರ್‌ನಂತಹ ಒಬ್ಬ ಹಿರಿಯ ಸಮರ್ಥ ಸಚಿವರಿಗೆ ಮಾನ್ಯ ಮುಖ್ಯಮಂತ್ರಿಯವರನ್ನು ಮನವೊಲಿಸುವಂತಹ ಶಕ್ತಿ ಇರುವುದರಿಂದ, ಅವರು 526 ಮೀಟರ್‌ಗೆ ಎತ್ತರಿಸುತ್ತಾರೆಂದು ನಾವು ಇದನ್ನು ನಿರೀಕ್ಷೆ ಮಾಡಿದ್ದೇವೆ. ಇಲ್ಲದಿದ್ದರೆ ಇದರ ಬಗ್ಗೆ ನಾವು ಏನಾದರೂ ಮಾಡಿದರೆ ಬೆಳಗಾವಿ ಸುವರ್ಣ ಸೌಧದಲ್ಲಿ ಅಧಿವೇಶನ ಮಾಡಿ, ಮಾನ್ಯ ವಿರೋಧ ಪಕ್ಷದವರು ಧರಣಿ ಮಾಡಿದ ತಪ್ಪಿಗೆ ಕಾಲಹರಣ ಮಾಡಲಾಯಿತು ಎಂದು ಟೀಕೆಗಳನ್ನು ಮಾಡುವುದಂತಹದ್ದು ಇದರ ಬಗ್ಗೆ ಇಚ್ಛಾಶಕ್ತಿ ಇದ್ದರೆ ಸುವರ್ಣ ಸೌಧದಲ್ಲಿ ನಡೆಯುವಂತಹ ಈ ಅಧಿವೇಶನದಲ್ಲಿ ಆಲಮಟ್ಟಿ ಜಲಾಶಯದ ಎತ್ತರವನ್ನು ಎತ್ತರಿಸುತ್ತೇವೆ. ಅದಕ್ಕೆ ಒಂದು ಆಯವ್ಯಯವನ್ನು ವಿನಿಯೋಗಿಸುತ್ತೇವೆ ಎನ್ನುವ ಮಾತನ್ನು ಕೊಟ್ಟರೆ ಸರ್ಕಾರ ಹೇಳುವುದರಲ್ಲಿ ಯಾವುದಾದರೂ ಒಂದು ರೀತಿಯ ಅರ್ಥ ಸಿಗುತ್ತದೆ. ಅದೇ ರೀತಿ ಕಾವೇರಿ ಜಲಾಶಯದಲ್ಲೂ ಕೂಡ 14 ಮುಕ್ಕಾಲು ಟಿ.ಎಂ.ಸಿ., ನೀರು allocate ಆಗಿದೆ. ಮಾನ್ಯ ಸಚಿವರು ಬೇರೊಂದು ವಿಚಾರಕ್ಕೆ ಕೊಟ್ಟಿರುವಂತಹ ಮಾಹಿತಿಯಲ್ಲಿ ಜಲಾಶಯವನ್ನು ಎತ್ತರಿಸಬೇಕಾದರೆ 75 ಸಾವಿರ ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಬಹುದು. ಇದ್ದರಿಂದ 20 ಹಳ್ಳಿಗಳು ಮುಳುಗಡೆಯಾಗುತ್ತದೆ ಎಂದು ಹೇಳಿದ್ದಾರೆ. ರೈತರು ಭೂಮಿಯನ್ನು ಕಳೆದುಕೊಂಡು ತನ್ನ ಭಾವನಾತ್ಮಕ ಕರುಳುಬಳ್ಳಿಯನ್ನು ಕಳೆದುಕೊಂಡಂತಹವರಿಗೆ ಪುನರ್ ವಸತಿಯನ್ನು ಮಾಡುವಂತಹದ್ದು ನಮ್ಮ ಆದ್ಯತೆಯಾಗದೆ ಇದ್ದರೆ, ಇನ್ಯಾವುದು ನಮ್ಮ ಆದ್ಯತೆಯಾಗುತ್ತದೆ? ನಮ್ಮ ಆದ್ಯತೆ ಯಾವುದು ಎಂಬುದನ್ನು ಸರ್ಕಾರ ಫಿಕ್ಸ್ ಮಾಡಿಕೊಳ್ಳಬೇಕಲ್ಲವೇ? ಅದೇ ರೀತಿ ರೈತರು ದುಪ್ಪಟ್ಟು ಹಣಕ್ಕೆ ಬೇಡಿಕೆಯನ್ನಿಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದನ್ನು ಕೇಳಿ ನನಗೆ ಬಹಳ ದುಃಖವಾಯಿತು. ನಾವು ರೈತರಿಗೆ ಯಾವುದೇ ರೀತಿಯ ಭಿಕ್ಷೆಯನ್ನು ಕೊಡುತ್ತಿಲ್ಲ. ರೈತರು ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಅವರು ಮತ್ತೊಂದು ಕಡೆ ಭೂಮಿಯನ್ನು ಕೊಂಡುಕೊಳ್ಳಬೇಕಲ್ಲವೇ? ಇದ್ದರಿಂದ ರೈತರು ತಮ್ಮ ಬದುಕನ್ನು ಕಟ್ಟುಕೊಳ್ಳಬೇಕಲ್ಲವೇ? ರೈತರಿಗೆ ದುಪ್ಪಟ್ಟು ಹಣವನ್ನು ಕೊಡಬೇಡಿ. ಒಳ್ಳೆಯ ಅಮೂಲ್ಯವಾದ ಭೂಮಿಯನ್ನು ಕೊಂಡು ರೈತರಿಗೆ ಕೊಟ್ಟುಬಿಡಿ. ಒಂದು ಸುವ್ಯವಸ್ಥಿತವಾದ ಗ್ರಾಮ ನಿರ್ಮಾಣವನ್ನು ನಾವೇ ಮಾಡಿಕೊಡಬೇಕಾಗುತ್ತದೆ. ಇದನ್ನು ರೈತರು ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ರೀತಿಯ ನಕಾರಾತ್ಮಕ ದೃಷ್ಟಿಕೋನವನ್ನು ಕೈಬಿಡಬೇಕು. ಹೆಚ್ಚುವರಿ ನೀರನ್ನು ಬಳಸುವುದಕ್ಕೆ 9 ಉಪಯೋಜನೆಗಳನ್ನು ರೂಪಿಸಲಾಗಿದೆ. ಈ

ಯೋಜನೆಗಳಿಂದ 7 ಜಿಲ್ಲೆಗಳ ಫಲಾನುಭವಿಗಳ ವ್ಯಾಪ್ತಿಗೆ ಬರಲಿದ್ದು, ಒಟ್ಟು 14,67,000 ಎಕರೆ ಭೂಮಿ ನೀರಾವರಿಗೆ ಒಳಪಡುತ್ತದೆ. ಇದಕ್ಕೆ ಎಷ್ಟು ವರ್ಷಗಳು ಬೇಕು? ಉತ್ತರ ಕರ್ನಾಟಕದ ಬಗ್ಗೆ ನೀರಾವರಿ ಯೋಜನೆಯನ್ನು ಮಾಡದೇ ಇದ್ದರೆ, ರೈತರ ಬದುಕನ್ನು ಹಸನು ಮಾಡದೇ ಇದ್ದರೆ, ಯಾವ ರೀತಿ ಉತ್ತರ ಕರ್ನಾಟಕ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ.

**(447) 13-12-2018 (7-10) ಎಸ್‌ಪಿಆರ್-ಎಕೆ**

**ಡಾ॥ ತೇಜಸ್ವಿನಿ ಗೌಡ(ಮುಂದು):-**

ಈ ಸರ್ಕಾರ ಯಾವುದೇ ಸಬೂಬುಗಳನ್ನು ಹೇಳದೇ, ಸಮರೋಪಾದಿಯಲ್ಲಿ ನೀರಾವರಿ ಯೋಜನೆಗಳನ್ನು ಮಾಡುವುದರಿಂದ 14 ಲಕ್ಷ ಎಕರೆ ಎಂದರೆ, ಎಷ್ಟು ಜನರ ಬದುಕು ಹಸನಾಗುತ್ತದೆಯಲ್ಲವೆ. ಆ ಪ್ರದೇಶದ ರೈತರು ಮತ್ತು ಅವರ ಮಕ್ಕಳು ನಿರುದ್ಯೋಗ ಸಮಸ್ಯೆಯಿಂದಾಗಿ ಮುಂಬೈಗಳಂತಹ ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಹೀಗೆ ವಲಸೆ ಹೋದ ರೈತರ ಮಕ್ಕಳು ಅತ್ಯಂತ ಕಳಪೆ ಕಾಮಗಾರಿಗಳ ಕೆಲಸಗಳಿಗೆ ಸೇರುತ್ತಾರೆ. ಪದವಿ ವಿದ್ಯಾಭ್ಯಾಸ ಮಾಡಿದವರೂ ಸಹ ಉದ್ಯೋಗವಿಲ್ಲದೆ ಕಷ್ಟಪಡುತ್ತಿದ್ದಾರೆ. ಈ ಕಾರಣಗಳಿಂದಾಗಿ ಸರ್ಕಾರವು ಈ ವಿಷಯದ ಕಡೆಗೆ ಗಮನ ಹರಿಸಬೇಕು. ಕೃಷ್ಣಾ ಮೇಲ್ದಂಡೆ ಯೋಜನೆಯ ವಿಚಾರದಲ್ಲಿ 6,000 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಬೇಕು ಎಂಬುದಾಗಿ ಹೇಳುತ್ತಾರೆ. ಈ ವಿಚಾರದಲ್ಲಿಯೂ ಸಹ ಸರ್ಕಾರವು ಯಾವುದೇ ಸಬೂಬನ್ನು ಹೇಳದೇ, ತಕ್ಷಣವೇ ಭೂ ಸ್ವಾಧೀನ ಪಡಿಸಿಕೊಳ್ಳಬೇಕು. ಒಟ್ಟಾರೆಯಾಗಿ ಕಾಲುವೆಗಳನ್ನು ನಿರ್ಮಿಸಬೇಕು. ಅಣೆಕಟ್ಟುಗಳನ್ನು ನಿರ್ಮಿಸಿ, ಅಲ್ಲಿ ನೀರನ್ನು ತುಂಬಲಾಯಿತು. ದಿವಂಗತ ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಕಾಲುವೆಗಳ ನಿರ್ಮಾಣದಂತಹ ಯೋಜನೆಗಳಿಗೆ ಅಡಿಪಾಯ ಹಾಕಿದ್ದರು. ನಾನು ಮತ್ತೊಮ್ಮೆ ಹೇಳುವುದೇನೆಂದರೆ, ಅವಿಭಜಿತ ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ರೈತರ ತ್ಯಾಗದಿಂದ ಈ ಯೋಜನೆಗಳಿಗೆ ಭೂಮಿ ದೊರೆತಿದೆ. ಭೂಮಿಯನ್ನು ಕಳೆದುಕೊಂಡ ರೈತಾಪಿ ಬಂಧುಗಳು ಬರಗಾಲದಿಂದಾಗಿ ತಮ್ಮ ಊರನ್ನು ತೊರೆದು ಗುಳೆ ಹೋಗುತ್ತಿರುವ ಬಗ್ಗೆ ರೈತ ಸಂಘದವರು ಹೇಳಿದ್ದಾರೆ. ಇದಕ್ಕೆ ಸರ್ಕಾರ ಸ್ಪಂದಿಸಬೇಕು. ಮಹದಾಯಿಯಂತಹ ಯಾವುದೇ ನೀರಾವರಿ ಯೋಜನೆಗಳನ್ನು ಸರ್ಕಾರವು ಸಮರೋಪಾದಿಯಲ್ಲಿ ಕೈಗೆತ್ತಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅತಿವೃಷ್ಟಿಯ ವಿಚಾರವಾಗಿ ನಾವು ಮೊನ್ನೆಯ ದಿನ ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ಕರಾವಳಿ, ಮಲೆನಾಡು ಹಾಗೂ ಹಾಸನ ಭಾಗಗಳಲ್ಲಿ ಬೆಳೆಯುವಂತಹ ಅಡಿಕೆ, ತೆಂಗು ಇತ್ಯಾದಿ ಬೆಳೆಗಳ ವಿವರಗಳನ್ನು ಮಾನ್ಯ ಸದಸ್ಯರುಗಳು ಈಗಾಗಲೇ ಕೊಟ್ಟಿದ್ದಾರೆ. ಹೀಗಾಗಿ ಸಮಯ ಉಳಿಸುವ ದೃಷ್ಟಿಯಿಂದ ಅವುಗಳ ಅಂಕಿ-ಅಂಶಗಳಿಗೆ ನಾನು ಹೋಗುವುದಿಲ್ಲ. ಕೊಳೆ ರೋಗ ಬಂದು ವಾಣಿಜ್ಯ ಬೆಳೆಯಾದ ಅಡಿಕೆಯು ನಷ್ಟವಾಗಿ ಹೋಯಿತು. ಅತಿಯಾದ ನೀರು ಬಂದು ಭತ್ತದಂತಹ ಬೆಳೆಗಳ ಗದ್ದೆಗಳು ಕೊಚ್ಚಿಕೊಂಡು ಹೋದವು. ರಾಗಿ ಬೆಳೆಯು ಒಣಗಿ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಯಿತು. ಕೊಡಗನ್ನು ಸೇರಿಕೊಂಡು ಮಲೆನಾಡಿನ ಭಾಗದ ರೈತರು ತಮ್ಮ ಭೂಮಿಗಳನ್ನು ಕಳೆದುಕೊಂಡರು. ಅಲ್ಲಿನ ಭೂಮಿಯು ಗುಡ್ಡಗಾಡು ರೀತಿಯಲ್ಲಿತ್ತು. 10 ಎಕರೆಗಳಷ್ಟು ಇದ್ದ ಭೂಮಿ ಈಗ ನೆಲಸಮವಾಗಿ ಎರಡು ಎಕರೆಗಳಷ್ಟು ಭೂಮಿಯಾಗಿದೆ. ಪ್ರಸ್ತುತ ಸರ್ಕಾರದ ಎದುರಿರುವ ದೊಡ್ಡ ಸಮಸ್ಯೆ ಹಾಗೂ ಸವಾಲುಗಳನ್ನು ನಾವು ಒಪ್ಪಿಕೊಳ್ಳುತ್ತೇವೆ. ಸರ್ಕಾರ ಇಲ್ಲಿಯವರೆವಿಗಿನ ಬರಗಾಲ ಹಾಗೂ ಅತಿವೃಷ್ಟಿ ಪರಿಸ್ಥಿತಿಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರಕ್ಕೆ ನೆರವು ಕೋರಿ ಬರ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತದೆ. ಮಾನ್ಯ ಸದಸ್ಯರುಗಳು ಸದರಿ ಜಿಲ್ಲೆಗಳಿಂದ ಬಂದಿದ್ದಾರೆ. ಪ್ರವಾಹ ಬಂದಾಗ ನೀರಿನ ಹರಿವು ಭಯ ಭೀತಿಗಳನ್ನುಂಟು ಮಾಡುವಂತಿರುತ್ತಿತ್ತು. ಆದರೆ ಇವತ್ತಿನ ದಿವಸ ನದಿಗಳ ನೀರಿನ ಹರಿವಿನ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ. ಜೊತೆಗೆ ಫಲವತ್ತಾದ ಮಣ್ಣು ಕೊಚ್ಚಿಕೊಂಡು ಹೋಗಿದೆ ಹಾಗೂ ರಸ್ತೆಗಳೂ ಸಹ ಹಾಳಾಗಿ ಹೋಗಿವೆ. ಬಡವರ ಮನೆಗಳು ಕುಸಿದು ಬಿದ್ದವು. ಇವುಗಳೆಲ್ಲದರಿಂದಾಗಿ ಅವರುಗಳು ತಮ್ಮ ಬದುಕುಗಳನ್ನು ಕಳೆದುಕೊಂಡು ಬೀದಿಗೆ ಬರುವಂತಾಯಿತು. ಬಡವರ ಬದುಕನ್ನು ಕಟ್ಟಿಕೊಡುವ ವಿಚಾರದಲ್ಲಿ ಸರ್ಕಾರವು ಆದ್ಯತೆಯನ್ನು ಕೊಡಬೇಕು ಹಾಗೂ ಅವರುಗಳಿಗೆ ಪರ್ಯಾಯ ಮಾರ್ಗಗಳನ್ನು ನೀಡಬೇಕು. ಶಿರಾಡಿ ಘಾಟ್ ರಸ್ತೆಯನ್ನು ಕಾಮಗಾರಿಗಾಗಿ ಒಂದು ವರ್ಷದ ಮಟ್ಟಿಗೆ ಮುಚ್ಚಲಾಯಿತು. ಅಲ್ಲಿ ಸಣ್ಣ ಸಣ್ಣ ಅಂಗಡಿಗಳನ್ನು ಹೊಂದಿದ್ದವರಿಗೆ ವ್ಯಾಪಾರವಿಲ್ಲದಂತಾಗಿ ಅವರುಗಳು ಎಲ್ಲಿಗೆ ಹೋಗಬೇಕು? ಅಂತಹವರುಗಳಿಗೆ ನಾವು ಯಾವ ರೀತಿಯ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆ? ಅವರುಗಳಿಗೆ ನಾವು ಖಾಯಂ ಉದ್ಯೋಗಗಳನ್ನು ಕೊಡುವುದಕ್ಕಂತೂ ಸಾಧ್ಯವಿಲ್ಲ. ರಾಜ್ಯದ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳು ಧಾರ್ಮಿಕ ಯಾತ್ರಾ ಸ್ಥಳಗಳಾಗಿವೆ. ಪ್ರವಾಸೋದ್ಯಮದಿಂದ ಸದರಿ ಧಾರ್ಮಿಕ ಕ್ಷೇತ್ರಗಳಲ್ಲಿ ಹೂವು, ಗಂಧ ಇತ್ಯಾದಿಗಳನ್ನು ಮಾರುವವರು ಸದರಿ ರಸ್ತೆಯ ಮೇಲೆ ಅವಲಂಬಿತರಾಗಿದ್ದಾರೆ. ಇವತ್ತಿನ ದಿವಸ ಅವರುಗಳೆಲ್ಲರೂ ಸಹ ತಮ್ಮ ಬದುಕನ್ನು ಕಳೆದುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಸರ್ಕಾರ 'ಈವರೆಗೆ ಅಲ್ಲಿ ಸಂಭವಿಸ್ಸಿದಂತಹ ನಷ್ಟದ ಪ್ರಮಾಣವೆಷ್ಟು; ಅಲ್ಲಿ ಕಳೆದುಕೊಂಡ ಭೂಮಿ ಎಷ್ಟು; ಬೀದಿಗೆ ಬಂದ ಬಡವರೆಷ್ಟು; ಎಷ್ಟು ಜನರ ಬದುರು ಶಾಶ್ವತವಾಗಿ ಹಾಳಾಗಿ ಹೋಗಿದೆ; ಇದರಿಂದಾಗಿ ಎಷ್ಟು ಜನರಿಗೆ ಭಾಗಶಃ ಪರಿಣಾಮ ಬೀರಿದೆ?' ಇಂತಹ ಹಲವಾರು ಅಂಶಗಳ ಬಗ್ಗೆ ಯಾವುದೇ ರೀತಿಯ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿಲ್ಲ. ಮಾನ್ಯ ಶ್ರೀಮತಿ ಎಸ್.ವೀಣಾ ಅಚ್ಚಯ್ಯನವರು ಆಡಳಿತ ಪಕ್ಷದ ಸದಸ್ಯರಾಗಿದ್ದಾರೆ. ಆದರೆ ಇದು ಪಕ್ಷದ ವಿಚಾರವಲ್ಲ. ನಾವು ಕೊಡಗಿನ ವಿಚಾರ ಬಂದಾಗ ಅಲ್ಲಿಗೆ ಸರ್ಕಾರದ ಬೊಕ್ಕಸದಿಂದಲೇ ಹಣವನ್ನು ಬಿಡುಗಡೆ ಮಾಡಬೇಕು. ದೇಶ ವಿಭಜನೆ ಆದಾಗ ಪಾಕಿಸ್ತಾನದಿಂದ ನಮ್ಮ ದೇಶವನ್ನು ರಕ್ಷಣೆ ಮಾಡಲು ಸೇವೆ ಸಲ್ಲಿಸಿದ ಮೊಟ್ಟ ಮೊದಲ ಫೀಲ್ಡ್ ಮಾರ್ಷಲ್ ಜನರಲ್ ಕಾರಿಯಪ್ಪ ಹಾಗೂ ಜನರಲ್ ತಿಮ್ಮಯ್ಯ ರವರುಗಳನ್ನು ಸ್ಮರಿಸುವಂತಹ ನಾಡು ನಮ್ಮದು. ಇದಕ್ಕೆ ಮುಂದುವರೆದಂತೆ, ಬ್ರಿಟಿಷರ ನೇಣಿಗೆ ಶರಣರಾದ ಗುಡ್ಡೆ ಮನೆಯ ಅಪ್ಪಯ್ಯ ಗೌಡರವರಂತಹವರುಗಳನ್ನು ಕೊಡುಗೆಯಾಗಿ ನೀಡಿದ ನಾಡಿನ ಬಗ್ಗೆ ಕೇವಲ ಕವನ, ಕಾವ್ಯಗಳಲ್ಲಿ ಮಾತನಾಡಿದರೆ ಅದು ಸಾಕಾಗುವುದಿಲ್ಲ. ಕೊಡಗಿನ ಜನತೆಯು ಕಷ್ಟಕ್ಕೆ ಸಿಲುಕಿದಾಗ ಅವರಿಗೆ ಸ್ಪಂದಿಸಬೇಕು. ಅವರುಗಳು ಕಾವೇರಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನದಿಯನ್ನು ತಾಯಿ ಎಂದು ಪೂಜಿಸುತ್ತಾರೆ. ಇವತ್ತಿಗೂ ಸಹ ಆ ಭಾಗದ ಅರಣ್ಯಗಳು ಕಳ್ಳ ಕಾಕರಿಂದ ನಾಶ ಹೊಂದುತ್ತಿವೆ. ಅರಣ್ಯ ನಾಶವಾದರೆ ಅದು ಬರವೇ ಎಂದರ್ಥ. ನದಿಗಳನ್ನು ಒತ್ತುವರಿ ಮಾಡಿದರೆ, ಅಲ್ಲಿನ ಹೂಳನ್ನು ತೆಗೆಯದಿದ್ದರೆ ಅದೂ ಸಹ ಬರ ಎಂದರ್ಥ. ನೀರಿನ ಮೂಲಗಳಾದ ಕೆರೆ ಕಟ್ಟೆಗಳನ್ನು ನಾವು ಕಾಪಾಡಿಕೊಳ್ಳದೇ ಹೋದರೆ ಅಂತಹ ಪರಿಸ್ಥಿತಿಗಳೂ ಸಹ ಬರ ಆಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ದೃಷ್ಟಿಯಲ್ಲಿ ಸರ್ಕಾರವು ಗಮನವನ್ನು ಹರಿಸಬೇಕು.

ಇವತ್ತಿನ ದಿವಸ ಹಾಲಿಗೆ ನೀಡುವಂತಹ ಪ್ರೋತ್ಸಾಹ ಧನವನ್ನು ತಕ್ಷಣವೇ ನೀಡಬೇಕು. ಇದನ್ನು ಜೂನ್ ತಿಂಗಳಿನಿಂದ ಬಿಡುಗಡೆ ಮಾಡಿಲ್ಲ. ಈ ವಿಚಾರದಲ್ಲಿ ನಾನು ಮಾನ್ಯ ಸಭಾನಾಯಕರನ್ನು ಆಗ್ರಹಿಸುತ್ತೇನೆ. ಅದೇ ರೀತಿಯಾಗಿ ಆಶಾ ಕಾರ್ಯಕರ್ತೆಯರಿಗೆ ಸಂಬಳವನ್ನು ನೀಡಬೇಕು. ನರೇಗಾ ಯೋಜನೆಯಡಿ ಹೆಚ್ಚು ಕೈಗಳಿಗೆ ಕೆಲಸವನ್ನು ನೀಡಬೇಕು. ನಮ್ಮ ಚಿತ್ರದುರ್ಗ ಜಿಲ್ಲೆಯ ಹಾದಿಯಲ್ಲಿರುವ ಐಮಂಗಲ ಎಂಬ ಗ್ರಾಮದಲ್ಲಿ ಹಳೆಯದಾದ ಒಂದು ಕೋಟೆ ಇದೆ. ನರೇಗಾ ಯೋಜನೆಯಡಿ ಅಂತಹ ಕಾಮಗಾರಿಗಳ ಕೆಲಸವನ್ನು ನೀಡಿದರೆ, ಹೆಚ್ಚು ಜನರಿಗೆ ಉದ್ಯೋಗ ನೀಡುವುದರಿಂದ ಅಂತಹ ಪುರಾತನ ಸ್ಮಾರಕಗಳನ್ನು ಹಾಗೂ ಇತಿಹಾಸವನ್ನೂ ಸಹ ಉಳಿಸಿಕೊಂಡಂತಾಗುತ್ತದೆ. ಹೀಗಾಗಿ ಇಂತಹ ಕಾಮಗಾರಿಗಳನ್ನು ನರೇಗಾ ಯೋಜನೆಗಳಲ್ಲಿ ಒಳಪಡಿಸಿದಲ್ಲಿ ಸಾವಿರಾರು ಜನರಿಗೆ ಉದ್ಯೋಗ ನೀಡಲು ಸಾಧ್ಯವಾಗುತ್ತದೆ.

ಬರಗಾಲ ಪರಿಹಾರ ನಿಧಿಯನ್ನು ಕೇಂದ್ರದಿಂದ ತರಬೇಕಾದರೆ, ರಾಜ್ಯ ಅನುಭವಿಸಿದ ವಸ್ತುನಿಷ್ಠವಾದ ಬರಗಾಲ ಪರಿಸ್ಥಿತಿಯ ಅಂಕಿ-ಅಂಶ, ಸಾಕ್ಷಿ ಹಾಗೂ ದಾಖಲೆಗಳೊಂದಿಗೆ ಸರ್ಕಾರ ತಕ್ಷಣವೇ ಸದನದಲ್ಲಿ ಮಂಡಿಸಿ, ತನ್ಮೂಲಕ ಕೇಂದ್ರ ಸರ್ಕಾರಕ್ಕೆ ಬರ ಪರಿಹಾರ ನಿಧಿಯನ್ನು ಬಿಡುಗಡೆ ಮಾಡಬೇಕೆಂಬ ಬೇಡಿಕೆಯನ್ನಿಡಬೇಕು. ಕೆಳಮನೆ ಹಾಗೂ ಮೇಲ್ಮನೆ ಸದಸ್ಯರುಗಳೆಲ್ಲರೂ ಈ ನಿಟ್ಟಿನಲ್ಲಿ ಸರ್ಕಾರದ ಜೊತೆ ಕೈ ಜೊಡಿಸಿ, ಬರಗಾಲ ಪರಿಸ್ಥಿತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ ಎಂಬುದಾಗಿ ಹೇಳುತ್ತಾ, ನಿಯಮ 68 ರಡಿ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆರ್.ವಿ.ದೇಶಪಾಂಡೆ(ಕಂದಾಯ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು)** ಮಾನ್ಯ ಸಭಾಪತಿಯವರೇ, kharifನಲ್ಲಿ ಬೆಳೆ ಹಾನಿ ಹಾಗೂ ಇತ್ತೀತರೆ ಉಂಟಾಗಿರುವ ನಷ್ಟದ ಪರಿಹಾರ ಕೋರಿ ಈಗಾಗಲೇ ದಿನಾಂಕ 30-10-2018 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕೊಟ್ಟಿದ್ದೇವೆ. ಕೇಂದ್ರದ ಗೃಹ ಸಚಿವರಾದ ಮಾನ್ಯ ರಾಜನಾಥ್ ಸಿಂಗ್‌ರವರನ್ನೂ ಸಹ ಭೇಟಿ ಮಾಡಿದ್ದೇವೆ. ಆಗ ನನ್ನೊಂದಿಗೆ ರಾಜ್ಯದ ಮಾನ್ಯ ಕೃಷಿ ಸಚಿವರೂ ಸಹ ಇದ್ದರು. ಆ ಸಂದರ್ಭದಲ್ಲಿ ನಮ್ಮ Development Commissioner, ಕಂದಾಯ ಕಾರ್ಯದರ್ಶಿಗಳು ಕೇಂದ್ರದ ಕೃಷಿ ಕಾರ್ಯದರ್ಶಿಗಳನ್ನು ಭೇಟಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಕೇಂದ್ರ ಸರ್ಕಾರವು ಬರ ವೀಕ್ಷಣೆಗಾಗಿ ತಕ್ಷಣವೇ 10 ಸದಸ್ಯರನ್ನೊಳಗೊಂಡ ತಂಡವನ್ನೂ ಸಹ ನಿಯೋಜನೆ ಮಾಡಿತ್ತು. ಸದರಿ ತಂಡವು ಬಂದು ಬರಗಾಲ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೀಡಿತ 24 ಜಿಲ್ಲೆಗಳ ಪೈಕಿ ಸುಮಾರು 13–14 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ನಮ್ಮನ್ನೂ ಸಹ ಭೇಟಿ ಮಾಡಿ, ಚರ್ಚೆ ಮಾಡಿ, ಕೆಲವು ಸಲಹೆಗಳನ್ನೂ ಸಹ ನೀಡಿದ್ದಾರೆ. ಅವರಿಗೆ ಅವಶ್ಯಕವಾದ ಕೆಲವು ಮಾಹಿತಿಗಳನ್ನು ನಾವೂ ಸಹ ನೀಡಿದ್ದೇವೆ. ನಾವು ಕೇಂದ್ರದಿಂದ 2,434 ಕೋಟಿ ರೂಪಾಯಿಗಳಷ್ಟು ಬರ ಪರಿಹಾರ ಹಣವನ್ನು ಕೇಳಿದ್ದೇವೆ. ಒಟ್ಟಾರೆಯಾಗಿ ಸುಮಾರು 16,600 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. I am talking about kharif drought. ನೂರು ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳನ್ನಾಗಿ ಘೋಷಿಸಿದೆ. ತಕ್ಷಣವೇ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಬರ ಪರಿಹಾರ ನಿಧಿಯನ್ನು ಮಂಜೂರು ಮಾಡಲು ಒತ್ತಾಯ ಹೇರಿ ವಿರೋಧ ಪಕ್ಷದ ಸದಸ್ಯರುಗಳು ತಮ್ಮ ಸಹಕಾರವನ್ನು ತೋರಬೇಕು. Everything is done. ಇನ್ನುಳಿದಂತೆ ಸರ್ಕಾರವು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳಾದ ಶ್ರೀ ಆರ್.ವಿ.ದೇಶಪಾಂಡೆಯವರು ಬರ ಪೀಡಿತ ಪ್ರದೇಶಗಳಿಗೆ ಪ್ರಥಮ ಬಾರಿಗೆ ಭೇಟಿ ನೀಡಿದ ಸಚಿವರಾಗಿದ್ದಾರೆ ಹಾಗೂ ಈ ವಿಚಾರದಲ್ಲಿ ಸಂಪೂರ್ಣವಾದ ಸಭೆಯನ್ನು ಮಾಡಿದ್ದಾರೆ. ಇದರ ಬಗ್ಗೆ ಯಾವುದೇ ಆಕ್ಷೇಪವಿಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಮಂತ್ರಿಗಳಾದ ಶ್ರೀ ರಾಜನಾಥ್ ಸಿಂಗ್‌ರವರನ್ನು ಭೇಟಿ ಮಾಡಿರುವುದಾಗಿ ಮಂತ್ರಿಗಳು ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರುಗಳನ್ನೊಳಗೊಂಡಂತೆ ಆದಷ್ಟು ಬೇಗನೆ ಕೇಂದ್ರಕ್ಕೆ ನಿಯೋಗವನ್ನು ಕರೆದುಕೊಂಡು ಹೋಗಬೇಕು. ನಮ್ಮ ಪಕ್ಷದ ಸದಸ್ಯರುಗಳು ಮಾನ್ಯ ಮಂತ್ರಿಗಳ ಜೊತೆಗೆ ಹೋಗಲು ಸಿದ್ದರಿದ್ದೇವೆ. ರಾಜಕಾರಣ ಮಾಡುವ ಸಂದರ್ಭದಲ್ಲಿ ರಾಜಕಾರಣವನ್ನು ಮಾಡೋಣ. ಆದರೆ, ಇವತ್ತಿನ ದಿವಸ ಬರ ಪೀಡಿತವಾದ ಸಮಗ್ರ ಕರ್ನಾಟಕದಲ್ಲಿ ನಾವು ಕೇವಲ ಉತ್ತರ ಕರ್ನಾಟಕ ಎಂಬುದಾಗಿ ಹೇಳುತ್ತಿಲ್ಲ. ಕೊಡಗನ್ನು ಒಳಗೊಂಡಂತೆ ರಾಜ್ಯದ ಅನೇಕ ಜಿಲ್ಲೆಗಳು ಇವತ್ತಿನ ದಿವಸ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿವೆ. ಆದರೆ ಭೀಕರ ಬರಗಾಲ ಪರಿಸ್ಥಿತಿಯನ್ನು ಎದುರಿಸುತ್ತಿರುವ ನಮ್ಮ ಜಿಲ್ಲೆಯ ರಾಮದುರ್ಗ, ಸವದತ್ತಿ, ರಾಯಭಾಗ ಇತ್ಯಾದಿ ತಾಲ್ಲೂಕುಗಳು ಅತ್ಯಂತ ಹೆಚ್ಚು ಬರಪೀಡಿತ ಪ್ರದೇಶಗಳಾಗಿವೆ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಇಲಾಖೆಯ ಅಧಿಕಾರಿಗಳಿಗೆ ಮತ್ತೊಂದು ಬಾರಿ ಸೂಚನೆಯನ್ನು ನೀಡಲಿ. ತೇವಾಂಶದ ಕೊರತೆಯ ವಿಷಯದ ಬಗ್ಗೆ ನಮಗೆ ಇನ್ನೂ ಸ್ಪಷ್ಟೀಕರಣ ದೊರೆತಿಲ್ಲ. ಅಧಿಕಾರಿಗಳು ಸಂಪೂರ್ಣವಾಗಿ ಬೆಳೆ ವಿಫಲವಾದರೆ ಮಾತ್ರವೇ ಬರ ಎಂಬುದಾಗಿ ಹೇಳುತ್ತಾರೆ. ಆದರೆ ಸ್ವಲ್ಪ ತೇವಾಂಶದಿಂದ ಕೂಡಿದ ವಾತಾವರಣದಲ್ಲಿ ಬೆಳೆಗಳನ್ನು ಬೆಳೆಯುವ ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳು ಎಂಬುದಾಗಿ ಪರಿಗಣಿಸುತ್ತಿಲ್ಲ. ಇದರ ಬಗ್ಗೆಯೂ ಸಹ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಸದರಿ ಪ್ರದೇಶಗಳಲ್ಲಿ ತೇವಾಂಶವಿದೆ. ಆದರೆ ಅದು ಬೆಳೆಗಳನ್ನು ಬೆಳೆಯುವುದಕ್ಕೆ ಬೇಕಾದ ಪ್ರಮಾಣದಲ್ಲಿಲ್ಲ.

ಆದ್ದರಿಂದ ಅಲ್ಲಿ ಬೆಳೆಗಳು ಬಂದಿರುವುದಿಲ್ಲ. ಇದರ ಬಗ್ಗೆಯೂ ಸಹ ಸರ್ಕಾರವು ಸಂಪೂರ್ಣವಾಗಿ ಗಮನಹರಿಸಬೇಕು ಹಾಗೂ ಅವುಗಳನ್ನೂ ಸಹ ಬರ ಪೀಡಿತ ತಾಲ್ಲೂಕುಗಳನ್ನಾಗಿ ಘೋಷಿಸಬೇಕು. ಅದರಲ್ಲೂ ವಿಶೇಷವಾಗಿ ಹುಕ್ಕೇರಿ ತಾಲ್ಲೂಕಿನ ಕೆಲವು ಭಾಗ ಹಾಗೂ ಚಿಕ್ಕೋಡಿ ತಾಲ್ಲೂಕಿನ ಒಂದು ಹೋಬಳಿಯಲ್ಲಿ ಮಳೆಯೇ ಆಗಿಲ್ಲ. ಆದರೆ ಕೃಷಿ ಇಲಾಖೆಯು ಸದರಿ ಭಾಗಗಳಲ್ಲಿ ತೇವಾಂಶ ಇದೆ ಎಂಬುದಾಗಿ ನೀಡಿದ ಮಾಹಿತಿಯ ಹಿನ್ನೆಲೆಯಲ್ಲಿ ಸದರಿ ಪ್ರದೇಶಗಳನ್ನು ಬರ ಪೀಡಿತ ಪ್ರದೇಶಗಳ ಪಟ್ಟಿಯಿಂದ ಕೈಬಿಟ್ಟಿದ್ದಾರೆ. ಇಂತಹ ಪ್ರಕ್ರಿಯೆಗಳಿಂದಾಗಿ ರೈತರಲ್ಲಿ ತಾರತಮ್ಯವುಂಟಾಗಿದೆ. ಆದರೆ ಹೀಗಾಗಬಾರದು ಎಂಬುದು ನಮ್ಮ ಬೇಡಿಕೆಯಾಗಿದೆ. ಕೇಂದ್ರಕ್ಕೆ ರಾಜ್ಯದ ನಿಯೋಗವನ್ನು ತೆಗೆದುಕೊಂಡು ಹೋಗುವುದಾಗಿ ಮಾನ್ಯ ಹಿರಿಯ ಮಂತ್ರಿಗಳು ಭರವಸೆ ನೀಡಿದ್ದಾರೆ.

**ಶ್ರೀ ಆರ್.ವಿ.ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಕೇಂದ್ರಕ್ಕೆ ರಾಜ್ಯದ ನಿಯೋಗವನ್ನು ತೆಗೆದುಕೊಂಡು ಹೋಗುತ್ತೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ನಾವು ಕೇಂದ್ರ ಸರ್ಕಾರಕ್ಕೆ memorandum ನ್ನು ಸಲ್ಲಿಸಿದ ನಂತರ ಅತಿ ಶೀಘ್ರದಲ್ಲಿ ಕೇಂದ್ರ ಸರ್ಕಾರವು ಅಧ್ಯಯನ ತಂಡವನ್ನು ಕಳುಹಿಸಿತ್ತು. ಸದರಿ ತಂಡವು ರಾಜ್ಯಕ್ಕೆ ಭೇಟಿ ಮಾಡಿ, ನಮ್ಮೊಂದಿಗೆ ಚರ್ಚೆ ಮಾಡಿದೆ ಹಾಗೂ ಅವರಿಗೆ ಅವಶ್ಯಕವಾದ ಮಾಹಿತಿಯನ್ನು ನಾವೂ ಸಹ ನೀಡಿದ್ದೇವೆ. ಸದರಿ ತಂಡವು ತನ್ನ ವರದಿಯನ್ನೂ ಸಹ ನೀಡಿದೆ.

(448) 13–12–2018 (7–20) ಎಲ್‌ಎಂ/ಆರ್‌ಎನ್

**ಶ್ರೀ ಆರ್.ವಿ.ದೇಶಪಾಂಡೆ**(ಮುಂದು):– ಅವರು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೆ ಒಂದು procedure ಇದೆ. ಕೃಷಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಮೀಟಿಂಗ್ ಆಗಬೇಕು. ಗೃಹ ಸಚಿವರ ಜೊತೆಯಲ್ಲಿ Finance ನವರು ಮೀಟಿಂಗ್ ಮಾಡಬೇಕು. ಈ procedure ನಡೆಯುತ್ತಿದೆ. ನಾಲ್ಕು ದಿನಗಳ ಹಿಂದೆ ಕೇಂದ್ರ ಗೃಹ ಸಚಿವರಿಗೆ, ಕೃಷಿ ಸಚಿವರಿಗೆ, ಆರ್ಥಿಕ ಸಚಿವರಿಗೆ ಪತ್ರವನ್ನು ಬರೆದಿದ್ದೇನೆ. ರಾಜ್ಯದಲ್ಲಿ ಈ ರೀತಿ ಭೀಕರ ಪರಿಸ್ಥಿತಿ ಇದೆ, ರೈತರು ಬಹಳ ಕಷ್ಟದಲ್ಲಿದ್ದಾರೆ, ತಾವು relief ನ್ನು ಬಿಡುಗಡೆ ಮಾಡಿ ಎಂದು ಈಗಾಗಲೇ ಹೇಳಿದ್ದೇವೆ. ಒಂದು ಕಾಲದಲ್ಲಿ ಬರಗಾಲಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಬೇಕಾದರೆ ಅದಕ್ಕೆ ಒಂದು discretion ಇತ್ತು. ಇವತ್ತು ಆ discretion ಇಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಇದೆ. ಒಂದು ತಾಲ್ಲೂಕು draught ಆಗಿದೆ ಎಂದು ಹೇಳಬೇಕಾದರೆ ಅದಕ್ಕೆ ಏನು criteria? ಒಂದು draught ತಾಲ್ಲೂಕು ಆಗಬೇಕಾದರೆ first trigger ಎಲ್ಲಿ ಆಗುತ್ತದೆ. ಯಾವ criteria ಇದೆ. ಆ ಚೌಕಟ್ಟಿನಲ್ಲಿ ನಾವು ಇರಬೇಕಾಗುತ್ತದೆ. ಆ ಚೌಕಟ್ಟನ್ನು ಬಿಟ್ಟು ನಾವು ಹೆಚ್ಚಿಗೆ ಕೇಳಿದರೆ they will reject our case. So, one has to be very careful. ಮಳೆ ಎಷ್ಟು ಆಗಿದೆ, ಬಿತ್ತನೆ ಎಷ್ಟು ಆಗಿದೆ ಎನ್ನುವುದನ್ನು ನಾವು ಮುಚ್ಚಿ ಇಡಲು ಆಗುವುದಿಲ್ಲ. ಇದರ ಬಗ್ಗೆ ಕೇಂದ್ರದಲ್ಲಿ ಎಲ್ಲ ಮಾಹಿತಿಯು ಇರುತ್ತದೆ. ನಾವು ಏನನ್ನು ಮುಚ್ಚಿ ಇಡಲು ಆಗುವುದಿಲ್ಲ. ಇವತ್ತು ತುಂಬಾ ಪಾರದರ್ಶಕತೆ ಇದೆ. ಹಿಂದೆ

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೇಂದ್ರ ಸರ್ಕಾರ ಹಣ ಕೊಡುತ್ತಿತ್ತು, ಅದನ್ನು ನಾವು ರೈತರಿಗೆ ಚೆಕ್ ಮುಖಾಂತರ ಅಥವಾ ಆರ್‌ಟಿಜಿಎಸ್ ಮುಖಾಂತರ ಕೊಡುತ್ತಿದ್ದೆವು. ಆದರೆ ಹೋದ ವರ್ಷದಿಂದ data entry ಮಾಡಲಾಗುತ್ತದೆ. Direct Benefit transfer ಆಗುತ್ತದೆ. ಹೀಗಾಗಿ ಯಾವುದೇ ಸರ್ಕಾರವಾಗಲಿ, ಯಾವುದೇ ಕಂದಾಯ ಸಚಿವರಾಗಲಿ ಮನಸ್ಸಿಗೆ ಬಂದ ಹಾಗೆ draught ಎಂದು ಘೋಷಣೆ ಮಾಡಲು ಬರುವುದಿಲ್ಲ. ನ್ಯಾಯಬದ್ಧವಾಗಿ, ಪಾರದರ್ಶಕವಾಗಿ ಏನು ಗೈಡ್‌ಲೈನ್ಸ್ ಇದೆ ಅದರ ಪ್ರಕಾರ ಮಾಡುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ, ಹಾಗೇ ನಾವು ಮಾಡಿದ್ದೇವೆ. ಈಗ rabi ಎಲ್ಲವು ಹಾಳಾಗಿದೆ. ಅದಕ್ಕಾಗಿ ಇನ್ನು ಮುಂದೆ ಏನು ಮಾಡಬೇಕು ಎನ್ನುವುದಕ್ಕೆ ನಾವು ಈಗಾಗಲೇ instructions ಕೊಟ್ಟಿದ್ದೇವೆ. ಮಾಹಿತಿ ಬಂದ ನಂತರ ಯಾವ ತಾಲ್ಲೂಕು draught ಎನ್ನುವುದನ್ನು ಘೋಷಣೆ ಮಾಡುತ್ತೇವೆ. ಬರಗಾಲ ಬಂದಾಗ ಸರ್ಕಾರದ ಜವಾಬ್ದಾರಿ ಮಾತ್ರ ಇರುವುದಿಲ್ಲ, ವಿರೋಧ ಪಕ್ಷದವರ ಜವಾಬ್ದಾರಿಯು ಇದೆ. ಪಕ್ಷಾತೀತವಾಗಿ ನಾವು ಕಷ್ಟದಲ್ಲಿರುವ ರೈತರಿಗೆ, ಕೂಲಿಕಾರರಿಗೆ, ಬಡವರಿಗೆ ಸಹಾಯ ಮಾಡಲು ನಾವೆಲ್ಲರೂ ಮುನ್ನುಗಬೇಕಾಗುತ್ತದೆ. ಆ ದಿಸೆಯಲ್ಲಿ ನಾವೆಲ್ಲರೂ ಕೂಡಿ ಕೆಲಸ ಮಾಡಬೇಕಾಗುತ್ತದೆ. ಈ ವಿಚಾರವಾಗಿ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗಲು ನನ್ನದೇನು ಅಭ್ಯಂತರ ಇಲ್ಲ. ಆದರೆ ಸದ್ಯಕ್ಕೆ ಕೇಂದ್ರಕ್ಕೆ ನಿಯೋಗ ತೆಗೆದುಕೊಂಡು ಹೋಗುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ.

## ಪ್ರಕಟಣೆ –1

**ಸಭಾಪತಿಯವರು:–** ಮಾನ್ಯ ವಿಧಾನಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ,

**ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ 13–12–2018ರಂದು " ಕರ್ನಾಟಕ ಜೀವ ರಕ್ಷಕ ಮತ್ತು ವೈದ್ಯಕೀಯ ವೃತ್ತಿನಿರತರ ತುರ್ತು ಸನ್ನಿವೇಶದ ರಕ್ಷಣೆ ಮತ್ತು ನಿಯಂತ್ರಣ ತಿದ್ದುಪಡಿ ವಿಧೇಯಕ 2018" ನ್ನು ಅಂಗೀಕರಿಸಿತೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.**

## ಪ್ರಕಟಣೆ –2

ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ: 13–12–2018ರಂದು ಸಭೆ ಸೇರಿ ಪ್ರಸ್ತುತ ಸನ್ನಿವೇಶದಲ್ಲಿ ದಿನಾಂಕ 14–12–2018ರಿಂದ 21–12–2018ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ:–

" ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

**ಕಾರ್ಯಕಲಾಪಗಳ ವಿವರ**

ದಿನಾಂಕ:14–12–2018 ಶುಕ್ರವಾರ: ಪ್ರಶ್ನೋತ್ತರ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ ಮತ್ತು ಸದಸ್ಯರ ಖಾಸಗಿ ಕಾರ್ಯಕಲಾಪಗಳು.

ದಿನಾಂಕ: 17–12–2018 ರಿಂದ ದಿನಾಂಕ: 20–12–2018ರವರೆಗೆ ಪ್ರಶ್ನೋತ್ತರ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ. ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330.

ದಿನಾಂಕ: 21–12–2018 ಶುಕ್ರವಾರ ಪ್ರಶ್ನೋತ್ತರ, ವಿಧೇಯಕಗಳ ಮಂಡನೆ, ಪರ್ಯಾಲೋಚನೆ ಹಾಗೂ ಅಂಗೀಕಾರ. ಗಮನ ಸೆಳೆಯುವ ಸೂಚನೆಗಳು ಮತ್ತು ನಿಯಮ 330 ಹಾಗೂ ಸದಸ್ಯರ ಖಾಸಗಿ ಕಾರ್ಯಕಲಾಪಗಳು.

ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಸದನವು ಅನುಮೋದಿಸುತ್ತದೆ ಎಂದು ಭಾವಿಸುತ್ತೇನೆ.

**ಡಾ: ತೇಜಸ್ವಿನಿ ಗೌಡ:–** ಮಾನ್ಯ ಸಭಾಪತಿಗಳೆ, ಫಸಲು ಭೀಮಾ ಯೋಜನೆ ತಲುಪಲಿಲ್ಲ ಎನ್ನುವುದಕ್ಕೆ ಸರ್ಕಾರವೇ ಒದಗಿಸಿರುವ ದಾಖಲೆ ನನ್ನ ಕೈಯಲ್ಲಿ ಇದೆ. ಅನುಬಂಧ 5ರಲ್ಲಿ ಹೀಗೆ ಹೇಳಿದ್ದಾರೆ, ಗದಗ ಜಿಲ್ಲೆಯಲ್ಲಿ ಫಸಲ್ ಭೀಮಾ ಯೋಜನೆಯನ್ನು ಕೇವಲ 16 ಜನ ರೈತರು ಮಾತ್ರ ತೆಗೆದುಕೊಂಡಿದ್ದಾರೆ. ಹಾಗೆ ತುಮಕೂರು ಜಿಲ್ಲೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ 12000–13000 ಜನ ರೈತರು ಇದರ ಪ್ರಯೋಜನವನ್ನು ತೆಗೆದುಕೊಂಡಿದ್ದಾರೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಇಷ್ಟೊಂದು ಮಾತನಾಡುವ ನಾವು ಸರ್ಕಾರ ಕೊಡುವ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಆ ರೈತರಿಗೆ ತಲುಪಿಸಬೇಕು ಆ ಕಾಲಮಿತಿಯಲ್ಲಿ ತಲುಪಿಸಿಲ್ಲ ಎನ್ನುವುದು ಸರ್ಕಾರ ಒದಗಿಸಿರುವ ದಾಖಲೆಯಿಂದ ನಮಗೆ ಗೊತ್ತಾಗುತ್ತದೆ. ಕೊನೆಯಲ್ಲಿ ಈ ರೀತಿ ಷರಾ ಬರೆಯುತ್ತಾರೆ, ಮುಂಗಾರು ಹಂಗಾಮಿನ ಎಲ್ಲಾ ಅಧಿಸೂಚಿತ ಬೆಳೆಗಳಿಗೆ ನೊಂದಾಯಿಸಿದ ರೈತರುಗಳಿಗೆ ವಿಮಾ ಪರಿಹಾರ ಲೆಕ್ಕಾಚಾರ ಮಾಡಲು ಹವಾಮಾನ ಸೂಚ್ಯಾಂಕಗಳ ದತ್ತಾಂಶಗಳು ಅವಶ್ಯಕತೆ ಇದ್ದು, ಅವಧಿ ಪೂರ್ಣಗೊಂಡ ನಂತರ ಲೆಕ್ಕಾಚಾರ ಪ್ರಾರಂಭ ಮಾಡಲಾಗುವುದು. ಅಂದಾಜು ಮಾಡಲು ಪೂರಕ ವ್ಯವಸ್ಥೆಗಳೇ ಇಲ್ಲ ಎನ್ನುವುದು ಸರ್ಕಾರದ ಲಿಖಿತ ಉತ್ತರದಲ್ಲಿ ಹೇಳಲಾಗಿದೆ. ದಯಮಾಡಿ ಯಾವುದೇ ಸರ್ಕಾರ ಇದ್ದರೂ ಕೇಂದ್ರ–ರಾಜ್ಯಗಳ ಮಧ್ಯೆ ಮಧುರವಾದ ಸಂಬಂಧವಿರಬೇಕು, ಇದೆ, 'ಮಧುರವಾದ ಮಾತಿನಿಂದ ಕರಿಮೆಣಸನ್ನು ಮಾರಬಹುದು. ಆದರೆ ಕಠಿಣವಾದ ಮಾತಿನಿಂದ ಮಧುವಾದ ಜೇನನ್ನು ಮಾರಲು ಆಗುವುದಿಲ್ಲ" ಒಂದು ಗಾದೆ ಮಾತು ಇದೆ. ನಾವು ಹೊರಗಡೆ ರಾಜಕಾರಣ ಮಾಡುವುದು ಬೇರೆ, ಆದರೆ ಸದನದ ಒಳಗಡೆ ಬಂದಾಗ ಸರ್ಕಾರದ ಮೂಲಕ ನಾವು ಜನರಿಗೆ ಅಭಿವೃದ್ಧಿ ಕಾರ್ಯಗಳನ್ನು ತಲುಪಿಸಬೇಕಾದರೆ ಕ್ರಿಯಾಶೀಲ ಪಕ್ಷವಾಗಿ ಭಾಜಪ ಯಾವಾಗಲೂ ಪೂರಕವಾಗಿದ್ದೇವೆ. ಇಂತಹ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಲೋಪ-ದೋಷಗಳನ್ನು ಸರ್ಕಾರ ಕೊಟ್ಟಿರುವ ದಾಖಲೆಗಳಿಂದಲೇ ಸಾಬೀತು ಮಾಡುತ್ತಿದ್ದೇನೆ ಎಂದು ಹೇಳಿ, ದಯಮಾಡಿ ಸರ್ಕಾರ ಸ್ಪಂದಿಸಬೇಕೆಂದು ಆಗ್ರಹ ಮಾಡುತ್ತೇನೆ.

ಶ್ರೀ **ಆರ್.ವಿ.ದೇಶಪಾಂಡೆ(ಕಂದಾಯ ಸಚಿವರು):-** ಮಾನ್ಯ ಸಭಾಪತಿಗಳೆ, ಈ ಯೋಜನೆ ಬಗ್ಗೆ ಕೃಷಿ ಸಚಿವರು ತುಂಬಾ ಕೆಲಸ ಮಾಡುತ್ತಿದ್ದಾರೆ. ನಾನು ಕೂಡಾ ತುಂಬಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದೇನೆ. ಕೇಂದ್ರ ಸರ್ಕಾರ ಇದನ್ನು ಒಳ್ಳೆಯ ಉದ್ದೇಶದಿಂದ ತಂದಿದೆ. ಆದರೆ ಕಲಬುರ್ಗಿ ಜಿಲ್ಲೆಯಲ್ಲಿ crores of insurance premium has been paid. ಬಹಳಷ್ಟು ಕಡೆಗಳಲ್ಲಿ ರೈತರು ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಸಾಧ್ಯವಾದಷ್ಟು ಪ್ರಚಾರ ಮಾಡುತ್ತಿದ್ದೇವೆ, ಸಾಧ್ಯವಾದ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕೆಲವು ಕಡೆಗಳಲ್ಲಿ ವಿಮಾ ಹಣ ಬಂದಿದೆ, ಬಂದಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ಆದರೆ ರೈತರಲ್ಲಿ ಜವಾಬ್ದಾರಿ ಮೂಡಿಸಬೇಕಾಗಿದೆ. ಈ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆಯೂ ಇದೆ, ಕೇಂದ್ರ ಸರ್ಕಾರದ ಮೇಲೆಯೂ ಇದೆ. ಆ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಇದರ ಬಗ್ಗೆ ತಮಗೆ ಮಾಹಿತಿ ಬೇಕು ಎನ್ನುವುದಾದರೆ ಕೃಷಿ ಸಚಿವರಿಗೆ ತಿಳಿಸಿ ಮಾಹಿತಿ ಕೊಡಿಸುತ್ತೇವೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಗಳೆ. ಪ್ರಧಾನ ಮಂತ್ರಿ ಫಸಲ್‌ಭೀಮಾ ಯೋಜನೆ ಬಗ್ಗೆ ಈ ಹಿಂದೆಯು ಕೂಡಾ ಚರ್ಚೆಯಾಗಿತ್ತು. ಇದು ಬಹಳ ಗಂಭೀರವಾದ ವಿಚಾರ. ಮಾನ್ಯ ಮಂತ್ರಿಗಳು ಹೇಳುತ್ತಿರುವುದು ಅಕ್ಷರಶ: ಸತ್ಯ. ಏಕೆಂದರೆ ನಾನು ಕೂಡಾ ಬ್ಯಾಂಕ್‌ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈಗ ಬ್ಯಾಂಕ್‌ನ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಬ್ಯಾಂಕ್‌ನಿಂದ ಸುಮಾರು 1200 ಕೋಟಿ ರೂ.ಗಳಷ್ಟು ಸಾಲವನ್ನು ರೈತರಿಗೆ ಕೊಟ್ಟಿದ್ದೇವೆ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ ರೈತರ ವಿಶ್ವಾಸವನ್ನು ನಾವು ಮೊದಲು ಗಳಿಸಬೇಕಾಗುತ್ತದೆ. ರೈತರ ವಿಶ್ವಾಸ ಗಳಿಸಿದ ಮೇಲೆ definitely he will come forward for getting insurance. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಇದು ಅತ್ಯಂತ ಮಹತ್ತರವಾದ ಯೋಜನೆಯಾಗಿದೆ. ಮಾನ್ಯ ಪ್ರಧಾನ ಮಂತ್ರಿಯವರ ದೊಡ್ಡ ಕನಸಿನಿಂದ ಬಂದಂತಹ ಯೋಜನೆ ಇದು. ಈ ಯೋಜನೆ ಪ್ರಚಾರವಾದ ಸಂದರ್ಭದಲ್ಲಿ ನಾವು ಬ್ಯಾಂಕ್‌ನವರು ಬಹಳ ಆಶಾದಾಯಕವಾಗಿದ್ದೆವು. ಇದರಲ್ಲಿ ಇರುವ ಲೋಪ-ದೋಷಗಳನ್ನು ಮೊದಲು ಸರಿಪಡಿಸಬೇಕು. ಇಲ್ಲದಿದ್ದರೆ ಯಾವುದೋ ಒಂದು ಕಂಪನಿಗೆ ಹಣ ಹೊಡೆಯಲು ಅನುಕೂಲ ಮಾಡಿಕೊಟ್ಟ ಹಾಗೆ ಆಗುತ್ತದೆ. ನಾನು ಏಕೆ ಹೇಳುತ್ತಿದ್ದೇನೆ ಎಂದರೆ There are so many insurance companies in the country. ನಮ್ಮ ರಾಜ್ಯದಲ್ಲಿಯೇ ಅನೇಕ ಕಂಪನಿಗಳು ಇವೆ. ರೈತರಿಗೆ ಸಹಾಯ ಮಾಡುವಂತಹ ತುಂಬಾ ವಿಮಾ ಕಂಪನಿಗಳು ಇವೆ. ಆ ಕಂಪನಿಗಳಿಂದ ಅನೇಕ ರೈತರು ದನ, ಕುರಿ, ಮೇಕೆಗಳಿಗೆ ವಿಮೆ ಮಾಡಲಾಗಿತ್ತು. ಆದರೆ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ಬಂದ ನಂತರ ಏನು ಆಗಿದೆ ಎನ್ನುವುದು ಇಲ್ಲಿ ಇರುವ ಅನೇಕ senior Co-operatives ಗೆ ಗೊತ್ತಿದೆ. Universal Sompo ಎನ್ನುವ ಕಂಪನಿಗೆ ನಮ್ಮ ಸುತ್ತ-ಮುತ್ತ ಜಿಲ್ಲೆಗಳು ಬಂದಿವೆ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉತ್ತರ ಕರ್ನಾಟಕದಲ್ಲಿ ಯಾವ ಜಿಲ್ಲೆಗಳು ಬಂದಿವೆ ಎನ್ನುವುದು ನನಗೆ ಗೊತ್ತಿಲ್ಲ. ಕಂಪನಿ ಎಲ್ಲಿ ಇದೆ, ಯಾರಿಗೆ ಸೇರಿದ್ದು, ಅಲ್ಲಿ ಎಲ್ಲಿ ಕೆಲಸ ಮಾಡುತ್ತಿದೆ ಎನ್ನುವ ವಿಚಾರವೇ ಗೊತ್ತಿಲ್ಲ.

(449)13–12–2018(07–30)ಬಿಎಸ್‌ಡಿ–ಆರ್‌ಎನ್

ಶ್ರೀ ಎಸ್.ಎಲ್. ಭೋಜೇಗೌಡ (ಮುಂದು)

ಮಾನ್ಯ ತೇಜಸ್ವಿನಿಗೌಡರು ಮಾತನಾಡಿದಂತೆ total loss of crop ಇದ್ದಾಗ ವಿಮೆ ಕಂಪನಿ ಏನು ಮಾಡಬೇಕು? ಆಯಾ ತಾಲ್ಲೂಕುಗಳಲ್ಲಿ ಏನೇನು ಬೆಳೆ ಇರುತ್ತದೆ ಎಂಬ ಮಾಹಿತಿ ಇರುತ್ತದಲ್ಲವೇ? ಅವರು ಜಚಿಚಿಟಿಡಿಜ ಛಿಡಿ೦ಠಿ ಗೆ ಪ್ರಿಮಿಯಂ ಅನ್ನು ಸಂಬಂಧಪಟ್ಟವರಿಗೆ ತಕ್ಷಣ ಜಮೆ ಮಾಡಬೇಕು. ನಷ್ಟವಾದ ತಕ್ಷಣ 48 ಗಂಟೆಗಳಲ್ಲಿ ರೈತ ವರದಿ ಕೊಡಬೇಕು, ಆದರೆ ಎಲ್ಲಿಗೆ ವರದಿ ಕೊಡಬೇಕು ಎಂದು ಗೊತ್ತಿಲ್ಲ. ಕಂಪನಿಗಳು ಎಲ್ಲಿವೆ ಎಂದು ಗೊತ್ತಿಲ್ಲ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಯವರ ಫಸಲು ಭೀಮಾ ಯೋಜನೆಯು ಬಹಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಇದರಲ್ಲಿ ಪ್ರಧಾನ ಮಂತ್ರಿಯವರ ಯೋಜನೆ ಇದೆ ಬರೀ ಕೇಂದ್ರ ಸರ್ಕಾರದ ಯೋಜನೆ ಅಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಯೋಗದ ಒಂದು ಯೋಜನೆಯಾಗಿದೆ. ದಯವಿಟ್ಟು ರಾಜ್ಯ ಸರ್ಕಾರವೂ ಇದನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸದಸ್ಯರುಗಳು ಮಾತನಾಡುವಾಗ, it is the responsiblity of both State and Central Governments. ಎರಡನೆಯದಾಗಿ, who appoints the Insurance Companies? ಈ ವಿಮೆ ಕಂಪನಿಗಳನ್ನು ಐಡೆಂಟಿಫೈ ಮಾಡಿ, ಜವಾಬ್ದಾರಿಗಳನ್ನು ಯಾರು ಕೊಡುತ್ತಾರೆ? Is it the responsiblity of State Goverment? If the State Government is appointing such Insurance Companies, ಯಾವುದೇ ಸರ್ಕಾರ ಇರಬಹುದು. I don’t want to blame anyone here. ಯಾವುದೇ ಸರ್ಕಾರವನ್ನು ಟೀಕೆ ಮಾಡುವ ಹಿನ್ನೆಲೆಯಲ್ಲಿ ಮಾತನಾಡುತ್ತಿಲ್ಲ. ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಗಳು ಬಹಳ ಮುಖ್ಯವಾದ ವಿಮಾ ಯೋಜನೆಯನ್ನು ರೈತರ ತೊಂದರೆಗಳನ್ನು ನಿವಾರಣೆ ಮಾಡಲು ತಂದಿರುವ ಹಿನ್ನೆಲೆಯಲ್ಲಿ, ಇದನ್ನು ಜಾರಿಗೆ ತರುವ ರಾಜ್ಯ ಸರ್ಕಾರಗಳು ಬಹಳ ದೊಡ್ಡ ಜವಾಬ್ದಾರಿಯನ್ನು ಹೊರಬೇಕಾಗಿದೆ. Fraud company ಗಳು ಇರಬಹುದು. Nobody is related to anybody. ಆದರೆ ಸಂಬಂಧಪಟ್ಟ ಕೃಷಿ ಅಧಿಕಾರಿಗಳು ಇರುತ್ತಾರೆ, ವಿಮಾ ಕಂಪನಿಗಳನ್ನು ಗುರುತಿಸಿ, ಜವಾಬ್ದಾರಿಗಳನ್ನು ನಿಗದಿಪಡಿಸಿ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುವ ಅಧಿಕಾರಿಗಳ ಜವಾಬ್ದಾರಿ ಇರುತ್ತದೆ. ಅವರು bonafide company ಗಳನ್ನು ಗುರುತಿಸಿ ಸರ್ಕಾರಕ್ಕೆ ಸಲಹೆ ಕೊಡಬೇಕು. ರಾಜ್ಯ ಸರ್ಕಾರದ ಕೃಷಿ ಅಧಿಕಾರಿಗಳ ಜವಾಬ್ದಾರಿ ಹಾಗೂ ರಾಜ್ಯ ಸರ್ಕಾರದ ಜವಾಬ್ದಾರಿ ಇದೆ ಎಂದು ಮಾನ್ಯ ಸಭಾಪತಿಯವರ ಮೂಲಕ ಸರ್ಕಾರಕ್ಕೆ ಹೇಳಬಯಸುತ್ತೇನೆ. ಆದ್ದರಿಂದ ಮಹಾತ್ವಾಕಾಂಕ್ಷೆ ಯೋಜನೆ ರೈತರಿಗೆ

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

ತಲುಪಬೇಕಾದ ಹಿನ್ನೆಲೆಯಲ್ಲಿ ಅಂತಹ ವಿಮಾ ಕಂಪನಿಗಳನ್ನು ಬ್ಲಾಕ್‌ಲಿಸ್ಟ್ ಮಾಡಲಿ. Don't allow them for next year. ದಯವಿಟ್ಟು ಈ ಕೆಲಸ ಮಾಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಮಾನ್ಯ ಸದಸ್ಯರು ಕಂಪನಿಗಳ ಬಗ್ಗೆ ಹೇಳಿದರೂ ಒಂದು ವಿಚಾರವನ್ನು ಗಮನಿಸಬೇಕಾಗುತ್ತದೆ. ಒಂದು ಕಡೆ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ರೂ.3 ಲಕ್ಷದವರೆಗೆ ಬೆಳೆ ಸಾಲವನ್ನು ಕೊಡುತ್ತೇವೆ. ಇನ್ನೊಂದು ಕಡೆ ಶೇ.3 ರ ಬಡ್ಡಿ ದರದಲ್ಲಿ ರೂ.10 ಲಕ್ಷದವರೆಗೂ ಸಾಲ ಕೊಡುತ್ತೇವೆ. ಶೂನ್ಯ ಬಡ್ಡಿ ದರ ತೆಗೆದುಕೊಂಡಿರುವವರಿಗೆ ವಿಮೆ ಕೊಡುತ್ತೇವೆ. ವಿಮೆ ಕೊಡುವಾಗ ಒಂದು ಲಕ್ಷ ರೂಪಾಯಿಗಳಿಗೆ 7% ರಾಜ್ಯ ಸರ್ಕಾರ ಮತ್ತು 7% ಕೇಂದ್ರ ಸರ್ಕಾರ ಹಾಗೂ ರೈತ 7% ಕಟ್ಟುತ್ತಾನೆ. ಒಟ್ಟು 21% ವಿಮೆಯನ್ನು ಕಟ್ಟಬೇಕಾಗುತ್ತದೆ. ನಾವು 21% ಹಣವನ್ನು ಬೇರೆ ಕಡೆ ತೊಡಗಿಸಿದರೆ ಬೆಳೆ ನಷ್ಟವಾದಾಗ ಎಷ್ಟು ಹಣ ಬರುತ್ತದೆ ಎಂಬ ವಿಚಾರವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಹಾಗಾಗಿ ಇಲ್ಲಿ ಲ್ಯಾಪ್ಸಸ್ ಸರಿಮಾಡಬೇಕಾಗಿದೆ. ರೈತ ಯಾವ ಪರಿಮಿತಿಯಲ್ಲಿ ಇರುವ ಅವಕಾಶಗಳನ್ನು ಬಳಸಿಕೊಳ್ಳಬಹುದು. Cloud burst ಎಂದು ಹೇಳುತ್ತಾರೆ. ಮಾನ್ಯ ಸಭಾಪತಿಯವರೇ, ನಾವು ಎಲ್ಲಿದ್ದೇವೆ? ಹಿಮಾಲಯ ಪರ್ವತದಲ್ಲಿ ಕರ್ನಾಟಕ ರಾಜ್ಯ ಇದೆಯೇ? ಅನ್ವಯಿಸುವ ಭಾಗಗಳಿಗೆ ಹೇಳಿ. ಅದೇ ರೀತಿ land slide, ಆಲಿಕಲ್ಲು ಮಳೆಯಂತಹ ಸಂದರ್ಭಗಳಲ್ಲಿ he is entitled for getting the insurance ಎಂದು ಹೇಳುತ್ತಾರೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಕೊಡಗಿನಲ್ಲಿ ಆದ ಪರಿಸ್ಥಿತಿಯನ್ನು cloud burst ಎಂದು ಹೇಳುತ್ತಾರೆ.

**ಶ್ರೀ ಎಸ್.ಎಲ್. ಭೋಜೇಗೌಡ:–** ಅದು rare and rarest case ಆಗಿದೆ. ಆದರೆ ಆ ಅಂಶವನ್ನೇ ಗಮನದಲ್ಲಿಟ್ಟುಕೊಂಡು war ಮಾಡಬಾರದು. ಈಗ ಮಾನ್ಯ ತೇಜಸ್ವಿನಿಗೌಡರವರು ಅವಮಾನದ ಬಗ್ಗೆ ಹೇಳುತ್ತಾರೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ ನನ್ನ ಊರಿನ ಪಕ್ಕದ ಊರಿನಲ್ಲಿ ಮಳೆ ಬಂದಿರುವುದಿಲ್ಲ. ಪಂಚಾಯಿತಿ ಕೇಂದ್ರದಲ್ಲಿ rain guage ಹಾಕುವುದಕ್ಕೆ ಹೇಳುತ್ತಾರೆ. ಒಂದು ಪಂಚಾಯಿತಿ ವ್ಯಾಪ್ತಿಗೆ ಎಂಟತ್ತು ಹಳ್ಳಿಗಳು ಬರುತ್ತವೆ. ಹಾಗಾದರೆ ಪ್ರತಿ ಹಳ್ಳಿಗಳಲ್ಲಿ rain guage ಅಳವಡಿಸಬೇಕು. ಈ ಕೆಲಸ ಯಾರು ಮಾಡಬೇಕು? Rain guage ಅಳವಡಿಸಿ, ಮಳೆ ಬಂತೋ, ಇಲ್ಲವೋ ಎಂದು rain guage ಮುಖಾಂತರ ಅಳತೆ ಮಾಡಿ, ಮಳೆ ಬಂದಿದೆ ಅಥವಾ ಇಲ್ಲ ಎಂದು ವಿಚಾರ ಮಾಡಿ ನಂತರ ವಿಮೆ ಕೊಡುವುದು. ಆದ್ದರಿಂದ ಬಹಳಷ್ಟು ನ್ಯೂನತೆಗಳು ಇವೆ. ನಾನು ಮಾತನಾಡಿದರೆ ಸುಮಾರು ಒಂದು ಗಂಟೆಯಾದರೂ ಮಾತನಾಡಬೇಕಾಗುತ್ತದೆ. ಈ ಲೋಪದೋಷಗಳನ್ನು ಸರಿ ಮಾಡಿಸಿ, ಪ್ರಧಾನ ಮಂತ್ರಿ ಫಸಲು ಭೀಮಾ ಯೋಜನೆಯು ಬಹಳ ಒಳ್ಳೆಯ ಯೋಜನೆಯಾಗಿದೆ ಎಂದು ನಾನು ಖಂಡಿತ ಒಪ್ಪುತ್ತೇನೆ. ಆದರೆ ರೈತರಿಗೆ ಮಾರಕ ಆಗಬಾರದು ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಈಗ ಸಭೆಯನ್ನು ನಾಳೆ ಬೆಳಿಗ್ಗೆ 10–30ರವರೆಗೆ ಮುಂದೂಡುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಸದನವು ಸಂಜೆ 7 ಗಂಟೆ 35 ನಿಮಿಷಗಳಿಗೆ ಮುಕ್ತಾಯಗೊಂಡು ಪುನ: ದಿನಾಂಕ 14ನೇ ಡಿಸೆಂಬರ್ ಮಾಹೆ 2018ರ ಶುಕ್ರವಾರ ಬೆಳಿಗ್ಗೆ 10 ಗಂಟೆ 30 ನಿಮಿಷಗಳಿಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)**

“ ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು ”

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "